ಜಿ. ಕುಮಾರ ನಾಯಕ, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿ

G. KUMAR NAIK, IAS
PRINCIPAL SECRETARY TO GOVERNMENT

ಕರ್ನಾಟಕ ಸರ್ಕಾರ
GOVERNMENT OF KARNATAKA

ಸಮಾಜ ಕಲ್ಯಾಣ ಇಲಾಖೆ
SOCIAL WELFARE DEPARTMENT

ಅ.ಸ.ಪ.ಸಂ. ಸಕಇ/232/ಪ್ರಕಾ/2020 ದಿನಾಂಕ. 05.02.2020

ಮಾನ್ಯರೆ,

ವಿಷಯ: ದಿನಾಂಕ:29-01-2020 ರಂದು ರಾಯಚೂರು ಜಿಲ್ಲೆಯ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆಸಿದ ಜಿಲ್ಲೆಯ ಪ್ರಗತಿ ಪರಿಶೀಲನೆ ಸಭೆಯ ವರದಿ ಸಲ್ಲಿಸುವ ಬಗ್ಗೆ.

- - - - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಾನು ದಿನಾಂಕ: 29-01-2020 ರಂದು ರಾಯಚೂರು ಜಿಲ್ಲೆಗೆ ಭೇಟಿ ನೀಡಿ, ಬರ ಪರಿಸ್ಥಿತಿಯ ಬಗ್ಗೆ ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಇತರೆ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ಜರುಗಿಸಲಾಯಿತು ಹಾಗೂ ರಾಯಚೂರು ಜಿಲ್ಲೆಯ ಕೆಲ ಬರ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದೆ.

ಬರ ಪರಿಸ್ಥಿತಿಯ ಬಗ್ಗೆ ಜರುಗಿದ ಸಭೆಯ ನಡವಳಿಯನ್ನು / ನಿಗದಿತ ನಮೂನೆಯಲ್ಲಿ ತಯಾರಿಸಿ ಇದರೊಂದಿಗೆ ಲಗತ್ತಿಸಿ ಮಾನ್ಯರ ಅವಗಾಹನೆಗೆ ಸಲ್ಲಿಸಿದೆ.

ಗೌರವಗಳೊಂದಿಗೆ,

ನಿಮ್ಮ ವಿಶ್ವಾಸಿ,
ಸಹಿ/-
(ಜಿ. ಕುಮಾರ ನಾಯಕ)

ಶ್ರೀ ತ. ಮ. ವಿಜಯ ಭಾಸ್ಕರ್, ಭಾ.ಆ.ಸೇ.,
ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ,
ವಿಧಾನ ಸೌಧ,
ಬೆಂಗಳೂರು.

<u>ಪ್ರತಿಯನ್ನು:</u>

1. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಅಪರ ಮುಖ್ಯ ಕಾರ್ಯದರ್ಶಿಗಳು, ಸಿ.ಆ.ಸು.ಇ. (ಆ.ಸು), ಬಹುಮಹಡಿ ಕಟ್ಟಡ, ಬೆಂಗಳೂರು.
3. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಬಹುಮಹಡಿಗಳ ಕಟ್ಟಡ ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ರವರಿಗೆ ಸೂಕ್ತ ಕ್ರಮಕ್ಕಾಗಿ.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ರಾಯಚೂರು ಜಿಲ್ಲೆ ರವರಿಗೆ ಸೂಕ್ತ ಕ್ರಮಕ್ಕಾಗಿ.
6. ಸಂಬಂಧಪಟ್ಟ ಎಲ್ಲಾ ಅನುಷ್ಠಾನಾಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ (ಜಿಲ್ಲಾಧಿಕಾರಿಗಳು, ರಾಯಚೂರುರವರ ಮೂಲಕ).

14/02/2020
BP 15/2/2020

(ಜಿ. ಕುಮಾರ ನಾಯಕ)

ಕೊಠಡಿ ಸಂ.: 232/233, 2ನೇ ಮಹಡಿ, ವಿಕಾಸ ಸೌಧ, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001.
Room No.: 232/233, 2nd Floor, Vikasa Soudha, Dr. B.R. Ambedkar Veedhi, Bengaluru-560 001.
E-mail : prssocialwelfare@gmail.com | Tel: 080-220344567, 22034589 | Telefax: 080-2225 4820

ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಜನವರಿ 2020 ತಿಂಗಳ ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ.

| ಕ್ರ.ಸಂ | ಅಂಶಗಳು | ಪ್ರಧಾನ ಕಾರ್ಯದರ್ಶಿಗಳ ಪರಾ |
|---|---|---|
| 1 | ಜಿಲ್ಲೆಯ ಹೆಸರು | ರಾಯಚೂರು |
| 2 | ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಶ್ರೀ ಜಿ.ಕುಮಾರ ನಾಯಕ |
| 3 | ಭೇಟಿಯಾದ/ಪ್ರವಾಸದ ದಿನಾಂಕ | 30-01-2020 |

ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ:

| ಭೇಟಿ ನೀಡಿದ ಕ್ಷೇತ್ರ/ ಸ್ಥಳ | ಮುಖ್ಯವಾಗಿ ಗಮನಿಸಿದ ಅಂಶಗಳು | ನಿರ್ದೇಶನ/ಸಲಹೆಗಳು |
|---|---|---|
| ರಾಯಚೂರು ನಗರ ವಿಧಾನಸಭಾ ಕ್ಷೇತ್ರ ರಾಯಚೂರು ನಗರದಲ್ಲಿ ಡಾ.ಬಿಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ ರಾಮ್ ಭವನ ಕಟ್ಟಡ ಕಾಮಗಾರಿ<br><br>ಮೊರಾರ್ಜಿ ದೇಸಾಯಿ ವಸತಿ ಶಾಲೆ ಯರಗೇರಾ ತಾ:ರಾಯಚೂರು | • ಸಮಾಜ ಕಲ್ಯಾಣ ಇಲಾಖೆಯ ಡಾ.ಬಿಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ ರಾಮ್ ಭವನ ಕಟ್ಟಡ ಕಾಮಗಾರಿಯನ್ನು ಪರಿಶೀಲಿಸಿದರು.<br>• ಕಟ್ಟಡವು ನಿರ್ಮಾಣಗೊಂಡಿದ್ದು ಪೇಂಟಿಂಗ್ ಕಾಮಗಾರಿ ಮತ್ತು ಬಂಡೆಗಳನ್ನು ಹಾಕಿ ನೆಲಹಾಸು ಕಾಮಗಾರಿ ಪೂರ್ಣಗೊಳಿಸುವ ಬಗ್ಗೆ ಬಾಕಿ ಇರುವುದನ್ನು ಪರಿಶೀಲಿಸಿದರು.<br>• ತದನಂತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಯರಗೇರಾ ತಾ:ರಾಯಚೂರು ಇದರ ಕಟ್ಟಡ ಕಾಮಗಾರಿಯನ್ನು ಪರಿಶೀಲಿಸಿದರು. | • ಸದರಿ ಭವನದ ಕಾಮಗಾರಿಯನ್ನು ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆ ಯರಗೇರಾ ಕಟ್ಟಡದ ಬಾಕಿ ಕಾಮಗಾರಿಗಳನ್ನು ಅತೀ ಶೀಘ್ರದಲ್ಲಿ ಪೂರ್ಣಗೊಳಿಸಿ ದಿನಾಂಕ:31-03-2020 ರೊಳಗಾಗಿ ಇಲಾಖೆಗೆ ಹಸ್ತಾಂತರಿಸಲು ಕ್ರೈಸ್ ಇಂಜಿನಿಯರ್ ಇವರಿಗೆ ಸೂಚಿಸಿದರು. |
| ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮಹರ್ಷಿ ವಾಲ್ಮೀಕಿ ಭವನ ಆಶಾಪೂರು ರಸ್ತೆ ರಾಯಚೂರು. | • ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮಹರ್ಷಿ ವಾಲ್ಮೀಕಿ ಭವನ ಆಶಾಪೂರು ರಸ್ತೆ ರಾಯಚೂರಿನಲ್ಲಿ ನಿರ್ಮಾಣವಾಗುತ್ತಿರುವುದನ್ನು ಪರಿಶೀಲಿಸಿದರು.<br>• ಸದರಿ ಭವನದ ಅಂದಾಜು ವೆಚ್ಚ ರೂ.350.00 ಲಕ್ಷಗಳಲ್ಲಿ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿತ್ತು ಎಂದು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು | • ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಬೆಂಗಳೂರುರವರು ಸದರಿ ಭವನದ ಕಾಮಗಾರಿಯನ್ನು ಏಪ್ರಿಲ್-2020 ರೊಳಗಾಗಿ ಪೂರ್ಣಗೊಳಿಸಿ ಇಲಾಖೆಗೆ ಹಸ್ತಾಂತರಿಸಲು ಸದರಿ ಏಜೆನ್ಸಿಗೆ ಸೂಚಿಸಿದರು. |

ಜಿ. ಕುಮಾರ ನಾಯಕ, ಭಾ.ಆ.ಸೇ
ಸರ್ಕಾರದ ಪ್ರಧಾನ ಕಾರ್ಯದರ್ಶಿ

G. KUMAR NAIK, IAS
PRINCIPAL SECRETARY TO GOVERNMENT

ಕರ್ನಾಟಕ ಸರ್ಕಾರ
GOVERNMENT OF KARNATAKA

ಸಮಾಜ ಕಲ್ಯಾಣ ಇಲಾಖೆ
SOCIAL WELFARE DEPARTMENT

ಅ.ಸ.ಪ.ಸಂ. ಸಕಇ/232/ಪ್ರಕಾ/2020 ದಿನಾಂಕ. 05.02.2020

ಮಾನ್ಯರೆ,

ವಿಷಯ: ದಿನಾಂಕ:29-01-2020 ರಂದು ರಾಯಚೂರು ಜಿಲ್ಲೆಯ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆಸಿದ ಜಿಲ್ಲೆಯ ಪ್ರಗತಿ ಪರಿಶೀಲನೆ ಸಭೆಯ ವರದಿ ಸಲ್ಲಿಸುವ ಬಗ್ಗೆ.

- - - - -

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನಾನು ದಿನಾಂಕ: 29-01-2020 ರಂದು ರಾಯಚೂರು ಜಿಲ್ಲೆಗೆ ಭೇಟಿ ನೀಡಿ, ಬರ ಪರಿಸ್ಥಿತಿಯ ಬಗ್ಗೆ ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ಹಾಗೂ ಇತರೆ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ಜರುಗಿಸಲಾಯಿತು ಹಾಗೂ ರಾಯಚೂರು ಜಿಲ್ಲೆಯ ಕೆಲ ಬರ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದೆ.

ಬರ ಪರಿಸ್ಥಿತಿಯ ಬಗ್ಗೆ ಜರುಗಿದ ಸಭೆಯ ನಡವಳಿಯನ್ನು / ನಿಗದಿತ ನಮೂನೆಯಲ್ಲಿ ತಯಾರಿಸಿ ಇದರೊಂದಿಗೆ ಲಗತ್ತಿಸಿ ಮಾನ್ಯರ ಅವಗಾಹನೆಗೆ ಸಲ್ಲಿಸಿದೆ.

ಗೌರವಗಳೊಂದಿಗೆ,

ನಿಮ್ಮ ವಿಶ್ವಾಸಿ,
ಸಹಿ/-
(ಜಿ. ಕುಮಾರ ನಾಯಕ)

ಶ್ರೀ ತ. ಮ. ವಿಜಯ ಭಾಸ್ಕರ್, ಭಾ.ಆ.ಸೇ.,
ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ,
ವಿಧಾನ ಸೌಧ,
ಬೆಂಗಳೂರು.

**ಪ್ರತಿಯನ್ನು:**

1. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಅಪರ ಮುಖ್ಯ ಕಾರ್ಯದರ್ಶಿಗಳು, ಸಿ.ಆ.ಸು.ಇ. (ಆ.ಸು), ಬಹುಮಹಡಿ ಕಟ್ಟಡ, ಬೆಂಗಳೂರು.
3. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಬಹುಮಹಡಿಗಳ ಕಟ್ಟಡ ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ ರವರಿಗೆ ಸೂಕ್ತ ಕ್ರಮಕ್ಕಾಗಿ.
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ರಾಯಚೂರು ಜಿಲ್ಲೆ ರವರಿಗೆ ಸೂಕ್ತ ಕ್ರಮಕ್ಕಾಗಿ.
6. ಸಂಬಂಧಪಟ್ಟ ಎಲ್ಲಾ ಅನುಷ್ಠಾನಾಧಿಕಾರಿಯವರಿಗೆ ಸೂಕ್ತ ಕ್ರಮಕ್ಕಾಗಿ (ಜಿಲ್ಲಾಧಿಕಾರಿಗಳು, ರಾಯಚೂರುರವರ ಮೂಲಕ).

14/02/2020
BP 15/2/2020

(ಜಿ. ಕುಮಾರ ನಾಯಕ)

ಕೊಠಡಿ ಸಂ.: 232/233, 2ನೇ ಮಹಡಿ, ವಿಕಾಸ ಸೌಧ, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-560 001.
Room No.: 232/233, 2nd Floor, Vikasa Soudha, Dr. B.R. Ambedkar Veedhi, Bengaluru-560 001.
E-mail : prssocialwelfare@gmail.com | Tel: 080-220344567, 22034589 | Telefax: 080-2225 4820

ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಜನವರಿ 2020 ತಿಂಗಳ ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ.

| ಕ್ರ.ಸಂ | ಅಂಶಗಳು | ಪ್ರಧಾನ ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ರಾಯಚೂರು |
| 2 | ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಶ್ರೀ ಜಿ.ಕುಮಾರ ನಾಯಕ |
| 3 | ಭೇಟಿಯಾದ/ಪ್ರವಾಸದ ದಿನಾಂಕ | 30-01-2020 |

ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ:

| ಭೇಟಿ ನೀಡಿದ ಕ್ಷೇತ್ರ/ ಸ್ಥಳ | ಮುಖ್ಯವಾಗಿ ಗಮನಿಸಿದ ಅಂಶಗಳು | ನಿರ್ದೇಶನ/ಸಲಹೆಗಳು |
|---|---|---|
| ರಾಯಚೂರು ನಗರ ವಿಧಾನಸಭಾ ಕ್ಷೇತ್ರ ರಾಯಚೂರು ನಗರದಲ್ಲಿ ಡಾ.ಬಿಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ ರಾಮ್ ಭವನ ಕಟ್ಟಡ ಕಾಮಗಾರಿ<br><br>ಮೊರಾರ್ಜಿ ದೇಸಾಯಿ ವಸತಿ ಶಾಲೆ ಯರಗೇರಾ ತಾ:ರಾಯಚೂರು | • ಸಮಾಜ ಕಲ್ಯಾಣ ಇಲಾಖೆಯ ಡಾ.ಬಿಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ ರಾಮ್ ಭವನ ಕಟ್ಟಡ ಕಾಮಗಾರಿಯನ್ನು ಪರಿಶೀಲಿಸಿದರು.<br>• ಕಟ್ಟಡವು ನಿರ್ಮಾಣಗೊಂಡಿದ್ದು ಪೇಂಟಿಂಗ್ ಕಾಮಗಾರಿ ಮತ್ತು ಬಂಡೆಗಳನ್ನು ಹಾಕಿ ನೆಲಹಾಸು ಕಾಮಗಾರಿ ಪೂರ್ಣಗೊಳಿಸುವ ಬಗ್ಗೆ ಬಾಕಿ ಇರುವುದನ್ನು ಪರಿಶೀಲಿಸಿದರು.<br>• ತದನಂತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಯರಗೇರಾ ತಾ:ರಾಯಚೂರು ಇದರ ಕಟ್ಟಡ ಕಾಮಗಾರಿಯನ್ನು ಪರಿಶೀಲಿಸಿದರು. | • ಸದರಿ ಭವನದ ಕಾಮಗಾರಿಯನ್ನು ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆ ಯರಗೇರಾ ಕಟ್ಟಡದ ಬಾಕಿ ಕಾಮಗಾರಿಗಳನ್ನು ಅತೀ ಶೀಘ್ರದಲ್ಲಿ ಪೂರ್ಣಗೊಳಿಸಿ ದಿನಾಂಕ:31-03-2020 ರೊಳಗಾಗಿ ಇಲಾಖೆಗೆ ಹಸ್ತಾಂತರಿಸಲು ಕ್ರೈಸ್ ಇಂಜಿನಿಯರ್ ಇವರಿಗೆ ಸೂಚಿಸಿದರು. |
| ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮಹರ್ಷಿ ವಾಲ್ಮೀಕಿ ಭವನ ಆಶಾಪೂರು ರಸ್ತೆ ರಾಯಚೂರು. | • ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮಹರ್ಷಿ ವಾಲ್ಮೀಕಿ ಭವನ ಆಶಾಪೂರು ರಸ್ತೆ ರಾಯಚೂರಿನಲ್ಲಿ ನಿರ್ಮಾಣವಾಗುತ್ತಿರುವುದನ್ನು ಪರಿಶೀಲಿಸಿದರು.<br>• ಸದರಿ ಭವನದ ಅಂದಾಜು ವೆಚ್ಚ ರೂ.350.00 ಲಕ್ಷಗಳಲ್ಲಿ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿತ್ತು ಎಂದು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು | • ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಬೆಂಗಳೂರುರವರು ಸದರಿ ಭವನದ ಕಾಮಗಾರಿಯನ್ನು ಏಪ್ರಿಲ್-2020 ರೊಳಗಾಗಿ ಪೂರ್ಣಗೊಳಿಸಿ ಇಲಾಖೆಗೆ ಹಸ್ತಾಂತರಿಸಲು ಸದರಿ ಏಜೆನ್ಸಿಗೆ ಸೂಚಿಸಿದರು. |

| | | |
|---|---|---|
| | ಜಲಸಾರಿಗೆ ಇಲಾಖೆ ವಿಭಾಗ ರಾಯಚೂರು ಇವರಿಗೆ ಸೂಚಿಸಿದರು. ಆಗ ಸದರಿ ಇಂಜಿನಿಯರು ಕಟ್ಟಡವನ್ನು ದೊಡ್ಡದಾಗಿ ನಿರ್ಮಿಸಿರುವುದರಿಂದ ಇನ್ನೂ ಹೆಚ್ಚುವರಿಯಾಗಿ ರೂ.144.00 ಲಕ್ಷಗಳ ಅಂದಾಜು ಪತ್ರಿಕೆಗಳನ್ನು ಮಾನ್ಯ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಬೆಂಗಳೂರುರವರಲ್ಲಿ ಅನುಮೋದನೆಗಾಗಿ ಸಲ್ಲಿಸಲಾಗಿದೆ ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ರಾಯಚೂರುರವರು ಮಾನ್ಯರ ಗಮನಕ್ಕೆ ತಂದರು. | |
| ರಾಯಚೂರು ಜಿಲ್ಲೆಯ ರಾಯಚೂರು ನಗರದ ವಾರ್ಡ ನಂ. 34 ಯಕ್ಲಾಸಪೂರ. | • ರಾಯಚೂರು ಜಿಲ್ಲೆಯ ರಾಯಚೂರು ನಗರದ ವಾರ್ಡ ನಂ. 34 ಯಕ್ಲಾಸಪೂರ ಸರ್ವೆ ನಂ.93 ರಲ್ಲಿ ಇರುವ ಪರಿಶಿಷ್ಟ ಜಾತಿ ಜನಾಂಗದ ಸ್ಮಶಾನಕ್ಕೆ ಭೇಟಿ ನೀಡಿದರು. | • ರಾಯಚೂರು ಜಿಲ್ಲೆಯ ರಾಯಚೂರು ನಗರದ ವಾರ್ಡ ನಂ. 34 ಯಕ್ಲಾಸಪೂರ ಸರ್ವೆ ನಂ.93 ರಲ್ಲಿ ಇರುವ ಪರಿಶಿಷ್ಟ ಜಾತಿ ಜನಾಂಗದ ಸ್ಮಶಾನದಲ್ಲಿ ಬೋರ್‌ವೆಲ್ ಕೊರೆಯಲು, ಕಂಪೌಂಡ್ ಗೋಡೆಗೆ ಪ್ಲಾಸ್ಟರಿಂಗ್ ಮಾಡಲು ಹಾಗೂ ಇತರೆ ಅವಶ್ಯ ಮೂಲಭೂತ ಸೌಕರ್ಯ ಒದಗಿಸಲು ಪೌರಾಯುಕ್ತರು ನಗರಸಭೆ ರಾಯಚೂರು ಇವರಿಗೆ ಸ್ಥಳದಲ್ಲಿ ಶೇ.24.10 ರಲ್ಲಿ ಭರಿಸಲು ಸೂಚಿಸಿದರು.<br>• ಸದರಿ ಅಧಿಕಾರಿಗಳು ನಮ್ಮಲ್ಲಿ ಅನುದಾನ ಲಭ್ಯತೆಯಿದ್ದು ಅದರಲ್ಲಿ ಭರಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು. |
| • ರಾಯಚೂರು | • ರಾಯಚೂರಿನಲ್ಲಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈಗಾಗಲೇ ಕಳೆದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದಂತೆ ಜಿಲ್ಲೆಯಲ್ಲಿ ಕರ್ನಾಟಕ ಹಾಲು ಒಕ್ಕೂಟ ಮಹಾಮಂಡಳ ಮತ್ತು ಪಶುಸಂಗೋಪನಾ ಇಲಾಖೆ, ಸಹಕಾರ ಇಲಾಖೆ ಇವರ ಸಹಯೋಗದಲ್ಲಿ ಗ್ರಾಮಮಟ್ಟದಲ್ಲಿ ಹೈನುಗಾರಿಕೆಗೆ ಸಂಬಂಧಿಸಿದಂತೆ ಒಕ್ಕೂಟಗಳನ್ನು ಸ್ಥಾಪಿಸಲು ಸೂಚನೆ ನೀಡಿದರು.<br>• ಇದಕ್ಕೆ ಪಾವತಿಸಬೇಕಾದ ವಂತಿಕೆಯನ್ನು ಜಿಲ್ಲಾ ಪಂಚಾಯತಿಯಿಂದ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನೀಡಲು ಕ್ರಮಕೈಗೊಳ್ಳಲು ಇದಕ್ಕಿರುವ ಅವಕಾಶಗಳನ್ನು ಸದುಪಯೋಗಪಡಿಸಿ | • ರಾಯಚೂರಿನಲ್ಲಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈಗಾಗಲೇ ಕಳೆದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದಂತೆ ಜಿಲ್ಲೆಯಲ್ಲಿ ಕರ್ನಾಟಕ ಹಾಲು ಒಕ್ಕೂಟ ಮಹಾಮಂಡಳ ಮತ್ತು ಪಶುಸಂಗೋಪನಾ ಇಲಾಖೆ, ಸಹಕಾರ ಇಲಾಖೆ ಇವರ ಸಹಯೋಗದಲ್ಲಿ ಗ್ರಾಮಮಟ್ಟದಲ್ಲಿ ಹೈನುಗಾರಿಕೆಗೆ ಸಂಬಂಧಿಸಿದಂತೆ ಒಕ್ಕೂಟಗಳನ್ನು ಸ್ಥಾಪಿಸಲು ಸೂಚನೆ ನೀಡಿದರು.<br>• ಇದಕ್ಕೆ ಪಾವತಿಸಬೇಕಾದ ವಂತಿಕೆಯನ್ನು ಜಿಲ್ಲಾ ಪಂಚಾಯತಿಯಿಂದ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನೀಡಲು ಕ್ರಮಕೈಗೊಳ್ಳಲು ಇದಕ್ಕಿರುವ ಅವಕಾಶಗಳನ್ನು ಸದುಪಯೋಗಪಡಿಸಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳಿಗೆ ಮತ್ತು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಸೂಚನೆ ನೀಡಿದರು.<br>• ಈಗಾಗಲೇ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ |

| | | |
|---|---|---|
| | ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳಿಗೆ ಮತ್ತು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಸೂಚನೆ ನೀಡಿದರು.<br>• ಈಗಾಗಲೇ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಹೈನುಗಾರಿಕೆಗೆ ಪಶುಗಳನ್ನು ಕೊಡುವ ಯೋಜನೆಯನ್ನು ಅದರ ಗುರಿಯನ್ನು ಹೆಚ್ಚಿಸಲು ಸಲ್ಲಿಸಲು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ರಾಯಚೂರುರವರಿಗೆ ಸೂಚಿಸಲಾಯಿತು.<br>• ಮುಂದುವರೆದು ಒಕ್ಕೂಟಗಳಿಗೆ ಅನುಮೋದನೆ ನೀಡಲು ಸಹಕಾರ ಇಲಾಖೆಯಿಂದ ಆಗುತ್ತಿರುವ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ ಜಿಲ್ಲಾ ಸಹಕಾರ ಇಲಾಖೆಯ ನೋಂದಣಾಧಿಕಾರಿಗಳು ಕ್ರಮಕೈಗೊಳ್ಳಲು ಸೂಚನೆ ನೀಡಿದರು. | ಹೈನುಗಾರಿಕೆಗೆ ಪಶುಗಳನ್ನು ಕೊಡುವ ಯೋಜನೆಯನ್ನು ಅದರ ಗುರಿಯನ್ನು ಹೆಚ್ಚಿಸಲು ಸಲ್ಲಿಸಲು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ರಾಯಚೂರುರವರಿಗೆ ಸೂಚಿಸಲಾಯಿತು.<br>• ಮುಂದುವರೆದು ಒಕ್ಕೂಟಗಳಿಗೆ ಅನುಮೋದನೆ ನೀಡಲು ಸಹಕಾರ ಇಲಾಖೆಯಿಂದ ಆಗುತ್ತಿರುವ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ ಜಿಲ್ಲಾ ಸಹಕಾರ ಇಲಾಖೆಯ ನೋಂದಣಾಧಿಕಾರಿಗಳು ಕ್ರಮಕೈಗೊಳ್ಳಲು ಸೂಚನೆ ನೀಡಿದರು. |
| • ರಾಯಚೂರು | • ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಬೆಂಬಲ ಬೆಲೆ ಆಧರಿಸಿ ಆಗುತ್ತಿರುವ ಖರೀದಿ ಪ್ರಕ್ರಿಯೆಗಳಿಗೆ ಜಿಲ್ಲಾ ಮಟ್ಟದಲ್ಲಿ ವಿವಿಧ ಬೆಳೆಗಳಿಗೆ ಸರ್ಕಾರ ಈಗಾಗಲೇ ಬೆಂಬಲ ಬೆಲೆ ಘೋಷಿಸಿದ್ದು, ಅದರ ಖರೀದಿಗಾಗಿ ಖರೀದಿ ಕೇಂದ್ರಗಳನ್ನು ತೆರೆದು ಖರೀದಿ ಪ್ರಕ್ರಿಯೆಗಳಲ್ಲಿ ರೈತರಿಗೆ ತೊಂದರೆಯಾಗದಂತೆ ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಯಾಗಿ ಜಿಲ್ಲಾ ಕೃಷಿ ಅಭಿವೃದ್ಧಿ ಅಧಿಕಾರಿಗಳು ಕೆಲಸ ನಿರ್ವಹಿಸಿ ಯಾವುದೇ ರೈತರಿಗೆ ತೊಂದರೆಯಾಗದಂತೆ ಕ್ರಮವಹಿಸಲು ಜಿಲ್ಲಾ ಕೃಷಿ ಅಭಿವೃದ್ಧಿ ಅಧಿಕಾರಿಗೆ ಸೂಚನೆ ನೀಡಿದರು. | • ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಬೆಂಬಲ ಬೆಲೆ ಆದರಿಸಿ ಆಗುತ್ತಿರುವ ಖರೀದಿ ಪ್ರಕ್ರಿಯೆಗಳಿಗೆ ಜಿಲ್ಲಾ ಮಟ್ಟದಲ್ಲಿ ವಿವಿದ ಬೆಳೆಗಳಿಗೆ ಸರ್ಕಾರ ಈಗಾಗಲೇ ಬೆಂಬಲ ಬೆಲೆ ಘೋಷಿಸಿದ್ದು, ಅದರ ಖರೀದಿಗಾಗಿ ಖರೀದಿ ಕೇಂದ್ರಗಳನ್ನು ತೆರೆದು ಖರೀದಿ ಪ್ರಕ್ರಿಯೆಗಳಲ್ಲಿ ರೈತರಿಗೆ ತೊಂದರೆಯಾಗದಂತೆ ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಯಾಗಿ ಜಿಲ್ಲಾ ಕೃಷಿ ಅಭಿವೃದ್ಧಿ ಅಧಿಕಾರಿಗಳು ಕೆಲಸ ನಿರ್ವಹಿಸಿ ಯಾವುದೇ ರೈತರಿಗೆ ತೊಂದರೆಯಾಗದಂತೆ ಕ್ರಮವಹಿಸಲು ಜಿಲ್ಲಾ ಕೃಷಿ ಅಭಿವೃದ್ಧಿ ಅಧಿಕಾರಿಗೆ ಸೂಚನೆ ನೀಡಿದರು. |

(ಜಿ.ಕುಮಾರ ನಾಯಕ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ
ಹಾಗೂ ಉಸ್ತುವಾರಿ ಕಾರ್ಯದರ್ಶಿ ರಾಯಚೂರು ಜಿಲ್ಲೆ.

**ದಿನಾಂಕ:30-01-2020 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಬೆಂಗಳೂರುರವರು ರಾಯಚೂರು ಜಿಲ್ಲೆಗೆ ಪ್ರವಾಸ ಕೈಗೊಂಡು ನಿರ್ಮಾಣ ಹಂತದಲ್ಲಿರುವ ಕಟ್ಟಡಗಳನ್ನು/ಭವನಗಳ ಕಾಮಗಾರಿಗಳನ್ನು ಪರಿಶೀಲಿಸಿದ ಸಭೆಯ ನಡವಳಿಗಳು.**

**ಪರಿಶೀಲನಾ ಸಮಯದಲ್ಲಿ ಹಾಜರಿದ್ದ ಅಧಿಕಾರಿಗಳ ವಿವರಗಳು**

1. ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ರಾಯಚೂರು.
2. ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ರಾಯಚೂರು.
3. ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ ರಾಯಚೂರು.
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕ್ರೈಸ್ ರಾಯಚೂರು.

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಬೆಂಗಳೂರುರವರು ದಿನಾಂಕ: 30-01-2020 ರಂದು ರಾಯಚೂರು ಜಿಲ್ಲೆ ಸಮಾಜ ಕಲ್ಯಾಣ ಇಲಾಖೆಯ ಡಾ.ಬಿಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ ರಾಮ್ ಭವನ ಕಟ್ಟಡ ಕಾಮಗಾರಿಯನ್ನು ಪರಿಶೀಲಿಸಿದರು. ಕಟ್ಟಡವು ನಿರ್ಮಾಣಗೊಂಡಿದ್ದು ಪೇಂಟಿಂಗ್ ಕಾಮಗಾರಿ ಮತ್ತು ಬಂಡೆಗಳನ್ನು ಹಾಕಿ ನೆಲಹಾಸು ಕಾಮಗಾರಿ ಪೂರ್ಣಗೊಳಿಸುವುದು ಬಾಕಿ ಇರುವುದನ್ನು ಪರಿಶೀಲಿಸಿದರು. ತದನಂತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಯರಗೇರಾ ತಾ:ರಾಯಚೂರು ಇದರ ಕಟ್ಟಡ ಕಾಮಗಾರಿಯನ್ನು ಪರಿಶೀಲಿಸಿದರು ಹಾಗೂ ಸದರಿ ಭವನದ ಕಾಮಗಾರಿಯನ್ನು ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆ ಯರಗೇರಾ ಕಟ್ಟಡದ ಬಾಕಿ ಕಾಮಗಾರಿಗಳನ್ನು ಅತೀ ಶೀಘ್ರದಲ್ಲಿ ಪೂರ್ಣಗೊಳಿಸಿ ದಿನಾಂಕ:31-03-2020 ರೊಳಗಾಗಿ ಇಲಾಖೆಗೆ ಹಸ್ತಾಂತರಿಸಲು ಕ್ರೈಸ್ ಇಂಜಿನಿಯರ್ ಇವರಿಗೆ ಸೂಚಿಸಿದರು.

(ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕ್ರೈಸ್ ರಾಯಚೂರು)

2. ಮುಂದುವರೆದು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮಹರ್ಷಿ ವಾಲ್ಮೀಕಿ ಭವನ ಆಶಾಪೂರು ರಸ್ತೆ ರಾಯಚೂರಿನಲ್ಲಿ ನಿರ್ಮಾಣವಾಗುತ್ತಿರುವುದನ್ನು ಪರಿಶೀಲಿಸಿದರು ಮತ್ತು ಸದರಿ ಭವನದ ಅಂದಾಜು ವೆಚ್ಚ ರೂ.350.00 ಲಕ್ಷಗಳಲ್ಲಿ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿತ್ತು ಎಂದು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ ರಾಯಚೂರು ಇವರಿಗೆ ಸೂಚಿಸಿದರು. ಆಗ ಸದರಿ ಏಜೆನ್ಸಿಯವರು ಕಟ್ಟಡವನ್ನು ದೊಡ್ಡದಾಗಿ ನಿರ್ಮಿಸಿರುವುದರಿಂದ ಇನ್ನೂ ಹೆಚ್ಚುವರಿಯಾಗಿ ರೂ.144.00 ಲಕ್ಷಗಳ ಅಂದಾಜು ಪತ್ರಿಕೆಗಳನ್ನು ಮಾನ್ಯ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಬೆಂಗಳೂರುರವರಲ್ಲಿ ಅನುಮೋದನೆಗಾಗಿ ಸಲ್ಲಿಸಲಾಗಿದೆ ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ರಾಯಚೂರುರವರು ಮಾನ್ಯರ ಗಮನಕ್ಕೆ ತಂದರು. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಬೆಂಗಳೂರುರವರು ಸದರಿ ಭವನದ ಕಾಮಗಾರಿಯನ್ನು ಏಪ್ರಿಲ್-2020 ರೊಳಗಾಗಿ ಪೂರ್ಣಗೊಳಿಸಿ ಇಲಾಖೆಗೆ ಹಸ್ತಾಂತರಿಸಲು ಸದರಿ ಏಜೆನ್ಸಿಗೆ ಸೂಚಿಸಿದರು.

(ಕ್ರಮ: ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ರಾಯಚೂರು/ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ ರಾಯಚೂರು)

3. ರಾಯಚೂರು ಜಿಲ್ಲೆಯ ರಾಯಚೂರು ನಗರದ ವಾರ್ಡ್ ನಂ. 34 ಯಕ್ಲಾಸಪೂರ ಸರ್ವೆ ನಂ.83 ರಲ್ಲಿ ಇರುವ ಪರಿಶಿಷ್ಟ ಜಾತಿ ಜನಾಂಗದ ಸ್ಮಶಾನದಲ್ಲಿ ಬೋರ್‌ವೆಲ್ ಕೊರೆಯಲು, ಕಂಪೌಂಡ್ ಗೋಡೆಗೆ ಪ್ಲಾಸ್ಟರಿಂಗ್ ಮಾಡಲು ಹಾಗೂ ಇತರೆ ಅವಶ್ಯ ಮೂಲಭೂತ ಸೌಕರ್ಯ ಒದಗಿಸಲು ಪೌರಾಯುಕ್ತರು ನಗರಸಭೆ ರಾಯಚೂರು ಇವರಿಗೆ ಸ್ಥಳದಲ್ಲಿ ಶೇ.24.10 ರಲ್ಲಿ ಭರಿಸಲು ಸೂಚಿಸಿದರು. ಸದರಿ ಅಧಿಕಾರಿಗಳು ನಮ್ಮಲ್ಲಿ ಅನುದಾನ ಉಳಿತಾಯವಿದ್ದು ಅದರಲ್ಲಿ ಭರಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

(ಕ್ರಮ: ಪೌರಾಯುಕ್ತರು ನಗರಸಭೆ ರಾಯಚೂರು)

ಮುಂದುವರೆದ

4. ರಾಯಚೂರಿನಲ್ಲಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈಗಾಗಲೇ ಕಳೆದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದಂತೆ ಜಿಲ್ಲೆಯಲ್ಲಿ ಕರ್ನಾಟಕ ಹಾಲು ಒಕ್ಕೂಟ ಮಹಾಮಂಡಳ ಮತ್ತು ಪಶುಸಂಗೋಪನಾ ಇಲಾಖೆ, ಸಹಕಾರ ಇಲಾಖೆ ಇವರ ಸಹಯೋಗದಲ್ಲಿ ಗ್ರಾಮಮಟ್ಟದಲ್ಲಿ ಹೈನುಗಾರಿಕೆಗೆ ಸಂಬಂಧಿಸಿದಂತೆ ಒಕ್ಕೂಟಗಳನ್ನು ಸ್ಥಾಪಿಸಲು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು ಮತ್ತು ಇದಕ್ಕೆ ಪಾವತಿಸಬೇಕಾದ ವಂತಿಕೆಯನ್ನು ಜಿಲ್ಲಾ ಪಂಚಾಯತಿಯಿಂದ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನೀಡಲು ಕ್ರಮಕೈಗೊಳ್ಳಲು ಇದಕ್ಕಿರುವ ಅವಕಾಶಗಳನ್ನು ಸದುಪಯೋಗಪಡಿಸಿ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳಿಗೆ ಮತ್ತು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈಗಾಗಲೇ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಹೈನುಗಾರಿಕೆಗೆ ಹಸುಗಳನ್ನು ಕೊಡುವ ಯೋಜನೆಯನ್ನು ಅದರ ಗುರಿಯನ್ನು ಹೆಚ್ಚಿಸಲು ಸಲ್ಲಿಸಲು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ರಾಯಚೂರುರವರಿಗೆ ಸೂಚಿಸಲಾಯಿತು. ಮುಂದುವರೆದು ಒಕ್ಕೂಟಗಳಿಗೆ ಅನುಮೋದನೆ ನೀಡಲು ಸಹಕಾರ ಇಲಾಖೆಯಿಂದ ಆಗುತ್ತಿರುವ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ ಜಿಲ್ಲಾ ಸಹಕಾರ ಇಲಾಖೆಯ ನೋಂದಣಾಧಿಕಾರಿಗಳು ಕ್ರಮಕೈಗೊಳ್ಳಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು.

(ಕ್ರಮ: ಕರ್ನಾಟಕ ಹಾಲು ಒಕ್ಕೂಟ ಮಹಾಮಂಡಳ/ಪಶುಸಂಗೋಪನಾ ಇಲಾಖೆ/ಸಹಕಾರ ಇಲಾಖೆ/
ಸಮಾಜ ಕಲ್ಯಾಣ ಇಲಾಖೆ/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ)

5. ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಬೆಂಬಲ ಬೆಲೆ ಆಧರಿಸಿ ಆಗುತ್ತಿರುವ ಖರೀದಿ ಪ್ರಕ್ರಿಯೆಗಳಿಗೆ ಜಿಲ್ಲಾ ಮಟ್ಟದಲ್ಲಿ ವಿವಿಧ ಬೆಳೆಗಳಿಗೆ ಸರ್ಕಾರ ಈಗಾಗಲೇ ಬೆಂಬಲ ಬೆಲೆ ಘೋಷಿಸಿದ್ದು, ಅದರ ಖರೀದಿಗಾಗಿ ಖರೀದಿ ಕೇಂದ್ರಗಳನ್ನು ತೆರೆದು ಖರೀದಿ ಪ್ರಕ್ರಿಯೆಗಳಲ್ಲಿ ರೈತರಿಗೆ ತೊಂದರೆಯಾಗದಂತೆ ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಯಾಗಿ ಜಿಲ್ಲಾ ಕೃಷಿ ಅಭಿವೃದ್ಧಿ ಅಧಿಕಾರಿಗಳು ಕೆಲಸ ನಿರ್ವಹಿಸಿ ಯಾವುದೇ ರೈತರಿಗೆ ತೊಂದರೆಯಾಗದಂತೆ ಕ್ರಮವಹಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲಾ ಕೃಷಿ ಅಭಿವೃದ್ಧಿ ಅಧಿಕಾರಿಗೆ ಸೂಚನೆ ನೀಡಿದರು.

(ಕ್ರಮ: ಕೃಷಿ ಅಧಿಕಾರಿಗಳು ರಾಯಚೂರು)

ನಂತರ ಪ್ರವಾಸ ಕಾರ್ಯಕ್ರಮವನ್ನು ಮುಗಿಸಿದರು.

(ಜಿ. ಕುಮಾರ ನಾಯಕ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ ಹಾಗೂ
ಉಸ್ತುವಾರಿ ಕಾರ್ಯದರ್ಶಿ ರಾಯಚೂರು ಜಿಲ್ಲೆ.

ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಡಿಸೆಂಬರ-2019 ತಿಂಗಳ ಮಾನ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ.

| ಕ್ರ.ಸಂ | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ರಾಯಚೂರು |
| 2 | ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಶ್ರೀ ಜಿ.ಕುಮಾರ ನಾಯಕ ಭಾ.ಆ.ಸೇ |
| 3 | ಭೇಟಿಯಾದ/ಪ್ರವಾಸದ ದಿನಾಂಕ | 20-12-2019 |

A) ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ:

| ಭೇಟಿ ನೀಡಿದ ಕ್ಷೇತ್ರ/ ಸ್ಥಳ | ಮುಖ್ಯವಾಗಿ ಗಮನಿಸಿದ ಅಂಶಗಳು | ನಿರ್ದೇಶನ/ಸಲಹೆಗಳು |
|---|---|---|
| ದೇವದುರ್ಗ ತಾಲೂಕಿನ ಗಬ್ಬೂರು ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆ. | •ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ಮಾಣ ಹಂತದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡವನ್ನು ಪರಿಶೀಲಿಸಲಾಯಿತು.<br>•ಕುಡಿಯುವ ನೀರಿನ ಲಭ್ಯತೆ ಬಗ್ಗೆ ಪರಿಶೀಲನೆ<br>•ರಸ್ತೆ ಸಂಪರ್ಕ ಕುರಿತು ಪರಿಶೀಲನೆ | • ಸಮಾಜ ಕಲ್ಯಾಣ ಇಲಾಖೆಯಿಂದ ನಿರ್ಮಾಣ ಹಂತದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡವನ್ನು ಉತ್ತಮ ಗುಣಮಟ್ಟದ ಕಟ್ಟಡ ನಿರ್ಮಾಣ ಮಾಡಲು ಕ್ರೈಸ್ ಸಂಸ್ಥೆಯವರಿಗೆ ನಿರ್ದೇಶನ ನೀಡಲಾಯಿತು.<br>• ಕಾಲುವೆ ಮೂಲಕ ಹೆಚ್ಚುವರಿಯಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿಕೊಳ್ಳಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆಯನ್ನು ನೀಡಲಾಯಿತು.<br>• ಸದರಿ ವಸತಿ ಶಾಲೆಗೆ ಹೋಗುವ ರಸ್ತೆ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳುವಂತೆ ತಹಶೀಲ್ದಾರರು ದೇವದುರ್ಗ ಇವರಿಗೆ ಸೂಚನೆಯನ್ನು ನೀಡಲಾಯಿತು. |
| ದೇವದುರ್ಗ ಪಟ್ಟಣದ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಮತ್ತು ಮೆಟ್ರಿಕ್ ನಂತರ ಬಾಲಕರ ಮತ್ತು ಬಾಲಕೀಯರ ವಸತಿ ನಿಲಯದ ಶಾಲೆ. | • ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ದೇವದುರ್ಗ ಪಟ್ಟಣದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿನಿಯರ ವಿದ್ಯಾಭ್ಯಾಸ ಕುರಿತಂತೆ ಆಂಗ್ಲ ಭಾಷೆಯಲ್ಲಿ ಕೆಲ ಪ್ರಶ್ನೆಗಳನ್ನು ಕೇಳುವುದರೊಂದಿಗೆ ವಿದ್ಯಾರ್ಥಿನಿಯರ ಪ್ರತಿಭೆಯನ್ನು ಗಮನಿಸಲಾಯಿತು. | • ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಭೇಟಿ ನೀಡಿ ವಿದ್ಯಾರ್ಥಿನಿಯರ ವಿದ್ಯಾಭ್ಯಾಸ ಕುರಿತಂತೆ ಆಂಗ್ಲ ಭಾಷೆಯಲ್ಲಿ ಕೆಲ ಪ್ರಶ್ನೆಗಳನ್ನು ಕೇಳುವುದರೊಂದಿಗೆ ವಿದ್ಯಾರ್ಥಿನಿಯರ ಪ್ರತಿಭೆಯನ್ನು ಗಮನಿಸಿ, ಉತ್ತಮವಾಗಿ ವಿದ್ಯಾಭ್ಯಾಸದ ಕುರಿತು ಸಲಹೆಯನ್ನು ನೀಡಲಾಯಿತು. |

| | | |
|---|---|---|
| | • ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಡಯಟ್ ಚಾರ್ಟ್ , ಮೆನು ಚಾರ್ಟ್ ಮತ್ತು ಬಯೋ ಮೆಟ್ರಿಕ್ ನ್ನು ಪರಿಶೀಲಿಸಲಾಯಿತು.<br>• ಮೆಟ್ರಿಕ್ ನಂತರ ಬಾಲಕರ ಮತ್ತು ಬಾಲಕೀಯರ ವಸತಿ ನಿಲಯದ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ, ಸ್ವಚ್ಛತೆ ಹಾಗೂ ನೀರಿನ ವ್ಯವಸ್ಥೆ ಕುರಿತು ಪರಿಶೀಲನೆ. | • ವಿದ್ಯಾರ್ಥಿಗಳಿಗೆ ಪರೀಕ್ಷೆಗಳಲ್ಲಿ ಗುಣಮಟ್ಟದ ಶಿಕ್ಷಣದಿಂದ ಉತ್ತಮ ಫಲಿತಾಂಶ ಸಾಧಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಶಿಕ್ಷಕರಿಗೆ ಸೂಚಿಸಲಾಯಿತು. |
| ದೇವದುರ್ಗ ತಾಲೂಕಿನ ಹೂವಿನಡಗಿ ಗ್ರಾಮದಲ್ಲಿ 2019 ನೇ ಅಗಸ್ಟ್ ಮಾಹೆಯಲ್ಲಿ ಉಂಟಾದ ನೆರೆಹಾವಳಿಯಿಂದ ಹಾನಿಯಾದ ಮನೆಗಳಿಗೆ ಭೇಟಿ ನೀಡಿರುವುದು | ದೇವದುರ್ಗ ತಾಲೂಕಿನ ಹೂವಿನಡಗಿ ಗ್ರಾಮದಲ್ಲಿ 2019 ನೇ ಅಗಸ್ಟ್ ಮಾಹೆಯಲ್ಲಿ ಉಂಟಾದ ನೆರೆಹಾವಳಿಯಿಂದ ಹಾನಿಯಾದ ಮನೆಗಳಿಗೆ ಭೇಟಿ ನೀಡಿ, ಮನೆಗಳ ಕಟ್ಟಡ ನಿರ್ಮಾಣದ ಕುರಿತು ಪರಿಶೀಲನೆ. | ಜಿಲ್ಲೆಯಲ್ಲಿ ಉಂಟಾದ ನೆರೆಹಾವಳಿಯಿಂದ ಮುಳುಗಡೆಯಾದ ಹೂವಿನ ಹಡಗಿ ಗ್ರಾಮಕ್ಕೆ ಭೇಟಿ ನೀಡಿ ನೆರೆ ಸಂತ್ರಸ್ತರಿಗೆ ಅಲ್ಲಿ ಮನೆ ನಿರ್ಮಾಣಕ್ಕೆ ಸರ್ಕಾರದಿಂದ ಒದಗಿಸಲಾಗಿರುವ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸಲಾಯಿತು. ಸಂಪೂರ್ಣ ಮನೆ ಕಳೆದುಕೊಂಡ ಸಂತ್ರಸ್ತರಿಗೆ ರೂ.1.00 ಲಕ್ಷ ನೇರವಾಗಿ ಅವರ ಖಾತೆಗೆ ಬಿಡುಗಡೆ ಮಾಡಲಾಗಿದ್ದು, ಕಟ್ಟಡ ನಿರ್ಮಾಣದ ಪ್ರಗತಿ ಆಧಾರದ ಮೇಲೆ ಉಳಿದ ಹಣವನ್ನು ಬಿಡುಗಡೆ ಮಾಡಲಾಗುವುದೆಂದು ನೆರೆ ಸಂತ್ರಂಸ್ಥರಿಗೆ ಮಾನ್ಯ ಮುಖ್ಯ ಮಂತ್ರಿಗಳ ಮನವಿ ಪತ್ರದ ಮೂಲಕ ಮನವರಿಕೆ ಮಾಡಿಕೊಡಲಾಯಿತು. ನೆರೆ ಹಾವಳಿಯಿಂದ ಹಾಳಿಗೊಳಗಾದ ಸಾರ್ವಜನಿಕ ಆಸ್ತಿಗಳನ್ನು ಪುನರ್‌ನಿರ್ಮಿಸುವ ಕುರಿತು ಮಾಹಿತಿ ಪಡೆದು, ಬಾಕಿ ಕಾಮಗಾರಿಗಳನ್ನು ಶೀಘ್ರದಲ್ಲಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು. ಅದೇರೀತಿ ಬೆಳೆ ಪರಿಹಾರ ನೀಡುವ ಕಾರ್ಯ ನಡೆಯುತ್ತಿದ್ದು, ಸಂಬಂಧಿಸಿದ ರೈತರ ಮಾಹಿತಿಯನ್ನು ಕ್ರೋಢಿಕರಿಸಿ ಪರಿಹಾರ ವಿತರಿಸುವ ಕಾರ್ಯ ನಡೆಯುತ್ತಿದ್ದು, ನಿಗಧಿತ ಅವಧಿಯಲ್ಲಿ ರೈತರಿಗೆ ಪರಿಹಾ ನೀಡಬೇಕೆಂದು ನಿರ್ದೇಶನ ನೀಡಲಾಯಿತು. |

| | | |
|---|---|---|
| ದೇವದುರ್ಗ ತಾಲೂಕಿನ ಲಿಂಗದಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಕರ್ನಾಟಕ ಹಾಲು ಒಕ್ಕೂಟ ಸಂಘದ ಸಭೆಯಲ್ಲಿ ಭಾಗವಹಿಸಿರುವುದು. | ರಾಯಚೂರು ಜಿಲ್ಲೆಯಲ್ಲಿ ಹಾಲು ಉತ್ಪಾದನೆ ಕುರಿತಂತೆ, ಹೈನುಗಾರಿಕೆ ಉತ್ತೇಜನ ಮಾಡುವ ಕುರಿತು ಹಾಲು ಉತ್ಪಾದಕರ ಸಂಘಗಳ ರಚನೆ ಕುರಿತು ಪರಿಶೀಲನೆ. | ಕಳೆದ ತಿಂಗಳಿನಲ್ಲಿ ನೀಡಿದ ಸಲಹೆಯಂತೆ ಜಿಲ್ಲೆಯಲ್ಲಿ ಹಾಲು ಉತ್ಪಾದನೆ ಮೂಲಕ ಹೈನುಗಾರಿಕೆ ಉತ್ತೇಜನೆ ಮಾಡುವ ಕುರಿತು ಪ್ರಾಯೋಗಿಕವಾಗಿ ಜಿಲ್ಲೆಯಲ್ಲಿ ಮಾದರಿ ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಹೈನುಗಾರಿಕೆ ಮೂಲಕ ರೈತರ ಆದಾಯವನ್ನು ಹೆಚ್ಚಿಸುವ ಯೋಜನೆಯನ್ನು ರೂಪಿಸಬೇಕೆಂದು ತಿಳಿಸಲಾಗಿತ್ತು. ಅದರಂತೆ, ದೇವದುರ್ಗ ತಾಲೂಕಿನ ಲಿಂಗದಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯತ್ ಮಟ್ಟದ ಒಕ್ಕೂಟದ ವತಿಯಿಂದ ಮಹಿಳಾ ಹಾಲು ಉತ್ಪಾದಕರ ಸಂಘಗಳನ್ನು ರಚಿಸುವುದಕ್ಕಾಗಿ ಚಿಂಚೋಡಿ, ಬುಂಕಲದೊಡ್ಡಿ ಹಾಗೂ ಲಿಂಗದಳ್ಳಿ ಗ್ರಾಮದ ಸ್ವ ಸಹಾಯ ಗುಂಪುಗಳು ಸದಸ್ಯರುಗಳ ಸಭೆಯಲ್ಲಿ ಭಾಗವಹಿಸಿ ರಾಯಚೂರು ಜಿಲ್ಲೆಗೆ ಪ್ರತಿ ದಿನ 35,000 ಲೀಟರ್ ಅವಶ್ಯಕತೆಯಿದ್ದು ಪ್ರಸ್ತುತ, ಪ್ರತಿ ದಿನ 25,000 ಲೀಟರ್ ಮಾತ್ರ ಉತ್ಪಾದನೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ನೀರಾವರಿ ಸೌಲಭ್ಯವಿದ್ದು, ಪಶು ಸಂಗೋಪನಾ ಇಲಾಖೆಯಿಂದ ವಿಮಾ ಸೌಲಭ್ಯ ಮತ್ತು ಜಾನುವಾರುಗಳಿಗೆ ಚಿಕಿತ್ಸಾ ಸೌಲಭ್ಯವನ್ನು ಪಡೆದುಕೊಂಡು ಹಾಲು ಉತ್ಪಾದಕ ಸಂಘವನ್ನು ರಚಿಸಿಕೊಳ್ಳಬೇಕೆಂದು ಸಲಹೆಯನ್ನು ನೀಡಲಾಯಿತು. |

ಜಿ. ಕುಮಾರ ನಾಯಕ ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ

| | | |
|---|---|---|
| | ಜಲಸಾರಿಗೆ ಇಲಾಖೆ ವಿಭಾಗ ರಾಯಚೂರು ಇವರಿಗೆ ಸೂಚಿಸಿದರು. ಆಗ ಸದರಿ ಇಂಜಿನಿಯವರು ಕಟ್ಟಡವನ್ನು ದೊಡ್ಡದಾಗಿ ನಿರ್ಮಿಸಿರುವುದರಿಂದ ಇನ್ನೂ ಹೆಚ್ಚುವರಿಯಾಗಿ ರೂ.144.00 ಲಕ್ಷಗಳ ಅಂದಾಜು ಪತ್ರಿಕೆಗಳನ್ನು ಮಾನ್ಯ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಬೆಂಗಳೂರುರವರಲ್ಲಿ ಅನುಮೋದನೆಗಾಗಿ ಸಲ್ಲಿಸಲಾಗಿದೆ ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ರಾಯಚೂರುರವರು ಮಾನ್ಯರ ಗಮನಕ್ಕೆ ತಂದರು. | |
| ರಾಯಚೂರು ಜಿಲ್ಲೆಯ ರಾಯಚೂರು ನಗರದ ವಾರ್ಡ ನಂ. 34 ಯಕ್ಲಾಸಪೂರ. | • ರಾಯಚೂರು ಜಿಲ್ಲೆಯ ರಾಯಚೂರು ನಗರದ ವಾರ್ಡ ನಂ. 34 ಯಕ್ಲಾಸಪೂರ ಸರ್ವೆ ನಂ.93 ರಲ್ಲಿ ಇರುವ ಪರಿಶಿಷ್ಟ ಜಾತಿ ಜನಾಂಗದ ಸ್ಮಶಾನಕ್ಕೆ ಭೇಟಿ ನೀಡಿದರು. | • ರಾಯಚೂರು ಜಿಲ್ಲೆಯ ರಾಯಚೂರು ನಗರದ ವಾರ್ಡ ನಂ. 34 ಯಕ್ಲಾಸಪೂರ ಸರ್ವೆ ನಂ.93 ರಲ್ಲಿ ಇರುವ ಪರಿಶಿಷ್ಟ ಜಾತಿ ಜನಾಂಗದ ಸ್ಮಶಾನದಲ್ಲಿ ಬೋರ್‌ವೆಲ್ ಕೊರೆಯಲು, ಕಂಪೌಂಡ್ ಗೋಡೆಗೆ ಪ್ಲಾಸ್ಟರಿಂಗ್ ಮಾಡಲು ಹಾಗೂ ಇತರ ಅವಶ್ಯ ಮೂಲಭೂತ ಸೌಕರ್ಯ ಒದಗಿಸಲು ಪೌರಾಯುಕ್ತರು ನಗರಸಭೆ ರಾಯಚೂರು ಇವರಿಗೆ ಸ್ಥಳದಲ್ಲಿ ಶೇ.24.10 ರಲ್ಲಿ ಭರಿಸಲು ಸೂಚಿಸಿದರು.<br>• ಸದರಿ ಅಧಿಕಾರಿಗಳು ನಮ್ಮಲ್ಲಿ ಅನುದಾನ ಉಳಿತಾಯವಿದ್ದು ಅದರಲ್ಲಿ ಭರಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು. |
| • ರಾಯಚೂರು | • ರಾಯಚೂರಿನಲ್ಲಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈಗಾಗಲೇ ಕಳೆದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದಂತೆ ಜಿಲ್ಲೆಯಲ್ಲಿ ಕರ್ನಾಟಕ ಹಾಲು ಒಕ್ಕೂಟ ಮಹಾಮಂಡಳ ಮತ್ತು ಪಶುಸಂಗೋಪನಾ ಇಲಾಖೆ, ಸಹಕಾರ ಇಲಾಖೆ ಇವರ ಸಹಯೋಗದಲ್ಲಿ ಗ್ರಾಮಮಟ್ಟದಲ್ಲಿ ಹೈನುಗಾರಿಕೆಗೆ ಸಂಬಂಧಿಸಿದಂತೆ ಒಕ್ಕೂಟಗಳನ್ನು ಸ್ಥಾಪಿಸಲು ಸೂಚನೆ ನೀಡಿದರು.<br>• ಇದಕ್ಕೆ ಪಾವತಿಸಬೇಕಾದ ವಂತಿಕೆಯನ್ನು ಜಿಲ್ಲಾ ಪಂಚಾಯತಿಯಿಂದ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನೀಡಲು ಕ್ರಮಕೈಗೊಳ್ಳಲು ಇದಕ್ಕಿರುವ ಅವಕಾಶಗಳನ್ನು ಸದುಪಯೋಗಪಡಿಸಿ | • ರಾಯಚೂರಿನಲ್ಲಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈಗಾಗಲೇ ಕಳೆದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದಂತೆ ಜಿಲ್ಲೆಯಲ್ಲಿ ಕರ್ನಾಟಕ ಹಾಲು ಒಕ್ಕೂಟ ಮಹಾಮಂಡಳ ಮತ್ತು ಪಶುಸಂಗೋಪನಾ ಇಲಾಖೆ, ಸಹಕಾರ ಇಲಾಖೆ ಇವರ ಸಹಯೋಗದಲ್ಲಿ ಗ್ರಾಮಮಟ್ಟದಲ್ಲಿ ಹೈನುಗಾರಿಕೆಗೆ ಸಂಬಂಧಿಸಿದಂತೆ ಒಕ್ಕೂಟಗಳನ್ನು ಸ್ಥಾಪಿಸಲು ಸೂಚನೆ ನೀಡಿದರು.<br>• ಇದಕ್ಕೆ ಪಾವತಿಸಬೇಕಾದ ವಂತಿಕೆಯನ್ನು ಜಿಲ್ಲಾ ಪಂಚಾಯತಿಯಿಂದ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನೀಡಲು ಕ್ರಮಕೈಗೊಳ್ಳಲು ಇದಕ್ಕಿರುವ ಅವಕಾಶಗಳನ್ನು ಸದುಪಯೋಗಪಡಿಸಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳಿಗೆ ಮತ್ತು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಸೂಚನೆ ನೀಡಿದರು.<br>• ಈಗಾಗಲೇ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ |

| | | |
|---|---|---|
| | ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳಿಗೆ ಮತ್ತು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಸೂಚನೆ ನೀಡಿದರು.<br>• ಈಗಾಗಲೇ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಹೈನುಗಾರಿಕೆಗೆ ಪಶುಗಳನ್ನು ಕೊಡುವ ಯೋಜನೆಯನ್ನು ಅದರ ಗುರಿಯನ್ನು ಹೆಚ್ಚಿಸಲು ಸಲ್ಲಿಸಲು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ರಾಯಚೂರುರವರಿಗೆ ಸೂಚಿಸಲಾಯಿತು.<br>• ಮುಂದುವರೆದು ಒಕ್ಕೂಟಗಳಿಗೆ ಅನುಮೋದನೆ ನೀಡಲು ಸಹಕಾರ ಇಲಾಖೆಯಿಂದ ಆಗುತ್ತಿರುವ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ ಜಿಲ್ಲಾ ಸಹಕಾರ ಇಲಾಖೆಯ ನೋಂದಣಾಧಿಕಾರಿಗಳು ಕ್ರಮಕೈಗೊಳ್ಳಲು ಸೂಚನೆ ನೀಡಿದರು. | ಹೈನುಗಾರಿಕೆಗೆ ಪಶುಗಳನ್ನು ಕೊಡುವ ಯೋಜನೆಯನ್ನು ಅದರ ಗುರಿಯನ್ನು ಹೆಚ್ಚಿಸಲು ಸಲ್ಲಿಸಲು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ರಾಯಚೂರುರವರಿಗೆ ಸೂಚಿಸಲಾಯಿತು.<br>• ಮುಂದುವರೆದು ಒಕ್ಕೂಟಗಳಿಗೆ ಅನುಮೋದನೆ ನೀಡಲು ಸಹಕಾರ ಇಲಾಖೆಯಿಂದ ಆಗುತ್ತಿರುವ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ ಜಿಲ್ಲಾ ಸಹಕಾರ ಇಲಾಖೆಯ ನೋಂದಣಾಧಿಕಾರಿಗಳು ಕ್ರಮಕೈಗೊಳ್ಳಲು ಸೂಚನೆ ನೀಡಿದರು. |
| • ರಾಯಚೂರು | • ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಬೆಂಬಲ ಬೆಲೆ ಆಧರಿಸಿ ಆಗುತ್ತಿರುವ ಖರೀದಿ ಪ್ರಕ್ರಿಯೆಗಳಿಗೆ ಜಿಲ್ಲಾ ಮಟ್ಟದಲ್ಲಿ ವಿವಿಧ ಬೆಳೆಗಳಿಗೆ ಸರ್ಕಾರ ಈಗಾಗಲೇ ಬೆಂಬಲ ಬೆಲೆ ಘೋಷಿಸಿದ್ದು, ಅದರ ಖರೀದಿಗಾಗಿ ಖರೀದಿ ಕೇಂದ್ರಗಳನ್ನು ತೆರೆದು ಖರೀದಿ ಪ್ರಕ್ರಿಯೆಗಳಲ್ಲಿ ರೈತರಿಗೆ ತೊಂದರೆಯಾಗದಂತೆ ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಯಾಗಿ ಜಿಲ್ಲಾ ಕೃಷಿ ಅಭಿವೃದ್ಧಿ ಅಧಿಕಾರಿಗಳು ಕೆಲಸ ನಿರ್ವಹಿಸಿ ಯಾವುದೇ ರೈತರಿಗೆ ತೊಂದರೆಯಾಗದಂತೆ ಕ್ರಮವಹಿಸಲು ಜಿಲ್ಲಾ ಕೃಷಿ ಅಭಿವೃದ್ಧಿ ಅಧಿಕಾರಿಗೆ ಸೂಚನೆ ನೀಡಿದರು. | • ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಬೆಂಬಲ ಬೆಲೆ ಆಧರಿಸಿ ಆಗುತ್ತಿರುವ ಖರೀದಿ ಪ್ರಕ್ರಿಯೆಗಳಿಗೆ ಜಿಲ್ಲಾ ಮಟ್ಟದಲ್ಲಿ ವಿವಿಧ ಬೆಳೆಗಳಿಗೆ ಸರ್ಕಾರ ಈಗಾಗಲೇ ಬೆಂಬಲ ಬೆಲೆ ಘೋಷಿಸಿದ್ದು, ಅದರ ಖರೀದಿಗಾಗಿ ಖರೀದಿ ಕೇಂದ್ರಗಳನ್ನು ತೆರೆದು ಖರೀದಿ ಪ್ರಕ್ರಿಯೆಗಳಲ್ಲಿ ರೈತರಿಗೆ ತೊಂದರೆಯಾಗದಂತೆ ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಯಾಗಿ ಜಿಲ್ಲಾ ಕೃಷಿ ಅಭಿವೃದ್ಧಿ ಅಧಿಕಾರಿಗಳು ಕೆಲಸ ನಿರ್ವಹಿಸಿ ಯಾವುದೇ ರೈತರಿಗೆ ತೊಂದರೆಯಾಗದಂತೆ ಕ್ರಮವಹಿಸಲು ಜಿಲ್ಲಾ ಕೃಷಿ ಅಭಿವೃದ್ಧಿ ಅಧಿಕಾರಿಗೆ ಸೂಚನೆ ನೀಡಿದರು. |

(ಜಿ.ಕುಮಾರ ನಾಯಕ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಸಮಾಜ ಕಲ್ಯಾಣ ಇಲಾಖೆ
ಹಾಗೂ ಉಸ್ತುವಾರಿ ಕಾರ್ಯದರ್ಶಿ ರಾಯಚೂರು ಜಿಲ್ಲೆ.

**ದಿನಾಂಕ:30-01-2020 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಬೆಂಗಳೂರುರವರು ರಾಯಚೂರು ಜಿಲ್ಲೆಗೆ ಪ್ರವಾಸ ಕೈಗೊಂಡು ನಿರ್ಮಾಣ ಹಂತದಲ್ಲಿರುವ ಕಟ್ಟಡಗಳನ್ನು/ಭವನಗಳ ಕಾಮಗಾರಿಗಳನ್ನು ಪರಿಶೀಲಿಸಿದ ಸಭೆಯ ನಡವಳಿಗಳು.**

**ಪರಿಶೀಲನಾ ಸಮಯದಲ್ಲಿ ಹಾಜರಿದ್ದ ಅಧಿಕಾರಿಗಳ ವಿವರಗಳು**

1. ಉಪನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ರಾಯಚೂರು.
2. ಜಿಲ್ಲಾ ಪರಿಶಿಷ್ಠ ವರ್ಗಗಳ ಕಲ್ಯಾಣ ಅಧಿಕಾರಿಗಳು ರಾಯಚೂರು.
3. ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ ರಾಯಚೂರು.
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕ್ರೈಸ್ ರಾಯಚೂರು.

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಬೆಂಗಳೂರುರವರು ದಿನಾಂಕ: 30-01-2020 ರಂದು ರಾಯಚೂರು ಜಿಲ್ಲೆ ಸಮಾಜ ಕಲ್ಯಾಣ ಇಲಾಖೆಯ ಡಾ.ಬಿಆರ್.ಅಂಬೇಡ್ಕರ್ ಮತ್ತು ಡಾ.ಬಾಬು ಜಗಜೀವನ ರಾಮ್ ಭವನ ಕಟ್ಟಡ ಕಾಮಗಾರಿಯನ್ನು ಪರಿಶೀಲಿಸಿದರು. ಕಟ್ಟಡವು ನಿರ್ಮಾಣಗೊಂಡಿದ್ದು ಪೇಂಟಿಂಗ್ ಕಾಮಗಾರಿ ಮತ್ತು ಬಂಡೆಗಳನ್ನು ಹಾಕಿ ನೆಲಹಾಸು ಕಾಮಗಾರಿ ಪೂರ್ಣಗೊಳಿಸುವುದು ಬಾಕಿ ಇರುವುದನ್ನು ಪರಿಶೀಲಿಸಿದರು. ತದನಂತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಯರಗೇರಾ ತಾ:ರಾಯಚೂರು ಇದರ ಕಟ್ಟಡ ಕಾಮಗಾರಿಯನ್ನು ಪರಿಶೀಲಿಸಿದರು ಹಾಗೂ ಸದರಿ ಭವನದ ಕಾಮಗಾರಿಯನ್ನು ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆ ಯರಗೇರಾ ಕಟ್ಟಡದ ಬಾಕಿ ಕಾಮಗಾರಿಗಳನ್ನು ಅತೀ ಶೀಘ್ರದಲ್ಲಿ ಪೂರ್ಣಗೊಳಿಸಿ ದಿನಾಂಕ:31-03-2020 ರೊಳಗಾಗಿ ಇಲಾಖೆಗೆ ಹಸ್ತಾಂತರಿಸಲು ಕ್ರೈಸ್ ಇಂಜಿನಿಯರ್ ಇವರಿಗೆ ಸೂಚಿಸಿದರು.

(ಕ್ರಮ: ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕ್ರೈಸ್ ರಾಯಚೂರು)

2. ಮುಂದುವರೆದು ಪರಿಶಿಷ್ಠ ವರ್ಗಗಳ ಕಲ್ಯಾಣ ಇಲಾಖೆ ಮಹರ್ಷಿ ವಾಲ್ಮೀಕಿ ಭವನ ಅಶಾಪೂರು ರಸ್ತೆ ರಾಯಚೂರಿನಲ್ಲಿ ನಿರ್ಮಾಣವಾಗುತ್ತಿರುವುದನ್ನು ಪರಿಶೀಲಿಸಿದರು ಮತ್ತು ಸದರಿ ಭವನದ ಅಂದಾಜು ವೆಚ್ಚ ರೂ.350.00 ಲಕ್ಷಗಳಲ್ಲಿ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿತ್ತು ಎಂದು ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ ರಾಯಚೂರು ಇವರಿಗೆ ಸೂಚಿಸಿದರು. ಆಗ ಸದರಿ ಏಜೆನ್ಸಿಯವರು ಕಟ್ಟಡವನ್ನು ದೊಡ್ಡದಾಗಿ ನಿರ್ಮಿಸಿರುವುದರಿಂದ ಇನ್ನೂ ಹೆಚ್ಚುವರಿಯಾಗಿ ರೂ.144.00 ಲಕ್ಷಗಳ ಅಂದಾಜು ಪತ್ರಿಕೆಗಳನ್ನು ಮಾನ್ಯ ನಿರ್ದೇಶಕರು, ಪರಿಶಿಷ್ಠ ವರ್ಗಗಳ ಕಲ್ಯಾಣ ಇಲಾಖೆ ಬೆಂಗಳೂರುರವರಲ್ಲಿ ಅನುಮೋದನೆಗಾಗಿ ಸಲ್ಲಿಸಲಾಗಿದೆ ಎಂದು ಜಿಲ್ಲಾ ಪರಿಶಿಷ್ಠ ವರ್ಗಗಳ ಕಲ್ಯಾಣ ಅಧಿಕಾರಿಗಳು ರಾಯಚೂರುರವರು ಮಾನ್ಯರ ಗಮನಕ್ಕೆ ತಂದರು. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಬೆಂಗಳೂರುರವರು ಸದರಿ ಭವನದ ಕಾಮಗಾರಿಯನ್ನು ಏಪ್ರಿಲ್-2020 ರೊಳಗಾಗಿ ಪೂರ್ಣಗೊಳಿಸಿ ಇಲಾಖೆಗೆ ಹಸ್ತಾಂತರಿಸಲು ಸದರಿ ಏಜೆನ್ಸಿಗೆ ಸೂಚಿಸಿದರು.

(ಕ್ರಮ: ಜಿಲ್ಲಾ ಪರಿಶಿಷ್ಠ ವರ್ಗಗಳ ಕಲ್ಯಾಣ ಅಧಿಕಾರಿಗಳು ರಾಯಚೂರು/ ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗ ರಾಯಚೂರು)

3. ರಾಯಚೂರು ಜಿಲ್ಲೆಯ ರಾಯಚೂರು ನಗರದ ವಾರ್ಡ ನಂ. 34 ಯಕ್ಲಾಸಪೂರ ಸರ್ವೆ ನಂ.93 ರಲ್ಲಿ ಇರುವ ಪರಿಶಿಷ್ಠ ಜಾತಿ ಜನಾಂಗದ ಸ್ಮಶಾನದಲ್ಲಿ ಬೋರ್‌ವೆಲ್ ಕೊರೆಯಲು, ಕಂಪೌಂಡ್ ಗೋಡೆಗೆ ಪ್ಲಾಸ್ಟರಿಂಗ್ ಮಾಡಲು ಹಾಗೂ ಇತರೆ ಅವಶ್ಯ ಮೂಲಭೂತ ಸೌಕರ್ಯ ಒದಗಿಸಲು ಪೌರಾಯುಕ್ತರು ನಗರಸಭೆ ರಾಯಚೂರು ಇವರಿಗೆ ಸ್ಥಳದಲ್ಲಿ ಶೇ.24.10 ರಲ್ಲಿ ಭರಿಸಲು ಸೂಚಿಸಿದರು. ಸದರಿ ಅಧಿಕಾರಿಗಳು ನಮ್ಮಲ್ಲಿ ಅನುದಾನ ಲಭ್ಯತೆಯಿದ್ದು ಅದರಲ್ಲಿ ಭರಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

(ಕ್ರಮ: ಪೌರಾಯುಕ್ತರು ನಗರಸಭೆ ರಾಯಚೂರು)

ಮುಂದುವರೆದಿದೆ........

4. ರಾಯಚೂರಿನಲ್ಲಿ ಹೈನುಗಾರಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಈಗಾಗಲೇ ಕಳೆದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದಂತೆ ಜಿಲ್ಲೆಯಲ್ಲಿ ಕರ್ನಾಟಕ ಹಾಲು ಒಕ್ಕೂಟ ಮಹಾಮಂಡಳ ಮತ್ತು ಪಶುಸಂಗೋಪನಾ ಇಲಾಖೆ, ಸಹಕಾರ ಇಲಾಖೆ ಇವರ ಸಹಯೋಗದಲ್ಲಿ ಗ್ರಾಮಮಟ್ಟದಲ್ಲಿ ಹೈನುಗಾರಿಕೆಗೆ ಸಂಬಂಧಿಸಿದಂತೆ ಒಕ್ಕೂಟಗಳನ್ನು ಸ್ಥಾಪಿಸಲು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು ಮತ್ತು ಇದಕ್ಕೆ ಪಾವತಿಸಬೇಕಾದ ವಂತಿಕೆಯನ್ನು ಜಿಲ್ಲಾ ಪಂಚಾಯತಿಯಿಂದ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನೀಡಲು ಕ್ರಮಕೈಗೊಳ್ಳಲು ಇದಕ್ಕಿರುವ ಅವಕಾಶಗಳನ್ನು ಸದುಪಯೋಗಪಡಿಸಿ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿಗಳಿಗೆ ಮತ್ತು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳಿಗೆ ಸೂಚನೆ ನೀಡಿದರು. ಈಗಾಗಲೇ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಹೈನುಗಾರಿಕೆಗೆ ಪಶುಗಳನ್ನು ಕೊಡುವ ಯೋಜನೆಯನ್ನು ಅದರ ಗುರಿಯನ್ನು ಹೆಚ್ಚಿಸಲು ಸಲ್ಲಿಸಲು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ರಾಯಚೂರುರವರಿಗೆ ಸೂಚಿಸಲಾಯಿತು. ಮುಂದುವರೆದು ಒಕ್ಕೂಟಗಳಿಗೆ ಅನುಮೋದನೆ ನೀಡಲು ಸಹಕಾರ ಇಲಾಖೆಯಿಂದ ಆಗುತ್ತಿರುವ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಿ ಜಿಲ್ಲಾ ಸಹಕಾರ ಇಲಾಖೆಯ ನೋಂದಣಾಧಿಕಾರಿಗಳು ಕ್ರಮಕೈಗೊಳ್ಳಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು.

(ಕ್ರಮ: ಕರ್ನಾಟಕ ಹಾಲು ಒಕ್ಕೂಟ ಮಹಾಮಂಡಳ/ಪಶುಸಂಗೋಪನಾ ಇಲಾಖೆ/ಸಹಕಾರ ಇಲಾಖೆ/
ಸಮಾಜ ಕಲ್ಯಾಣ ಇಲಾಖೆ/ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ)

5. ಕೃಷಿ ಇಲಾಖೆಗೆ ಸಂಬಂಧಿಸಿದಂತೆ ಬೆಂಬಲ ಬೆಲೆ ಆಧರಿಸಿ ಆಗುತ್ತಿರುವ ಖರೀದಿ ಪ್ರಕ್ರಿಯೆಗಳಿಗೆ ಜಿಲ್ಲಾ ಮಟ್ಟದಲ್ಲಿ ವಿವಿಧ ಬೆಳೆಗಳಿಗೆ ಸರ್ಕಾರ ಈಗಾಗಲೇ ಬೆಂಬಲ ಬೆಲೆ ಘೋಷಿಸಿದ್ದು, ಅದರ ಖರೀದಿಗಾಗಿ ಖರೀದಿ ಕೇಂದ್ರಗಳನ್ನು ತೆರೆದು ಖರೀದಿ ಪ್ರಕ್ರಿಯೆಗಳಲ್ಲಿ ರೈತರಿಗೆ ತೊಂದರೆಯಾಗದಂತೆ ಜಿಲ್ಲಾ ಮಟ್ಟದಲ್ಲಿ ನೋಡಲ್ ಅಧಿಕಾರಿಯಾಗಿ ಜಿಲ್ಲಾ ಕೃಷಿ ಅಭಿವೃದ್ಧಿ ಅಧಿಕಾರಿಗಳು ಕೆಲಸ ನಿರ್ವಹಿಸಿ ಯಾವುದೇ ರೈತರಿಗೆ ತೊಂದರೆಯಾಗದಂತೆ ಕ್ರಮವಹಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲಾ ಕೃಷಿ ಅಭಿವೃದ್ಧಿ ಅಧಿಕಾರಿಗೆ ಸೂಚನೆ ನೀಡಿದರು.

(ಕ್ರಮ: ಕೃಷಿ ಅಧಿಕಾರಿಗಳು ರಾಯಚೂರು)

ನಂತರ ಪ್ರವಾಸ ಕಾರ್ಯಕ್ರಮವನ್ನು ಮುಗಿಸಿದರು.

(ಜಿ. ಕುಮಾರ ನಾಯಕ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ ಹಾಗೂ
ಉಸ್ತುವಾರಿ ಕಾರ್ಯದರ್ಶಿ ರಾಯಚೂರು ಜಿಲ್ಲೆ.

**<u>ದಿನಾಂಕ: 22.01.2020 ರಂದು ಮಾನ್ಯ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಶ್ರೀ ತುಷಾರ್ ಗಿರಿನಾಥ್ ಭಾ.ಆ.ಸೇ., ರವರ ಅಧ್ಯಕ್ಷತೆಯಲ್ಲಿ ಜರುಗಿದ ಬೆಂಗಳೂರು ನಗರ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭಾ ನಡವಳಿ.</u>**

**<u>ಹಾಜರಿದ್ದವರು: ಅನುಬಂಧ –1ರಲ್ಲಿ ಲಗತ್ತಿಸಿದೆ.</u>**

ಪ್ರಥಮವಾಗಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಮಾನ್ಯ ಅಧ್ಯಕ್ಷರು, ಬೆಂಗಳೂರು ಜಲ ಮಂಡಳಿ ಹಾಗೂ ಬೆಂಗಳೂರು ನಗರ ಜಿಲ್ಲೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾಧಿಕಾರಿಗಳನ್ನು ಹಾಗೂ ಸಭೆಗೆ ಹಾಜರಿದ್ದ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಭೆಗೆ ಸ್ವಾಗತಿಸಿ, ಸಭೆಯನ್ನು ನಡೆಸಿಕೊಡುವಂತೆ ಅಧ್ಯಕ್ಷರನ್ನು ಕೋರಿದರು. ನಂತರ ಅಧ್ಯಕ್ಷರು ಈ ಕೆಳಕಂಡ ಇಲಾಖೆಯ ಕಾರ್ಯಕ್ರಮಗಳ ಪ್ರಗತಿಯನ್ನು ಪರಿಶೀಲಿಸಿದರು.

<u>1. ನರೇಗಾ ಯೋಜನೆ:</u>

1,30,000 ಮಾನವದಿನಗಳ ಗುರಿಗೆ ಎದುರಾಗಿ 31.12.2019 ರವರೆವಿಗೆ 76,067 ಮಾನವದಿನಗಳನ್ನು ಸೃಜನೆ ಮಾಡಿ ರೂ.252.08 ಲಕ್ಷಗಳನ್ನು ವೆಚ್ಚ ಮಾಡಿರುವುದರ ಜೊತೆಗೆ ಕೃಷಿ, ತೋಟಗಾರಿಕೆ, ರೇಷ್ಮೆ ಇಲಾಖೆಯವರಿಗೆ ಗುರಿ ನಿಗಧಿಪಡಿಸಿ, ಖಾಸಗಿ ಜಮೀನಿನಲ್ಲಿಯೂ ಅಭಿವೃದ್ಧಿಪಡಿಸಲು ಅವಕಾಶವಿದ್ದರೆ ಹೆಚ್ಚಿನ ಮಾನವದಿನಗಳನ್ನು ಸೃಜನೆ ಮಾಡಿ ಅನುದಾನ ವೆಚ್ಚ ಮಾಡುವಂತೆ ತಿಳಿಸಲಾಯಿತು.

(ಕ್ರಮ: ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ)

<u>2. ಜಲಾಮೃತ ಯೋಜನೆ:</u>

ಜಲಾಮೃತ ಯೋಜನೆಯಡಿ 28 ಕೆರೆಗಳ ಅಭಿವೃದ್ಧಿ ಕಾಮಗಾರಿ ಅನುಷ್ಠಾನಗೊಳಿಸಲು ರೂ.180.00 ಲಕ್ಷ ಕ್ರಿಯಾ ಯೋಜನೆ ರೂಪಿಸಿದ್ದು, ಅಂದಾಜುಪಟ್ಟಿಯನ್ನು ಸಿದ್ದಪಡಿಸಲಾಗಿದೆ. ಆದರೆ ಅನುದಾನ ಬಿಡುಗಡೆ ಆಗದಿರುವುದರಿಂದ ಪ್ರಗತಿ ಸಾಧ್ಯವಾಗಿರುವುದಿಲ್ಲ ಎಂಬುದಾಗಿ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದವರು ತಿಳಿಸಿದರು.

ಮುಂಬರುವ ದಿನಗಳಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಸಭೆಯನ್ನು ನಡೆಸಲಿರುವುದರಿಂದ ಜಲಾಮೃತ ಯೋಜನೆಗಳ ಬಗ್ಗೆ ಹೆಚ್ಚಿನ ಪ್ರಗತಿ ಸಾಧಿಸಿ, ಸ್ಪಷ್ಟ ಮಾಹಿತಿಯನ್ನು ಪೂರೈಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರು.

(ಕ್ರಮ: ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಬೆಂಗಳೂರು ನಗರ ಜಿಲ್ಲೆ)

<u>3. ಮುಖ್ಯ ಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ:</u>

2019–20ನೇ ಸಾಲಿಗೆ ರೂ. 300.00 ಲಕ್ಷಗಳಿಗೆ ಒಟ್ಟು 73 ಭೌತಿಕ ಗುರಿ ನಿಗಧಿಯಾಗಿದ್ದು, ಈ ಪೈಕಿ ತಹಲ್‌ವರೆವಿಗೆ ರೂ.175.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, 56 ಕಾಮಗಾರಿಗಳು ಪೂರ್ಣಗೊಂಡು ಉಳಿದ

17 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಸರ್ಕಾರದಿಂದ ಅನುದಾನ ಬಿಡುಗಡೆಯಾಗಬೇಕಾಗಿರುತ್ತದೆಯೆಂದು ಕಾರ್ಯಪಾಲಕ ಅಭಿಯಂತರರು ಸಭೆಗೆ ತಿಳಿಸಿದರು.

ಈ ಯೋಜನೆಯಡಿ ಮಾರ್ಚ್ ಮಾಸಾಂತ್ಯದ ವೇಳೆಗೆ ಯಾವುದೇ ಅನುದಾನ ವ್ಯಪಗತವಾಗದಂತೆ ಎಚ್ಚರವಹಿಸಬೇಕೆಂದು ಸಭೆಯ ಅಧ್ಯಕ್ಷರು ತಾಖೀತು ಮಾಡಿದರು.

**4. ಸಿ.ಎಂ.ಜಿ.ಎಸ್.ವೈ (ಟಾಸ್ಕ್‌ಫೋರ್ಸ್)**

2019–20ನೇ ಸಾಲಿಗೆ ರೂ.198.74ಲಕ್ಷ ಅನುದಾನ ನಿಗಧಿಯಾಗಿದ್ದು, ಸರ್ಕಾರದಿಂದ ರೂ.100.00 ಲಕ್ಷ ಅನುದಾನ ಬಿಡುಗಡೆಯಾಗಿ ಒಟ್ಟು 42 ಕಾಮಗಾರಿಗಳ ಪೈಕಿ 18 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ 24 ಕಾಮಗಾರಿಗಳು ಪ್ರಗತಿಯಲ್ಲಿವೆ. ಖಜಾನೆ 2 ಆಗಿದ್ದು, ಆನ್‌ಲೈನ್ ಮುಖಾಂತರ ಬಿಲ್ಲುಗಳನ್ನು ಅಪ್‌ಲೋಡ್ ಮಾಡಬೇಕಾಗಿದ್ದು, ನಿಧಾನವಾಗುತ್ತಿದೆ. ಫೆಬ್ರವರಿ 2020ರ ಅಂತ್ಯಕ್ಕೆ ಪೂರ್ಣ ಅನುದಾನ ವೆಚ್ಚ ಮಾಡುವುದಾಗಿ ಕಾರ್ಯಪಾಲಕ ಅಭಿಯಂತರರು ಸಭೆಗೆ ತಿಳಿಸಿದರು. ಶೀಘ್ರವಾಗಿ ಪ್ರಗತಿಯಲ್ಲಿರುವ 24 ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಇವರಿಗೆ ಸಭೆಯ ಅಧ್ಯಕ್ಷರು ತಿಳಿಸಿದರು.

(ಕ್ರಮ: ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಬೆಂಗಳೂರು ನಗರ ಜಿಲ್ಲೆ)

**5. ಮುಖ್ಯ ಮಂತ್ರಿಯವರ ಗ್ರಾಮ ವಿಕಾಸ ಯೋಜನೆ:**

ಈ ಯೋಜನೆಯಡಿ ಜಿಲ್ಲೆಯಲ್ಲಿ 35 ಗ್ರಾಮಗಳು ಆಯ್ಕೆಗೊಂಡಿದ್ದು, ಸಿವಿಲ್ ಕಾಮಗಾರಿಗಳನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಿಂದ 19, ಕೆ.ಆರ್.ಐ.ಡಿ.ಎಲ್. ಶೇಷಾದ್ರಿಪುರಂನಿಂದ 6, ಕೆ.ಆರ್.ಐ.ಡಿ.ಎಲ್. ಮಲ್ಲೇಶ್ವರಂ ವತಿಯಿಂದ 10 ಕಾಮಗಾರಿಗಳು ಅನುಷ್ಠಾನಗೊಳ್ಳುತ್ತಿವೆ. ಪಿ.ಆರ್.ಇ.ಡಿ.ಯಿಂದ 19 ಗ್ರಾಮಗಳ ಪೈಕಿ 18 ಗ್ರಾಮಗಳ ಕಾಮಗಾರಿ ಮುಗಿದಿದ್ದು, ಇಲ್ಲಿಯವರೆವಿಗೆ ರೂ.12.66 ಲಕ್ಷ ವೆಚ್ಚ ಮಾಡಲಾಗಿದೆ ಎಂದು ತಿಳಿಸಿದರು. ರೂ.1809.70 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಡಿಸೆಂಬರ್ ಅಂತ್ಯಕ್ಕೆ ರೂ. 1355.42 ಲಕ್ಷ ವೆಚ್ಚ ಮಾಡಿ ಶೇ.75 ರಷ್ಟು ಪ್ರಗತಿ ಸಾಧಿಸಲಾಗಿರುವುದನ್ನು ಪರಿಶೀಲಿಸಿ, ಸಂಸ್ಥೆಯವಾರು ನಿಗಧಿಯಾಗಿರುವ ಕಾಮಗಾರಿಗಳ ಭೌತಿಕ ಗುರಿ, ಆರ್ಥಿಕ ಗುರಿ, ವೆಚ್ಚ ಮಾಡಲಾಗಿರುವ ಅನುದಾನ ಹಾಗೂ ಶೇಕಡಾಂಶವನ್ನು ವಿವರವಾಗಿ ನಮೂದಿಸುವಂತೆ ಹಾಗೂ ಮುಂದಿನ ಸಭೆಗೆ ಮಲ್ಲೇಶ್ವರಂ ಕೆ.ಆರ್.ಐ.ಡಿ.ಎಲ್. ಅಧಿಕಾರಿಗಳನ್ನು ಆಹ್ವಾನಿಸುವಂತೆ ಸಭೆಯಲ್ಲಿ ಅಧ್ಯಕ್ಷರು ತಿಳಿಸಿದರು.

**6. ಸ್ವಚ್ಛ ಭಾರತ್ ಮಿಷನ್:**

2019–20ನೇ ಸಾಲಿಗೆ ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆಗೆ 40 ಗ್ರಾಮ ಪಂಚಾಯತಿಗಳ ಗುರಿ ನಿಗಧಿಪಡಿಸಲಾಗಿದ್ದು, ಈ ಪೈಕಿ ಚಿಕ್ಕಜಾಲ ಗ್ರಾಮ ಪಂಚಾಯತಿಯಲ್ಲಿ ಡಿ.ಪಿ.ಆರ್. ಅನುಮೋದನೆಗೊಂಡು ಘಟಕ ನಿರ್ಮಾಣ ಕಾಮಗಾರಿ ಅನುಷ್ಠಾನ ಹಂತದಲ್ಲಿರುತ್ತದೆ. ಬೆಂಗಳೂರು ಪೂರ್ವ ತಾಲ್ಲೂಕಿನ ದೊಡ್ಡಬನಹಳ್ಳಿ ಗ್ರಾಮ ಪಂಚಾಯತಿಯಲ್ಲಿ 2.1 ಎಕರೆ ಜಾಗ ಮಂಜೂರಾಗಿದ್ದು, ಸದರಿ ಜಮೀನಿನಲ್ಲಿ ಆವಲಹಳ್ಳಿ, ಶೀಗೇಹಳ್ಳಿ, ಕನ್ನಮಂಗಲ ಗ್ರಾಮ ಪಂಚಾಯತಿಗಳು ಒಟ್ಟಿಗೆ ಸೇರಿ ಘಟಕ ನಿರ್ಮಾಣ ಮಾಡಲು ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಅನುಮೋದನೆಗಾಗಿ ದಿನಾಂಕ:20.12.2019 ರಂದು ಸಲ್ಲಿಸಲಾಗಿದೆ. ಉಳಿದ 33 ಗ್ರಾಮ ಪಂಚಾಯತಿಗಳಲ್ಲಿ ಘಟಕ ನಿರ್ಮಾಣ ಮಾಡಲು ಜಾಗ ಮಂಜೂರಾತಿಗಾಗಿ ಕಂದಾಯ ಇಲಾಖೆಯವರು ಮತ್ತು ಪಿ.ಡಿ.ಓ.ರವರು ಸಮೀಕ್ಷೆ

ಮಾಡಿ ನಿವೇಶನಗಳನ್ನು ಗುರ್ತಿಸಿದ್ದು, ದಿನಾಂಕ: 20.12.2019 ರಂದು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ನಿವೇಶನಗಳ ವಿವರ ಈ ಕೆಳಗಿನಂತಿದೆಯೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಭೆಗೆ ತಿಳಿಸಿದರು.

| ಕ್ರ.ಸಂ | ತಾಲ್ಲೂಕು | ಗ್ರಾಮ ಪಂಚಾಯಿತಿ | ಗ್ರಾಮದ ಹೆಸರು | ಜಮೀನು ಲಭ್ಯವಿರುವ ಸರ್ವೆ ನಂ. | ಮೀಸಲಿರಿಸಲು ಸೂಚಿಸಿರುವ ಜಮೀನಿನ ವಿಸ್ತೀರ್ಣ ಎ-ಗು |
|---|---|---|---|---|---|
| 1 | ಆನೇಕಲ್ | ಸರ್ಜಾಪುರ | ಸರ್ಜಾಪುರ | 242 | 0–20 |
| 2 | | ಹಾರಗದ್ದೆ | ಹಾರಗದ್ದೆ | 105 | 1–07 |
| 3 | | ಮಾಯಸಂದ್ರ | ಮಾಯಸಂದ್ರ | 401 | 1–10 |
| 4 | | ಹುಸ್ಕೂರು | ಹುಸ್ಕೂರು | ಖರಾಬು | 0–10 |
| 5 | | ಹುಸ್ಕೂರು | ಆವಲಹಳ್ಳಿ | 28 | 0–10 |
| 6 | | ಹಂದೇನಹಳ್ಳಿ | ಸೊಳ್ಳೇಪುರ | 96 | 1–09 |
| 1 | ಬೆಂಗಳೂರು ದಕ್ಷಿಣ | ಚನ್ನೇನಹಳ್ಳಿ | ಯಲಚಗುಪ್ಪೆ | 174 | 1–00 |
| 2 | | ಕಗ್ಗಲಿಪುರ | ಉತ್ತರಿ | 112,113 | 1–00 |
| 3 | | ತಾವರೆಕೆರೆ | ಯಲಚಗುಪ್ಪೆ | 174 | 1–00 |
| 4 | | ಸೋಮನಹಳ್ಳಿ | ಸೋಮನಹಳ್ಳಿ | 113 | 1–00 |
| 1 | ಬೆಂಗಳೂರು ಉತ್ತರ | ಕಸಘಟ್ಟಪುರ | ತರಬನಹಳ್ಳಿ | 26 | 0–20 |
| 2 | | ಸಾತನೂರು | ಬೈಯಪ್ಪನಹಳ್ಳಿ | 80 | 1–10 |
| 3 | | ಸೋಣ್ಣೇನಹಳ್ಳಿ | ಸೋಣ್ಣೇನಹಳ್ಳಿ | 79/ಪಿ1 | 1–10 |
| 4 | | ಹುರಳಿಚಿಕ್ಕನಹಳ್ಳಿ | ಬಿಳಿಜಾಜಿ | 27 | 1–10 |
| 5 | | ಹೆಸರಘಟ್ಟ | ಬಿಳಿಜಾಜಿ | 27 | 1–10 |
| 6 | | ರಾಜಾನುಕುಂಟೆ | ಅದ್ದಿಗಾನಹಳ್ಳಿ | 55 | 1–00 |
| 7 | | ಸೊಣ್ಣಪ್ಪನಹಳ್ಳಿ | ಸೊಣ್ಣಪ್ಪನಹಳ್ಳಿ | 10 | 0–20 |
| 8 | | ಬಾಗಲೂರು | ಬಾಗಲೂರು | 176 | 1–00 |
| 9 | | ಕಡಬಗೆರೆ | ಕಡಬಗೆರೆ | 159 | 0–20 |
| 10 | | ಆಲೂರು | ಆಲೂರು | 25 | 1–10 |
| 11 | | ಲಕ್ಷ್ಮೀಪುರ | ಗಂಗೊಂಡನಹಳ್ಳಿ | 17 | 0–20 |
| 12 | | ಹುಸ್ಕೂರು | ಬೆತ್ತನಗೆರೆ | 48 | 1–10 |
| 13 | | ಕಿತ್ತನಹಳ್ಳಿ | ರಾವುತನಹಳ್ಳಿ | 57 | 1–02 |
| 14 | | ದಾಸನಪುರ | ದಾಸನಪುರ | 102 | 0–20 |
| 15 | | ವಡೇರಹಳ್ಳಿ | ಮೇಡಿಅಗ್ರಹಾರ | 24 | 1–00 |
| 16 | | ಕೊಡಿಗೇಹಳ್ಳಿ | ಕೊಡಿಗೇಹಳ್ಳಿ | 53 | 0–20 |

| | | | | | |
|---|---|---|---|---|---|
| 1 | ಬೆಂಗಳೂರು ಪೂರ್ವ | ದೊಡ್ಡಗುಬ್ಬಿ | ಅಣಗಲಪುರ | 22 | 1–38 |
| 2 | | ಕೊಡತಿ | ಕೊಡತಿ | 82 | 1–10 |
| 3 | | ಹಾಲನಾಯಕನಹಳ್ಳಿ | ಚಿಕ್ಕನಾಯಕನಹಳ್ಳಿ | 29 | 0–19 |

| | | | | | |
|---|---|---|---|---|---|
| 4 | | ಕನ್ನಮಂಗಲ | ಖಾಜಿಸೊಣ್ಣೆನಹಳ್ಳಿ | 26 | 1–08 |
| 5 | | ಕಿತ್ತಗನೂರು | ಕಿತ್ತಗನೂರು | 81 | 1–10 |
| 6 | | ಬಿದರಹಳ್ಳಿ | ಬಿದರಹಳ್ಳಿ | 193 | 1–10 |
| 7 | | ಕಣ್ಣೂರು | ಕಣ್ಣೂರು | 50 | 1–10 |

ಅಂತಿಮವಾಗಿ ಕೋರಲಾಗಿರುವ ನಿವೇಶನಗಳನ್ನು ನಿಯಮ 71 ರಡಿ ಕಾಯ್ದಿರಿಸುವಂತೆ ಜಿಲ್ಲಾಧಿಕಾರಿಗಳು ಎಲ್ಲಾ ತಹಶೀಲ್ದಾರ್‌ರವರಿಗೆ ತಿಳಿಸಿದರು. ಮುಂದುವರೆದು, ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮೇಲೆ ಗುರ್ತಿಸಲಾಗಿರುವ ಜಮೀನುಗಳನ್ನು ಘನ ಮತ್ತು ದ್ರವ ತ್ಯಾಜ್ಯ ವಿಲೇವಾರಿ ಘಟಕಗಳಿಗೆ ಮೀಸಲಿರಿಸಿ ಗ್ರಾಮ ಪಂಚಾಯತಿಗಳಿಗೆ ಹಸ್ತಾಂತರಿಸುವಂತೆ ಸೂಚನೆ ನೀಡಿದರು. ಅಲ್ಲದೆ ನಿವೇಶನ ಹಸ್ತಾಂತರ ಖಚಿತವಾಗಿರುವುದರಿಂದ ನಿವೇಶನ ಹಸ್ತಾಂತರಕ್ಕಾಗಿ ಕಾಯದೆ ಘನ ತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದ ಸಿವಿಲ್ ಕಾಮಗಾರಿ ಸೇರಿದಂತೆ ಎಲ್ಲಾ ಕಾಮಗಾರಿಗಳನ್ನು ಕೈಗೊಳ್ಳಬೇಕೆಂದು ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಇವರಿಗೆ ತಿಳಿಸಿದರು.

(ಕ್ರಮ: ಜಿಲ್ಲಾಧಿಕಾರಿಗಳು ಹಾಗೂ ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ರವರು, ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ)

**7. ವಸತಿ ಯೋಜನೆ:**

ವಸತಿ ಯೋಜನೆಯಡಿ ಅನುದಾನದ ಕೊರತೆಯಿಂದಾಗಿ ಪ್ರಗತಿ ಕುಂಠಿತವಾಗಿದೆ. 302 ಮನೆಗಳಿಗೆ ಅನುದಾನ ನೀಡುವಂತೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಈ ಪೈಕಿ 12 ಪ್ರಸ್ತಾವನೆಗಳು ವಜಾ ಆಗಿದೆಯೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಭೆಗೆ ತಿಳಿಸಿದರು. ಪ್ರಗತಿ ಉತ್ತಮಗೊಳಿಸಲು ಅಗತ್ಯ ಕ್ರಮಕೈಗೊಳ್ಳುವಂತೆ ಉಪ ಕಾರ್ಯದರ್ಶಿಗಳಿಗೆ ಸೂಚನೆ ನೀಡಲಾಯಿತು.

(ಕ್ರಮ: ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ)

**8. ಸಣ್ಣ ನೀರಾವರಿ:**

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಒಟ್ಟು 421 ಕೆರೆಗಳಿದ್ದು, ಈ ಪೈಕಿ 327 ಕೆರೆ ಒತ್ತುವರಿಯಾಗಿದ್ದು, ಇಲ್ಲಿಯವರೆವಿಗೆ 26 ಕೆರೆ ಒತ್ತುವರಿ ತೆರವುಗೊಳಿಸಲಾಗಿದೆ. ಉಳಿದ 311 ಕೆರೆ ಒತ್ತುವರಿ ತೆರವುಗೊಳಿಸಬೇಕಾಗಿರುವುದನ್ನು ಚರ್ಚಿಸಿ, ಸರ್ವೆ ವಿಭಾಗದವರು ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಅಭಿಯಂತರರು ಜೊತೆಯಾಗಿ ನಕಾಶೆಯಂತೆ ಕೆರಗಳ ಹದ್ದುಬಸ್ತು ಗುರ್ತಿಸಿ ಕೆರೆ ಒತ್ತುವರಿಯನ್ನು ತೆರವುಗೊಳಿಸಲು ಸೂಚಿಸಲಾಯಿತು.

(ಕ್ರಮ: ಉಪ ನಿರ್ದೇಶಕರು, ಭೂ ಮಾಪನ ಇಲಾಖೆ, ಬೆಂ.ನಗರ ಜಿಲ್ಲೆ ಹಾಗೂ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ಬೆಂಗಳೂರು ನಗರ ಜಿಲ್ಲೆ)

**9.ಶುದ್ಧ ಕುಡಿಯುವ ನೀರಿನ ಘಟಕ:**

ಶುದ್ಧ ಕುಡಿಯುವ ನೀರಿನ ಘಟಕಗಳಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಬರುವ 644 ಘಟಕಗಳಲ್ಲಿ 100 ಘಟಕಗಳ ನಿರ್ವಹಣೆಯನ್ನು ಗುತ್ತಿಗೆದಾರರಿಗೆ ವಹಿಸಲಾಗಿದೆ. 58 ಘಟಕಗಳ ನಿರ್ವಹಣೆ ಜವಾಬ್ದಾರಿಯನ್ನು ಆಯಾ ಏಜೆನ್ಸಿಗಳು

ವಹಿಸಿಕೊಂಡಿವೆ. ಏಕೆಂದರೆ ಅವುಗಳ ನಿರ್ವಹಣೆಯ 5 ವರ್ಷಗಳ ಅವಧಿ ಇನ್ನೂ ಮುಗಿದಿರುವುದಿಲ್ಲ. ಇನ್ನುಳಿದ 486 ಘಟಕಗಳನ್ನು ನಿರ್ವಹಣೆಗಾಗಿ ಗ್ರಾಮ ಪಂಚಾಯತಿಗಳಿಗೆ ಹಸ್ತಾಂತರಿಸಲಾಗಿದೆ ಎಂದು ತಿಳಿಸಿದರು. ಅಧ್ಯಕ್ಷರು ಈ ಕ್ರಮಕ್ಕೆ ತಮ್ಮ ಒಪ್ಪಿಗೆ ಸೂಚಿಸಿದರು.

(ಕ್ರಮ: ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.ಮತ್ತು ನೈ.ವಿಭಾಗ, ಬೆಂಗಳೂರು ನಗರ ಜಿಲ್ಲೆ)

**10. ಶಿಕ್ಷಣ ಇಲಾಖೆ:**

ಬೆಂಗಳೂರು ದಕ್ಷಿಣ ಜಿಲ್ಲೆಗೆ ಸಂಬಂಧಿಸಿದಂತೆ 2019-20ನೇ ಸಾಲಿಗೆ ಶಾಲೆಗಳ ದುರಸ್ಥಿಗಾಗಿ ಬಿಡುಗಡೆಯಾಗಿರುವ ಸಂಪೂರ್ಣ ಅನುದಾನವನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಬಿಡುಗಡೆ ಮಾಡಲಾಗಿದ್ದು, ಕಾಮಗಾರಿ ಪೂರ್ಣಗೊಂಡಿಲ್ಲವೆಂದು ಉಪ ನಿರ್ದೇಶಕರು ಸಭೆಗೆ ತಿಳಿಸಿದರು. 126 ಶಾಲೆಗಳ ದುರಸ್ತಿ ಕಾಮಗಾರಿ ಪ್ರಗತಿಯಲ್ಲಿದ್ದು, ಫೆಬ್ರವರಿ 2020ರೊಳಗಾಗಿ ಪೂರ್ಣಗೊಳಿಸಲಾಗುವುದೆಂದು ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿಭಾಗದವರು ತಿಳಿಸಿದರು.

ಹೊಸ ಕಟ್ಟಡಗಳಿಗೆ ಸಂಬಂಧಿಸಿದಂತೆ 12 ಉರ್ದು ಶಾಲೆಗಳ ಕಟ್ಟಡ ಕಾಮಗಾರಿಗಳ ಪೈಕಿ 1 ಶಾಲೆಯ ಕಾಮಗಾರಿ ಬಿಟ್ಟು ಉಳಿದ 11 ಶಾಲೆಗಳ ಕಾಮಗಾರಿ ಪೂರ್ಣಗೊಂಡಿದೆ. ಕನ್ನಡ ಮತ್ತು ಉರ್ದು ಶಾಲೆಗಳು ಅಕ್ಕಪಕ್ಕದಲ್ಲಿ ಬಂದ ಕಾರಣ ಕಾಮಗಾರಿ ಪೂರ್ಣಗೊಂಡಿಲ್ಲವೆಂದು ತಿಳಿಸಿದರು.

ಬೆಂಗಳೂರು ಉತ್ತರ ಜಿಲ್ಲೆಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ. ಎಷ್ಟು ಕಾಮಗಾರಿ ಪೂರ್ಣಗೊಂಡಿದೆ ಎಂಬ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

(ಕ್ರಮ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ)

**ಎಸ್.ಎಸ್.ಎಲ್.ಸಿ.ಫಲಿತಾಂಶ:**

ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲೆಯ ಉಪ ನಿರ್ದೇಶಕರು ಹಿಂದಿನ ಸಾಲಿನ ರಾಜ್ಯದ ಫಲಿತಾಂಶದಲ್ಲಿ ಬಹಳ ಕೆಳ ಶ್ರೇಣಿಯ ಹಂತದಲ್ಲಿದ್ದು, ಪ್ರಸಕ್ತ ಸಾಲಿನಲ್ಲಿ ಹಾಗೂ ಮುಂಬರುವ ಸಾಲಿನಲ್ಲಿ ಹೆಚ್ಚಿನ ಶೇಕಡಾಂಶ ಹಾಗೂ ರಾಜ್ಯದಲ್ಲಿ ಹೆಚ್ಚಿನ ಶ್ರೇಣಿಯನ್ನು ಪಡೆಯುವ ಉದ್ದೇಶದಿಂದ ಹೆಚ್ಚು ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಸೂಚನೆ ನೀಡಲಾಯಿತು. 9-10ನೇ ತರಗತಿ ಮಕ್ಕಳಿಗೆ ಉತ್ತಮ ಮಾರ್ಗದರ್ಶಿಗಳಿಂದ ಬೋಧನೆ ಮಾಡಿಸಿದಾಗ ಹೆಚ್ಚಿನ ಫಲಿತಾಂಶ ಪಡೆಯಲು ಸಾಧ್ಯವಾಗುತ್ತದೆಯೆಂದು ಸಹ ತಿಳಿಸಿದರು.

( ಕ್ರಮ: ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲೆ)

**11. ಸಮಾಜ ಕಲ್ಯಾಣ /ಹಿಂದುಳಿದ ವರ್ಗ ಕಲ್ಯಾಣ/ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ:**

ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಒಟ್ಟು 8 ವಿದ್ಯಾರ್ಥಿನಿಲಯಗಳ ದುರಸ್ತಿಗೆ ರೂ.7.50 ಕೋಟಿ ಅನುದಾನ ನಿಗಧಿಯಾಗಿದ್ದು, ಕೆ.ಆರ್.ಐ.ಡಿ.ಎಲ್.ರವರಿಂದ ಅನುಷ್ಠಾನವಾಗುತ್ತಿದೆ. ಇಲ್ಲಿಯವರೆವಿಗೆ ಶೇ.80 ರಷ್ಟು ಪ್ರಗತಿಯಾಗಿರುವುದಾಗಿ ಇಲಾಖಾ ಅಧಿಕಾರಿಗಳು ತಿಳಿಸಿದರು. 2018-19, 2019-20ನೇ ಸಾಲಿಗೆ ಸಂಬಂಧಿಸಿದಂತೆ ರೂ.100.00 ಲಕ್ಷ ಅನುದಾನ ಬಿಡುಗಡೆಯಾಗಿದೆ. ಕಳೆದ ಸಾಲಿನ ಕಾಮಗಾರಿ ಪೂರ್ಣಗೊಂಡಿದ್ದು, ಪ್ರಸಕ್ತ ಸಾಲಿನ ಕಾಮಗಾರಿಗಳು ಪೂರ್ಣಗೊಳ್ಳಬೇಕಾಗಿದೆಯೆಂದು ತಿಳಿಸಿದರು.

ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಎಷ್ಟು ಅನುದಾನ ಬಿಡುಗಡೆಯಾಗಿದೆ. ಎಷ್ಟು ಕಾಮಗಾರಿ ಪೂರ್ಣಗೊಂಡಿದೆ ಎಂಬ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಯಿತು.

ವಿದ್ಯಾರ್ಥಿನಿಲಯಗಳಿಗೆ ಬೇಕಾಗಿರುವ ಅವಶ್ಯ ನಿವೇಶನಗಳನ್ನು ಪಡೆಯಲು ಪ್ರಸ್ತಾವನೆಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ ಮಂಜೂರಾತಿ ಪಡೆಯುವಂತೆ ಇಲಾಖಾ ಅಧಿಕಾರಿಗಳಿಗೆ ತಿಳಿಸಲಾಯಿತು.

(ಕ್ರಮ: ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ)

ವಿದ್ಯಾರ್ಥಿನಿಲಯಗಳು ನಡೆಯುತ್ತಿರುವ ಸ್ಥಳಗಳಲ್ಲಿ ಈ ಕೆಳಕಂಡ ಕ್ರಮವನ್ನು ಅನುಸರಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು.

- ದಿನನಿತ್ಯ ಬಳಸುವ ಪದಾರ್ಥಗಳ ಅಳತೆ ಪಟ್ಟಿ
- ದಿನನಿತ್ಯ ಮಕ್ಕಳಿಗೆ ಪೂರೈಸಲಾಗುವ ತಿಂಡಿ, ಊಟದಲ್ಲಿರುವ ಪದಾರ್ಥಗಳ ಪಟ್ಟಿ
- ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಸೋಲಾರ್ ನೀರಿನ ವ್ಯವಸ್ಥೆ
- ಕೊಳವೆ ಬಾವಿಯ ಸುಸ್ಥಿಯ ಗಮನ.
- ಅಡಿಗೆ ಕೋಣೆ ಶುಚಿತ್ವ.
- ವಿದ್ಯಾರ್ಥಿನಿಲಯದಲ್ಲಿನ ಮಕ್ಕಳ ವಿದ್ಯಾಭ್ಯಾಸದ ಗುಣಮಟ್ಟವನ್ನು ಹೆಚ್ಚಿಸಲು ಹೆಚ್ಚುವರಿ ತರಗತಿಯನ್ನು ಪೂರೈಸಲು ಅಗತ್ಯ ಶಿಕ್ಷಕರನ್ನು ನೇಮಿಸಿಕೊಂಡು ಫಲಿತಾಂಶವನ್ನು ಉತ್ತಮಗೊಳಿಸುವುದು.

(ಕ್ರಮ: ಜಂಟಿ ನಿರ್ದೇಶಕರು, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ನಗರ ಜಿಲ್ಲೆ, ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹಾಗೂ ಅಲ್ಪ ಸಂಖ್ಯಾತರ ಇಲಾಖೆ, ಬೆಂಗಳೂರು ನಗರ ಜಿಲ್ಲೆ)

## ಕಂದಾಯ ಇಲಾಖೆ:

**1 2019-20 ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಅನುದಾನದಡಿ ಕುಡಿಯುವ ನೀರಿನ ಪುನಶ್ಚೇತನ ಕಾಮಗಾರಿಗಳಿಗೆ ಅನುಮೋದನೆ ನೀಡಿದ ಹಾಗೂ ಪ್ರಗತಿಯ ಕುರಿತು:**

ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ, ಬೆಂಗಳೂರು ದಕ್ಷಿಣ ಮತ್ತು ಯಶವಂತಪುರ ವಿಧಾನಸಭಾ ಕ್ಷೇತ್ರಗಳಿಗೆ ಅವಶ್ಯವಿರುವ ಒಟ್ಟು 66 ಕಾಮಗಾರಿಗಳಿಗೆ ಅನುಮೋದನೆಯನ್ನು ನೀಡಿದ್ದು, ಇದಕ್ಕೆ ತಗಲುವ ವೆಚ್ಚ ರೂ. 97.89 ಲಕ್ಷಗಳಾಗಿದ್ದು, ಇದರಲ್ಲಿ ಒಟ್ಟು 66 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಇದುವರೆಗೂ ಯಾವುದೇ ಕಾಮಗಾರಿಯು ಪೂರ್ಣಗೊಳ್ಳದೆ ಇರುವುದನ್ನು ಸಭೆಯು ಗಮನಿಸಿ, ಈ ರೀತಿಯ ಆಮೆಗತಿಯಲ್ಲಿ ಪ್ರಗತಿ ನಡೆಸದೆ ತ್ವರಿತವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದೆಂದು, ಕಾಮಗಾರಿ ಮುಗಿದ ಕೂಡಲೇ 3ನೇ ಪಾರ್ಟಿಯಿಂದ ಪರಿಶೀಲನೆ ನಡೆಸಿ, ಕೂಡಲೇ ವರದಿಯನ್ನು ದಿನಾಂಕ:27/01/2020 ರೊಳಗೆ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ)**

## 2 Fodder Availability:

ಸರ್ಕಾರದಿಂದ ಬರ ಪರಿಹಾರದ ಬಗ್ಗೆ ಒಟ್ಟು ರೂ.14.00 ಕೋಟಿ ಹಣ ಬಿಡುಗಡೆಯಾಗಿದ್ದು, ಇದರಲ್ಲಿ ಇದುವರೆಗೂ ರೂ.97 ಲಕ್ಷಗಳು ಖರ್ಚಾಗಿರುವ ಬಗ್ಗೆ ಅಪರ ಜಿಲ್ಲಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು. ಮಾನ್ಯ ಅಧ್ಯಕ್ಷರು ಹಿಂದಿನ ವರ್ಷದಲ್ಲಿ ಯಾವುದಾದರೂ ಬಾಕಿ ಇದ್ದಲ್ಲಿ ಅದನ್ನು ಪರಿಶೀಲಿಸಿ, ಇದುವರೆಗೂ ಆಗಿರುವ ಖರ್ಚುಗಳನ್ನು ಲೆಕ್ಕ ಮಾಡಿ ಅವಶ್ಯವಿರುವ ರೂ.1.00ಕೋಟಿಯನ್ನು ಮಾತ್ರ ಇರಿಸಿಕೊಂಡು, ಯಾವ ಯಾವ ವರ್ಷ ಎಷ್ಟು ಹಣವನ್ನು ಸ್ವೀಕರಿಸಿದೆ, ಆಯಾ ವರ್ಷದ ಪ್ರಾರಂಭಿಕ ಹಣ, ವರ್ಷದ ಅಂತ್ಯಕ್ಕೆ ಉಳಿದ ಬರ ಪರಿಹಾರಕ್ಕೆಂದು ಬಂದ ಹಣವನ್ನು ವರ್ಷವಾರು ಲೆಕ್ಕಾಚಾರ ಮಾಡಿ ಎಷ್ಟು ಖರ್ಚು ಮಾಡಲಾಗಿದೆ ಎಂಬುದನ್ನು ಪರಿಶೀಲಿಸಿ ಉಳಿದ ಸುಮಾರು 13 ಕೋಟಿ ಬರ ಪರಿಹಾರ ನಿಧಿಯ ಹಣವನ್ನು ಪಿಡಿ ಖಾತೆಯಿಂದ ಬರಪರಿಹಾರ ನಿಧಿಗೆ ಹಿಂತಿರುಗಿಸುವಂತೆ ಮಾನ್ಯ ಅಧ್ಯಕ್ಷರು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾಧಿಕಾರಿಗಳು)**

## 3 Fodder Bank:

ದಿನಾಂಕ:08-08-2019ರಂತೆ ಒಟ್ಟು 4.72 ಟನ್ ಮೇವನ್ನು ಖರೀದಿಸಿದ್ದು, ಇದರಲ್ಲಿ ದಿನಾಂಕ: 17/01/2020 ರ ಅಂತ್ಯಕ್ಕೆ ಒಟ್ಟು 1.89 ಟನ್ ಮೇವು ಖರ್ಚಾಗಿರುವ ತ:ಖ್ತೆಯನ್ನು ಮಾನ್ಯ ಅಧ್ಯಕ್ಷರು ಪರಿಶೀಲಿಸಿ, ಉಳಿದಿರುವ 2.38 ಟನ್ ಮೇವನ್ನು ಸುತ್ತ ಮುತ್ತ ಜಿಲ್ಲೆಗಳಿಗೆ ಪತ್ರ ಬರೆದು ಅವರಿಗೆ ಅವಶ್ಯಕತೆ ಇದ್ದಲ್ಲಿ ಅವರಿಗೆ ನೀಡುವಂತೆ ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು.

**(ಕ್ರಮ: ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಯನ್ನು ಹೊರತುಪಡಿಸಿ ಬೆಂಗಳೂರು ವಿಭಾಗದ ಉಳಿದ ಜಿಲ್ಲೆಗಳಿಗೆ ಪತ್ರ ಬರೆಯುವಂತೆ ಅಪರ ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.)**

### 4 ಬೆಂಗಳೂರು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯ ಅನುದಾನದ ಬಗ್ಗೆ:

ಸ್ಥಳೀಯ ಸಂಸ್ಥೆಗಳಿಗೆ ದಿನಾಂಕ:13/01/2020 ರ ಅಂತ್ಯಕ್ಕೆ ಒಟ್ಟು ರೂ. 389.21ಲಕ್ಷ ಅನುದಾನವಿದ್ದು, ಇದರಲ್ಲಿ ರೂ. 237.20 ಲಕ್ಷ ಅನುದಾನ ಬಳಕೆಯಾಗಿದ್ದು, ಉಳಿದ ಹಣ ರೂ.152.01ಲಕ್ಷಗಳು ಉಳಿದಿರುವುದನ್ನು ಗಮನಿಸಿ, ಸಭಾಧ್ಯಕ್ಷರು, ಉಳಿಕೆ ಅನುದಾನಕ್ಕೆ ಒಂದು ನಿರ್ದಿಷ್ಟವಾದ ಕ್ರಿಯಾ ಯೋಜನೆಯನ್ನು ರೂಪಿಸತಕ್ಕದೆಂದು, ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರ ಸಭೆಗೆ ನೀಡಲಾಗಿರುವ ನಮೂನೆಯಂತೆ ಎಲ್ಲಾ ಮಾಹಿತಿಯನ್ನು ತಯಾರಿಸಿಕೊಂಡು ಮುಂದಿನ ಸಭೆಗೆ ಡಿಯುಡಿಸಿ ಅಧಿಕಾರಿಯುವರು ಮತ್ತು ಎಲ್ಲಾ ಪುರಸಭೆ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರುವಂತೆ ಸೂಚಿಸುತ್ತಾ, ಈ ಸಂಸ್ಥೆಗಳ ಮೇಲೆ ಕಣ್ಗಾವಲು ಇಡುವಂತೆ ಅಪರ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

**(ಕ್ರಮ: ಡಿಯುಡಿಸಿ ಅಧಿಕಾರಿಗಳು, ಅಪರ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು )**

### 5 ಸ್ಥಳೀಯ ಸಂಸ್ಥೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ನಿರ್ವಹಿಸಲಾಗುತ್ತಿರುವ ಟ್ಯಾಂಕರ್‌ಗಳ ಮಾಹಿತಿ:

ಒಟ್ಟು 1 ನಗರಸಭೆ ಮತ್ತು 5 ಪುರಸಭೆಗಳಿಂದ ಒಟ್ಟು 150 ವಾರ್ಡ್‌ಗಳಲ್ಲಿ ನಿಶ್ಚಿತ ನೀರು ಸರಬರಾಜಾಗುತ್ತಿದ್ದು, ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುತ್ತಿರುವ ವಾರ್ಡ್‌ಗಳ ಸಂಖ್ಯೆ 5, ಪ್ರತಿ ದಿನ ಉಪಯೋಗಿಸುತ್ತಿರುವ ಟ್ಯಾಂಕರ್‌ಗಳ ಸಂಖ್ಯೆ (ಸ್ಥಳೀಯ ಸಂಸ್ಥೆಯಿಂದ 1, ಬಾಡಿಗೆ ಟ್ಯಾಂಕರ್ 2) 3, ಹಾಗೂ ಪ್ರತಿದಿನ ಪೂರೈಸುತ್ತಿರುವ ಟ್ರಿಪ್ಪುಗಳು ಒಟ್ಟು 19 ಆಗಿರುವುದನ್ನು ಸಭೆಯಲ್ಲಿ ಗಮನಿಸಿ, 5 ಟ್ಯಾಂಕರ್‌ಗಳ ನೀರು ಹೆಬ್ಬಗೋಡಿ ನಗರ ಸಭೆಗೆ ಸರಬರಾಜು ಬಗ್ಗೆ ಅಧ್ಯಕ್ಷರು ಮಾತನಾಡುತ್ತಾ, ಈಗಾಗಲೇ ಬಯೋಕಾನ್ ಸಂಸ್ಥೆಗೆ ಒಂದು ದೊಡ್ಡ ಮೀಟರ್‌ನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ನೀಡಿದ್ದು,

ಹೀಗಿದ್ದಾಗ್ಯೂ 5 ಟ್ಯಾಂಕರ್‌ಗಳಿಂದ ನೀರು ಪಡೆಯುವ ಅವಶ್ಯಕತೆ ಬಗ್ಗೆ ಚರ್ಚಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಡಿಯುಡಿಸಿ ಅಧಿಕಾರಿಯವರು, ಹೆಬ್ಬಗೋಡಿಯ ಕೆಲವೊಂದು ಎತ್ತರದ ಪ್ರದೇಶಗಳಿಗೆ ಕಾವೇರಿ ನೀರು ಸರಬರಾಜು ಮಾಡಲು ಆಗದೆ ಇರುವ ಕಡೆ ಬೋರ್‌ವೆಲ್ ನೀರನ್ನು ಟ್ಯಾಂಕರ್ ಮೂಲಕ ವ್ಯವಸ್ಥೆ ಮಾಡುತ್ತಿರುವ ಬಗ್ಗೆ ಸಭೆಗೆ ವಿವರಿಸಿದರು.

ಮುಂದಿನ ಸಭೆಯಲ್ಲಿ ಸಮರ್ಪಕ ಮಾಹಿತಿಯೊಂದಿಗೆ ಎಲ್ಲಾ ಪುರಸಭೆ, ನಗರಸಭೆ ಅಧಿಕಾರಿಗಳು ಹಾಜರಿರ ಬೇಕೆಂದು ಮಾನ್ಯ ಸಭಾಧ್ಯಕ್ಷರು ಸೂಚಿಸಿದರು.

**(ಕ್ರಮ : ಡಿಯುಡಿಸಿ ಅಧಿಕಾರಿಗಳು, ನಗರಸಭೆ/ಪುರಸಭೆ ಅದಿಕಾರಿಗಳು ಮತ್ತು ಅಪರ ಜಿಲ್ಲಾಧಿಕಾರಿಗಳು)**

**6 ಸಾಮಾಜಿಕ ಭದ್ರತಾ ಯೋಜನೆಗಳು**

**ಅ) ವೃದ್ದಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ:**

ಈ ಯೋಜನೆಗಳಡಿ, 30 ದಿನಗಳ ಒಳಗಾಗಿ ಬಂದಿರುವ ಎಲ್ಲಾ ಅರ್ಜಿಗಳನ್ನು ಗುರುತಿಸಿ, ಅವುಗಳನ್ನು ಆದ್ಯತೆ ಮೇರೆಗೆ ವಿಲೇವಾರಿ ಮಾಡುವಂತೆಯೂ ಇತ್ತೀಚೆಗೆ ಬಂದ ಅರ್ಜಿಗಳನ್ನು ಉಳಿದುಕೊಂಡಲ್ಲಿ ಷರಾ ಕಲಂನಲ್ಲಿ 30 ದಿನಗಳ ಒಳಗೆ ಬಂದಿರುವ ಅರ್ಜಿಗಳು ಎಂದು ನಮೂದಿಸತಕ್ಕದೆಂದು ಸಭೆಯಲ್ಲಿ ಹಾಜರಿದ್ದ ಎಲ್ಲಾ ತಾಲ್ಲೂಕು ತಹಶೀಲ್ದಾರ್‌ಗಳಿಗೆ ತಿಳಿಸಿದರು.

ವೃದ್ಧಾಪ್ಯ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಆಗುತ್ತಿರುವ ಮರಣಗಳ ಕುರಿತು ಸರಿಯಾದ ರಿಜಿಸ್ಟರ್‌ಗಳನ್ನು ನಿರ್ವಹಿಸುವಂತೆ, ಮರಣ ಹೊಂದಿದವರ ಬಗ್ಗೆ ಕ್ರಮಬದ್ಧವಾಗಿ ಮರಣ ದೃಢೀಕರಣ ಪತ್ರವನ್ನು ಆಯಾ ಗ್ರಾಮದ ವಿಲೇಜ್ ಅಕೌಂಟೆಂಟ್ ನೀಡುವಂತೆಯೂ, ಇದರಿಂದ ಮೃತಹೊಂದಿದ ವ್ಯಕ್ತಿಗೆ ವೃದ್ದಾಪ್ಯ ವೇತನ ನೀಡುವುದನ್ನು ಕೂಡಲೇ ತಡೆಹಿಡಿಯಲು ಕ್ರಮವಹಿಸಬಹುದೆಂದು ಸಭೆಯಲ್ಲಿ ತಿಳಿಸುತ್ತಾ, ಇದನ್ನು ಕೂಡಲೇ ಕಾರ್ಯರೂಪಕ್ಕೆ ತರಲು ಎಲ್ಲಾ ತಾಲ್ಲೂಕು ತಹಶೀಲ್ದಾರರಿಗೆ ಸೂಚಿಸಿದರು.

**(ಕ್ರಮ: ತಹಶೀಲ್ದಾರ್, ಬೆಂಗಳೂರು ಉತ್ತರ, ದಕ್ಷಿಣ, ಯಲಹಂಕ, ಆನೇಕಲ್ ಮತ್ತು ಕೆ.ಆರ್.ಪುರ)**

**ಆ) ಸಂಧ್ಯಾ ಸುರಕ್ಷಾ ಯೋಜನೆ:**

ವೃದ್ಧಾಪ್ಯ ಯೋಜನೆಯಲ್ಲಿ ಪಡೆಯಲಾಗಿದ್ದ ದೃಢೀಕೃತ ದಾಖಲೆಗಳಾದ ಅರ್ಜಿದಾರರ ಓಟರ್ ಐಡಿ, ಆಧಾರ್ ಕಾರ್ಡ್, ರೇಷನ್ ಕಾರ್ಡ್ ಇವುಗಳಲ್ಲಿ ಅರ್ಜಿದಾರರ ಜನ್ಮದಿನಾಂಕ ನಮೂದಾಗಿದ್ದು, ಇದನ್ನೇ ಆಧಾರವನ್ನಾಗಿಟ್ಟುಕೊಂಡು ಅವರಿಗೆ 65 ವರ್ಷಗಳು ತುಂಬಿದ ನಂತರ ಅವರನ್ನು ವೃದ್ಧಾಪ್ಯ ಯೋಜನೆಯಿಂದ ನೇರವಾಗಿ ಈ ಯೋಜನೆಗೆ ಅವರನ್ನು ಸೇರ್ಪಡೆ ಮಾಡುವ ಕ್ರಮದ ಬಗ್ಗೆ ಪರಿಶೀಲಿಸಬೇಕೆಂದು ಸಭೆಯಲ್ಲಿ ಭಾಗವಹಿಸಿದ ಎಲ್ಲಾ ತಾಲ್ಲೂಕು ತಹಶೀಲ್ದಾರ್‌ರವರಿಗೆ ತಿಳಿಸಿದರು.

**(ಕ್ರಮ: ಅಪರ ಜಿಲ್ಲಾಧಿಕಾರಿಗಳು, ಎಲ್ಲಾ ತಾಲ್ಲೂಕು ತಹಶೀಲ್ದಾರ್‌ಗಳು)**

**ಇ) ಮನಸ್ವಿನಿ ಯೋಜನೆ:**

ಅವಿವಾಹಿತ ಮಹಿಳೆಯರಿಗೆ ಹಣವನ್ನು ನೀಡುವ ಯೋಜನೆಯಾಗಿದ್ದು, ಇದರಲ್ಲಿ ಒಟ್ಟು 60 ಅರ್ಜಿಗಳು ಬಾಕಿ ಇರುವುದನ್ನು ಗಮನಿಸಲಾಯಿತು. ಇವುಗಳನ್ನು ಕೂಡ ಶೀಘ್ರವಾಗಿ ವಿಲೇವಾರಿ ಮಾಡುವಂತೆ ಮಾನ್ಯ ಸಭಾಧ್ಯಕ್ಷರು ಸೂಚನೆಯನ್ನು ನೀಡಿದರು.

**ಈ) ಮೈತ್ರಿ ಯೋಜನೆ; ಆದರ್ಶ ವಿವಾಹ ಯೋಜನೆ ಮತ್ತು ರೈತ ಪತ್ನಿ ವಿಧವಾ ವೇತನ:**

ಈ ಎರಡು ಯೋಜನೆಗಳಡಿ ಯಾವುದೇ ಅರ್ಜಿಗಳು ಸ್ವೀಕರಿಸದೆ ಇರುವುದನ್ನು ಸಭೆಯಲ್ಲಿ

ಗಮನಿಸಲಾಯಿತು. ರೈತರು ಆತ್ಮಹತ್ಯೆ ಮಾಡಿಕೊಂಡ ನಂತರ ಅವರ ಕುಟುಂಬಗಳಿಗೆ ನೀಡಬೇಕಾದ ಸಹಾಯ ಧನವನ್ನು ನೀಡುವ ಬಗ್ಗೆ ಸರ್ಕಾರದ ಆದೇಶದಂತೆ ಯಾವ ಯಾವ ಪ್ಯಾಕೇಜ್‌ಗೆ ಎಷ್ಟು ಹಣ ನೀಡಬೇಕೆಂಬುದನ್ನು ಮುಂದಿನ ಸಭೆಯಲ್ಲಿ ಕ್ರಮಬದ್ಧವಾದ ವರದಿಯನ್ನು ನೀಡಬೇಕೆಂದು ಜಂಟಿ ನಿರ್ದೇಶಕರು, ಕೃಷಿ ಇಲಾಖೆಯವರಿಗೆ ಸೂಚನೆ ನೀಡಿದರು.

**(ಕ್ರಮ ಜಂಟಿ ನಿರ್ದೇಶಕರು, ಕೃಷಿ ಇಲಾಖೆ)**

**ಉ) ಆಸಿಡ್ ದಾಳಿಗೆ ಒಳಗಾದ ಮಹಿಳೆ/ಹೆಣ್ಣುಮಕ್ಕಳ ಸಹಾಯಧನ:**

ಈ ಯೋಜನೆಯಲ್ಲಿ ಈ ತಿಂಗಳಿನಲ್ಲಿ ಒಂದು ಅರ್ಜಿ ಮಾತ್ರ ಸ್ವೀಕೃತಗೊಂಡು, ಆ ಅರ್ಜಿಯು ವಿಲೇವಾರಿಯಾಗಿರುವುದನ್ನು ಸಭೆಯು ಗಮನಿಸಿತು.

**ಊ) ರಾಷ್ಟ್ರೀಯ ಕುಟುಂಬ ನೆರವು ಯೋಜನೆ:**

ಒಂದು ಕುಟುಂಬದಲ್ಲಿ ದುಡಿಯುವ ವ್ಯಕ್ತಿ ಆಕಸ್ಮಿಕ ಮರಣ ಹೊಂದಿದಲ್ಲಿ ಅವರ ಕುಟುಂಬಕ್ಕೆ ಒಂದು ಬಾರಿ ರೂ.10,000/- ಗಳನ್ನು ನೀಡುವ ಯೋಜನೆಯಾಗಿದ್ದು, ಇದರಲ್ಲಿ ವಿಲೇವಾರಿಯಾಗಿರುವ ಅರ್ಜಿಗಳ ಪ್ರಗತಿಯನ್ನು ಗಮನಿಸಿ, ವಿಲೇವಾರಿಗೆ ಬಾಕಿ ಇರುವ ಅರ್ಜಿಗಳ ಕುರಿತು ಆದೇಶವನ್ನು ನೀಡಬಹುದೆಂದು, ಕೇಂದ್ರ ಸರ್ಕಾರದಿಂದ ಅನುದಾನ ಬಂದ ನಂತರ ಹಣವನ್ನು ಪಾವತಿಸತಕ್ಕದ್ದಾಗಿದ್ದು, ಇನ್ನು ಮುಂದೆ ಈ ರೀತಿ ಕ್ರಮವನ್ನು ಅನುಸರಿಸಬೇಕೆಂದು, ಮುಂದಿನ ಸಭೆಯಲ್ಲಿ ಯಾವುದೇ ಅರ್ಜಿಗಳು ಬಾಕಿ ಇರದಂತೆ ಕ್ರಮ ವಹಿಸಬೇಕೆಂದು ಸೂಚಿಸಿದರು.

**(ಕ್ರಮ: ಅಪರ ಜಿಲ್ಲಾಧಿಕಾರಿಗಳು)**

**ಋ) ಅಂತ್ಯ ಸಂಸ್ಕಾರ ಯೋಜನೆ:**

ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಪ್ರತಿ ತಿಂಗಳು ಎಷ್ಟು ಜನರ ಮರಣವಾಗಿದೆ ಎಂಬುದರ ಬಗ್ಗೆ ಪ್ರತಿ ಮಾಹೆ ವರದಿಯನ್ನು ತಯಾರಿಸತಕ್ಕದೆಂದು, ಇದನ್ನು ಮರಣ ರಿಜಿಸ್ಟರ್‌ನಲ್ಲಿ ದಾಖಲು ಮಾಡಿದ ನಂತರ ಮರಣ ಪ್ರಮಾಣ ಪತ್ರವನ್ನು ನೀಡಬೇಕೆಂದು, ಇದರಿಂದ ಮುಂದಿನ ಎಲ್ಲಾ ಯೋಜನೆಗಳಿಗೆ ಇದು ಮೂಲಾಧಾರವಾಗುತ್ತದೆಂದು ತಿಳಿಸುತ್ತಾ, ಇದನ್ನು ಇನ್ನು ಮುಂದೆ ಕ್ರಮಬದ್ಧವಾಗಿ ನಿರ್ವಹಿಸುವ ಬಗ್ಗೆ ಆಯಾ ವಿಲೇಜ್ ಅಕೌಂಟೆಂಟ್‌ಗಳು, ಗ್ರಾಮ ಸಹಾಯಕರು ದಾಖಲು ಮಾಡುವುದು ಕಡ್ಡಾಯವೆಂದು ಸಭೆಯಲ್ಲಿ ತಿಳಿಸುತ್ತಾ, ಈ ಬಗ್ಗೆ ತಹಶೀಲ್ದಾರ್‌ಗಳು ಕ್ರಮ ವಹಿಸತಕ್ಕದೆಂದು ಮಾನ್ಯ ಸಭಾಧ್ಯಕ್ಷರು ತಿಳಿಸಿದರು.

**(ಕ್ರಮ: ಗ್ರಾಮ ಲೆಕ್ಕಿಗರು, ಗ್ರಾಮ ಸಹಾಯಕರು, ಮೇಲ್ವಿಚಾರಣೆ ಎಲ್ಲಾ ತಹಶೀಲ್ದಾರರು)**

**ಎ) ಸಕಾಲ:**

ಸಕಾಲದಡಿ ಬರುವ ಎಲ್ಲಾ ಅರ್ಜಿಗಳನ್ನು 30 ದಿನಗಳಲ್ಲಿ ವಿಲೇವಾರಿ ಮಾಡಬೇಕೆಂಬ ಆದೇಶವಿದ್ದರೂ ಹೆಚ್ಚು ಬಾಕಿ ಉಳಿಸಿಕೊಂಡಿರುವ ಆನೇಕಲ್ ತಾಲ್ಲೂಕಿನಲ್ಲಿ ಸುಮಾರು 272 ಬಾಕಿ ಇರುವುದನ್ನು ಗಮನಿಸಿದ ಮಾನ್ಯ ಅಧ್ಯಕ್ಷರು ಅಸಮಾಧಾನವನ್ನು ವ್ಯಕ್ತಪಡಿಸಿ, ಇನ್ನು ಮುಂದೆ ಇಂತಹ ಸನ್ನಿವೇಶಗಳು ಬಾರದೆ ಇರುವಂತೆ ಎಲ್ಲಾ ತಾಲ್ಲೂಕು ತಹಶೀಲ್ದಾರ್‌ರವರು ಕ್ರಮವಹಿಸಬೇಕೆಂದು, ಈ ವಾರದೊಳಗೆ ಎಲ್ಲಾ ತಾಲ್ಲೂಕುಗಳಲ್ಲಿ ಸಂಪೂರ್ಣ ಅರ್ಜಿಗಳು ವಿಲೇವಾರಿಯಾಗಬೇಕೆಂದು ಕಟ್ಟುನಿಟ್ಟಾದ ಸೂಚನೆಯನ್ನು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ತಾಲ್ಲೂಕು ತಹಶೀಲ್ದಾರ್‌ರವರುಗಳಿಗೆ ಸೂಚಿಸಿದರು.

**(ಕ್ರಮ: ತಹಶೀಲ್ದಾರ್, ಬೆಂಗಳೂರು ಉತ್ತರ, ದಕ್ಷಿಣ, ಯಲಹಂಕ, ಆನೇಕಲ್ ಮತ್ತು ಕೆ.ಆರ್.ಪುರ)**

7 **ಆಹಾರ ಇಲಾಖೆ:**

**ಇ ಕೆವೈಸಿ:**

ಸದರಿ ಇಲಾಖೆಯ ಅಂಕಿಅಂಶಗಳ ರೀತ್ಯ ಒಟ್ಟಾರೆ ಬೆಂಗಳೂರು ನಗರದ ಪ್ರಗತಿ ಶೇಕಡಾ 40 ರಷ್ಟು ಆಗಿದೆ ಎಂಬ ಮಾಹಿತಿಯನ್ನು ಸಭೆಯಲ್ಲಿ ಅಧಿಕಾರಿಗಳು ನೀಡಿದ್ದನ್ನು ಗಮನಿಸಿದ ಮಾನ್ಯ ಸಭಾಧ್ಯಕ್ಷರು, ಈ ಬಗ್ಗೆ ಸಮರೋಪಾಧಿಯಲ್ಲಿ ಕೆಲಸವನ್ನು ನಿರ್ವಹಿಸುವಂತೆಯೂ, ಪ್ರಗತಿ ಕುಂಠಿತವಾಗಲು ಸರ್ವರ್ ತೊಂದರೆ ಇರುವುದನ್ನು ಅಧಿಕಾರಿಯವರು ತಿಳಿಸಿದ ಮೇರೆಗೆ , ಕೂಡಲೇ ಸರ್ವರ್ ತೊಂದರೆಯನ್ನು ನಿವಾರಿಸಲು ಕ್ರಮ ಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರಿಂದ ಆಹಾರ ಇಲಾಖೆಯ ಡೈರೆಕ್ಟರ್‌ರವರಿಗೆ ಅರೆ ಸರ್ಕಾರಿ ಪತ್ರವನ್ನು ಕಳುಹಿಸಲು ಕ್ರಮ ವಹಿಸುವಂತೆ ಅಪರ ಜಿಲ್ಲಾಧಿಕಾರಿಗಳಿಗೆ ತಿಳಿಸುತ್ತಾ, ತಿಂಗಳಿಗೊಮ್ಮೆಯಾದರೂ, ಗೋಡೌನ್‌ಗಳಿಗೆ ಭೇಟಿ ನೀಡಿ ಆಹಾರ ಧಾನ್ಯಗಳ ದಾಸ್ತಾನುಗಳನ್ನು ಪರಿಶೀಲಿಸುವಂತೆ ತಹಶೀಲ್ದಾರ್, ಉಪವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು.

**(ಕ್ರಮ: ಆಹಾರ ಇಲಾಖೆಯ ಅಧಿಕಾರಿಗಳು, ತಹಶೀಲ್ದಾರ್, ಉಪವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು)**

8 **ಬೆಂಗಳೂರು ನಗರ ಜಿಲ್ಲೆಯ ಆರ್.ಟಿ.ಸಿ.3 ಮತ್ತು 9 ಮಿಸ್‌ಮ್ಯಾಚ್:**

ಸುಮಾರು 21,185 ಅರ್ಜಿಗಳು ಬಾಕಿ ಇರುವುದನ್ನು ಗಮನಿಸಿ, ಈ ಬಗ್ಗೆ ಉಪವಿಭಾಗಾಧಿಕಾರಿಗಳಿಗೆ ಒಂದು ಟಾರ್ಗೆಟ್‌ನ್ನು ನಿಗದಿಪಡಿಸಬೇಕೆಂದು, ನಿಗದಿತ ಗುರಿಯನ್ನು ತಲುಪಲು ಅಗತ್ಯ ಕ್ರಮವಹಿಸಬೇಕೆಂದು,ಈಗಿರುವ ಬಾಕಿ ಅರ್ಜಿಯನ್ನು ಒಂದು ವಾರದೊಳಗೆ ಮುಕ್ತಾಯಗೊಳಿಸಬೇಕೆಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರು.

**(ಕ್ರಮ: ಉಪವಿಭಾಗಾಧಿಕಾರಿಗಳು, ಬೆಂಗಳೂರು ಉತ್ತರ ಮತ್ತು ದಕ್ಷಿಣ ಉಪವಿಭಾಗ)**

9 **ಬೆಂಗಳೂರು ನಗರ ಜಿಲ್ಲೆಯ ಪೈಕಿ ಆರ್‌ಟಿಸಿ ಬಗ್ಗೆ:**

ಪೈಕಿ ಆರ್‌ಟಿಸಿ ತ:ಖ್ತೆಯಲ್ಲಿ ಪ್ರತಿದಿನ ಆಗುತ್ತಿರುವ ಪ್ರಗತಿಯನ್ನು ನಮೂದು ಮಾಡಿರುವುದನ್ನು ಗಮನಿಸಿದ ಸಭಾಧ್ಯಕ್ಷರು, ಇನ್ನು ಮುಂದೆ ಮಾಹೆಯಾನ ಆಗಿರುವ ಪ್ರಗತಿಯನ್ನು ನಮೂದಿಸುವಂತೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ಇಂತಿಷ್ಟು ಕರ್ತವ್ಯಗಳನ್ನು ,ಇಷ್ಟು ದಿನಗಳೊಳಗೆ ಮುಗಿಸಬೇಕೆಂದು ನಿರ್ದಿಷ್ಟ ಗುರಿಯನ್ನು ನಿಗಧಿ ಪಡಿಸಬೇಕೆಂದು ಅಪರ ಜಿಲ್ಲಾಧಿಕಾರಿಗಳಿಗೆ ಮಾನ್ಯ ಸಭಾಧ್ಯಕ್ಷರು ತಿಳಿಸಿದರು.

**(ಕ್ರಮ: ಅಪರ ಜಿಲಾಧಿಕಾರಿಗಳು ಮತ್ತು ಎಲ್ಲಾ ತಹಶೀಲ್ದಾರ್‌ಗಳು, ಉಪವಿಭಾಗಾಧಿಕಾರಿಗಳು)**

10 **ಬಾಕಿಯಿರುವ ಎಲ್ಲಾ ಪೋಡಿ ಪ್ರಕರಣಗಳ ವಿಲೇವಾರಿ:**

ಒಟ್ಟು ಹದ್ದುಬಸ್ತು, ಇತರೆ ಇ-ಸ್ವತ್ತು, ದರಖಾಸ್ತು ಸೇರಿ 5837 ಅರ್ಜಿಗಳು ಇದ್ದು, ಇದರಲ್ಲಿ 1395 ಅರ್ಜಿಗಳು ಈ ಮಾಹೆಯಲ್ಲಿ ವಿಲೇವಾರಿಯಾಗಿದ್ದು, ಶೇಕಡ 23.64 ಪ್ರಗತಿ ಸಾಧಿಸಿರುವುದನ್ನು ಗಮನಿಸಿ, ಇತರೆ ಸರ್ವೆ ಕಾರ್ಯಗಳಿಗಾಗಿ ಅಂದರೆ ಬಿ.ಡಿಎ. ಬಿಬಿಎಂಪಿಗಳಿಗೆ ಹೋಗುವ ಸರ್ವೇ ಕಾರ್ಯಗಳನ್ನು ಸಹ ಇದೇ ರೀತಿ ಪ್ರತ್ಯೇಕವಾಗಿ ತ:ಖ್ತೆಯ ಮಾಹಿತಿಯನ್ನು ನೀಡುವಂತೆ ತಿಳಿಸಿದರು.

**(ಕ್ರಮ: ಭೂ ದಾಖಲೆಗಳ ಉಪನಿರ್ದೇಶಕರು)**

11 **ಪರವಾನಗಿ ಹೊಂದಿದ ಭೂ ಮಾಪಕರಿಂದ ಮುಟೇಷನ್ ಸ್ಕೆಚ್ –11 ಇ:**

ಒಟ್ಟು 12839 ಅರ್ಜಿಗಳು ಇದ್ದು, ಇದರಲ್ಲಿ ಈ ಮಾಹೆ 870 ಅರ್ಜಿಗಳನ್ನು ವಿಲೇವಾರಿ ಮಾಡಿದ್ದು, ಶೇಕಡಾ 15 ರಷ್ಟು ಪ್ರಗತಿ ಸಾಧಿಸಿರುವುದನ್ನು ಗಮನಿಸಿ, ಇದು ತುಂಬಾ ಕಳಪೆ ಮಟ್ಟದ ಸಾಧನೆಯಾಗಿದ್ದು, ಇನ್ನು ಹೆಚ್ಚಿನ ರೀತಿಯಲ್ಲಿ ಪ್ರಗತಿ ಸಾಧಿಸತಕ್ಕದೆಂದು ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಸರ್ವೆ ಅಧಿಕಾರಿಯವರು ಸರ್ವೆ ಇಲಾಖೆಯ ಕೇಂದ್ರ ಕಛೇರಿಯಿಂದ ಪರವಾನಗಿ

ಹೊಂದಿದ ಭೂ ಮಾಪಕರನ್ನು 11ಇ ಕರ್ತವ್ಯಕ್ಕೆ ನಿಯೋಜಿಸದೆ ಇರುವ ಕಾರಣ ಪ್ರಗತಿ ಕುಂಠಿತವಾಗಿರುವುದನ್ನು ವಿವರಿಸಿದರು.

ಈ ಬಗ್ಗೆ ಸರ್ವೆ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ಪತ್ರ ಬರೆದು ಕೂಡಲೇ ಪರವಾನಗಿ ಹೊಂದಿದ ಭೂ ಮಾಪಕರನ್ನು ಈ ಕರ್ತವ್ಯಕ್ಕೆ ನಿಯೋಜಿಸಲು ಕೋರುವಂತೆ ಅಪರ ಜಿಲ್ಲಾಧಿಕಾರಿಗಳಿಗೆ ತಿಳಿಸಿದರು.

**(ಕ್ರಮ: ಅಪರ ಜಿಲ್ಲಾಧಿಕಾರಿಗಳು ಮತ್ತು ಭೂ ದಾಖಲೆಗಳ ಉಪನಿರ್ದೇಶಕರು)**

## 12 ಸರ್ಕಾರಿ ಜಾಗಗಳನ್ನು ನೀಡುವ ಬಗ್ಗೆ:

### ಅ) ಸಮಾಜ ಕಲ್ಯಾಣ ಇಲಾಖೆ:

ಹಿಂದಿನ ಸಭೆಯಲ್ಲಿ ಕೋರಿದಂತೆ ಹೊಮ್ಮದೇವನಹಳ್ಳಿಯಲ್ಲಿ ಒಂದು ನಿವೇಶನವನ್ನು ಗುರುತಿಸಿದ್ದು, ಈ ಬಗ್ಗೆ ತಹಶೀಲ್ದಾರ್, ದಕ್ಷಿಣ ತಾಲ್ಲೂಕುರವರಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಿ, ತಹಶೀಲ್ದಾರ್‌ರವರು ದಿನಾಂಕ:28/01/2020 ರೊಳಗಾಗಿ ನಿವೇಶನವನ್ನು ಸಮಾಜ ಕಲ್ಯಾಣ ಇಲಾಖೆಗೆ ಹಸ್ತಾಂತರಿಸಬೇಕೆಂದು ಸೂಚಿಸಲಾಯಿತು.

**(ಕ್ರಮ: ತಹಶೀಲ್ದಾರ್, ದಕ್ಷಿಣ ತಾಲ್ಲೂಕು ಮತ್ತು ಸಮಾಜ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ)**

### ಆ) ಜಿಲ್ಲಾ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಇಲಾಖೆ:

ಹಿಂದಿನ ಸಭೆಯಲ್ಲಿ ಕೋರಿದ ಒಟ್ಟು 10 ನಿವೇಶನಗಳಲ್ಲಿ ಈಗಾಗಲೇ ಯಲಹಂಕದಲ್ಲಿ 7 ನಿವೇಶನಗಳನ್ನು, ಕೋಗಿಲು ಗ್ರಾಮದಲ್ಲಿ 1 ನಿವೇಶನವನ್ನು ಗುರುತಿಸಿದ್ದು, ಇವುಗಳನ್ನು ಇಂದೇ ಹಸ್ತಾಂತರಿಸುವಂತೆ ತಹಶೀಲ್ದಾರ್ ಯಲಹಂಕ ತಾಲ್ಲೂಕು ಇವರಿಗೆ ಸೂಚಿಸಿದರು.

ಉಲ್ಲಾಳದಲ್ಲಿ ನಿವೇಶನ ಕೋರಿದ್ದ ಬಗ್ಗೆ ತಹಶೀಲ್ದಾರ್, ಉತ್ತರ ತಾಲ್ಲೂಕುರವರು ಮಾತನಾಡುತ್ತಾ, ಅಲ್ಲಿ ನಿವೇಶನ ಸಿಗುತ್ತಿಲ್ಲವೆಂದು, ಈ ಇಲಾಖೆಯ ಅಧಿಕಾರಿಗಳು ಬದಲಿ ಗ್ರಾಮದಲ್ಲಿ ನಿವೇಶವನವನ್ನು ಗುರುತಿಸಿದಲ್ಲಿ ನೀಡಲು ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು.

ಅಲ್ಪ ಸಂಖ್ಯಾತರಿಗೆ ಈಗಾಗಲೇ ನಿಗಧಿಪಡಿಸಿದಂತೆ 2 ನಿವೇಶನಗಳನ್ನು ನೀಡಿರುವುದಾಗಿ ಜಿಲ್ಲಾ ಹಿಂದುಳಿದ ಅಧಿಕಾರಿಯವರು ಸಭೆಯಲ್ಲಿ ತಿಳಿಸಿದರು.

ಇಲಾಖೆಗೆ ಅವಶ್ಯವಿರುವ ನಿವೇಶನಗಳನ್ನು ಗುರುತಿಸುವ, ಹಸ್ತಾಂತರಿಸುವ ಪ್ರಕ್ರಿಯೆಗಳನ್ನು ಶೀಘ್ರಗತಿಯಲ್ಲಿ ನಡೆಸಬೇಕೆಂದು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಸಂಬಂಧಪಟ್ಟ ತಹಶೀಲ್ದಾರ್‌ಗಳು ಮತ್ತು ಜಿಲ್ಲಾ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಅಧಿಕಾರಿಗಳು)**

### ಇ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಮಾತನಾಡುತ್ತಾ ಒಟ್ಟು 2420 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಇದರಲ್ಲಿ 687 ಕೇಂದ್ರಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳಿಗೆ 663 ಕೇಂದ್ರಗಳಿಗೆ ನಿವೇಶನಗಳನ್ನು ಒದಗಿಸುವಂತೆಯೂ ಹಾಗೂ ಬೆಂಗಳೂರು ದಕ್ಷಿಣ ತಾಲ್ಲೂಕು ಹಾಗೂ ಬೆಂಗಳೂರು ಉತ್ತರ ತಾಲ್ಲೂಕು ವ್ಯಾಪ್ತಿಯಲ್ಲಿ ಬೇಕಾಗಿರುವ 366 ನಿವೇಶನಗಳನ್ನು ಒದಗಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಕಳೆದ ಬಾರಿ ಕೇವಲ 50 ನಿವೇಶನ ಬಗ್ಗೆ ಮಾತ್ರ ಪ್ರಸ್ತಾಪಿಸಿದ ಬಗ್ಗೆ ಸಭಾಧ್ಯಕ್ಷರು ಸಭೆಯಲ್ಲಿ ನೆನಪಿಸಿ, ಈ

ಬಗ್ಗೆ ಸಂಬಂಧಪಟ್ಟ ಅಧಿಕಾರಿಯವರು ಸಮರ್ಪಕ ಮಾಹಿತಿಯೊಂದಿಗೆ ಮುಂದಿನ ಸಭೆಯಲ್ಲಿ ಹಾಜರಾಗುವಂತೆ ತಿಳಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖಾಧಿಕಾರಿಗಳು)**

**ಈ) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:**

ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆಗೆ, ಬೆಂಗಳೂರು ನಗರ ದಕ್ಷಿಣ ತಾಲ್ಲೂಕಿನಲ್ಲಿ ಅಂಜನಾ ಪುರದಲ್ಲಿಯೂ, ಪೂರ್ವ ತಾಲ್ಲೂಕಿನಲ್ಲಿ ಹಗದೂರು, ವಿಜನಾಪುರ, ಎ ನಾರಾಯಣಪುರ, ಥಣಿಸಂದ್ರ ಮತ್ತು ರಾಮಮೂರ್ತಿನಗರದಲ್ಲಿ ಒಟ್ಟು 5 ನಿವೇಶನಗಳನ್ನು ಮತ್ತು ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿ ಬಾಗಲಕುಂಟೆ, ರಾಜಗೋಪಾಲನಗರದಲ್ಲಿ 2, ಒಟ್ಟು 8 ನಿವೇಶನಗಳನ್ನು ನೀಡುವಂತೆ ಆರೋಗ್ಯ ಇಲಾಖೆಯಿಂದ ಬಂದ ಅಧಿಕಾರಿಗಳು ಕೋರಿದರು.

ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತೆರೆಯುವುದು ಅತಿ ಮುಖ್ಯವಾದ ಕರ್ತವ್ಯವಾಗಿದ್ದು, ಕೂಡಲೇ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು. ಈ ಬಗ್ಗೆ ಪ್ರಸ್ತಾವನೆ ಬಂದ ಕೂಡಲೇ ನಿಯಮ 71ರಡಿ ಜಾಗವನ್ನು ಕಾಯ್ದಿರಿಸುವುದಾಗಿ ಜಿಲ್ಲಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

**( ಕ್ರಮ:ತಹಶೀಲ್ದಾರ್, ಬೆಂಗಳೂರು ಉತ್ತರ, ದಕ್ಷಿಣ, ಪೂರ್ವ ತಾಲ್ಲೂಕು ಮತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳು)**

**13 ನ್ಯಾಯಾಲಯಗಳ ಪ್ರಕರಣಗಳ ಬಗ್ಗೆ:**

ತಹಶೀಲ್ದಾರ್, ಉಪವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳ ಕಛೇರಿಯ ನ್ಯಾಯಾಲಯದಲ್ಲಿರುವ ಪ್ರಕರಣಗಳನ್ನು ಆರ್‌ಸಿಸಿಎಂಎಸ್‌ಗೆ ಅಳವಡಿಸಿ ತ್ವರಿತ ಗತಿಯಲ್ಲಿ ಕಂದಾಯ ಪ್ರಕರಣಗಳನ್ನು ಇತ್ಯರ್ಥಪಡಿಸುವಂತೆ, ಪ್ರತಿ ಮಾಹೆ ಇಷ್ಟು ಪ್ರಕರಣಗಳನ್ನು ಮುಗಿಸುವ ಒಂದು ಗುರಿಯನ್ನು ಇಟ್ಟುಕೊಂಡು ಕನಿಷ್ಠ 12 ತಿಂಗಳೊಳಗಾಗಿ ಪ್ರಕರಣಗಳನ್ನು ಮುಕ್ತಾಯಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಉತ್ತರ/ದಕ್ಷಿಣ ಹಾಗೂ ಎಲ್ಲಾ ತಹಶೀಲ್ದಾರ್‌ಗಳು)**

ಅಂತಿಮವಾಗಿ ಮಾನ್ಯ ಮುಖ್ಯ ಮಂತ್ರಿಯವರ ಸಭೆಗೆ ಪ್ರಗತಿ ವರದಿ ಸಲ್ಲಿಸುವಾಗ, ನಿಗದಿತ ನಮೂನೆಯಲ್ಲಿ ಸ್ಪಷ್ಟ ಮಾಹಿತಿಯೊಂದಿಗೆ ಸಲ್ಲಿಸುವಂತೆ ಎಲ್ಲಾ ಇಲಾಖಾ ಅಧಿಕಾರಿಗಳಿಗೆ ಸೂಚನೆಯನ್ನು ನೀಡಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

(ತುಷಾರ್ ಗಿರಿನಾಥ್)
**ಮಾನ್ಯ ಅಧ್ಯಕ್ಷರು, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಬೆಂಗಳೂರು ನಗರ ಜಿಲ್ಲೆ.**

# ಜಿಲ್ಲಾಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರ.ಸಂ | ಅಂಶಗಳು | |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಬೆಂಗಳೂರು ನಗರ ಜಿಲ್ಲೆ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಸನ್ಮಾನ್ಯ ತುಷಾರ್‌ಗಿರಿನಾಥ್.ಭಾ.ಅ.ಸೇ.ರವರು. |
| 3 | ಪ್ರವಾಸ ಕೈಗೊಂಡ ದಿನಾಂಕ | 22-01-2020 |

| | **ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ** | |
|---|---|---|
| 4 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | 1. ನರೇಗಾ ಯೋಜನೆಯಡಿ 1,30,000 ಮಾನವ ದಿನಗಳ ಗುರಿಗೆ ಎದುರಾಗಿ ಡಿಸೆಂಬರ್ ಅಂತ್ಯಕ್ಕೆ 76,067 ಮಾನವ ದಿನಗಳು ಸೃಜನೆ ಮಾಡಿರುವ ಅಂಶವನ್ನು ಗಮನಿಸಿದರು.<br>2. ಜಲಾಮೃತ ಯೋಜನೆಯಡಿ 28 ಕೆರೆಗಳನ್ನು ಅಭಿವೃದ್ಧಿಗೊಳಿಸಲು 180 ಲಕ್ಷ.ರೂಗಳ ಕ್ರಿಯಾ ಯೋಜನೆ ರೂಪಿಸಲಾಗಿರುವುದನ್ನು ಗಮನಿಸಿದರು.<br>3. ಮುಖ್ಯಮಂತ್ರಿ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆ ಅಡಿಯಲ್ಲಿ 56 ಕಾಮಗಾರಿಗಳು ಪೂರ್ಣಗೊಂಡಿದ್ದು 17 ಕಾಮಗಾರಿಗಳು ಪ್ರಗತಿಯಲ್ಲಿರುವುದನ್ನು ಮತ್ತು ಈ ಕಾಮಗಾರಿಗಳ ಅನುಷ್ಠಾನಕ್ಕಾಗಿ 175.00 ಲಕ್ಷ.ರೂಪಾಯಿಗಳನ್ನು ಬಿಡುಗಡೆಗೊಳಿಸಿರುವ ಅಂಶವನ್ನು ಗಮನಿಸಿದರು.<br>4. ಸಿ.ಎಂ.ಜಿ.ಎಸ್.ವೈ (ಟಾಸ್ಕ್‌ಪೋರ್ಸ್) ಅಡಿ 42 ಕಾಮಗಾರಿಗಳ ಪೈಕಿ 18 ಕಾಮಗಾರಿಗಳು ಮಾತ್ರ ಪೂರ್ಣಗೊಂಡಿದ್ದು ಉಳಿದ 24 ಕಾಮಗಾರಿಗಳು ಪ್ರಗತಿಯಲ್ಲಿರುವ ಅಂಶವನ್ನು ಗಮನಿಸಿದರು.<br>5. ಮುಖ್ಯ ಮಂತ್ರಿಯವರ ಗ್ರಾಮ ವಿಕಾಸ್ ಯೋಜನೆ ಅಡಿಯಲ್ಲಿ ಆಯ್ಕೆಯಾಗಿರುವ 35 ಗ್ರಾಮಗಳಲ್ಲಿ ಕೆ.ಆರ್.ಐ.ಡಿ.ಎಲ್.ಯಿಂದ 16 ಕಾಮಗಾರಿಗಳು ಮತ್ತು ಪಿ.ಆರ್.ಇ.ಡಿ ವತಿಯಿಂದ 19 ಕಾಮಗಾರಿಗಳು ಅನುಷ್ಠಾನವಾಗುತ್ತಿರುವುದನ್ನು ಗಮನಿಸಿದರು.<br>6. ಸ್ವಚ್ಛ ಭಾರತ್ ಮಿಷನ್ ಅಡಿ ಘನತ್ಯಾಜ್ಯ ವಿಲೇವಾರಿ ಘಟಕಗಳಿಗೆ ಅವಶ್ಯವಿರುವ ಜಮೀನು ಕಂದಾಯ ಇಲಾಖೆಯಿಂದ ಗ್ರಾಮ ಪಂಚಾಯಿತಿಗಳಿಗೆ ಈವರೆಗೆ ಹಸ್ತಾಂತರವಾಗದೆ ಇರುವ ಅಂಶವನ್ನು ಗಮನಿಸಿದರು.<br>7. ಶುದ್ಧ ಕುಡಿಯುವ ನೀರು ಘಟಕಗಳ ನಿರ್ವಹಣೆಗೆ ತೆಗೆದುಕೊಂಡಿರುವ ಕ್ರಮಗಳನ್ನು ಗಮನಿಸಿದರು.<br>8. ಎಸ್.ಎಸ್.ಎಲ್.ಸಿ ಫಲಿತಾಂಶವನ್ನು ಉತ್ತಮ ಪಡಿಸಲು ತೆಗೆದುಕೊಂಡಿರುವ ಕ್ರಮಗಳನ್ನು ಗಮನಿಸಿದರು. |

| | | |
|---|---|---|
| | | 9. ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ 8 ವಿದ್ಯಾರ್ಥಿ ನಿಲಯಗಳ ದುರಸ್ಥಿಗೆ ಅನುದಾನ ಬಿಡುಗಡೆಯಾಗಿರುವ ಅಂಶವನ್ನು ಗಮನಿಸಿದರು. ಅಲ್ಲದೇ ವಿದ್ಯಾರ್ಥಿ ನಿಲಯಗಳ ನಿರ್ವಹಣೆಯ ಸಮರ್ಪಕತೆಯ ಬಗ್ಗೆ ಗಮನಹರಿಸಿದರು. |
| 5 | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | 1. ಮೇಲ್ಕಂಡ ಯೋಜನೆಗಳಡಿ ಎಲ್ಲಾ ಕಾಮಗಾರಿಗಳನ್ನು ಫೆಬ್ರವರಿ ಅಂತ್ಯಕ್ಕೆ ಮುಕ್ತಾಯಗೊಳಿಸುವಂತೆ ಸೂಚಿಸಿದರು.<br>2. ಯಾವುದೇ ಅನುದಾನ ವ್ಯಪಗತವಾಗದಂತೆ ಕ್ರಮವಹಿಸುವಂತೆ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದರು.<br>3. ಘನತ್ಯಾಜ್ಯ ವಿಲೇವಾರಿ ಘಟಕಗಳ ಅನುಷ್ಠಾನಕ್ಕಾಗಿ ಅವಶ್ಯವಿರುವ ನಿವೇಶನವನ್ನು ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸುವ ಸಂಬಂಧ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕೆಂದು ಸಭೆಯಲ್ಲಿದ್ದ ಜಿಲ್ಲಾಧಿಕಾರಿಗಳು, ಕಂದಾಯ ಉಪವಿಭಾಗಾಧಿಕಾರಿಗಳು ಮತ್ತು ತಹಸೀಲ್ದಾರರುಗಳಿಗೆ ಸೂಚಿಸಿದರು.<br>4. ಶುದ್ಧ ಕುಡಿಯುವ ನೀರು ಘಟಕಗಳ ನಿರ್ವಹಣೆಯನ್ನು ಸಮರ್ಪಕವಾಗಿ ಮಾಡುವಂತೆ ಗ್ರಾಮ ಪಂಚಾಯಿತಿಗಳಿಗೆ ತಿಳಿಸುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದರು.<br>5. ಎಸ್.ಎಸ್.ಎಲ್.ಸಿ ಫಲಿತಾಂಶವನ್ನು ಉತ್ತಮ ಪಡಿಸಲು ಎಸ್.ಡಿ.ಎಂ.ಸಿ ಅಧ್ಯಕ್ಷರು, ಸದಸ್ಯರು ಮತ್ತು ಪೋಷಕರ ಸಹಕಾರ ಪಡೆಯುವಂತೆ ಸೂಚಿಸಿದರು.<br>6. ಸಮಾಜ ಕಲ್ಯಾಣ ಇಲಾಖೆಯ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಲ್ಲಿ ಪ್ರತಿದಿನ ನೀಡಲಾಗುವ ತಿಂಡಿ, ಊಟಗಳ ಬಗ್ಗೆ ಮಾಹಿತಿ ನೀಡುವ ಪಟ್ಟಿಯನ್ನು ನಿಲಯದ ಸೂಚನಾ ಫಲಕದಲ್ಲಿ ನೇತುಹಾಕುವಂತೆ ತಿಳಿಸಿದರು. ವಿದ್ಯಾರ್ಥಿ ನಿಲಯಗಳಿಗೆ ಶುದ್ಧ ಕುಡಿಯುವ ನೀರು ಮತ್ತು ಸೋಲಾರ್ ಬೆಳಕಿನ ವ್ಯವಸ್ಥೆ ಇರುವಂತೆ ನೋಡಿಕೊಳ್ಳಬೇಕೆಂದು ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಜಿಲ್ಲಾ ಅಧಿಕಾರಿಗಳಿಗೆ ಸೂಚಿಸಿದರು. ವಿದ್ಯಾರ್ಥಿ ನಿಲಯಗಳ ವಿಶೇಷವಾಗಿ ಅಡುಗೆ ಕೋಣೆಗಳ ಶುಚಿತ್ವ ಬಗ್ಗೆ ವಿಶೇಷ ಅಸ್ಥೆ ವಹಿಸುವಂತೆ ಸೂಚಿಸಿದರು. |

| | ಕ್ಷೇತ್ರ ವೀಕ್ಷಣೆ | -- |
|---|---|---|

| ಕ್ರಮ ಸಂಖ್ಯೆ | ಭೇಟಿ ನೀಡಿದ ತಾಲ್ಲೂಕು/ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|
| 6 | ಬೆಂಗಳೂರು ಉತ್ತರ ತಾಲ್ಲೂಕು<br>**<u>ಹಳ್ಳಿಗಳು:-</u>**<br>1. ದೊಡ್ಡಜಾಲ ಗ್ರಾ.ಪಂ.ನ ನವರತ್ನ ಅಗ್ರಹಾರ<br>2. ರಾಜಾನುಕುಂಟೆ<br>3. ಕಾಕೋಳು<br>4. ಹಾರೋಹಳ್ಳಿ<br>5. ಗಂಡಿಗಾನಹಳ್ಳಿ<br>ಈ ಗ್ರಾಮಗಳಿಗೆ ಭೇಟಿ ನೀಡಿದರು. | 1. ನವರತ್ನ ಅಗ್ರಹಾರ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ನಿರ್ವಹಿಸಲ್ಪಡುತ್ತಿರುವ ಮೆಡಿಕಲ್ ಷಾಪ್.<br>2. ಇದೇ ಗ್ರಾಮದಲ್ಲಿ ರೋನಾಲ್ಡ್ ಕೊಲಾಸೊ ಇವರಿಂದ ನಿರ್ಮಾಣವಾದ ಪ್ರಾಥಮಿಕ ಶಾಲಾ ಕಟ್ಟಡ.<br>3. ದೊಡ್ಡಜಾಲ ಗ್ರಾಮ ಪಂಚಾಯಿತಿ ಕಟ್ಟಡ.<br>4. ದೊಡ್ಡಜಾಲದಲ್ಲಿ 99 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಿರುವ ಯು.ಜಿ.ಡಿ ಕಾಮಗಾರಿಗಳ ಸ್ಥಳ.<br>5. ರಾಜಾನುಕುಂಟೆ ಗ್ರಾಮದಲ್ಲಿ ನಿರ್ಮಾಣವಾಗಿರುವ ಘನತ್ಯಾಜ್ಯ ವಿಲೇವಾರಿ ಘಟಕ.<br>6. ರಾಜಾನುಕುಂಟೆ ಗ್ರಾ.ಪಂ.ನ ಗಣಕೀಕೃತ ಗ್ರಂಥಾಲಯ.<br>7. ರಾಜಾನುಕುಂಟೆ ಗ್ರಾ.ಪಂ. ವತಿಯಿಂದ ಪಟಾಲಮ್ಮ ದೇವಾಲಯ ಹತ್ತಿರ ಬೆಳೆಸುತ್ತಿರುವ ಸಾಮಾಜಿಕ ಅರಣ್ಯಕ್ಕೆ ಸಂಬಂಧಪಟ್ಟ ಗಿಡಮರಗಳು.<br>8. ಪಿ.ಆರ್.ಇ.ಡಿ ವತಿಯಿಂದ ಸೊಣ್ಣೆನಹಳ್ಳಿ ಗ್ರಾ.ಪಂ.ಗೆ ಸೇರಿದ ಕಾಕೋಳು ಗ್ರಾಮದಲ್ಲಿ ನಿರ್ಮಾಣವಾಗುತ್ತಿರುವ ಸಿಮೆಂಟ್ ರಸ್ತೆ ಮತ್ತು ಕಾಂಪೌಡ್ ಇವುಗಳನ್ನು ಗಮನಿಸಿದರು.<br>9. ಗಂಡಿಗಾನಹಳ್ಳಿ ಗ್ರಾಮದಲ್ಲಿರುವ ಮೆಟ್ರಿಕ್ ನಂತರದ ಹೆಣ್ಣು ಮಕ್ಕಳ ವಿದ್ಯಾರ್ಥಿ ನಿಲಯ. | 1. ನವರತ್ನ ಅಗ್ರಹಾರ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ವತಿಯಿಂದ ನಿರ್ವಹಣೆ ಮಾಡಲ್ಪಡುತ್ತಿರುವ ಮೆಡಿಕಲ್ ಷಾಪ್‌ಅನ್ನು ಪರಿಶೀಲಿಸಿ, ಜನರಿಗೆ ಹೆಚ್ಚಿನ ಔಷಧಿಗಳ ರಿಯಾಯಿತಿ ದರದಲ್ಲಿ ಲಭ್ಯವಾಗುವಂತೆ ನೋಡಿಕೊಳ್ಳಲು ತಿಳಿಸಿದರು.<br>2. ರೊನಾಲ್ಡ್ ಕೊರೊಸೊ ಅವರಿಂದ ನಿರ್ಮಾಣವಾಗಿರುವ ಶಾಲ ಕಟ್ಟಡವನ್ನು ಪರಿಶೀಲಿಸಿದ ನಂತರ ಆಂಗ್ಲ ಮಾಧ್ಯಮ ಶಾಲೆಯನ್ನು ಇಲ್ಲಿ ತೆರೆಯುವಂತೆ ಸಲಹೆ ನೀಡಿದರು. ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ ಉತ್ತಮವಾಗಿರುವ ಅಂಶವನ್ನು ಗಮನಿಸದರು.<br>3. ರಾಜಾನುಕುಂಟೆ ಗ್ರಾಮದಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕದಲ್ಲಿ ಶೇಖರಣೆಯಾಗಿರುವ ಸಾಮಾಗ್ರಿಗಳನ್ನು ಶೀಘ್ರ ವಿಲೇವಾರಿಗೊಳಿಸುವಂತೆ ಸೂಚಿಸಿದರು.<br>4. ರಾಜಾನುಕುಂಟೆಯಲ್ಲಿ ಗ್ರಾಮ ಪಂಚಾಯಿತಿಯಲ್ಲಿರುವ ಗಣಕೀಕೃತ ಗ್ರಂಥಾಲಯವನ್ನು ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗುವ ವಿದ್ಯಾರ್ಥಿಗಳ ಅನುಕೂಲಕ್ಕೆ ಬಳಸಿಕೊಳ್ಳುವಂತೆ ನೋಡಿಕೊಳ್ಳಬೇಕೆಂದು ಸೂಚಿಸಿದರು.<br>5. ಕಾಕೋಳು ಗ್ರಾಮದ ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯದಲ್ಲಿ |

| | | | |
|---|---|---|---|
| | | | ಇರುವ ಊಟ, ತಿಂಡಿ ವ್ಯವಸ್ಥೆಯ ಪಟ್ಟಿಯನ್ನು ನೆತುಹಾಕುವಂತೆ ಸೂಚಿಸಿದರು. |
| 7 | ಇತರೆ ವಿಷಯಗಳು | – | – |

28.1.20

**ದಿನಾಂಕ:30.01.2020 ರಂದು ಬೆಳಗ್ಗೆ 11.00 ಗಂಟೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.**

**ಮಳೆ: ಋತುಮಾನ ಪರಿಸ್ಥಿತಿ**

ಜಿಲ್ಲೆಯಲ್ಲಿ ಜನವರಿ 2019 ಮಾಹೆಯಿಂದ ಡಿಸೆಂಬರ್ ಮಾಹೆಯವರೆಗೆ 746ಮಿಮೀ ಮಳೆಯಾಗಬೇಕಾಗಿದ್ದು, 705ಮಿಮೀ ಮಳೆಯಾಗಿದ್ದು, ಶೇ.6ರಷ್ಟು ಮಳೆಯ ಕೊರತೆಯಾಗಿರುತ್ತದೆ. ಈಶಾನ್ಯ ಮಾನ್ಸೂನ್ ಮಳೆ 236ಮಿಮೀ. ಆಗಬೇಕಾಗಿದ್ದು, 206ಮಿಮೀ ಮಳೆಯಾಗಿದ್ದು, ಶೇ.13ರಷ್ಟು ಕೊರತೆಯಾಗಿರುತ್ತದೆ. ಮುಂಗಾರು ಹಂಗಾಮಿನಲ್ಲಿ ಉಂಟಾದ ಮಳೆಯ ಅಭಾವದಿಂದ ಸರ್ಕಾರವು 2019-20ನೇ ಸಾಲಿಗೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ದಿನಾಂಕ:28.10.2019ರಂದು ಘೋಷಿಸಿ ಆದೇಶಿಸಿರುತ್ತದೆ.

ಫೆಬ್ರವರಿ 2020 ರಲ್ಲಿ ಪ್ರತಿಭಾ ಕಾರಂಜಿ ಕಾರ್ಯಕ್ರಮ ಹಾಗೂ ಉದ್ಯೋಗಾಕಾಂಕ್ಷಿಗಳಿಗಾಗಿ ಬೃಹತ್ ಉದ್ಯೋಗ ಮೇಳವನ್ನು ಆಯೋಜಿಸಿ, placement ನೀಡುತ್ತಿರುವುದನ್ನು ತಾಲ್ಲೂಕುಗಳಲ್ಲಿ Help Desk ತೆರೆದು orientation training ತೆರೆದು ನಡೆಸುವುದರಿಂದ ಜಿಲ್ಲೆಯ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತಿರುವುದನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶ್ಲಾಘಿಸಿದರು.

**ಕುಡಿಯುವ ನೀರಿನ ಸಮಸ್ಯೆ**

ಜಿಲ್ಲಾಧಿಕಾರಿ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವ 6 ಗ್ರಾಮಗಳಿಗೆ ಖಾಸಗಿ ಟ್ಯಾಂಕರ್ ಮೂಲಕ ಪ್ರತಿದಿನ 14 ಟ್ರಿಪ್ಪುಗಳಲ್ಲಿ ಹಾಗೂ 65 ಸಮಸ್ಯಾತ್ಮಕ ಗ್ರಾಮಗಳಿಗೆ ಖಾಸಗಿ ಕೊಳವೆಬಾವಿಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಪಟ್ಟಣ ಪ್ರದೇಶದಲ್ಲಿ ಒಟ್ಟು 174 ವಾರ್ಡುಗಳಿದ್ದು, 66ವಾರ್ಡುಗಳಲ್ಲಿ ನೀರಿನ ಸಮಸ್ಯೆಯಿದ್ದು, 21 ವಾರ್ಡುಗಳಲ್ಲಿ 21 ಖಾಸಗಿ ಟ್ಯಾಂಕರ್ ಮೂಲಕ ಪ್ರತಿದಿನ 84 ಟ್ರಿಪ್‌ಗಳಲ್ಲಿ ನೀರು ಸರಬರಾಜು ಮಾಡಲಾಗುತ್ತಿದೆ. ನಗರಸಭೆ/ಪುರಸಭೆಗಳ 14 ಸ್ವಂತ ಟ್ಯಾಂಕರ್‌ಗಳ ಮೂಲಕ ಪ್ರತಿದಿನ 56 ಟ್ರಿಪ್ಪುಗಳಲ್ಲಿ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ನಗರ ಪ್ರದೇಶಗಳಲ್ಲಿನ ಸಮಸ್ಯಾತ್ಮಕ ವಾರ್ಡುಗಳಲ್ಲಿ ಅವಶ್ಯವಿರುವ ಕಡೆಗಳಲ್ಲಿ

## ಕರ್ನಾಟಕ ಸರ್ಕಾರ

ಸಂ: ಗ್ರಾ-ಪಂ ಪ್ರಕಾ-ಆಶಾ 02 2020

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:13-02-2020

### ಟಿಪ್ಪಣಿ

ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆ ಇವರು ದಿನಾಂಕ: 30-01-2020ರಂದು ಕೋಲಾರ ಜಿಲ್ಲೆಗೆ ಕ್ಷೇತ್ರ ಪ್ರವಾಸ ಮಾಡಿದ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

15/2/2020

(ಪ್ರೇಮಲತ ಹೆಚ್.ವಿ)
ಆಪ್ತ ಕಾರ್ಯದರ್ಶಿ,
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾ)ರವರ ಆಪ್ತ ಶಾಖೆ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆ,

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ
ಆಪ್ತ ಕಾರ್ಯದರ್ಶಿ,
ಸಿಆಸುಇ (ಆಡಳಿತ ಸುಧಾರಣೆ)
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

ಕೊಳವೆಬಾವಿಗಳನ್ನು ನಗರೋತ್ಥಾನ/ಎಸ್‌ಎಫ್‌ಸಿ ಅನುದಾನ ಬಳಸಿಕೊಂಡು ಹೊಸ ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ. ಸಿಆರ್‌ಎಫ್ ಪಿ.ಡಿ ಖಾತೆಯಲ್ಲಿ ರೂ.೫.೫೦ಕೋಟಿ ಅನುದಾನ ಲಭ್ಯವಿದ್ದು, ಸರ್ಕಾರ ಪ್ರಸ್ತುತ ರೂ.೧೦.೦೦ಕೋಟಿ ಅನುದಾನ ಬಿಡುಗಡೆ ಮಾಡಿದ್ದು, ಒಟ್ಟು ರೂ.೧೫.೫೦ಕೋಟಿ ಅನುದಾನ ಲಭ್ಯವಿರುವುದಾಗಿ, ಅನುದಾನದ ಕೊರತೆ ಇರುವುದಿಲ್ಲ.

೧. <u>ಪಶುಸಂಗೋಪನೆ ಇಲಾಖೆ</u>

ಜಿಲ್ಲೆಯ ರೈತರಲ್ಲಿ ೨,೧೦,೪೯೮ ಮೆ.ಟನ್ ಮೇವು ದಾಸ್ತಾನಿದ್ದು, ಇದು ಸುಮಾರು ೨೫ ವಾರಗಳಿಗೆ ಸಾಕಾಗುತ್ತದೆ. ಮುಂಗಾರು ಹಂಗಾಮಿನ ಅಂತ್ಯದಲ್ಲಿ ಜಿಲ್ಲೆಯಲ್ಲಿ ಸಾಮಾನ್ಯ ಮಳೆಯಾಗಿದ್ದು, ಕೃಷಿ ಬೆಳೆಗಳು ಉತ್ತಮವಾಗಿ ಬೆಳೆದಿರುವುದರಿಂದ, ಮೇವಿನ ಕೊರತೆಯಿರುವುದಿಲ್ಲ. ೨೫,೦೦೦ಮಿನಿಕಿಟ್‌ಗಳ ಸರಬರಾಜು ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ವ್ಯವಹರಿಸುವುದಾಗಿ ಸಭೆಯ ಗಮನಕ್ಕೆ ತರಲಾಯಿತು.

೨. <u>ಕೆ.ಎಂ.ಎಫ್.</u>

ಜಿಲ್ಲೆಯಲ್ಲಿ ೧೧.೫೦ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, ಖಾಸಗಿ ಡೈರಿಯವರು ರೈತರಿಂದ ಹೆಚ್ಚಿನ ಬೆಲೆಗೆ ಹಾಲು ಖರೀದಿ ಮಾಡುತ್ತಿರುವುದರಿಂದ ಕೆ.ಎಂ.ಎಫ್.ಗೆ ೬೨,೦೦೦ಲೀಟರ್ ಹಾಲು ಕಡಿಮೆ ಖರೀದಿಯಾಗಿದ್ದು, ಖಾಸಗಿ ಡೈರಿಯವರು ಹಾಲಿನ ಗುಣಮಟ್ಟ ಸಹಾ ಪರೀಕ್ಷಿಸದೆ ಹೆಚ್ಚಿನ ದರ ರೈತರಿಗೆ ನೀಡುತ್ತಿರುವುದನ್ನು ಸಭೆಯಲ್ಲಿ ಚರ್ಚಿಸಿದ್ದರಿಂದ, ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಲಾಯಿತು.

೩. <u>ಕಂದಾಯ ಇಲಾಖೆ.</u>

ಜಿಲ್ಲಾಧಿಕಾರಿಗಳು ಕಂದಾಯ ಇಲಾಖೆ ವಿಷಯಗಳ ಬಗ್ಗೆ ತಿಳಿಸುತ್ತಾ ಜಿಲ್ಲೆಯಲ್ಲಿ ೧೦-೧೫ ವರ್ಷಗಳಿಂದ ಪಿ-ನಂಬರ್ ಅಭಿಯಾನ ಆಗಿಲ್ಲ. ಈಗ ೨ ತಿಂಗಳಿಂದ ಅಭಿಯಾನ ಕೈಗೊಂಡಿದ್ದು, ೪೮೫೮೨ ತಿದ್ದುಪಡಿಗೆ ಬಾಕಿಯಿರುವ ಪಹಣಿಗಳನ್ನು ಗುರುತಿಸಿದ್ದು, ಖಾಸಗಿ ಜಮೀನಿನ ೧೪,೨೯೨ ಪಿ.ನಂಬರ್ ಆಗಿದೆ. ಗಣರಾಜ್ಯೋತ್ಸವ ದಿನದಂದು ಹೊಸ ಪಹಣಿ ನೀಡಲಾಗಿದೆ. ಸರ್ಕಾರಿ ಜಮೀನಿನಲ್ಲಿ ಒಂದು ಗ್ರಾಮ ಆಯ್ಕೆ ಮಾಡಿಕೊಂಡು ಪ್ರತಿ ಹೋಬಳಿಯಲ್ಲಿ ಪಿ-ನಂಬರ್ ತೆಗೆಯುವ ಕಾರ್ಯ ಪ್ರಗತಿಯಲ್ಲಿದೆ.

ಜಿಲ್ಲೆಯಲ್ಲಿ ೧೬೧೦ ಗ್ರಾಮಗಳಿಗೆ ಸ್ಮಶಾನ ಭೂಮಿ ಮಂಜೂರು ಮಾಡಲಾಗಿದೆ. ಪ್ರತಿ ಗ್ರಾಮ ಪಂಚಾಯಿತಿಗೆ ಘನತ್ಯಾಜ್ಯ ವಿಲೇವಾರಿಗಾಗಿ ೫ ಎಕರೆ ಜಮೀನು ಮಂಜೂರು ಮಾಡಲಾಗುತ್ತಿದೆ. ಈಗಾಗಲೆ ೨೮ ಗ್ರಾಮಗಳಿಗೆ ೧-೨ ಎಕರೆ ಜಮೀನು ಮಂಜೂರು ಮಾಡಿದ್ದು, ಈಗ ಸರ್ಕಾರದಿಂದ ೫ ಎಕರೆ ಜಮೀನು ಮಂಜೂರು ಮಾಡಲು ಆದೇಶವಾಗಿದ್ದು, ಪ್ರಸ್ತುತ ೪೨ ಗ್ರಾಮ ಪಂಚಾಯಿತಿಗಳಿಗೆ ಜಮೀನು ಮಂಜೂರು ಮಾಡಲಾಗಿದೆ. ೬೫ ಗ್ರಾಮ ಪಂಚಾಯಿತಿಗಳಿಗೆ ಘನತ್ಯಾಜ್ಯ ವಿಲೇವಾರಿಗಾಗಿ ಜಮೀನನ್ನು ಕಾಯ್ದಿರಿಸಲಾಗಿದೆ.

ನಿವೇಶನ ರಹಿತರನ್ನು ಗುರುತಿಸಿ, ೮೦ ಎಕರೆ ಜಮೀನನ್ನು ನಿವೇಶನಗಳಿಗಾಗಿ ಮಂಜೂರು ಮಾಡಲಾಗಿದೆ. ಗ್ರಾಮ ಪಂಚಾಯಿತಿಗಳ ಗ್ರಾಮ ಸಭೆಗಳಲ್ಲಿ ಫಲಾನುಭವಿಗಳ ಆಯ್ಕೆ ಮಾಡಲಾಗುತ್ತದೆ. ಸರ್ವೆ ಡಾಟಾ ಪೋರ್ಟಲ್‌ನಲ್ಲಿ ಅಪ್‌ಡೇಟ್ ಮಾಡಿಲ್ಲದ ಕಾರಣ ಹಕ್ಕುಪತ್ರ ಕೊಡಲು ಆಗುತ್ತಿಲ್ಲ. ಗ್ರಾಮ ಪಂಚಾಯಿತಿಯ ೯&೧೧ ನಲ್ಲಿ ಫಲಾನುಭವಿಯ ವಿವರಗಳನ್ನು ನಮೂದು ಆಗಿರುವವರಿಗೆ ಮಾತ್ರ ಹಕ್ಕುಪತ್ರ ಕೊಡಲು ಆಗುತ್ತಿದೆ ಈ ಬಗ್ಗೆ ಈಗಾಗಲೆ ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿಗಳ ಪಿ.ಡಿ.ಓ.ಗಳಿಗೆ ನಿರ್ದೇಶನ ನೀಡಲಾಗಿದೆ.

ಕೋಲಾರ ಜಿಲ್ಲೆಯಲ್ಲಿ ಕಲಂ ೯೪ಸಿ - ರಲ್ಲಿ ೨೧೩ ಬಾಕಿಯಿದ್ದು, ಕಲಂ ೯೪ ಸಿಸಿ - ರಲ್ಲಿ ೧೩ ಪ್ರಕರಣಗಳು ಮಾತ್ರ ಬಾಕಿಯಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು. "ಗ್ರಾಮದ ಕಡೆಗೆ ಜಿಲ್ಲಾಧಿಕಾರಿಗಳ ನಡಿಗೆ" ಕಾರ್ಯಕ್ರಮದಡಿ ಪ್ರತಿ ೩ನೇ ಶನಿವಾರ ಯಾವುದಾದರೂ ಗ್ರಾಮಕ್ಕೆ ಹೋಗಿ ಎಲ್ಲಾ ಕುಂದುಕೊರತೆಗಳ ನಿವಾರಣೆ ಮಾಡಲು ಸೂಚನೆ ನೀಡಿದ್ದು, ಉಪ ವಿಭಾಗಾಧಿಕಾರಿಗಳು ಪ್ರತಿ ೧೫ ದಿವಸಗಳಿಗೊಮ್ಮೆ ಹಾಗೂ ತಹಸಿಲ್ದಾರರು ಪ್ರತಿ ವಾರ ಗ್ರಾಮಗಳಿಗೆ ಭೇಟಿ ನೀಡಿ ಕುಂದುಕೊರತೆಗಳ ನಿವಾರಣೆಗೆ ಕ್ರಮ ವಹಿಸುತ್ತಿರುವುದನ್ನು ಗಮನಿಸಲಾಯಿತು. ಕಂದಾಯ ವಿಚಾರಗಳಲ್ಲಿ ಕಾರ್ಯಕ್ಷಮತೆ ಜಿಲ್ಲೆಗಳ ಶ್ರೇಯಾಂಕದಲ್ಲಿ ಕೋಲಾರ ಜಿಲ್ಲೆಯು ೪ನೇ ಸ್ಥಾನದಲ್ಲಿದ್ದು, ಸಾಮಾಜಿಕ ಭದ್ರತಾ ಯೋಜನೆಯಡಿ ೬೦ ವರ್ಷ ಆಗಿರುವವರಿಗೆ ಆಧಾರ ನಂಬರ್ ಆಧರಿಸಿ ನೊಂದಣಿ ಮಾಡಿಕೊಂಡು ವೃದ್ಧಾಪ್ಯ ವೇತನ ಮಂಜೂರು ಮಾಡಲಾಗುತ್ತಿದೆ.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಾತನಾಡಿ, ಆಯುಷ್ಮಾನ್ ಭಾರತ –ಆರೋಗ್ಯ ಕರ್ನಾಟಕ ಕಾರ್ಡುಗಳ ವಿತರಣೆ ಸಂದರ್ಭದಲ್ಲಿ ಸಾಮಾಜಿಕ ಭದ್ರತೆ ಯೋಜನೆಗಳಿಗೆ ನೊಂದಣಿ ಮಾಡಿಸುವ ಕಾರ್ಯ ಸಹಾ ಕೈಗೊಳ್ಳಬೇಕೆಂದು ಸೂಚಿಸಿದರು. ವಿಕಲಚೇತನರಿಗೆ ಸರ್ಕಾರದಿಂದ ನೀಡಲಾಗುವ ಎಲ್ಲಾ ಸವಲತ್ತುಗಳನ್ನು ಒದಗಿಸಬೇಕೆಂದು ಸೂಚಿಸಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ರವರು ಇಲಾಖಾ ಕಟ್ಟಡ ನಿರ್ಮಾಣಕ್ಕಾಗಿ ಹೊಸ ತಾಲ್ಲೂಕು ಕೆ.ಜಿ.ಎಫ್.ನಲ್ಲಿ ನಿವೇಶನ ಮಂಜೂರಾತಿಗಾಗಿ ಸರ್ಕಾರದಲ್ಲಿ ವ್ಯವಹರಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

ಜಿಲ್ಲಾಧಿಕಾರಿ ಮಾತನಾಡಿ, ಹೊಸ ತಾಲ್ಲೂಕು ಕೆ.ಜಿ.ಎಫ್.ನಲ್ಲಿ ತಾಲ್ಲೂಕು ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ಮೂರೂವರೆ ಎಕರೆ ಜಮೀನು ಮಂಜೂರು ಮಾಡಿ, ಲೋಕೋಪಯೋಗಿ ಇಲಾಖೆಯಿಂದ ಅಂದಾಜುಪಟ್ಟಿ ತಯಾರಿಸಿ ಸರ್ಕಾರಕ್ಕೆ ಕಳುಹಿಸಲಾಗಿದ್ದು, ಸರ್ಕಾರದಿಂದ ಇದನ್ನು ತಡೆಹಿಡಿಯಲಾಗಿದೆ ಎಂದು ಜಿಲ್ಲಾಧಿಕಾರಿಗಳು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಸರ್ಕಾರದಲ್ಲಿ ಪರಿಶೀಲಿಸುವುದಾಗಿ ಉಸ್ತುವಾರಿ ಕಾರ್ಯದರ್ಶಿ ತಿಳಿಸಿದರು.

ರಸ್ತೆಗಳಿಗೆ ಅಡ್ಡಲಾಗಿರುವ ಧಾರ್ಮಿಕ ಕಟ್ಟಡಗಳ ತೆರವಿಗೆ ಹಾಗೂ ಸರ್ಕಾರಿ ಜಮೀನು ಒತ್ತುವರಿ ತೆರವಿಗೆ ಕ್ರಮವಹಿಸಲಾಗುತ್ತಿದೆ. ಒತ್ತುವರಿ ತೆರವು ಮಾಡಲು ಆನ್‌ಲೈನಿನಲ್ಲಿ ಮೊದಲು ಸ್ವೀಕೃತ ಅರ್ಜಿ ಮೊದಲಿಗೆ ತೆಗೆದುಕೊಂಡು ಮಾಡುತ್ತಿರುವ ಕಾರಣ ಅತಿ ಹೆಚ್ಚು ಬಾಕಿ ಅರ್ಜಿಗಳು ಉಳಿದಿರುವುದಾಗಿ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಾತನಾಡಿ, ಇ-ಸ್ವತ್ತು ತಂತ್ರಾಂಶದ ನಿರ್ವಹಣೆ ಕುರಿತು ಕಳೆದ ನವೆಂಬರ್ ನಲ್ಲಿ ನಾಲ್ಕು ಡಿವಿಜನಲ್ ಲೆವೆಲ್ ತರಬೇತಿಗಳನ್ನು ಆಯೋಜಿಸಿದ್ದು, ಈಗ ಜಿಲ್ಲಾ ಮಟ್ಟದಲ್ಲಿ ಸಹಾ ತರಬೇತಿಗಳನ್ನು ಆಯೋಜಿಸಿ, ಇ-ಸ್ವತ್ತು ತಂತ್ರಾಂಶದ ಕಾರ್ಯನಿರ್ವಹಣೆಯನ್ನು ಸರಳೀಕರಿಸಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿರುವ "ಜೀತದಾಳು ಪದ್ಧತಿ"ಯನ್ನು ನಿರ್ಮೂಲನೆ ಮಾಡಬೇಕೆಂದು, ಜೀತದಾಳುಗಳನ್ನು ಮಾಲೀಕರ ಹಿಡಿತದಿಂದ ವಿಮುಕ್ತಗೊಳಿಸಿ, ಸರ್ಕಾರದಿಂದ ಅವರಿಗೆ ನೀಡಿರುವ ಸವಲತ್ತುಗಳನ್ನು ಒದಗಿಸಬೇಕೆಂದು ಉಸ್ತುವಾರಿ ಕಾರ್ಯದರ್ಶಿ ಅಧಿಕಾರಿಗಳಿಗೆ ಸೂಚಿಸಿದರು. ನಮ್ಮ ರಾಜ್ಯದವರಾಗಿದ್ದರೆ ಮಾಸಿಕ ರೂ.2000/-ಗಳನ್ನು ನೀಡಿ, ವಸತಿ ಯೋಜನೆಯಲ್ಲಿ ಸೇರ್ಪಡೆ ಮಾಡಿಕೊಂಡು ಮನೆ ಕೊಡಿಸಲು ಹಾಗೂ ಮಹಿಳೆಯರಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಪುನರ್ವಸತಿ ಕೇಂದ್ರಕ್ಕೆ ಸೇರಿಸಲು ಸೂಚಿಸಿದರು. ಜೀತದಾಳುಗಳು ಹೊರರಾಜ್ಯದವರಾಗಿದ್ದರೆ, ಸರ್ಕಾರದ ಆದೇಶದ ಪ್ರಕಾರ ನಿಯಮಾನುಸಾರ ಅವರಿಗೆ ಸವಲತ್ತುಗಳನ್ನು ನೀಡಿ ಜೀತವಿಮುಕ್ತರನ್ನಾಗಿ ಮಾಡಿ ಅವರ ಸ್ವಂತ ಊರಿಗೆ ಕಳುಹಿಸಿಕೊಡಲು ಏರ್ಪಾಡು ಮಾಡಬೇಕೆಂದು ಸೂಚಿಸಿದರು. ಜೀತಪದ್ಧತಿ ಬಗ್ಗೆ ಯಾವುದೇ ಸಾರ್ವಜನಿಕ ದೂರು ಸ್ವೀಕೃತಗೊಂಡಲ್ಲಿ ಸಂಬಂಧಪಟ್ಟ ತಹಶೀಲ್ದಾರರು 24 ಗಂಟೆಯೊಳಗಾಗಿ ಕ್ರಮವಹಿಸಬೇಕೆಂದು ಸೂಚಿಸಿದರು.

ಉಪ ವಿಭಾಗಾಧಿಕಾರಿಗಳು ವಿವರಣೆ ನೀಡಿ ಕೋಲಾರ ಜಿಲ್ಲೆಯಲ್ಲಿ ಜೀತದಾಳುಗಳು ಇಲ್ಲವೆಂದು, ಹೊರ ರಾಜ್ಯಗಳಿಂದ ಇಟ್ಟಿಗೆ ಕಾರ್ಖಾನೆಗಳಲ್ಲಿ ಕೆಲಸ ಮಾಡಲು ಬರುವ ಆಳುಗಳಿದ್ದು, 50-60 ಜನರನ್ನು ಗುರ್ತಿಸಿ ಅಗತ್ಯ ಕ್ರಮವಹಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

4. **ಕೃಷಿ ಇಲಾಖೆ.**

2018-19ನೇ ಸಾಲಿನ ಇನ್‌ಪುಟ್ ಸಬ್ಸಿಡಿ ಮಾಹಿತಿ ನೀಡಿದ ಜಿಲ್ಲಾಧಿಕಾರಿಗಳು ಮುಂಗಾರು ಅವಧಿಯಲ್ಲಿ 46.828 ಹೆಕ್ಟೇರ್ ಪ್ರದೇಶದಲ್ಲಿ 60,340 ರೈತರ ರಾಗಿ ಮತ್ತು ನೆಲಗಡಲೆ ಬೆಳೆಗಳು ಬರದಿಂದ ಹಾನಿಗೊಳಗಾಗಿದ್ದು, ಸರ್ಕಾರದಿಂದ ರೂ.2714.59ಲಕ್ಷಗಳ ಇನ್‌ಪುಟ್ ಸಬ್ಸಿಡಿ ಮೊತ್ತವನ್ನು ನೇರವಾಗಿ ರೈತರ ಖಾತೆಗಳಿಗೆ ಪರಿಹಾರ ತಂತ್ರಾಂಶದ ಮೂಲಕ ವರ್ಗಾಯಿಸಲಾಗಿದೆ. ಹಿಂಗಾರು ಹಂಗಾಮಿನಲ್ಲಿ 15.739 ರೈತರ ಹುರಳಿ ಬೆಳೆಯು ಬರದಿಂದ ಹಾನಿಗೊಳಗಾಗಿದ್ದು, ಸರ್ಕಾರದಿಂದ 13.649 ರೈತರಿಗೆ ರೂ.6.00ಕೋಟಿ ಇನ್‌ಪುಟ್ ಸಬ್ಸಿಡಿ ಮೊತ್ತವನ್ನು ಪಾವತಿಸಲಾಗುತ್ತಿರುವುದನ್ನು ಸಭೆಯ ಗಮನಕ್ಕೆ ತಂದರು.

ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದ್ದು, ರಾಗಿ ಬೆಳೆ ಚೆನ್ನಾಗಿದ್ದು, ಸರ್ಕಾರ ರಾಗಿಗೆ ಪ್ರತಿ ಕ್ವಿಂಟಾಲಿಗೆ ರೂ.3150/-ಬೆಂಬಲ ಬೆಲೆ ಘೋಷಿಸಿದ್ದು, ನೊಂದಣಿ ಮಾಡಿಸಲು 29.02.2020ರವರೆಗೆ

ಅವಕಾಶವಿರುವುದಾಗಿ ಜಂಟಿ ಕೃಷಿ ನಿರ್ದೇಶಕರು ತಿಳಿಸಿದರು. ಒಂದು ಎಕರೆಗೆ ೧೫ ಕ್ವಿಂಟಾಲ್ ಹಾಗೂ ಗರಿಷ್ಠ 75 ಕ್ವಿಂಟಾಲ್ ಖರೀದಿ ಮಾಡಬಹುದಾಗಿದ್ದು, ಈಗ ಗರಿಷ್ಠ 50 ಕ್ವಿಂಟಾಲ್ ಪ್ರತಿ ಎಕರೆಗೆ ೧೦ ಕ್ವಿಂಟಾಲ್ ಎಂದು ತಿದ್ದುಪಡಿ ಮಾಡಿ ಆದೇಶ ಹೊರಡಿಸಲಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ಮಾಹಿತಿ ನೀಡಿದರು.

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯು ಒಟ್ಟು ರೂ.6,000/- ಗಳನ್ನು ರೈತರ ಖಾತೆಗಳಿಗೆ ನೇರವಾಗಿ ಮೂರು ಕಂತುಗಳಲ್ಲಿ ಜಮೆ ಮಾಡುವ ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಸದರಿ ಸವಲತ್ತು ಪಡೆಯಲು ಜಿಲ್ಲೆಯಲ್ಲಿ ೧,೧೫,೦೦೦ರೈತರು ನೋಂದಣಿ ಮಾಡಿಕೊಂಡಿರುವುದನ್ನು ಸಭೆಗೆ ವಿವರಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಾತನಾಡಿ, ಬೆಳೆ ಸಮೀಕ್ಷೆಗೆ ಅತೀ ಹೆಚ್ಚು ಸಿಬ್ಬಂದಿ ಶ್ರಮಿಸಬೇಕಾಗಿದ್ದು, ಅತೀ ಹೆಚ್ಚು ಸಮಯ ಹಿಡಿಯುವ ಕಾರಣ, ಬೆಳೆ ಸಮೀಕ್ಷೆಗೆ "ಬದಲಿ ತಾಂತ್ರಿಕ ವ್ಯವಸ್ಥೆ" ಉಪಯೋಗಿಸುವುದು ಸೂಕ್ತವೆಂದು ತಿಳಿಸಿದರು.

5. <u>ತೋಟಗಾರಿಕೆ ಇಲಾಖೆ</u>

ದಿನಾಂಕ:01/04/2019 ರಿಂದ 20/06/2019 ರವರೆಗೆ ಜಿಲ್ಲೆಯಾದ್ಯಂತ ಸುರಿದ ಆಲಿಕಲ್ಲು ಮತ್ತು ಬಿರುಗಾಳಿ ಸಹಿತ ಮಳೆಯಿಂದ 8,948.70ಹೆಕ್ಟೇರ್ ಪ್ರದೇಶದ ತೋಟಗಾರಿಕೆ ಬೆಳೆಗಳು ಹಾನಿಗೊಂಡಿದ್ದು, ಸುಮಾರು 9240 ರೈತರಿಗೆ ರೂ.3927.90ಲಕ್ಷಗಳ ನಷ್ಟ ಸಂಭವಿಸಿರುತ್ತದೆ. ಸರ್ಕಾರದ ಅನುಮತಿ ಪಡೆದು ಮೊದಲ ಹಂತದಲ್ಲಿ ಒಟ್ಟು 1579 ರೈತರಿಗೆ .ರೂ.300.00ಲಕ್ಷಗಳ ಪರಿಹಾರವನ್ನು ಪಾವತಿಸಲಾಗಿರುತ್ತದೆಂದು ಇನ್ನೂ 7354 ರೈತರಿಗೆ ರೂ.12.00ಕೋಟಿಗಳ ಬೆಳೆನಷ್ಟ ಪರಿಹಾರ ಬಾಕಿಯಿರುವುದಾಗಿ ಜಿಲ್ಲಾಧಿಕಾರಿಗಳು ಮಾಹಿತಿ ನೀಡಿದರು. ಹಂತ ಹಂತವಾಗಿ ಪಾವತಿಸುತ್ತಿರುವುದನ್ನು ವಿವರಿಸಿದರು.

6. <u>ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ.</u>

ಜಿಲ್ಲೆಯಲ್ಲಿ ಒಟ್ಟು 1964 ಜನವಸತಿಗಳಿದ್ದು, ಮುಂದಿನ ಬೇಸಿಗೆ ಸಮಯಕ್ಕೆ ಸುಮಾರು 324 ಜನವಸತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಬಹುದಾಗಿದ್ದು, ತಾತ್ಕಾಲಿಕ ಪರಿಹಾರವಾಗಿ

ಟ್ಯಾಂಕರ್ ಮತ್ತು ಖಾಸಗಿ ಕೊಳವೆಬಾವಿಗಳಿಂದ ಸಮಸ್ಯಾತ್ಮಕ ಗ್ರಾಮಗಳಿಗೆ ನೀರು ಪೂರೈಸಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಕಾರ್ಯಪಾಲಕ ಅಭಿಯಂತರರು ವಿವರಣೆ ನೀಡಿ, ಬೇಸಿಗೆ ಕಾಲ ಸಮೀಪಿಸುತ್ತಿದ್ದು, ಕೊಳವೆಬಾವಿಗಳಲ್ಲಿನ ನೀರಿನ ಇಳುವರಿ ಕಡಿಮೆಯಾಗುತ್ತಿದ್ದು, ಕೆಲವು ಕೊಳವೆಬಾವಿಗಳು ಒಣಗಿ ಹೋಗುತ್ತಿರುವ ಕಾರಣದಿಂದಾಗಿ ಆಯಾ ಕ್ಷೇತ್ರದ ಮಾನ್ಯ ಶಾಸಕರು ಹಾಗೂ ಜಿಲ್ಲಾ ಪಂಚಾಯತ್ ಸದಸ್ಯರು ಹೊಸ ಕೊಳವೆಬಾವಿಗಳನ್ನು ಕೊರೆಯಿಸಲು ಒತ್ತಡ ಹಾಕುತ್ತಿರುವುದರಿಂದ, ಹೆಚ್ಚುವರಿ ಕೊಳವೆಬಾವಿಗಳನ್ನು ಕೊರೆಯಿಸಲು ಸರ್ಕಾರದಿಂದ ಅನುಮತಿ ಅಗತ್ಯವಿರುವುದಾಗಿ ತಿಳಿಸಿದರು. 2019-20ನೇ ಸಾಲಿನಲ್ಲಿ ಓಖಆಪಿಕ ಯೋಜನೆಯಡಿ 279 ಕೊಳವೆಬಾವಿಗಳನ್ನು ಕೊರೆಯಿಸಬೇಕಾಗಿದ್ದು, 214 ಕೊಳವೆಬಾವಿಗಳನ್ನು ಕೊರೆಯಿಸಲಾಗಿದೆ. ಅವುಗಳ ಪೈಕಿ 47 ಕೊಳವೆಬಾವಿಗಳಲ್ಲಿ ನೀರು ಸಿಕ್ಕಿಲ್ಲವೆಂದು, ಶೇ.30ರಷ್ಟು ಕೊಳವೆಬಾವಿಗಳು ವಿಫಲಗೊಂಡಿರುವುದರ ಬಗ್ಗೆ ಮಾಹಿತಿ ನೀಡಿದರು.

ಜಿಲ್ಲಾಧಿಕಾರಿ ಪ್ರಸಕ್ತ ಸಾಲಿನಲ್ಲಿ ಐಟಿಷಾ ಜಿಆಡಿಭಿಜ ಅನುದಾನ ಬಿಡುಗಡೆಯಾಗಿಲ್ಲ, ಕುಡಿಯುವ ನೀರಿನ ಸಮಸ್ಯೆಯನ್ನು ಓಖಆಪಿಕ, ಗ್ರಾಮ ಪಂಚಾಯಿತಿ ಅನುದಾನ ಹಾಗೂ 14ನೇ ಹಣಕಾಸು ಅನುದಾನದಲ್ಲಿ ವೆಚ್ಚ ಭರಿಸಲಾಗುತ್ತಿದೆ ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹೆಚ್ಚುವರಿಯಾಗಿ ಕೊಳವೆ ಬಾವಿಗಳನ್ನು ಕೊರೆಯಿಸಿರುವ ಮೊತ್ತ ರೂ.14.00ಕೋಟಿ ಹೆಚ್ಚುವರಿ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆ ಅನುಮೋದಿತಗೊಂಡಿದ್ದು, ಅನುದಾನ ಸಹಾ ಬಿಡುಗಡೆಯಾಗಿರುತ್ತದೆ. ಆದರೆ ಪ್ರಸಕ್ತ ಸಾಲಿನಲ್ಲಿ ಅನುಮೋದಿತ ಕ್ರಿಯಾ ಯೋಜನೆ ಹೊರತುಪಡಿಸಿ, ಹೆಚ್ಚುವರಿಯಾಗಿ ಕೊಳವೆ ಬಾವಿ ಕೊರೆಯಿಸಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳೆ ಹೊಣೆಗಾರರಾಗುವುದಾಗಿ ಸರ್ಕಾರದಿಂದ ಆದೇಶವಾಗಿದ್ದು, ಈಗ ಹೆಚ್ಚುವರಿ ಕೊಳವೆಬಾವಿ ಕೊರೆಯಿಸಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿದರು. ಈ ಬಗ್ಗೆ ಜಿಲ್ಲಾಧಿಕಾರಿ ಈಗಾಗಲೇ ಕೊಳವೆ ಬಾವಿಗಳ Failure rate 30% ಆಗಿರುವುದರಿಂದ,

ಸರ್ಕಾರದ ಹಣವನ್ನು ಪೋಲುಮಾಡಬಾರದೆಂಬ ದೃಷ್ಠಿಯಿಂದ ಕೊಳವೆ ಬಾವಿ ಕೊರೆಯುವ ಮುನ್ನ ಅಕ್ಕಪಕ್ಕದಲ್ಲಿರುವ ಖಾಸಗಿ ಕೊಳವೆಬಾವಿಗಳ ಆಳದ ಬಗ್ಗೆ ತಿಳಿದುಕೊಂಡು, ನೀರು ಸಿಗುವ ಸಂಭಾವ್ಯತೆ ಇದ್ದಲ್ಲಿ ಮಾತ್ರ ಕೊಳವೆಬಾವಿ ಕೊರೆಯಬೇಕಾಗುತ್ತದೆಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸಮಸ್ಯಾತ್ಮಕ ಗ್ರಾಮಗಳಿಗೆ ಅನುಮೋದಿತ ಕ್ರಿಯಾ ಯೋಜನೆ ಹೊರತುಪಡಿಸಿ, ಹೆಚ್ಚುವರಿಯಾಗಿ ಕೊಳವೆ ಬಾವಿ ಕೊರೆಯಿಸುವ ಅವಶ್ಯಕತೆಯಿದ್ದಲ್ಲಿ, ಈ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಸೂಚಿಸಿದರು.

೨೦೧೯-೨೦ನೇ ಸಾಲಿನ ಎಸ್.ಡಿ.ಪಿ. ಯೋಜನೆಯಡಿ ವಾರ್ಷಿಕ ಗುರಿ ೧೩೭ ನಿಗಧಿಪಡಿಸಿದ್ದು, ಭೌತಿಕವಾಗಿ ಶೇ.೫೮ ಹಾಗೂ ಆರ್ಥಿಕವಾಗಿ ಶೇ.೩೦ರಷ್ಟು ಪ್ರಗತಿಯಾಗಿರುವ ಬಗ್ಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಾತನಾಡಿ, ಎಸ್.ಡಿ.ಪಿ.ಹಣ ಕಷ್ಟದಿಂದ ಸಿಗುತ್ತದೆ. ಅದು ಯಾವುದೇ ಕಾರಣಕ್ಕೂ ಲ್ಯಾಪ್ಸ್ ಆಗಬಾರದೆಂದು ಅನುಷ್ಠಾನಾಧಿಕಾರಿಗಳಿಗೆ ಸೂಚಿಸಿದರು.

## ೭. ನೀರು ಶುದ್ಧೀಕರಣ ಘಟಕಗಳು

ಜಿಲ್ಲೆಯಲ್ಲಿ ಒಟ್ಟು 1964 ಜನವಸತಿಗಳಿದ್ದು, ೧೦೯೯ ನೀರು ಶುದ್ಧೀಕರಣ ಘಟಕಗಳನ್ನು ಅಳವಡಿಸಬೇಕಾಗಿದ್ದು, ೧೦೯೩ ಘಟಕಗಳನ್ನು ಅಳವಡಿಸಲಾಗಿದೆ. ಇವುಗಳ ಪೈಕಿ ೧೦೭೫ ಕಾರ್ಯನಿರ್ವಹಿಸುತ್ತಿದ್ದು, ೨೨ ಘಟಕಗಳು ತಾತ್ಕಾಲಿಕವಾಗಿ ದುರಸ್ಥಿಯಲ್ಲಿ ರುವುದಾಗಿ ಅಧಿಕಾರಿಗಳು ಮಾಹಿತಿ ನೀಡಿದರು. ಕೆ.ಆರ್.ಐ.ಡಿ.ಎಲ್. ವತಿಯಿಂದ ಬಂಗಾರಪೇಟೆ ತಾಲ್ಲೂಕಿನಲ್ಲಿ ೧೫ ಘಟಕಗಳನ್ನು ದುರಸ್ತಿಪಡಿಸಬೇಕಾಗಿದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಫೆಬ್ರವರಿ ೩ನೇ ತಾರೀಖಿನೊಳಗಾಗಿ ದುರಸ್ತಿಗೊಳಪಟ್ಟಿರುವ ಎಲ್ಲಾ ಘಟಕಗಳ ದುರಸ್ಥಿಯಾಗಬೇಕೆಂದು ಅನುಷ್ಠಾನಾಧಿಕಾರಿಗಳಿಗೆ ಸೂಚಿಸಿದರು.

## ೮. ಸ್ವಚ್ಛ ಭಾರತ ಮಿಷನ್

ಘನ ತ್ಯಾಜ್ಯ ಸಂಪನ್ಮೂಲ ನಿರ್ವಹಣಾ ಘಟಕಗಳನ್ನು ಗ್ರಾಮ ಪಂಚಾಯಿತಿಗಳಲ್ಲಿ ಅನುಷ್ಠಾನ ಮಾಡಲು ೬೧ ಗ್ರಾಮ ಪಂಚಾಯಿತಿಗಳಿಗೆ ಜಮೀನು ಮಂಜೂರಾತಿಯಾಗಿದ್ದು, ಒಟ್ಟು ೩೨ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಅವುಗಳ ಪೈಕಿ ೨೫ ಪ್ರಸ್ತಾವನೆಗಳಿಗೆ

ಅನುಮೋದನೆಯಾಗಿರುತ್ತದೆಂದು ಅಧಿಕಾರಿಗಳು ಮಾಹಿತಿ ನೀಡಿದರು. ಮುಳಬಾಗಲು ತಾಲ್ಲೂಕಿನ ಉತ್ತನೂರು ಗ್ರಾಮ ಪಂಚಾಯತಿಯಲ್ಲಿ ಘಟಕ ನಿರ್ಮಾಣ ಪೂರ್ಣಗೊಂಡಿದೆ. 11 ಗ್ರಾಮ ಪಂಚಾಯತಿಗಳಲ್ಲಿ ಘಟಕ ನಿರ್ಮಾಣ ಮಾಡಲು ಟೆಂಡರ್ ಪ್ರಕ್ರಿಯೆಗೆ ಪೂರ್ಣಗೊಂಡಿದ್ದು, ಕಾರ್ಯಾದೇಶ ನೀಡಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಜಿಲ್ಲೆಯ ಎಲ್ಲಾ 156 ಗ್ರಾಮ ಪಂಚಾಯತಿಗಳಲ್ಲಿ ಶೀಘ್ರವಾಗಿ ಘನತ್ಯಾಜ್ಯ ಸಂಪನ್ಮೂಲ ನಿರ್ವಹಣಾ ಘಟಕಗಳನ್ನು ಪ್ರಾರಂಭ ಮಾಡಬೇಕೆಂದು ಸೂಚಿಸಿದರು.

ಹೆಚ್ಚುವರಿಯಾಗಿ 10000 ವೈಯಕ್ತಿಕ ಶೌಚಾಲಯಗಳ ನಿರ್ಮಾಣಕ್ಕೆ ಗುರಿ ನಿಗಧಿಪಡಿಸಿದ್ದು, ಸರ್ವೆ ಕಾರ್ಯ ಪ್ರಾರಂಭವಾಗಿದೆ. ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಾತನಾಡಿ, ಶಾಲೆಗಳ ಅಕ್ಕಪಕ್ಕದಲ್ಲಿ ಸಮುದಾಯ ಶೌಚಾಲಯ ನಿರ್ಮಿಸಿ, ಸದರಿ ಶೌಚಾಲಯದ ಕೀ ಅನ್ನು ಶಾಲೆಗೆ ಹಸ್ತಾಂತರಿಸಿದಲ್ಲಿ ಶಾಲಾ ಮಕ್ಕಳಿಗೆ ಉಪಯುಕ್ತವಾಗುವುದೆಂದು ತಿಳಿಸಿದರು. ಮುಂದುವರೆದು ಜಿಲ್ಲಾ ಪಂಚಾಯತಿ ಕಛೇರಿಗೆ ಬರುವ ರಸ್ತೆಯಲ್ಲಿರುವ ಗಂಗಮ್ಮನ ಪಾಳ್ಯದ ಸರ್ಕಾರಿ ಪ್ರಾಥಮಿಕ ಶಾಲೆಗೆ ಕೊಠಡಿ ತುಂಬಾ ಚಿಕ್ಕದಾಗಿದ್ದು, ಅದನ್ನು ಬೇರೆ ಕಡೆಗೆ ಸ್ಥಳಾಂತರಿಸಬೇಕೆಂದು ಶಿಕ್ಷಣ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅಗತ್ಯಕ್ಕೆ ತಕ್ಕಂತೆ ಶಾಲಾ ಶೌಚಾಲಯಗಳ ನಿರ್ಮಾಣ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

## 9. <u>ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ</u>

2019-20ನೇ ಸಾಲಿನಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಡಿ 5000000 ಮಾನವದಿನಗಳ ಸೃಜನೆ ಗುರಿಯಿದ್ದು, 21.01.2020ರವರೆಗೆ 3671383ಲಕ್ಷಗಳ ಮಾನವ ದಿನಗಳ ಸೃಜನೆ ಮಾಡಿ, ಶೇ.73.43ರಷ್ಟು ಪ್ರಗತಿ ಸಾಧನೆ ಮಾಡಿ, ರೂ.16898.53 ಲಕ್ಷಗಳ ಅನುದಾನ ಖರ್ಚು ಮಾಡಿರುವುದಾಗಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದರು. ಶ್ರೀನಿವಾಸಪುರ ಮತ್ತು ಬಂಗಾರಪೇಟೆ ತಾಲ್ಲೂಕುಗಳಲ್ಲಿ ಎರಡು ತಿಂಗಳಿನಿಂದ ಕೂಲಿ ಪಾವತಿಯಾಗಿಲ್ಲವೆಂದು ಸಂಬಂಧಪಟ್ಟ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ತಿಳಿಸಿದರು. ಈ ಬಗ್ಗೆ ಕ್ರಮ ವಹಿಸಲು ಉಸ್ತುವಾರಿ ಕಾರ್ಯದರ್ಶಿ ತಿಳಿಸಿದರು.

10. <u>ಜಲಾಮೃತ ಯೋಜನೆ</u>

ಕೋಲಾರ ಜಿಲ್ಲೆಯಲ್ಲಿ ಜಲಾಮೃತ ಯೋಜನೆಯಲ್ಲಿ ಕೆರೆಗಳ ಜೀರ್ಣೋದ್ಧಾರಕ್ಕಾಗಿ ಪ್ರತಿ ತಾಲ್ಲೂಕಿಗೆ 4 ಕೆರೆಗಳಂತೆ ಒಟ್ಟು 24 ಕೆರೆಗಳನ್ನು ಆಯ್ಕೆ ಮಾಡಿ ಕ್ರಿಯಾ ಯೋಜನೆಯನ್ನು ಸರ್ಕಾರದಿಂದ ಅನುಮೋದನೆಗೆ ಸಲ್ಲಿಸಲಾಗಿತ್ತು. ಪ್ರಸ್ತುತ ಆಯ್ಕೆ ಮಾಡಿದ 24 ಕೆರೆಗಳ ಪೈಕಿ ಕೋಲಾರ ತಾಲ್ಲೂಕಿನ ಸುಗಟೂರು ಗ್ರಾಮ ಪಂಚಾಯಿತಿಯ ಮಟ್ಟಹಳ್ಳಿ ಗ್ರಾಮದ ಕೆರೆ ಮತ್ತು ಸೂಲೂರು ಗ್ರಾಮ ಪಂಚಾಯಿತಿಯ ಕೆಂದಟ್ಟಿ ಗ್ರಾಮದ ಕೆರೆಗಳಲ್ಲಿ ಮಳೆ ನೀರು ಶೇಖರಣೆಗೊಂಡಿರುವುದರಿಂದ, ಉಳಿದ 22 ಕೆರೆಗಳಿಗೆ ಸರ್ಕಾರದಿಂದ ಅನುಮೋದನೆಯಾಗಿದ್ದು, ಕೆರೆಗಳ ಸರ್ವೆ ಕಾರ್ಯ ಮುಗಿದಿದ್ದು, ಕಾಮಗಾರಿಗಳ ಅಂದಾಜುಪಟ್ಟಿ ತಯಾರಿಸಲಾಗಿದೆ ಹಾಗೂ ಅರಣ್ಯ ಇಲಾಖೆಗೆ ಹೆಚ್ಚಿನ ಸಸಿಗಳನ್ನು ಬೆಳೆಸಿಕೊಡಲು ಈಗಾಗಲೇ ತಿಳಿಸಿದ್ದು, ಸಸಿಗಳನ್ನು ಅವಶ್ಯವಿರುವ ರೈತರಿಗೆ ಮತ್ತು ಸರ್ಕಾರಿ ಸ್ಥಳಗಳಲ್ಲಿ ನೆಡಲು ಸೂಚಿಸಲಾಗಿದೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಭೆಗೆ ತಿಳಿಸಿದರು.

11. <u>ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ</u>

ಕಾರ್ಯಪಾಲಕ ಅಭಿಯಂತರರು ವಿವರಣೆ ನೀಡಿ, ಪಿ.ಎಂ.ಜಿ.ಎಸ್.ವೈ.ಹಂತ-3ರಲ್ಲಿ 157 ಕಿ.ಮೀ.ಗಳ ಸರ್ವೆ ಕಾರ್ಯ ನಡೆಯುತ್ತಿದ್ದು, ಡಿ.ಪಿ.ಆರ್.ಗಳು ತಯಾರಿಸುವ ಹಂತದಲ್ಲಿರುತ್ತದೆಂದು ಮಾಹಿತಿ ನೀಡಿದರು. ಯಾವುದೇ ಅನುದಾನ ಬಿಡುಗಡೆಯಾಗಿಲ್ಲವೆಂದು ತಿಳಿಸಿದರು.

12. ವಸತಿ

2016-17 ರಿಂದ 2019-20ರವರೆಗೆ ಬಸವ/ ಡಾ:ಬಿ.ಆರ್.ಅಂಬೇಡ್ಕರ್/ ಪಿ.ಎಂ.ಎ.ವೈ ವಸತಿ ಯೋಜನೆಗಳಡಿ ವಾರ್ಷಿಕ ಗುರಿ 24545 ಮನೆಗಳಾಗಿದ್ದು, 10304 ಮನೆಗಳು ಪೂರ್ಣಗೊಂಡಿದ್ದು, ಉಳಿಕೆ ಮನೆಗಳು ಪ್ರಗತಿಯಲ್ಲಿರುವುದಾಗಿ ಉಪ ಕಾರ್ಯದರ್ಶಿಗಳು ಮಾಹಿತಿ ನೀಡಿದರು.

ಪ್ರತಿ ಗ್ರಾಮ ಸಭೆಯಲ್ಲಿ ಯಾರ್‍ಯಾರು ನಿವೇಶನ ರಹಿತರು/ವಸತಿ ರಹಿತರನ್ನು ಗುರ್ತಿಸಿ ಈಗಾಗಲೇ ಅನುಮೋದನೆಗೊಂಡಿರುವ ಪಟ್ಟಿಯಲ್ಲಿ ಬಿಟ್ಟುಹೋಗಿದ್ದರೆ, ಅಂತಹ ಫಲಾನುಭವಿಗಳ ಸೇರ್ಪಡೆಗೆ ಕ್ರಮವಹಿಸಲಾಗುವುದು. 9324 ನಿವೇಶನರಹಿತರಿದ್ದು, 6424 ಅರ್ಹ ಫಲಾನುಭವಿಗಳಿದ್ದು, ಹೊಸದಾಗಿ 2800 ಅರ್ಹ ಫಲಾನುಭವಿಗಳನ್ನು ಪಟ್ಟಿಗೆ ಸೇರಿಸಬೇಕೆಂದು ತಿಳಿಸಿದರು.

ವಸತಿರಹಿತರಿಗೆ/ನಿವೇಶನ ರಹಿತರಿಗೆ ವಸತಿ/ನಿವೇಶನ ಒದಗಿಸಲು ಅಗತ್ಯ ಕ್ರಮವಹಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಲಾಯಿತು.

13. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಉಪ ನಿರ್ದೇಶಕರು, ಪ್ರಗತಿ ವಿವರಣೆ ನೀಡಿ, ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಪೂರಕ ಪೌಷ್ಠಿಕ ಆಹಾರ ನೀಡಲಾಗುತ್ತಿದ್ದು, ಜಿಲ್ಲೆಯಲ್ಲಿ ಒಟ್ಟು 2061 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, 996 ಕೇಂದ್ರಗಳಿಗೆ ಸ್ವಂತ ಕಟ್ಟಡ ಇರುವುದಾಗಿ ತಿಳಿಸಿದರು. 447 ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಉಳಿದಂತೆ ಸರ್ಕಾರಿ ಶಾಲೆ/ಸಮುದಾಯ ಭವನಗಳಲ್ಲಿ ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುವುದಾಗಿ ಮಾಹಿತಿ ನೀಡಿದರು.

131 ಅಂಗನವಾಡಿ ಸಹಾಯಕಿರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದ್ದು, 73 ಹುದ್ದೆಗಳಿಗೆ ನೇಮಕಾತಿ ಮಾಡಲಾಗಿದೆ ಎಂದು ಉಪ ನಿರ್ದೇಶಕರು ಮಾಹಿತಿ ನೀಡಿದರು. ಪೋಷಣ್ ಅಭಿಯಾನ್ ಅಡಿ 14 ಹುದ್ದೆಗಳ ನೇಮಕಾತಿಗೆ ಕ್ರಮವಹಿಸಲಾಗಿದೆ ಎಂದು ತಿಳಿಸಿದರು. ಇಲಾಖೆಯಲ್ಲಿ ಖಾಲಿಯಿದ್ದ 23 ಮೇಲ್ವಿಚಾರಕರ ನೇಮಕಾತಿ ಆಗಿರುವುದಾಗಿ ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿರವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕರಿಗೆ ಮಹಿಳಾ ಅಭಿವೃದ್ಧಿ ನಿಗಮದವತಿಯಿಂದ ದ್ವಿಚಕ್ರವಾಹನ ಖರೀದಿಸಲು ಸಾಲ ಸೌಲಭ್ಯ ಕಲ್ಪಿಸಬೇಕೆಂದು ಸೂಚಿಸಿದರು.

ಸ್ವಚ್ಛ ಭಾರತ ಮಿಷನ್ ಯೋಜನೆಯಡಿ 240 ಅಂಗನವಾಡಿ ಶೌಚಾಲಯ ಕಾಮಗಾರಿ ಕೈಗೊಂಡಿದ್ದು ಅವುಗಳ ಪೈಕಿ 180 ಕಾಮಗಾರಿಗಳು ಪೂರ್ಣಗೊಂಡಿರುವುದಾಗಿ ಉಪನಿರ್ದೇಶಕರು ಮಾಹಿತಿ ನೀಡಿದರು.

ವಿಕಲಚೇತನರಿಗಾಗಿ ಜಿಲ್ಲಾ ಪಂಚಾಯತ್ ಅಭಿವೃದ್ಧಿ ಅನುದಾನದಲ್ಲಿ ಶೇ.5 ರಷ್ಟು ಮೊತ್ತ ರೂ.27.00ಲಕ್ಷಗಳನ್ನು ಕಾಯ್ದಿರಿಸಿದ್ದು, 30 ಜಿಲ್ಲಾ ಪಂಚಾಯತ್ ಕ್ಷೇತ್ರಗಳ ಪೈಕಿ 26ರಲ್ಲಿ ಫಲಾನುಭವಿಗಳ ಆಯ್ಕೆಯಾಗಿದ್ದು, ವಿಕಲಚೇತನರಿಗೆ ಸದರಿ ಅನುದಾನದಲ್ಲಿ ಸೌಲಭ್ಯ ಕಲ್ಪಿಸಿಕೊಡಲಾಗುವುದೆಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ಯಾವುದೇ ಕಾರಣಕ್ಕೂ ವಿಕಲಚೇತನರಿಗಾಗಿ ಮೀಸಲಿರುವ ಅನುದಾನ ಲ್ಯಾಪ್ಸ್ ಆಗಬಾರದೆಂದು ಸೂಚಿಸಿದರು. ಹೊಸ ಅಂಗನವಾಡಿ ಕಟ್ಟಡಗಳಲ್ಲಿ ರ್‍ಯಾಂಪ್ ಸೌಲಭ್ಯ ಕಲ್ಪಿಸಲು ಸಹಾ ಸೂಚಿಸಿದರು.

14. <u>ಸಾರ್ವಜನಿಕ ಶಿಕ್ಷಣ ಇಲಾಖೆ</u>

ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಕೋಲಾರ ಜಿಲ್ಲೆಗೆ 7 ಕರ್ನಾಟಕ ಪಬ್ಲಿಕ್ ಶಾಲೆಗಳು ಮಂಜೂರಾಗಿದ್ದು, ಕಟ್ಟಡಗಳಾಗಿಲ್ಲವೆಂದು ತಿಳಿಸಿದರು. ನವೋದಯ ಶಾಲೆ ಮುಂದಿನ ಶೈಕ್ಷಣಿಕ ವರ್ಷದಿಂದ ಪ್ರಾರಂಭವಾಗುವುದಾಗಿ ತಿಳಿಸಿದರು.

ಎಸ್.ಎಸ್.ಎಲ್.ಸಿ. ಪರೀಕ್ಷೆ ಫಲಿತಾಂಶ ಉತ್ತಮಪಡಿಸಲು ಇಲಾಖಾವತಿ ಯಿಂದ ಎಲ್ಲಾ ಕ್ರಮಗಳನ್ನು ವಹಿಸಲಾಗಿದೆ. 10 ಶಾಲಾ ವಿದ್ಯಾರ್ಥಿಗಳನ್ನು ಒಂದೆಡೆ ಸೇರಿಸಿ ಪರೀಕ್ಷೆಯನ್ನು ಧೈರ್ಯವಾಗಿ ಎದುರಿಸಲು ವಿದ್ಯಾರ್ಥಿಗಳಿಗೆ ಕಾರ್ಯಾಗಾರ ಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ 8ನೇ ತರಗತಿಗೆ ಎಷ್ಟು ವಿದ್ಯಾರ್ಥಿಗಳು ದಾಖಲಾಗಿದ್ದಾರೆ ಅಧಿಕಾರಿಗಳು ಉತ್ತರ ನೀಡಿ, 33,540 ಬಾಲಕರು, 32,230 ಬಾಲಕಿಯರು ದಾಖಲಾಗಿರುವುದಾಗಿ ತಿಳಿಸಿದರು. ಬಾಲಕ ಮತ್ತು ಬಾಲಕಿಯರಲ್ಲಿ ಸುಮಾರು 1000 ಸಂಖ್ಯೆ ವ್ಯತ್ಯಾಸವಿದ್ದು, ಗ್ಯಾಪ್ ಇರುವ ಸಂಖ್ಯೆಯ ಹೆಣ್ಣು ಮಕ್ಕಳನ್ನು ಶಾಲೆಗೆ ಸೇರಿಸಲು ಅಗತ್ಯ ಕ್ರಮವಹಿಸಬೇಕೆಂದರು.

15. <u>ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ</u>

ಆರ್.ಎಂ.ಎಸ್.ಎ. ಯೋಜನೆಯಡಿ 8 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ರೂ.854.70ಲಕ್ಷಗಳ ಅನುದಾನ ಸರ್ಕಾರದಿಂದ ಬಿಡುಗಡೆಯಾಗಿಲ್ಲವೆಂದು, ಸದರಿ ಅನುದಾನ ಬಿಡುಗಡೆಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಕೋರಿದರು. 8 ಕಾಮಗಾರಿಗಳ ಪೈಕಿ 4 ಕಾಮಗಾರಿಗಳು ಶಾಲೆಗಳ Upgradation 4 ಕಾಮಗಾರಿಗಳು ಶಾಲೆಗಳ ಬಲವರ್ಧನೆಯ ಕಾಮಗಾರಿಗಳೆಂದು ತಿಳಿಸಿದರು. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಮಾತನಾಡುವುದಾಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿರವರು ತಿಳಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ಹಾಗೂ
ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ನಮೂನೆ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರಮ ಸಂಖ್ಯೆ | ಅಂಶಗಳು | |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಕೋಲಾರ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಉಮಾ ಮಹಾದೇವನ್ |
| 3 | ಪ್ರವಾಸ ಕೈಗೊಂಡ ದಿನಾಂಕ | 30.01..2020 |
| A | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ | |
| a) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | ಲಗತ್ತಿಸಿದೆ |
| b) | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | ಟಿಪ್ಪಣಿ ಲಗತ್ತಿಸಿದೆ |
| B | ಕ್ಷೇತ್ರ ವೀಕ್ಷಣೆ | ಜಿಲ್ಲೆಯ ಪ್ರಗತಿ ಪರಿಶೀಲನೆ |

| ಕ್ರಮ ಸಂಖ್ಯೆ | ಭೇಟಿ ನೀಡಿದ ತಾಲ್ಲೂಕು / ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|
| 01 | ಕೋಲಾರ | ಕೋಲಾರ | |

| C | ಇತರೆ ವಿಷಯಗಳು | |
|---|---|---|
| | | |

(ಉಮಾ ಮಹಾದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆ
ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ.

ದಿನಾಂಕ: 29.01.2020 ರಂದು ಬೆಳಗ್ಗೆ 11.00 ಗಂಟೆಗೆ, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜರುಗಿದ ಸಭೆಯ ನಡುವಳಿಗಳು:-

ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ಪಟ್ಟಿ ಲಗತ್ತಿಸಿದೆ:

ಪ್ರಾರಂಭದಲ್ಲಿ ಮುಖ್ಯ ಯೋಜನಾಧಿಕಾರಿಯವರು ಮಾತನಾಡಿ, ಸಭೆಗೆ ಆಗಮಿಸಿದ ಬೀದರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು, ಜಿಲ್ಲಾಧಿಕಾರಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು, ಪತ್ರಿಕಾ ಮಾಧ್ಯಮದವರಿಗೆ ಸ್ವಾಗತಿಸಿ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡಲು ಕೋರಿದರು. ಅದರಂತೆ ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಈ ಕೆಳಗಿನಂತೆ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಟ್ಟರು.

ವಿಷಯ:-1 ಕೃಷಿ ಇಲಾಖೆ:-

ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಕೃಷಿ ಇಲಾಖೆಯಲ್ಲಿ ಪ್ರಮುಖ ಯೋಜನೆಗಳ ಕುರಿತು ಮಾಹಿತಿಯನ್ನು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಇಲಾಖೆಗೆ ಜಿಲ್ಲಾ ವಲಯದಲ್ಲಿ ರೂ.91.72 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ರೂ.65.35 ಲಕ್ಷ ಅನುದಾನ ಖರ್ಚಾಗಿರುತ್ತದೆ. ಇನ್ನು ರೈತ ಸಂಪರ್ಕ ಕೇಂದ್ರಗಳ ರಿಪೇರಿ ಹಾಗೂ ಕಟ್ಟಡ ಕಾಮಗಾರಿಗಳನ್ನು ಅನುಷ್ಠಾನ ಮಾಡವ ಸಲುವಾಗಿ ರೂ. 20.00 ಲಕ್ಷ ಅನುದಾನವನ್ನು ಜಿಲ್ಲಾ ಪಂಚಾಯತ ಇಂಜೀನಿಯರಿಂಗ್ ವಿಭಾಗದವರಿಗೆ ಬಿಡುಗಡೆ ಮಾಡಲಾಗಿರುತ್ತದೆ. ರಾಜ್ಯವಲಯದಲ್ಲಿ ರೂ. 68.04 ಕೋಟಿ ಅನುದಾನದ ಆರ್ಥಿಕ ಗುರಿ ಹೊಂದಿದ್ದು, ಅದರಲ್ಲಿ ರೂ. 52.20 ಕೋಟಿ ಅನುದಾನ ಬಿಡುಗಡೆಯಾಗಿದ್ದು, ರೂ.47.54 ಕೋಟಿ ಅನುದಾನ ಖರ್ಚಾಗಿರುತ್ತದೆ. ಇನ್ನು ರೂ.11.93 ಕೋಟಿ ಅನುದಾನ ಬಿಡುಗಡೆಯಾಗುವುದು ಬಾಕಿ ಇದೆ ಎಂದು ತಿಳಿಸಿದರು. ರಾಜ್ಯವಲಯದಲ್ಲಿ ಮುಖ್ಯವಾದ ಕಾರ್ಯಕ್ರಮವೆಂದರೆ ಬೀಜಗಳ ಪೂರೈಕೆ ಕಾರ್ಯಕ್ರಮ. ಸದರಿ ಕಾರ್ಯಕ್ರಮಕ್ಕೆ ರೂ.27.10 ಕೋಟಿ ಅನುದಾನದ ಆರ್ಥಿಕ ಗುರಿ ಹೊಂದಿದ್ದು, ಅದರಲ್ಲಿ ರೂ.24.96 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಸಂಪೂರ್ಣ ಅನುದಾನ ಖರ್ಚಾಗಿರುತ್ತದೆ. ಇನ್ನು ಕೃಷಿ ಯಾಂತ್ರೀಕರಣದಲ್ಲಿ ರೂ.632.91 ಲಕ್ಷ ಅನುದಾನ ಮಂಜೂರಾಗಿದ್ದು, ಅದರಲ್ಲಿ ರೂ.256.49 ಲಕ್ಷ ಅನುದಾನ ಬಿಡುಗಡೆಯಾಗಿ, ರೂ.255.00 ಲಕ್ಷ ಅನುದಾನ ಖರ್ಚಾಗಿರುತ್ತದೆ. ಇನ್ನು ಕೃಷಿ ಉತ್ಪನ್ನಗಳ ಸಂಸ್ಕರಣೆ ಕಾರ್ಯಕ್ರಮಕ್ಕೆ ರೂ.194.75 ಲಕ್ಷ ಅನುದಾನ ಮಂಜೂರಾಗಿದ್ದು, ಅದರಲ್ಲಿ ರೂ.64.45 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.60.50 ಲಕ್ಷ ಅನುದಾನ ಖರ್ಚಾಗಿರುತ್ತದೆ. ಲಘು ನೀರಾವರಿ ಕಾರ್ಯಕ್ರಮದಲ್ಲಿ ರೂ.14.50 ಕೋಟಿ ಅನುದಾನ ಮಂಜೂರಾಗಿದ್ದು, ಅದರಲ್ಲಿ ರೂ.836.26 ಲಕ್ಷ ಅನುದಾನ ಬಿಡುಗಡೆಯಾಗಿ, ರೂ.610.18 ಲಕ್ಷ ಅನುದಾನ ಖರ್ಚಾಗಿರುತ್ತದೆ. ಕೃಷಿ ಭಾಗ್ಯ ಯೋಜನೆ ಅಡಿಯಲ್ಲಿ ರೂ.12.39 ಕೋಟಿ ಅನುದಾನ ಮಂಜೂರಾಗಿದ್ದು, ಅದರಲ್ಲಿ ರೂ.6.91 ಕೋಟಿ ಅನುದಾನ ಬಿಡುಗಡೆಯಾಗಿದ್ದು, ರೂ.6.03 ಕೋಟಿ ಅನುದಾನ ಖರ್ಚಾಗಿರುತ್ತದೆಂದು ತಿಳಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಕೃಷಿಭಾಗ್ಯ ಯೋಜನೆ ಅಡಿಯಲ್ಲಿ ಎಷ್ಟು ಭೌತಿಕ ಗುರಿ ಹೊಂದಲಾಗಿದೆ ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಕೃಷಿ ಭಾಗ್ಯ ಯೋಜನೆ ಅಡಿಯಲ್ಲಿ 1412 ಫಲಾನುಭವಿಗಳ ವಾರ್ಷಿಕ ಗುರಿ ಹೊಂದಲಾಗಿದ್ದು, ಅದರಲ್ಲಿ 770 ಗುರಿ ಸಾಧನೆ ಆಗಿರುತ್ತದೆ. ಸದರಿ ಯೋಜನೆ ಅಡಿಯಲ್ಲಿ ಕೃಷಿ ಹೊಂಡಗಳ ನಿರ್ಮಾಣ ಮಾಡಲಾಗುತ್ತದೆ. ಇನ್ನು ಇದಕ್ಕಾಗಿ ಹೆಚ್ಚುವರಿ ಅನುದಾನ ಬೇಕಾಗಿರುತ್ತದೆ ಎಂದು ತಿಳಿಸಿದರು.

ಮುಂದುವರೆದು. ಕೇಂದ್ರವಲಯದ ಕಾರ್ಯಕ್ರಮಗಳಲ್ಲಿ SMAS ಯೋಜನೆ ಅಡಿಯಲ್ಲಿ 682 ವಾರ್ಷಿಕ ಭೌತಿಕ ಗುರಿ ಹೊಂದಲಾಗಿದ್ದು, ಅದರಲ್ಲಿ 409 ಮಶೀನ್‌ಗಳನ್ನು ವಿತರಣೆ ಸಂಚಿತ ಗುರಿಯಲ್ಲಿ 195 ಗುರಿಗಳನ್ನು ಸಾಧನೆ ಮಾಡಲಾಗಿದೆ. ಅದಕ್ಕಾಗಿ ರೂ.252.8 ಲಕ್ಷ ವಾರ್ಷಿಕ ಆರ್ಥಿಕ ಗುರಿಯಲ್ಲಿ ರೂ.181.6 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ರೂ.158.5 ಲಕ್ಷ ಖರ್ಚಾಗಿರುತ್ತದೆ. ಇನ್ನು ಎನ್.ಎಫ್.ಎಸ್.ಎಂ. ಕಾರ್ಯಕ್ರಮದಲ್ಲಿ ರೈತರು ಏನಾದರೂ ಇನ್‌ಪುಟ್ಸ್‌ಗಳನ್ನು ಖರೀದಿ ಮಾಡಿದರೆ, ಅದಕ್ಕೆ ಸಹಾಯಧನ ನೇರವಾಗಿ ರೈತರ ಖಾತೆಗೆ ಜಮೆ ಮಾಡಲಾಗುತ್ತದೆ. ಸದರಿ ಕಾರ್ಯಕ್ರಮದಲ್ಲಿ ಒಟ್ಟು 43983 ವಾರ್ಷಿಕ ಭೌತಿಕ ಗುರಿ ಇದ್ದು, ಅದರಲ್ಲಿ 26391 ರೈತ ಫಲಾನುಭವಿಗಳ ಸಂಚಿತ ಗುರಿಯಲ್ಲಿ, 26115 ರೈತರಿಗೆ ನೇರವಾಗಿ DBT ಮುಖಾಂತರ ರೈತರ ಖಾತೆಗೆ ಜಮೆ ಮಾಡಲಾಗಿದೆ. ಸದರಿ ಕಾರ್ಯಕ್ರಮಕ್ಕೆ ರೂ.8.89 ಕೋಟಿ ಅನುದಾನದ ವಾರ್ಷಿಕ ಆರ್ಥಿಕ ಗುರಿ ಹೊಂದಲಾಗಿದ್ದು, ಅದರಲ್ಲಿ ರೂ.7.04 ಕೋಟಿ ಅನುದಾನ ಬಿಡುಗಡೆಯಾಗಿ, ಇಲ್ಲಿಯವರೆಗೆ ರೂ.4.33 ಕೋಟಿ ಅನುದಾನ ಖರ್ಚಾಗಿರುತ್ತದೆ. ಇನ್ನು ಎಲ್ಲಾ ವಲಯಗಳ ಯೋಜನೆಗಳು ಸೇರಿ ಒಟ್ಟಾರೆಯಾಗಿ 209455 ಭೌತಿಕ ವಾರ್ಷಿಕ ಗುರಿಯಾಗಿದ್ದು, ಅದರಲ್ಲಿ 157442 ಭೌತಿಕ ಸಂಚೀತ ಗುರಿಯಲ್ಲಿ, 136421 ಗುರಿಯನ್ನು ಸಾಧನೆ ಮಾಡಲಾಗಿದೆ. ಹಾಗೂ ಎಲ್ಲಾ ವಲಯದ ಯೋಜನೆಗಳು ಸೇರಿ ಒಟ್ಟಾರೆಯಾಗಿ ರೂ.9484 ಲಕ್ಷ ವಾರ್ಷಿಕ ಆರ್ಥಿಕ ಗುರಿಯಾಗಿದ್ದು, ಅದರಲ್ಲಿ ರೂ.6849 ಲಕ್ಷ ಅನುದಾನ ಬಿಡುಗಡೆಯಾಗಿ, ರೂ.6030 ಲಕ್ಷ ಅನುದಾನ ಖರ್ಚಾಗಿ, ಶೇಕಡಾ 88% ಸಾಧನೆಯಾಗಿರುತ್ತದೆಂದು ತಿಳಿಸಿದರು. ಇನ್ನು ಜಲಾಮೃತ ಯೋಜನೆ ಅಡಿಯಲ್ಲಿ 7075 ಹೆಕ್ಟರ್ ಪ್ರದೇಶದಲ್ಲಿ 5 ಯೋಜನೆಗಳು ಆಯ್ಕೆಯಾಗಿ, ಅನುಮೋದನೆ ಕೂಡ ಆಗಿರುತ್ತವೆ. ಸದರಿ ಯೋಜನೆಯನ್ನು ಲೈನ ಇಲಾಖೆಯವರು, ಕೃಷಿ ಇಲಾಖೆ ಹಾಗೂ ಗ್ರಾಮ ಪಂಚಾಯತಿಯವರು ಸೇರಿ ಮಾಡಬೇಕಾಗಿರುತ್ತದೆ. ಸದರಿ ಯೋಜನೆಗಾಗಿ ರೂ.78.00 ಕೋಟಿ ಅನುದಾನ ಮಂಜೂರಾಗಿರುತ್ತದೆಂದು ತಿಳಿಸಿ, ಇನ್ನು ಪ್ರಧಾನ ಮಂತ್ರಿ ಫಸಲ ಭೀಮಾ ಯೋಜನೆ ಅಡಿಯಲ್ಲಿ ಖರೀಫ್‌ನಲ್ಲಿ ರೂ.125 ಕೋಟಿ ಅನುದಾನ ಕ್ಲೇಮ್ ಬಂದಿತ್ತು, ಅದರಲ್ಲಿ ರೂ.116 ಕೋಟಿ ಅನುದಾನವನ್ನು 1.10 ಲಕ್ಷ ರೈತರಿಗೆ ಕೊಡಲಾಗಿದೆ. ಇನ್ನು ಬಾಕಿ ಉಳಿದ ರೈತರಿಗೆ ಅನುದಾನದ ಪಾವತಿ ಆಗಿರುವುದಿಲ್ಲ. ಕಾರಣ ಬೆಳೆಗಳ ಸರ್ವೆಯಲ್ಲಿ ಕಬ್ಬು ಬೆಳೆಯ ಫೋಟೊಗಳು ನೀಡಿ, ವಿಮೆಯನ್ನು ತೊಗರಿ ಬೆಳೆಗೆ ಕಟ್ಟಿರುವುದರಿಂದಾಗಿ, ಸದರಿ ವಿಷಯ ಮ್ಯಾಚ್ ಆಗದಿರುವುದರಿಂದ 9500 ರೈತರಿಗೆ ಹಣ ಪಾವತಿಯಾಗಿರುವುದಿಲ್ಲ. ಸದರಿಯವರಿಗಾಗಿ ರೂ.10.00 ಕೋಟಿ ಅನುದಾನ ಪಾವತಿಗಾಗಿ ಬೇಕಾಗುತ್ತದೆ. ಇನ್ನು ಪ್ರಸ್ತುತ ವರ್ಷದ ಮುಂಗಾರಿನಲ್ಲಿ 2.80 ಲಕ್ಷ ಹಾಗೂ ಹಿಂಗಾರಿಗಾಗಿ 30,000 ರೈತರ ವಿಮೆಗಾಗಿ ದಾಖಲಾಗಿರುತ್ತಾರೆಂಬ ವಿಷಯವನ್ನು ಉಸ್ತುವಾರಿ ಕಾರ್ಯದರ್ಶಿಯವರ ಗಮನಕ್ಕೆ ತಂದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಸದರಿ ಸಮಸ್ಯೆಯನ್ನು ಹೇಗೆ ಮತ್ತು ಯಾರು ಬಗೆಹರಿಸಬೇಕೆಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಸದರಿ ವಿಷಯವನ್ನು ವಿಮೆ ಕಂಪನಿಯವರು ಹಾಗೂ ಕೃಷಿ ಇಲಾಖೆಯವರು ಸೇರಿ ಬಗೆಹರಿಸಬೇಕಾಗಿರುತ್ತದೆ ಹಾಗೂ ಸದರಿ ವಿಷಯದ ಕುರಿತು ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು. DCC Bank ಗೆ ಸಂಬಂದಪಟ್ಟ ಅಧಿಕಾರಿಯವರು ಮಾತನಾಡಿ, ನಮ್ಮ ಸಾಫ್ಟವೇರನಲ್ಲಿ ಇಡಿ ಜಿಲ್ಲೆಯ 2000 ಫಲಾನುಭವಿಗಳ ಮಾಹಿತಿಗಳು ಬಂದಿದ್ದು, ಅವುಗಳನ್ನು ಸಾಫ್ಟವೇರನಲ್ಲಿಯೇ ಪರಿಶೀಲನೆ ಮಾಡಿ, ತಾಲ್ಲೂಕು ಕಮೀಟಿಗೆ Forward ಮಾಡಲಾಗಿದೆ ಎಂದು ಸಭೆಯ ಗಮನಕ್ಕೆ ತಂದಾಗ, ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರು ಮಾತನಾಡಿ, ಸದರಿ ವಿಷಯವನ್ನು ಪರಿಶೀಲನೆ ಮಾಡಿ, ಕ್ರಮ ತೆಗೆದುಕೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರು ಮಾತನಾಡಿ, ರೈತರ ಆತ್ಮಹತ್ಯೆಯ 9 ಪ್ರಕರಣಗಳು ಪರಿಹಾರಧನ ಪಾವತಿ ಮಾಡಲು ಇನ್ನು ಅನುದಾನ ಬಿಡುಗಡೆಯಾಗಿರುವುದಿಲ್ಲ. ಪ್ರಯುಕ್ತ, ಸದರಿ ಪ್ರಕರಣಗಳ ಪರಿಹಾರಧನ ಪಾವತಿ ಬಾಕಿ ಇರುತ್ತದೆ. ಸದರಿ ಅನುದಾನವು ಮೊದಲು ಮಾನ್ಯ

ಜಿಲ್ಲಾಧಿಕಾರಿಗಳ ಖಾತೆಗೆ ಅಥವಾ ರೈತ ಸಂಪರ್ಕ ಕೇಂದ್ರಗಳ ಖಾತೆಗೆ ಬರುತ್ತಿತ್ತು. ಆದರೆ ಈವಾಗ K2 ಮುಖಾಂತರ ಪರಿಹಾರಧನ ಫಲಾನುಭವಿಯ ಖಾತೆಗೆ ಜಮೆ ಆಗುತ್ತಿದೆ. ಪರಿಹಾರಧನ ಪಾವತಿಯ ಕುರಿತು ಜಿಲ್ಲಾಧಿಕಾರಿಯವರಿಗೆ ಹಾಗೂ ಕೇಂದ್ರ ಕಚೇರಿಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮಾತನಾಡಿ, ತಾವು ಕಳುಹಿಸಿದ ಪತ್ರದ ಪ್ರತಿಯನ್ನು ಸಲ್ಲಿಸುವಂತೆ ಇಲಾಖಾಧಿಕಾರಯವರಿಗೆ ತಿಳಿಸಿದರು.

ಜಂಟಿ ಕೃಷಿ ನಿರ್ದೇಶಕರು ಮಾತನಾಡಿ, Micro Irrigarion ಯೋಜನೆ ಅಡಿಯಲ್ಲಿ ಬರುವ Drip and Spinklar ಗೆ ಜಿಲ್ಲೆಯಲ್ಲಿ ರೈತರಿಂದ ಬಹಳ ಬೇಡಿಕೆ ಇದೆ. ಕಳೆದ ವರ್ಷದಲ್ಲಿ ಸದರಿ ಕಾರ್ಯಕ್ರಮಕ್ಕೆ ರೂ.30.00 ಕೋಟಿ ಅನುದಾನ ಮಂಜೂರಾಗಿ, ಅದರಲ್ಲಿ ರೂ.24.00 ಕೋಟಿ ಅನುದಾನ ಬಿಡುಗಡೆಯಾಗಿತ್ತು, ಮತ್ತೆ ರೂ.6.00 ಕೋಟಿ ಅನುದಾನ ಬರುವುದು ಬಾಕಿ ಉಳಿದಿತ್ತು. ಇನ್ನು ಪ್ರಸ್ತುತ ವರ್ಷದಲ್ಲಿ ರೂ.14.5 ಕೋಟಿ ಅನುದಾನ ಸದರಿ ಯೋಜನೆಗಾಗಿ ಮಂಜೂರಾಗಿದ್ದು, ಅದರಲ್ಲಿ ರೂ.6.00 ಕೋಟಿ ಅನುದಾನವನ್ನು ಕಳೆದ ವರ್ಷದ ಬಾಕಿ ಪಾವತಿಯನ್ನು ಮಾಡಲಾಗಿದೆ. ಈ ವರ್ಷಕ್ಕೆ ಕೇವಲ ರೂ.8.00 ಕೋಟಿ ಮಾತ್ರ ಅನುದಾನ ಉಳಿದಿರುತ್ತದೆ. ಸದರಿ ಯೋಜನೆ ಅಡಿಯಲ್ಲಿ ಹೆಚ್ಚುವರಿ ಅನುದಾನ ಬಿಡುಗಡೆ ಮಾಡಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರಿಗೆ ಕೋರಿದರು.

(ಕ್ರಮ:- ಕೃಷಿ ಇಲಾಖೆ ಬೀದರ)

ವಿಷಯ:2:- ತೋಟಗಾರಿಕೆ ಇಲಾಖೆ:-

ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ತೋಟಗಾರಿಕೆ ಇಲಾಖೆಯ ಕುರಿತು ಪ್ರಗತಿಯ ಮಾಹಿತಿಯನ್ನು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಇಲಾಖೆಯ ಮುಖ್ಯ ಯೋಜನೆಗಳಲ್ಲಿ Drip Irrigation ಯೋಜನೆ ಅಡಿಯಲ್ಲಿ ಬಂದ ಅನುದಾನವನ್ನು 100% ಖರ್ಚು ಮಾಡಲಾಗಿದೆ. ಇನ್ನು ರಾಷ್ಟ್ರೀಯ ತೋಟಗಾರಿಕೆ ಮಿಷನ್ ಕಾರ್ಯಕ್ರಮದಲ್ಲಿ ಶೇಕಡಾ 70% ಅನುದಾನ ಖರ್ಚಾಗಿರುತ್ತದೆ. ಬಾಕಿ ಉಳಿದ ಅನುದಾನ ಈ ವಾರದಲ್ಲಿ ಖರ್ಚಾಗುತ್ತದೆಂದು ತಿಳಿಸಿದರು. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಮತನಾಡಿ, ಹಿಂದಿನ ದಿನಗಳಲ್ಲಿ ಜಿಲ್ಲಾ ಪಂಚಾಯತನಲ್ಲಿ ತೆಗೆದಕೊಂಡ ಕಾಮಗಾರಿಗಳನ್ನು ಪರಿಶೀಲನೆ ಮಾಡಲು ಸಹಾಯಕ ಆಯುಕ್ತರು ಯವರನ್ನು ನೇಮಕ ಮಾಡಲಾಗುತ್ತಿತ್ತು. ಮತ್ತು ಅದಕ್ಕಾಗಿ ಸದರಿಯವರಿಗೆ ಪ್ರತಿ ತಿಂಗಳು ಕ್ಲೇಮ ಕೊಡಲಾಗುತ್ತಿತ್ತು. ಈವಾಗಲೂ ಕೂಡ ಅವರನ್ನು ಸದರಿ ಜಿಲ್ಲಾ ಪಂಚಾಯತ ಕಾಮಗಾರಿಗಳನ್ನು ಪರಿಶೀಲನೆ ಮಾಡುವ ಕೆಲಸಕ್ಕೆ ಸಹಾಯಕ ಆಯುಕ್ತರವರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಸಭೆಯಲ್ಲಿ ಹೇಳಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಾತನಾಡಿ, ಯಾವ ಯಾವ ಯೋಜನೆಗಳಿಗೆ ಎಷ್ಟು ಫಲಾನುಭವಿಗಳ ಭೌತಿಕ ಗುರಿ ಹೊಂದಲಾಗಿದೆ ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಕಾಧಿಕಾರಿಯವರು ಮಾತನಾಡಿ, ಕೇಂದ್ರವಲಯದ ಹನಿ ನೀರಾವರಿ ಕಾರ್ಯಕ್ರಮದಲ್ಲಿ 631, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಕಾರ್ಯಕ್ರಮದಲ್ಲಿ 431 ಹಾಗೂ ರಾಷ್ಟ್ರೀಯ ಕೃಷಿ ವಿಕಾಸ ಕಾರ್ಯಕ್ರಮದಲ್ಲಿ 80 ಫಲಾನುಭವಿಗಳ ಭೌತಿಕ ಗುರಿ ಹೊಂದಲಾಗಿದ್ದು, ಅನುದಾನ ಕೂಡ ಬಿಡುಗಡೆಯಾಗಿರುತ್ತದೆಂದು ತಿಳಿಸಿದರು. ಇನ್ನು ರಾಜ್ಯವಲಯದ ಯೋಜನೆಗಳಿಗಾಗಿ 50% ಅನುದಾನ ಖರ್ಚಾಗಿರುತ್ತದೆ. ಕೃಷಿ ಭಾಗ್ಯ ಯೋಜನೆ ಅಡಿಯಲ್ಲಿ ಪಾಲಿಹೌಸ್‌ಗಳನ್ನು ಮಾಡಲು ಬಂಡವಾಳ ಹೂಡಿಕೆ ಜಾಸ್ತಿ ಇರುವುದರಿಂದ ಯಾವ ರೈತರು ಮುಂದೆ ಬರುತ್ತಿಲ್ಲ. ಸದರಿ ಯೋಜನೆಯು 2 ತಾಲ್ಲೂಕುಗಳಲ್ಲಿ ಮಾತ್ರ ನಡೆಯುತ್ತದೆ. ಸದರಿ ಯೋಜನೆಗೆ ರೂ.32.99 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ರೂ.15.10 ಲಕ್ಷ ಅನುದಾನ

ಖರ್ಚಾಗಿ, 47% ಸಾಧನೆಯಾಗಿರುತ್ತದೆಂದು ತಿಳಿಸಿದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಇಲಾಖೆಗೆ ಸಂಬಂಧಪಟ್ಟ ಏನಾದರೂ ಸಮಸ್ಯೆಗಳು ಇದೆಯಾ ಎಂದು ಇಲಾಖಾಧಿಕಾರಿಯವರಿಗೆ ಕೇಳಿದಾಗ, ಇಲಾಖೆಗೆ ಸಂಬಂಧಪಟ್ಟಂತೆ ಯಾವುದೇ ಸಮಸ್ಯೆಗಳು ಇರುವುದಿಲ್ಲ ಎಂದು ಇಲಾಖಾಧಿಕಾರಿಯವರು ತಿಳಿಸಿದರು.

ತೋಟಗಾರಿಕೆ ಇಲಾಖೆಯ ಅಧಿಕಾರಿಯವರು ಮಾತನಾಡಿ, ಸದರಿ ಇಲಾಖೆಯಲ್ಲಿಯು ತುಂತು ಹನಿ ನೀರಾವರಿ [Drip Irrigation] ಯೋಜನೆ ಅಡಿಯಲ್ಲಿ ಹೆಚ್ಚುವರಿ ಅನುದಾನ ಬಿಡುಗಡೆಗಾಗಿ ಕೋರಿಕೆ ಸಲ್ಲಿಸಿ, ಇನ್ನು ಪ್ರಸ್ತುತ ವರ್ಷದಲ್ಲಿ ನರೇಗಾ ಯೋಜನೆಯ ಉದ್ಯೋಗ ಖಾತ್ರಿ ಯೋಜನೆ ಅಡಿಯಲ್ಲಿ 169 ಶಾಲೆಗಳಲ್ಲಿ ತೋಟಗಾರಿಕೆ ನಿರ್ಮಾಣ ಮಾಡಲು ತಾಲ್ಲೂಕು ಮಟ್ಟದ ಒಂದು ಕಮೀಟಿ ರಚನೆಯಾಗಿದ್ದು, ಸದರಿ ಕೆಲಸವು ಪ್ರಾರಂಭಿಸಬೇಕಾಗಿರುತ್ತದೆಂದು ತಿಳಿಸಿದರು.

(ಕ್ರಮ: ತೋಟಗಾರಿಕೆ ಇಲಾಖೆ)

<u>ವಿಷಯ: 3: ರೇಷ್ಮೆ ಇಲಾಖೆ:-</u>

ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ರೇಷ್ಮೆ ಇಲಾಖೆಯ ಪ್ರಗತಿ ಕುರಿತು ಮಾಹಿತಿಯನ್ನು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಇಲಾಖೆಯಲ್ಲಿ ಜಿಲ್ಲಾ ವಲಯದ ಹಾಗೂ ರಾಜ್ಯ ವಲಯದ ಕಾರ್ಯಕ್ರಮಗಳಿವೆ. ಜಿಲ್ಲಾ ವಲಯದಲ್ಲಿ ಅನುದಾನವು ವೇತನಕ್ಕಾಗಿ ಬರುತ್ತದೆ. ಇನ್ನು ರಾಜ್ಯವಲಯದಲ್ಲಿನ ಯೋಜನೆಗಳಿಗೆ ಅನುದಾನವನ್ನು ಬೇಡಿಕೆ ಆಧಾರದ ಮೇಲೆ ತರಿಸಿಕೊಳ್ಳಲಾಗುತ್ತದೆ. ಈಗಾಗಲೇ ರೂ.1.00 ಕೋಟಿ ಅನುದಾನವು ತರಿಸಿದ್ದು, ಸದರಿ ಅನುದಾನವು ಖರ್ಚಾಗಿರುತ್ತದೆ. ಮತ್ತೆ ರೂ.50.00 ಲಕ್ಷ ಅನುದಾನಕ್ಕಾಗಿ ಬೇಡಿಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿ, ಕೇಂದ್ರವಲಯದ ಯಾವುದೇ ಯೋಜನೆಗಳು ಇರುವುದಿಲ್ಲ ಎಂದು ತಿಳಿಸಿದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಜಿಲ್ಲೆಯ ಯಾವ ಯಾವ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯಲಾಗುತ್ತದೆಂದು ಇಲಾಖಾಧಿಕಾಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಹುಮನಾಬಾದ, ಔರಾದ ಹಾಗೂ ಬಸವಕಲ್ಯಾಣ ತಾಲ್ಲೂಕುಗಳು ಸೇರಿ 1200 ಎಕರೆ ಪ್ರದೇಶದಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯಲಾಗುತ್ತದೆ. ಹಾಗೂ ಹುಮನಾಬಾದ ತಾಲ್ಲೂಕಿನಲ್ಲಿ ರೇಷ್ಮೆ ನೂಲು ಉತ್ಪಾದನೆಯ ಒಂದು ಘಟಕ ಇರುತ್ತದೆ. ಅದು ಅಲ್ಲದೇ ರಾಮನಗರದಲ್ಲಿಯೋ ರೇಷ್ಮೆ ನೂಲು ಉತ್ಪಾದನೆಯನ್ನು ಮಾಡಿಸಲಾಗುತ್ತದೆಂದು ತಿಳಿಸಿದರು. ಮುಂದುವರೆದು ಇಲಾಖಾಧಿಕಾರಿಯವರು ಮಾತನಾಡಿ, ಇಲಾಖೆಯಲ್ಲಿ ತಾಲ್ಲೂಕು ಅಧಿಕಾರಿಗಳ ಹುದ್ದೆಗಳು ಸೇರಿದಂತೆ ಸಾಕಷ್ಟು ಹುದ್ದೆಗಳು ಖಾಲಿ ಇದೆ. ತಾಲ್ಲೂಕು ಅಧಿಕಾರಿಗಳ ಹುದ್ದೆಗಳು ಖಾಲಿ ಇರುವುದರಿಂದ ಸಾಕಷ್ಟು ಸಮಸ್ಯೆಯಾಗುತ್ತಿದೆ. ಪ್ರಯುಕ್ತ, ಸದರಿ ಹುದ್ದೆಗಳಿಗೆ ಅಧಿಕಾರಿಗಳ ನೇಮಕದ ಕುರಿತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರಿಗೆ ಕೋರಿಕೆ ಸಲ್ಲಿಸಿದರು.

<u>(ಕ್ರಮ: ರೇಷ್ಮೆ ಇಲಾಖೆ ಬೀದರ)</u>

<u>ವಿಷಯ:4:- ಶಿಕ್ಷಣ ಇಲಾಖೆ:-</u>

ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, SSLC ಪರೀಕ್ಷೆ ಯಾವಾಗ ಪ್ರಾರಂಭವಾಗುತ್ತಿವೆ ಹಾಗೂ ಉತ್ತಮ ಗುಣಮಟ್ಟದ ಶಿಕ್ಷಣಕ್ಕೆ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, SSLC ಪರೀಕ್ಷೆ 27ನೇ ಮಾರ್ಚ್ 2020 ರಿಂದ ಪ್ರಾರಂಭವಾಗುತ್ತಿವೆ. ಕಳೆದ ವರ್ಷದ ಶೇಕಡಾವಾರು ಉತ್ತೀರ್ಣ ಸಂಖ್ಯೆ 75.46% ಇರುತ್ತದೆ. ಹಾಗೂ ರಾಜ್ಯ ಮಟ್ಟದಲ್ಲಿ ಜಿಲ್ಲೆಯು 28ನೇ ಸ್ಥಾನದಲ್ಲಿ ಇರುತ್ತದೆಂದು ತಿಳಿಸಿ, ಪ್ರಸ್ತುತ ವರ್ಷದಲ್ಲಿ 26059 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದು, 99 ಪರೀಕ್ಷಾ ಕೇಂದ್ರಗಳು ಇರುತ್ತವೆ. ಪ್ರಸ್ತುತ ವರ್ಷದಲ್ಲಿ

ಫಲಿತಾಂಶದಲ್ಲಿ 25ನೇ ಸ್ಥಾನ ಪಡೆಯಲು ಪ್ರಯತ್ನಿಸಲಾಗುತ್ತಿದೆ ಎಂದು ತಿಳಿಸಿದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಪ್ರಸ್ತುತ ವರ್ಷದಲ್ಲಿ 25ನೇ ಸ್ಥಾನದ ಬದಲಾಗಿ 20ನೇ ಸ್ಥಾನಕ್ಕಾಗಿ ಗುರಿ ಹೊಂದಿ, ಆ ಕುರಿತು ಪ್ರಯತ್ನಿಸಿ ಎಂದು ಇಲಾಖಾಧಿಕಾರಿಯವರಿಗೆ ತಿಳಿಸಿ, ಇನ್ನು ಉತ್ತಮ ಫಲಿತಾಂಶಕ್ಕಾಗಿ ಯಾವ ಯಾವ ತಯ್ಯಾರಿಗಳನ್ನು ಮಾಡಿಕೊಳ್ಳಲಾಗಿದೆ ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಮಾನ್ಯ AC ಯವರ ಹಾಗೂ KKRDB ಯವರ ನಿರ್ದೇಶನಂತೆ ಜಿಲ್ಲೆಯಲ್ಲಿ 100 ತೀವ್ರ ನಿಗಾ ಘಟಕಗಳನ್ನು ಪ್ರಾರಂಭಿಸಲಾಗಿದೆ. ಅದರಲ್ಲಿ ವಿಜ್ಞಾನ, ಗಣಿತ, ಇಂಗ್ಲೀಷ, ಸಮಾಜ ವಿಜ್ಞಾನದ ವಿಷಯದ ವಿಶೇಷ ತರಗತಿಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಅಲ್ಲಿ ಮಕ್ಕಳನ್ನು ಮೂರು ಜೋನ್‌ಗಳಲ್ಲಿ ವಿಂಗಡಿಸಲಾಗಿದೆ, ಅವು Red zone, Yellow zone, Green zoon ಗಳೆಂದು ವಿಂಗಡಿಸಿ, ಮಕ್ಕಳಿಗೆ ತೆಗೆದುಕೊಂಡ ಟೆಸ್ಟಗಳಲ್ಲಿ ಪಡೆದ ಅಂಕಿಗಳ ಆಧಾರದ ಮೇಲೆ ಮಕ್ಕಳಿಗೆ ಜೋನ್ ನೀಡಲಾಗುತ್ತದೆ. ಇನ್ನು ಇಲಾಖೆಯ ವತಿಯಿಂದ ಫೋನ್ ಕಾರ್ಯಕ್ರಮ ಮಾಡಲಾಗಿದೆ. ಜಿಲ್ಲೆಯ ಎಲ್ಲಾ ಮಕ್ಕಳು, ಪಾಲಕರು ಕೇಳಿದ ಪ್ರಶ್ನೆಗಳಿಗೆ ವಿಷಯ ನಿರ್ವಾಹಕರಿಂದ ಉತ್ತರಗಳನ್ನು ಹೇಳಿಸುವ ಕಾರ್ಯಕ್ರಮವಾಗಿತ್ತು. ಪರೀಕ್ಷೆಯ ಕುರಿತಂತೆ ಮಕ್ಕಳಲ್ಲಿ ಹಬ್ಬದ ವಾತವರಣ ಮೂಡಿಸುವುದು. ಇನ್ನು ಪಾಲಕರ ಸಮಾವೇಶ, ಪಾಲಕರಿಗೆ ಪ್ರಚಾರ ಮಾಡುವ ಹಾಗೂ 75% ಶಾಲೆಯ ಹಾಜರಾತಿ ಇಲ್ಲದ ಮಕ್ಕಳಿಗೆ ಹಾಲ್ ಟಿಕೆಟ್ ಕೊಡದಿರುವ ಕಾರ್ಯಕ್ರಮಗಳನ್ನು ಮಾಡಲಾಗಿದ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಉತ್ತಮ ಫಲಿತಾಂಶಕ್ಕಾಗಿ ಇನ್ನು ಏನೇನು ಮಾಡಬಹುದೆಂಬ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರೊಂದಿಗೆ ಚರ್ಚಿಸಿ, ಆ ಕುರಿತು ಕ್ರಮ ತೆಗೆದುಕೊಳ್ಳಿ ಎಂದು ತಿಳಿಸಿ, ಇನ್ನು ಇಲಾಖೆಯಲ್ಲಿ ಮುಖ್ಯವಾದ ಯೋಜನೆಗಳ ಏನಾದರೂ ಸಮಸ್ಯೆಗಳು ಇದೆಯಾ ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಅಕ್ಷರ ದಾಸೋಹ ಕಾರ್ಯಕ್ರಮವು ನಡೆಯುತ್ತಿದ್ದು, ಆಗಸ್ಟನಿಂದ ಡಿಸೆಂಬರವರೆಗಿನ ಕಂತಿನ ಅನುದಾನವು ಡಿಸೆಂಬರ ತಿಂಗಳಲ್ಲಿ ಬಂದಿರುವುದರಿಂದ, ಆರ್ಥಿಕ ಸಾಧನೆ 35% ಆಗಿರುತ್ತದೆ. ಇನ್ನು ಮುಂದೆ ಜನೇವರಿ ತಿಂಗಳಿಂದ ಕೆ2 ಮುಖಾಂತರ ಅನುದಾನ ಬಿಡುಗಡೆ ಮಾಡಲಾಗುತ್ತಿದೆ ಹಾಗೂ ಎರಡನೇ ಜೋಡಿ ಸಮವಸ್ತ್ರ (Second Set Uniform) ಗಳಿಗಾಗಿ ಆದೇಶ ಬಂದಿರುತ್ತದೆ ಅದಕ್ಕಾಗಿ ಎಲ್ಲಾ ಶಾಲೆಗಳಿಗೆ ಅನುದಾನ ಬಿಡುಗಡೆಯಾಗಬೇಕಾಗಿರುತ್ತದೆ. ಹಾಗೂ ಮುಂದಿನ SSLC ಫಲಿತಾಂಶಗಳನ್ನು ರಾಜ್ಯ ಮಟ್ಟದಲ್ಲಿ ಗ್ರೇಡ್‌ಗಳಲ್ಲಿ ಪ್ರಕಟಿಸಲಾಗುವದೆಂಬ ವಿಷಯವನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಗಮನಕ್ಕೆ ತಂದರು.

(ಕ್ರಮ:- ಶಿಕ್ಷಣ ಇಲಾಖೆ ಬೀದರ)

ವಿಷಯ: 5 ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:-

ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಯೋಜನೆಗಳ ಮಾಹಿತಿಯನ್ನು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಜಿಲ್ಲಾ ವಲಯದ ಕಾರ್ಯಕ್ರಮಗಳಲ್ಲಿ ವಿದ್ಯಾರ್ಥಿನಿಲಯಗಳ ನಿರ್ವಹಣೆ ಯೋಜನೆಯಡಿ, 4607 ವಿದ್ಯಾರ್ಥಿಗಳ ಸಂಖ್ಯೆ ಮಂಜೂರಾತಿಯಲ್ಲಿ, 3918 ವಿದ್ಯಾರ್ಥಿಗಳು ಹಾಸ್ಟಲ್‌ಗಳಲ್ಲಿ ಇದ್ದು, ಸದರಿ ನಿರ್ವಹಣೆಗಾಗಿ ರೂ.1969.96 ಲಕ್ಷ ಅನುದಾನ ವಾರ್ಷಿಕ ಗುರಿ ಹೊಂದಿ, ಅದರಲ್ಲಿ ರೂ.155.99 ಲಕ್ಷ ಅನುದಾನ ಖರ್ಚಾಗಿರುತ್ತದೆಂದು ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಇಲಾಖೆಯಲ್ಲಿ ಯಾವುದಾದರೂ ಕಟ್ಟಡ ನಿರ್ಮಾಣ ಕಾಮಗಾರಿಗಳು ನಡೆಯುತ್ತಿವೆಯಾ? ಸದರಿ ಕಾಮಗಾರಿಗಳ ಅನುಷ್ಠಾನಕ್ಕಾಗಿ ಯಾರಿಗೆ ಕೊಡಲಾಗಿದೆ ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು.

ಇಲಾಖಾಧಿಕಾರಿಯವರು ಮಾತನಾಡಿ, ಇಲಾಖೆಯಲ್ಲಿ ಹಾಸ್ಟಲ್ ಕಟ್ಟಡ ನಿರ್ಮಾಣ ಕಾಮಗಾರಿಗಳು ನಡೆಯುತ್ತಿದ್ದು, ಅವುಗಳನ್ನು ಅನುಷ್ಠಾನ ಮಾಡಲು ಕೆ.ಆರ್.ಐ.ಡಿ.ಎಲ್. ಗೆ ಕೊಡಲಾಗಿದೆ ಎಂದು ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಯಾವುದೇ ಕಾಮಗಾರಿಗೆ ನಿವೇಶನದ ಸಮಸ್ಯೆ ಇದೆಯಾ ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಇಲಾಖೆಯಲ್ಲಿ ಒಟ್ಟು 18 ನಿವೇಶನಗಳು ಲಭ್ಯವಿದೆ. ಇನ್ನು 10 ಹಾಸ್ಟಲ್ ಕಟ್ಟಡ ಕಾಮಗಾರಿಗಳಲ್ಲಿ 2 ಹಸ್ತಾಂತರ ಆಗಿದ್ದು, ಇನ್ನು 8 ಕಾಮಗಾರಿಗಳನ್ನು KRIDL ಹಾಗೂ PWD ಯವರು ನಿರ್ಮಾಣ ಮಾಡುತ್ತಿದ್ದಾರೆಂದು ಹೇಳಿದಾಗ, KRIDL ನ ಅಧಿಕಾರಿಯವರು ಮಾತನಾಡಿ, ಸದರಿ ಇಲಾಖೆಯ 4 ಕಾಮಗಾರಿಗಳನ್ನು ಅನುಷ್ಠಾನ ಮಾಡುತ್ತಿದ್ದು, 4 ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದ್ದು, ಏಪ್ರಿಲ್ ತಿಂಗಳಲ್ಲಿ ಎಲ್ಲವೂ ಹಸ್ತಾಂತರ ಮಾಡುವುದಾಗಿ ತಿಳಿಸಿದರು.

BCM ಇಲಾಖೆ ಅಧಿಕಾರಿಯವರು ಮಾತನಾಡಿ, PWD ಯವರು ಬಸವಕಲ್ಯಾಣ, ಔರಾದ ಹಾಗೂ ಹುಮನಾಬಾದ ತಾಲ್ಲೂಕಿನ ಹಾಸ್ಟಲ್‌ಗಳನ್ನು ಹಸ್ತಾಂತರ ಮಾಡಿದ್ದು, ಹಳ್ಳಿಖೇಡನಲ್ಲಿ ಆದ ಕಾಮಗಾರಿಯು ಬಹಳ ಕಳಪೆ ಮಟ್ಟದಲ್ಲಿ ಆಗಿರುವುದರಿಂದ, ಆಕ್ಷೇಪಣೆ ಮಾಡಿ ಪತ್ರ ಕಳುಹಿಸಲಾಗಿದೆ ಹಾಗೂ ಇನ್ನು ಎರಡು ಹಾಸ್ಟಲ್‌ಗಳನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಯವರು ನಿರ್ಮಾಣ ಮಾಡುತ್ತಿದ್ದು, ಈ ವಾರದಲ್ಲಿ ಹಸ್ತಾಂತರ ಮಾಡುವುದಾಗಿ ತಿಳಿಸಿರುತ್ತಾರೆಂದು ಹೇಳಿ, ಸದರಿ ಕಟ್ಟಡಗಳನ್ನು ಹಾಗೂ KRIDL ರವರಿಂದ ಆದ 2 ಕಟ್ಟಡಗಳನ್ನು ಫೆಬ್ರುವರಿ 7 ರಂದು ಸನ್ಮಾನ್ಯ ಮುಖ್ಯ ಮಂತ್ರಿಯವರಿಂದ ಉದ್ಘಾಟನೆ ಮಾಡಿಸುವುದಾಗಿ ಸಭೆಯಲ್ಲಿ ತಿಳಿಸಿದರು.

(ಕ್ರಮ:- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೀದರ)

<u>ವಿಷಯ:6:- ಅಲ್ಪಸಂಖ್ಯಾತರ ಇಲಾಖೆ:-</u>

ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, MSDP ಯೋಜನೆಯ ಪರಿಸ್ಥಿತಿ ಏನಿದೆ ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಇಲಾಖೆಯ 2014-15 ರಿಂದ ಒಟ್ಟು 118 ಕಾಮಗಾರಿಗಳನ್ನು ನಿರ್ಮಿತಿ ಕೇಂದ್ರಕ್ಕೆ ಕೊಡಲಾಗಿದ್ದು, ಅದರಲ್ಲಿ 26 ಕಾಮಗಾರಿಗಳು ಪೂರ್ಣಗೊಂಡಿದ್ದು, ಇನ್ನು 27 ಕಾಮಗಾರಿಗಳು ವಿವಿಧ ಹಂತಗಳಿಗೆ ಬಂದು ನಿಲ್ಲಿಸಲಾಗಿದೆ. ಹಾಗೂ 65 ಕಾಮಗಾರಿಗಳು ಪ್ರಾರಂಭವಾಗದ ಕಾಮಗಾರಿಗಳಾಗಿರುತ್ತವೆ. ಸದರಿ ಕಾಮಗಾರಿಗಳಿಗೆ ಅನುದಾನವನ್ನು ನಿರ್ಮಿತಿ ಕೇಂದ್ರಕ್ಕೆ ಬಿಡುಗಡೆ ಮಾಡಲಾಗಿದೆ. ನಿರ್ಮಿತಿ ಕೇಂದ್ರದ Incom Tax ನಿಂದಾಗಿ ಖಾತೆಗಳು ಸೀಜ್ ಆದ ಪ್ರಯುಕ್ತ ಕಾಮಗಾರಿಗಳು ಬಾಕಿ ಇವೆ. ಇನ್ನು ಸದರಿ ಕಾಮಗಾರಿಗಳಿಗಾಗಿ ಹೆಚ್ಚುವರಿ ಅನುದಾನಕ್ಕಾಗಿ ಪತ್ರದವನ್ನು ಇಲಾಖೆಯ ನಿರ್ದೇಶಕರಿಗೆ ಕಳುಹಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು. ಮುಂದುವರೆದು PRED ಗೆ 25 ಶೌಚಾಲಯಗಳ ಬ್ಲಾಕ್ ಆದ ಕಾಮಗಾರಿಗಳನ್ನು ಕೊಡಲಾಗಿದ್ದು, ಅದರಲ್ಲಿ 17 ಮುಗಿದಿದ್ದು, ಇನ್ನು 8 ಕಾಮಗಾರಿಗಳು ಬಾಕಿ ಇವೆ. ಮತ್ತು ಮುರಾರ್ಜಿ ದೇಸಾಯಿ ಕಟ್ಟಡ ಕಾಮಗಾರಿಯನ್ನು KHB ಯವರು ನಿರ್ಮಾಣ ಮಾಡುತ್ತಿದ್ದು, ಸದರಿ ಕಾಮಗಾರಿಯು ಪ್ರಗತಿಯಲ್ಲಿದೆ ಎಂದು ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ನಿರ್ಮಿತಿ ಕೇಂದ್ರದ ಕುರಿತು Follow up ಮಾಡಿ ಎಂದು ಇಲಾಖಾಧಿಕಾರಿಯವರಿಗೆ ತಿಳಿಸಿದರು.

(ಕ್ರಮ:- ಅಲ್ಪಸಂಖ್ಯಾತರ ಇಲಾಖೆ ಬೀದರ)

<u>ವಿಷಯ:7:- ನಿರ್ಮಿತಿ ಕೇಂದ್ರ:-</u>

ನಿರ್ಮಿತಿ ಕೇಂದ್ರದ ಅಧಿಕಾರಿಯವರು ಮಾತನಾಡಿ, Incom Tax ಗೆ ಸಂಬಂಧಪಟ್ಟಂತೆ ಪ್ರಕರಣದ ಅಂತಿಮ ತೀರ್ಪು ಮಾರ್ಚ್ 10ಕ್ಕೆ ನೀಡಲಾಗಿರುತ್ತದೆಂದು ತಿಳಿಸಿ, CMC ನಿಂದ ನಮಗೆ ಅನುದಾನ

ಬರುವುದು ಬಾಕಿ ಇದೆ ಆ ಅನುದಾನವನ್ನು ಪಡೆದ ನಂತರ ಸದರಿ ಅನುದಾನದಲ್ಲಿ MSDPಯ ಕಾಮಗಾರಿಗಳನ್ನು ಹಾಗೂ ಅಂಗನವಾಡಿ ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗುತ್ತದೆಂದು ಸಭೆಯಲ್ಲಿ ತಿಳಿಸಿದರು

(ಕ್ರಮ: ನಿರ್ಮಿತಿ ಕೇಂದ್ರ ಬೀದರ)

**ವಿಷಯ:8:- ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:-**

ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಇಲಾಖೆಯಲ್ಲಿರುವ ಪ್ರಮುಖ ಯೋಜನೆಗಳ ಕುರಿತು ಮಾಹಿತಿಯನ್ನು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಇಲಾಖೆಯಲ್ಲಿ ಮುಖ್ಯವಾಗಿ ಮೂರು ಯೋಜನೆಗಳಿವೆ. ಅವು ಮುಖ್ಯಮಂತ್ರಿ ಮಾತೃಶ್ರೀ ಯೋಜನೆ, ಪ್ರಧಾನಮಂತ್ರಿ ಮಾತೃವಂದನಾ ಯೋಜನೆ ಹಾಗೂ ಮಾತೃಪೂರ್ಣ ಯೋಜನೆಗಳಿವೆ. ಮಾತೃ ವಂದನಾ ಯೋಜನೆಯು ಕೇಂದ್ರ ವಲಯ ಯೋಜನೆಯಾಗಿದ್ದು, ಸದರಿ ಯೋಜನೆಯಡಿ ಮೊದಲನೇಯ ಮಗುವಾದರೆ ರೂ.5000/- ಹಾಗೂ ಮಾತೃಶ್ರೀ ಯೋಜನೆಯಡಿ ಎರಡು ಹೆರಿಗೆಯಾದರೆ ರೂ.6000/- ಸಹಾಯಧನ ಕೊಡಲಾಗುತ್ತದೆ. ಎರಡು ಯೋಜನೆಗಳ ಅನುದಾನ ಸೇರಿ ಪ್ರತಿಯೊಂದು ಫಲಾನುಭವಿಗೆ ರೂ.11,000/- ಸಹಾಯಧನ ಕೊಡಲಾಗುತ್ತಿದೆ. ಇನ್ನು ಆರೋಗ್ಯ ಇಲಾಖೆಯ ವತಿಯಿಂದ JSY ಯೋಜನೆ ಅಡಿಯಲ್ಲಿ ಹೆರಿಗೆಯಾದ ಮಹಿಳೆಯರಿಗೆ ರೂ.700/- ಸಹಾಯಧನ ಕೊಡಲಾಗುತ್ತದೆ. ಇಲಾಖೆಯ ಯೋಜನೆಗಳಡಿಯಲ್ಲಿ 79-80% ಸಾಧನೆಯಾಗಿರುತ್ತದೆಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಅಂಗನವಾಡಿ ಕಟ್ಟಡಗಳ ನಿರ್ಮಾಣದ ಕುರಿತು ಮಾಹಿತಿಯನ್ನು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಮುಖ್ಯವಾಗಿ RIDF 20 ರಲ್ಲಿ 32 ಅಂಗನವಾಡಿ ಕಟ್ಟಡ ಕಾಮಗಾರಿಗಳ ನಿರ್ಮಾಣವನ್ನು ಕೆ.ಆರ್.ಐ.ಡಿ.ಎಲ್‌ಗೆ ಕೊಡಲಾಗಿತ್ತು. ಆದರೆ ಅವುಗಳನ್ನು ರದ್ದು ಪಡಿಸಿ, ಹಣವನ್ನು ವಾಪಸ್ ಪಡೆಯಲು ಪತ್ರ ಬರೆಯಲಾಗಿದೆ ಎಂದು ತಿಳಿಸಿದಾಗ, ಕೆ.ಆರ್.ಐ.ಡಿ.ಎಲ್ ಅಧಿಕಾರಿಯವರು ಮಾತನಾಡಿ, ಸದರಿ ಕಾಮಗಾರಿಗಳನ್ನು ರದ್ದು ಪಡಿಸುವುದನ್ನು Cancel ಮಾಡಿ, ಸ್ಥಳ ಬದಲಾವಣೆ ಮಾಡಿ ನಿರ್ಮಾಣಕ್ಕೆ ಕೊಡಲಾಗಿದೆ ಎಂದು ತಿಳಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, 2014-15 ರಲ್ಲಿ ಮಾಡಿದ ಕ್ರಿಯಾ ಯೋಜನೆಯ ಅನುದಾನ ಪ್ರಕಾರ ಪ್ರಸ್ತುತ ವರ್ಷಕ್ಕೆ ಅಂಗನವಾಡಿ ಕಟ್ಟಡಗಳ ನಿರ್ಮಾಣ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಹೇಳುತಿದ್ದಾರೆ ಎಂಬ ವಿಷಯವನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಗಮನಕ್ಕೆ ತಂದರು. ಮುಂದುವರೆದು ಜಿಲ್ಲೆಯಲ್ಲಿ ಒಟ್ಟು 1893 ಅಂಗನವಾಡಿ ಕೇಂದ್ರಗಳಿದ್ದು, ಅದರಲ್ಲಿ 443 ಮಾತ್ರ ಸ್ವಂತ ಕಟ್ಟಡದಲ್ಲಿವೆ. ಬಾಕಿ ಎಲ್ಲವೂ ಬಾಡಿಗೆ ಕಟ್ಟಡದಲ್ಲಿವೆ. ಸರ್ವೆ ಪ್ರಕಾರ 930 ಕೇಂದ್ರಗಳಲ್ಲಿ ಶೌಚಾಲಯಗಳು ಇಲ್ಲ ಎಂಬುದನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಗಮನಕ್ಕೆ ತಂದರು. ಮುಂದುವರೆದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಅಂಗನವಾಡಿ ಕಾರ್ಯಕರ್ತೆಯವರ ಹಾಗೂ ಸಹಾಯಕಿಯರ ನೇಮಕಾತಿಯ ಕುರಿತು ಮಾಹಿತಿಯನ್ನು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಅಂಗನವಾಡಿ ಕಾರ್ಯಕರ್ತೆಯರ 140 ಹುದ್ದೆಗಳಿಗೆ ಅರ್ಜಿ ಕರೆಯಲಾಗಿದ್ದು, ಅದರಲ್ಲಿ 90 ಅರ್ಜಿಗಳನ್ನು ಅಂತಿಮಗೊಳಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಿದರು.

(ಕ್ರಮ:- ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಕೆ.ಆರ್.ಐ.ಡಿ.ಎಲ್ ಬೀದರ)

**ವಿಷಯ:9:- ಆರೋಗ್ಯ ಇಲಾಖೆ:-**

ಬೀದರ ಜಿಲ್ಲೆಯ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಹೊಸದಾಗಿ ನಿರ್ಮಿಸಲಾದ 100 ಬೆಡ್ ಆಸ್ಪತ್ರೆಯು ಯಾವ ಹಂತದಲ್ಲಿದೆ. ಹಿಂದೆ 10 ಹಾಸಿಗೆಗಳ ಆಸ್ಪತ್ರೆ ಇತ್ತು ಅದು ನಡೆಯುತ್ತಿದೆಯಾ? ಅಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳು ಇದ್ದಾರೆಯೇ? ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, 100 ಹಾಸಿಗೆಗಳ ಆಸ್ಪತೆಯು ಸಂಪೂರ್ಣವಾಗಿ ನಿರ್ಮಿತವಾಗಿದ್ದು, ಅದಕ್ಕಾಗಿ ವೈದ್ಯರ ಮತ್ತು ಸಿಬ್ಬಂಗಳ ನೇಮಕಾತಿ ಆಗಬೇಕಾಗಿರುತ್ತದೆ. ಇನ್ನು 10 ಹಾಸಿಗೆಗಳ ಆಸ್ಪತೆ ನಡೆಯುತ್ತಿದ್ದು, ಅಲ್ಲಿ 2 Anesthesia, 2 Physician, ಹಾಗೂ 3 OBG ಹುದ್ದೆಗಳಲ್ಲಿ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು. ಮುಂದುವರೆದು ಇಲಾಖೆಯಲ್ಲಿ ಗ್ರೂಪ್ ಎ 169 ಹುದ್ದೆಗಳು ಮಂಜೂರಾಗಿದ್ದು, ಅದರಲ್ಲಿ 154 ಕಾರ್ಯನಿರ್ವಹಣೆಯಲ್ಲಿದ್ದು, ಇನ್ನು 35 ಹುದ್ದೆಗಳು ಖಾಲಿ ಇವೆ. ಪ್ರತಿ ಸೋಮುವಾರ ವೈದ್ಯರಿಗಾಗಿ ಸಂದರ್ಶನ ಮಾಡಲಾಗುತ್ತಿದೆ. ಎಂದು ತಿಳಿಸಿದರು. ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, NHM ಯೋಜನೆಯಡಿ ಯಾವ ಯಾವ ಕೆಲಸಗಳನ್ನು ಮಾಡಲಾಗಿದೆ ಎಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, NHM ಯೋಜನೆಯಡಿ ಪ್ರಮುಖವಾಗಿ JSY ಯೋಜನೆಯಲ್ಲಿ 74%, Family Planning 73% ಮತ್ತು JSSK ಯೋಜನೆಯಲ್ಲಿ 67% ಸಾಧನೆಯಾಗಿರುತ್ತದೆ. JSSK ಯೋಜನೆ ಅಡಿಯಲ್ಲಿ ಎಲ್ಲಾ ಸೌಲಭ್ಯಗಳು ಉಚಿತವಾಗಿ ಕೊಡಲಾಗುತ್ತದೆ. ಮತ್ತು ಮಡಿಲು ಕಿಟ್ ಯೋಜನೆ ಕಳೆದು ವರ್ಷದಿಂದ ನಿಲ್ಲಿಸಲಾಗಿದೆ ಎಂದು ತಿಳಿಸಿದರು.

(ಕ್ರಮ:- ಆರೋಗ್ಯ ಇಲಾಖೆ ಬೀದರ)

## ವಿಷಯ: 10:- ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ: [Food Department]

ಇಲಾಖಾಧಿಕಾರಿಯವರು ಮಾತನಾಡಿ, ಜಿಲ್ಲೆಯಲ್ಲಿ ಒಟ್ಟು 723 ನ್ಯಾಯ ಬೆಲೆ ಅಂಗಡಿಗಳು ಇವೆ. ಅವುಗಳಿಗಾಗಿ ಪ್ರತಿ ತಿಂಗಳು 86457 ಕ್ವಿಂಟಲ್ ಆಹಾರ ಪದಾರ್ಥಗಳು ಸರಬರಾಜು ಆಗುತ್ತವೆಂದು ತಿಳಿಸಿದರು. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಅಕ್ಕಿಯನ್ನು ಸರಬರಾಜು ಮಾಡುತ್ತಿರುವ ವಾಹನಗಳನ್ನು ಸೀಜ್(seize) ಮಾಡಿದ ನಂತರ ಏನು ಮಾಡುತ್ತೀರೆಂದು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಸದರಿ ವಾಹನವನ್ನು ಸೀಜ್(seize) ಮಾಡಿದ ನಂತರ ಮೊದಲು FIR ಮಾಡಲಾಗುತ್ತದೆ. ನಂತರ ಸದರಿ ವಾಹದನಲ್ಲಿರುವ ಅಕ್ಕಿಯ ಬೆಲೆಯನ್ನು ಸರ್ಕಾರದ ಮುಖ್ಯಸ್ಥರ ಖಾತೆಗೆ ಜಮೆ ಮಾಡಲಾಗುತ್ತದೆ. ಎಪ್ರಿಲ್‌ನಿಂದ ಇಲ್ಲಿಯವರೆಗೆ ರೂ.1.30 ಕೋಟಿ ಬೆಲೆಯ ಅಕ್ಕಿಯ ವಾಹನಗಳನ್ನು ಸೀಜ್(seize) ಮಾಡಲಾಗಿದೆ. ಒಟ್ಟು 22 Raid ಗಳನ್ನು ಮಾಡಲಾಗಿದೆ. ಇನ್ನು ಉಜ್ವಲಾ ಯೋಜನೆ ಅಡಿಯಲ್ಲಿ ಜನಗಣತಿಯ ಪ್ರಕಾರ ಒಟ್ಟು 3.30 ಲಕ್ಷ BPL ಕುಟುಂಬಗಳಿದ್ದು, ಅದರಲ್ಲಿ 3.50 ಲಕ್ಷ ಜನರಿಗೆ BPL ಕಾರ್ಡ ಕೊಡಲಾಗಿದೆ. ಅದಕ್ಕಾಗಿ ಪರಿಶೀಲನೆಗಾಗಿ ಆದೇಶ ಬಂದಿರುತ್ತದೆ. ಅ ಕೆಲಸ ನಡೆಯುತ್ತಿದೆ ಎಂದು ತಿಳಿಸಿ. Raid ಗಾಗಿ ತಾಲ್ಲೂಕು ಮಟ್ಟದಲ್ಲಿ ಟೀಮ್ ಮಾಡಲಾಗಿದೆ ಎಂದು ತಿಳಿಸಿದರು.

ಇಲಾಖಾಧಿಕಾರಿಯವರು ಮಾತನಾಡಿ, ಇಲಾಖೆಗೆ 5 ಜನ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಯನ್ನು ಪಡೆಯಲಾಗಿದ್ದು, ಅವರಿಗೆ 2 ತಿಂಗಳಿಂದ ಅನುದಾನದ ಕೊರತೆಯಿಂದಾಗಿ ವೇತನ ಆಗಿರುವುದಿಲ್ಲ. ಸದರಿ ಅನುದಾನ ಬಿಡುಗಡೆ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

(ಕ್ರಮ:- Food Department ಬೀದರ)

ವಿಷಯ: 11: GESCOM:-

ಜೇಸ್ಕಾಂ ಇಲಾಖೆಯ ಹುಮನಾಬಾದ ಮತ್ತು ಬಸವಕಲ್ಯಾಣ ವಿಭಾಗದ ಅಧಿಕಾರಿಯವರು ಮಾತನಾಡಿ, ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಒಟ್ಟು 337 ಕಾಮಗಾರಿಗಳಿದ್ದು, ಅವುಗಳಲ್ಲಿ 290 ಪ್ರಗತಿಯಲ್ಲಿವೆ. ಮತ್ತು 47 ಕಾಮಗಾರಿಗಳು ಬಾಕಿ ಇರುತ್ತವೆ. ಬಾಕಿ ಇರುವುದು ಅಂಬೇಡ್ಕರ ನಿಗಮದ 15 ಕಾಮಗಾರಿಗಳು, ST Corporation 15 ಕಾಮಗಾರಿಗಳು, ವಿಶ್ವಕರ್ಮ ಯಾವುದು ಇಲ್ಲ, ಅಲ್ಪಸಂಖ್ಯಾತರ 8 ಕಾಮಗಾರಿಗಳು ಬಾಕಿ ಇರುತ್ತವೆ. ಸದರಿ ಕಾಮಗಾರಿಗಳನ್ನು ಆದಷ್ಟು ಬೇಗ ಮಾಡುವುದಾಗಿ ತಿಳಿಸಿದರು. ಜೇಸ್ಕಾಂ ಇಲಾಖೆಯ ಬೀದರ ವಿಭಾಗದ ಅಧಿಕಾರಿಯವರು ಮಾತನಾಡಿ, ಗಂಗಾಕಲ್ಯಾಣ ಯೋಜನೆ ಅಡಿಯಲ್ಲಿ ಅಂಬೇಡ್ಕರ್ ನಿಗಮದ 21 ಕಾಮಗಾರಿಗಳು, ST Corporation 36 ಕಾಮಗಾರಿಗಳು, ಡಿ ದೇವರಾಜ ಅರಸು 8 ಕಾಮಗಾರಿಗಳು, BCM 20 ಕಾಮಗಾರಿಗಳು, ವಿಶ್ವಕರ್ಮ 1 ಹೀಗೆ 86 ಕಾಮಗಾರಿಗಳು ಬಾಕಿ ಇದ್ದು, ಎಲ್ಲವೂ ಪ್ರಗತಿಯಲ್ಲಿವೆ. ಈ ತಿಂಗಳ ಅಂತ್ಯಕ್ಕೆ ಮುಗಿಸಲಾಗುತ್ತದೆಂದು ತಿಳಿಸಿದರು. ಮುಂದುವರೆದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಯಾವುದೇ ಕಾಮಗಾರಿಗಳು ಬಾಕಿ ಇಲ್ಲ. ಇನ್ನು ದೀನ ದಯಾಳ ಉಪಾಧ್ಯಾಯ [DDUDY] ಯೋಜನ ಅಡಿಯಲ್ಲಿ 80% ಕೆಲಸ ಮುಗಿದಿರುತ್ತದೆ. ಮತ್ತು ಸೌಭಾಗ್ಯ ಯೋಜನೆ ಅಡಿಯಲ್ಲಿ 100% ಕಾಮಗಾರಿಗಳು ಮುಗಿದಿದ್ದು, ಯಾವುದು ಬಾಕಿ ಇಲ್ಲ ಎಂದು ತಿಳಿಸಿದರು.

(ಕ್ರಮ:- GESCOM ಬೀದರ)

ವಿಷಯ: 12: Land Army: [KRIDL]

ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಯಾವ ಯಾವ ಇಲಾಖೆಯ ಎಷ್ಟು ಕಾಮಗಾರಿಗಳನ್ನು ಅನುಷ್ಠಾನ ಮಾಡಲಾಗುತ್ತಿದೆ ಹಾಗೂ ಇಲಾಖೆಯ ಕಾಮಗಾರಿಗಳು ಕುರಿತು ಇಲಾಖೆಯವರ ಏನಾದರೂ ಸಮಸ್ಯೆ ಇದೆಯಾ ಎಂದು ಸಂಬಂಧಪಟ್ಟ ಇಲಾಖಾಧಿಕಾರಿಯವರಿಗೆ ಕೇಳಿದರು. ಜಂಟಿ ಕೃಷಿ ನಿರ್ದೇಶಕರು ಮಾತನಾಡಿ, ಪ್ರಸ್ತುತ ವರ್ಷದಲ್ಲಿ ರೂ. 6.00 ಕೋಟಿ ಅನುದಾನದಲ್ಲಿ 6 ರೈತ ಸಂಪರ್ಕ ಕೇಂದ್ರಗಳ ಕಟ್ಟಡ ಕಾಮಗಾರಿಯನ್ನು ಲ್ಯಾಂಡ್ ಆರ್ಮಿಯವರಿಗೆ ಕೊಡಲಾಗಿದೆ ಎಂದು ಹೇಳಿದಾಗ, ಲ್ಯಾಂಡ್ ಆರ್ಮಿಯ ಅಧಿಕಾರಿಯವರು ಮಾತನಾಡಿ, ಸದರಿ ಕಾಮಗಾರಿಗಳಲ್ಲಿ 5 ಕಾಮಗಾರಿಗಳ ಕೆಲಸ ಪ್ರಗತಿಯಲ್ಲಿದ್ದು, ಇನ್ನು ಹಲಬರ್ಗಾದಲ್ಲಿ ನಿವೇಶನದ ಸಮಸ್ಯೆಯಿಂದಾಗಿ ಇನ್ನು ಕಾಮಗಾರಿಯನ್ನು ಪ್ರಾರಂಭಿಸಿರುವುದಿಲ್ಲ. ಈವಾಗ ಭಾಲ್ಕಿ ತಾಲ್ಲೂಕಿನ ಮಾನ್ಯ ಶಾಸಕರ ನಿರ್ದೇಶದಂತೆ ಸದರಿ ನಿವೇಶನದ ಸಮಸ್ಯೆ ಬಗೆಹರಿದಿರುತ್ತದೆಂದು ತಿಳಿಸಿದರು. ಮಾನ್ಯ ಜಿ.ಪಂ.ಉಪ ಕಾರ್ಯದರ್ಶಿಯವರು ಮಾತನಾಡಿ, ಗ್ರಾಮ ವಿಕಾಸ ಯೋಜನೆ ಅಡಿಯಲ್ಲಿ ಯಾವುದೇ ಕಟ್ಟಡ ಕಾಮಗರಿಗಳನ್ನು ಸದರಿಯವರು ಪ್ರಾರಂಭಿಸಿರುವುದಿಲ್ಲ. ಸದರಿ ವಿಷಯದ ಕುರಿತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆ ಮಾಡಿ, ಆ ಮುಖಾಂತರ ಹೇಳಲಾಗಿದೆ. 2015-16ನೇ ಸಾಲಿನ 17 ಕಾಮಗಾರಿಗಳು ಹಾಗೂ 2017-18ನೇ ಸಾಲಿನ 26 ಕಾಮಗಾರಿಗಳು ಆಗಬೇಕಾಗಿರುತ್ತವೆ ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಗಮನಕ್ಕೆ ತಂದರು. ಲ್ಯಾಂಡ ಆರ್ಮಿಗೆ ಸಂಬಂಧಪಟ್ಟ ಅಧಿಕಾರಿಯವರು ಮಾತನಾಡಿ, ಸದರಿ ಗ್ರಾಮ ವಿಕಾಸ ಯೋಜನೆಯ ಕಾಮಗಾರಿಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿತ್ತು, ಅಷ್ಟು ಹಣದಲ್ಲಿ ಕೆಲಸ ಮಾಡಲಾಗಿದೆ ಎಂದು ತಿಳಿಸಿದರು. ಜಿ.ಪಂ. ಮಾನ್ಯ ಉಪ ಕಾರ್ಯದರ್ಶಿಯವರು ಮಾತನಾಡಿ, ಗ್ರಾಮ ವಿಕಾಸ ಯೋಜನೆಗಳ ಕಾಮಗಾರಿಗಳಿಗಾಗಿ ಅನುದಾನವನ್ನು

ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲಾಗಿದೆ. ಸದರಿಯವರು ಹಣ ಖರ್ಚು ಮಾಡಿದ ಕುರಿತು UC ಸಲ್ಲಿಸಿರುವುದಿಲ್ಲ ಎಂದು ತಿಳಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಕಾಮಗಾರಿಗಳಿಗೆ ಸಂಬಂಧಪಟ್ಟ ದಾಖಲಾತಿಗಳನ್ನು ಸರಿಯಾಗಿ ಸಲ್ಲಿಸುವಂತೆ ಲ್ಯಾಂಡ ಆರ್ಮಿ ಅಧಿಕಾರಿಯವರಿಗೆ ತಿಳಿಸಿದರು.

<u>(ಕ್ರಮ:- Land Army ಬೀದರ)</u>

<u>ವಿಷಯ ಸಂಖ್ಯೆ: 13 ನರೇಗಾ [MGNREGA]:-</u>

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ನರೇಗಾ ಯೋಜನೆಯ ಪ್ರಗತಿ ಕುರಿತು ಮಾಹಿತಿ ನೀಡುವಂತೆ ಸಂಬಂದಪಟ್ಟ ಅಧಿಕಾರಿಯವರಿಗೆ ಕೇಳಿದರು. ಜಿ.ಪಂ. ಮಾನ್ಯ ಉಪ ಕಾರ್ಯದರ್ಶಿಯವರು ಮಾತನಾಡಿ, 2019-20ನೇ ಸಾಲಿಗಾಗಿ ರೂ. 154.00 ಕೋಟಿ ಅನುದಾನ ಬಂದಿದ್ದು, ಅದರಲ್ಲಿ ರೂ. 101.00 ಕೋಟಿ ಅನುದಾನ ಖರ್ಚಾಗಿರುತ್ತದೆ. ಇನ್ನು ಪ್ರಸ್ತುತ ವರ್ಷಕ್ಕೆ 35 ಲಕ್ಷ ಮಾನವ ದಿನಗಳ [PD Generate] ಗುರಿ ಹೊಂದಲಾಗಿದ್ದು, ಅದರಲ್ಲಿ ಇಲ್ಲಿಯವರೆಗೆ 27 ಲಕ್ಷ 52 ಸಾವಿರ ಮಾನವ ದಿನಗಳು [PD Generate] ಆಗಿದ್ದು, 75% ಸಾಧನೆಯಾಗಿರುತ್ತದೆ. ಇನ್ನು ಎರಡು ತಿಂಗಳಲ್ಲಿ ಅಂದರೇ ಮಾರ್ಚ ಅಂತ್ಯಕ್ಕೆ ಸಂಪೂರ್ಣವಾಗಿ ಮುಗಿಯುತ್ತದೆ ಹಾಗೂ **ಆರ್ಥಿಕವಾಗಿ** 70% ಸಾಧನೆಯಾಗಿತ್ತದೆ. ಮತ್ತು ಕೂಲಿ ಪಾವತಿಯನ್ನು ಸಮಯಕ್ಕೆ ಸರಿಯಾಗಿ ಮಾಡಲಾಗುತ್ತಿದೆ ಎಂದು ತಿಳಿಸಿದರು.

<u>(ಕ್ರಮ: ನರೇಗಾ ಶಾಖೆ, ಜಿ.ಪಂ. ಬೀದರ)</u>

<u>ವಿಷಯ ಸಂಖ್ಯೆ: 14. ಪಶು ಸಂಗೋಪನಾ ಇಲಾಖೆ:-</u>

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಪಶು ಸಂಗೋಪನಾ ಇಲಾಖೆಯಲ್ಲಿನ ಮೇವು ಲಭ್ಯತೆ ಕುರಿತು ಮಾಹಿತಿಯನ್ನು ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, ಇನ್ನು 26 ವಾರಗಳಿಗೆ ಸಾಕಾಗುವಷ್ಟು ಮೇವು ಲಭ್ಯತೆ ಇದೆ. ಇನ್ನು ಬರಗಾಲದಲ್ಲಿಯೂ ಮೇವಿನ ಕೊರತೆ ಆಗುವುದಿಲ್ಲ. ಹಾಗೂ ಮೇವು ಬೀಜಗಳ ಖರೀದಿಗಾಗಿ ರೂ.25.00 ಲಕ್ಷ ಅನುದಾನ ಬಿಡುಗಡೆ ಕುರಿತು ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇನ್ನು ಇಲಾಖೆಯಲ್ಲಿ ಮುಖ್ಯವಾದ ಯೋಜನೆಯೆಂದರೆ ಪಶುಭಾಗ್ಯ ಯೋಜನೆ. ಮಾನ್ಯ ಶಾಸಕರು ಫಲಾನುಭವಿಗಳ ಆಯ್ಕೆ ಸಮಿತಿಯ ಅಧ್ಯಕ್ಷರಾಗಿದ್ದು, ಇನ್ನು ಯಾವುದೇ ತಾಲ್ಲೂಕಿನ ಫಲಾನುಭವಿಗಳ ಆಯ್ಕೆ ಆಗಿರುವುದಿಲ್ಲ. ಸದರಿ ವಿಷಯದ ಕುರಿತು ಮಾನ್ಯ ಶಾಸಕರಿಗೆ ಭೇಟಿ ಮಾಡಿ, ಫಲಾನುಭವಿಗಳ ಆಯ್ಕೆ ಕುರಿತು ಅವರ ಗಮನಕ್ಕೆ ತರಲಾಗಿದೆ. ಇನ್ನು ಒಂದು ವಾರದಲ್ಲಿ ಫಲಾನುಭವಿಗಳ ಆಯ್ಕೆ ಪಟ್ಟಿ ಬರಬಹುದೆಂದು ತಿಳಿಸಿ, ಪಸ್ತುತ ವರ್ಷದಲ್ಲಿ ಪಶುಭಾಗ್ಯ ಯೋಜನೆ ಅಡಿಯಲ್ಲಿ ಗುರಿಗಳನ್ನು ಬಹಳ ಕಡಿಮೆ ಕೊಡಲಾಗಿದೆ. ಫಲಾನುಭವಿಗಳ ಆಯ್ಕೆ ನಂತರ ಸದರಿ ಅನುದಾನ ಖರ್ಚಾಗುತ್ತದೆ. ಹಾಗೂ ಅದನ್ನು ಬಿಟ್ಟು ಉಳಿದ ಎಲ್ಲಾ ಅನುದಾನವನ್ನು ಖರ್ಚು ಮಾಡಲಾಗುತ್ತಿದೆ. ಇನ್ನು ಇಲಾಖೆಗೆ ಸಂಬಂಧಪಟ್ಟಂತೆ ಯಾವುದೇ ಸಮಸ್ಯೆಗಳು ಇರುವುದಿಲ್ಲ ಎಂದು ತಿಳಿಸಿದರು.

ಇಲಾಖಾಧಿಕಾರಿಯವರು ಮಾತನಾಡಿ, ಇನ್ನು ಇಲಾಖೆಯ ವತಿಯಿಂದ ರಾಜ್ಯಮಟ್ಟದ ಪಶುಮೇಳವನ್ನು ಬೀದರನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಫೆಬ್ರುವರಿ 7, 8, 9 ರಂದು ನಡೆಯುತ್ತಿದ್ದು, ಸದರಿ ಕಾರ್ಯಕ್ರಮದ ಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತಿದೆ. ಸದರಿ ಕಾರ್ಯಕ್ರಮದ ಉದ್ಘಾಟನೆಯನ್ನು ಸನ್ಮಾನ್ಯ ಮುಖ್ಯ ಮಂತ್ರಿಯವರು ಮಾಡುತ್ತಿದ್ದು, ಇನ್ನು ಸದರಿ ಮೇಳದಲ್ಲಿ ಇಲಾಖೆಗೆ ಸಂಬಂಧಪಟ್ಟ ವಿವಿಧ ಕಾರ್ಯಕ್ರಮಗಳು ಹಾಗೂ ಪ್ರದರ್ಶನಗಳನ್ನು ಮಾಡುವ ಹಾಗೂ ಸುಮಾರು 1.00

ಲಕ್ಷ ಜನರು ಸದರಿ ಮೇಳಕ್ಕೆ ಮೂರು ದಿವಸ ಬಂದಾಗ ಅವರಿಗೆ ಬೇಕಾದ ಸೌಲಭ್ಯಗಳ ಎಲ್ಲಾ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು

(ಕ್ರಮ: ಪಶು ಸಂಗೋಪನಾ ಇಲಾಖೆ ಬೀದರ)

ವಿಷಯ ಸಂಖ್ಯೆ: 15. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ:-

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಪ್ರಗತಿ ಕುರಿತು ಮಾಹಿತಿ ನೀಡುವಂತೆ ಇಲಾಖಾಧಿಕಾರಿಯವರಿಗೆ ಕೇಳಿದರು. ಇಲಾಖಾಧಿಕಾರಿಯವರು ಮಾತನಾಡಿ, NRDWP ಯೋಜನೆ ಅಡಿಯಲ್ಲಿ 100 ಮುಂದುವರೆದ ಕಾಮಗಾರಿಗಳಲ್ಲಿ 97 ಕಾಮಗಾರಿಗಳು ಮುಗಿದಿರುತ್ತವೆ. ಮತ್ತು 67 ಹೊಸ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆ ಮುಗಿದಿದ್ದು, 41 ಹೊಸ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದೆ. ಇನ್ನು ಸದರಿ ಯೋಜನೆಯಡಿಯಲ್ಲಿ ಪ್ರಾರಂಭಿಕ ಶುಲ್ಕ ರೂ.488.92 ಲಕ್ಷ ಇದ್ದು, ಅದರಲ್ಲಿ ರಾಜ್ಯವಲಯದಿಂದ ರೂ.589.76 ಲಕ್ಷ ಹಾಗೂ ಕೇಂದ್ರ ವಲಯದಿಂದ ರೂ.100.00 ಲಕ್ಷ ಒಟ್ಟಾರೆಯಾಗಿ ರೂ.1178.68 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ರೂ.551.58 ಲಕ್ಷ ಅನುದಾನ ಖರ್ಚಾಗಿ, 46.80% ಸಾಧನೆಯಾಗಿರುತ್ತದೆಂದು ತಿಳಿಸಿದರು. ಮುಂದುವರೆದು ಇನ್ನು NRDWP SDP ಯೋಜನೆ ಅಡಿಯಲ್ಲಿ 73 ಮುಂದುವರೆದ ಕಾಮಗಾರಿಗಳು ಹಾಗೂ 132 ಹೊಸ ಕಾಮಗಾರಿಗಳು ಒಟ್ಟಾಗಿ 205 ಕಾಮಗಾರಿಗಳಲ್ಲಿ 64 ಕಾಮಗಾರಿಗಳು ಮುಗಿದಿರುತ್ತವೆ. ಸದರಿ ಕಾಮಗಾರಿಗಳಲ್ಲಿ 81 ಹೊಸ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದೆ. ಮತ್ತು 15 ಕಾಮಗಾರಿಗಳಿಗೆ LOA ನೀಡಲಾಗಿದೆ. ಮುಂದಿನ 15 ದಿವಸಗಳಲ್ಲಿ ಎಲ್ಲಾ ಮುಂದುವರೆದ ಕಾಮಗಾರಿಗಳು ಮುಗಿಯುತ್ತವೆ. ಇನ್ನು RO Plant ನ 202 ಕಾಮಗಾರಿಗಳಲ್ಲಿ 176 ಕಾಮಗಾರಿಗಳು ಮುಗಿದಿರುತ್ತವೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಹುಮನಾಬಾದ ತಾಲ್ಲೂಕಿನಲ್ಲಿ ತಾವು ಅಳವಡಿಕೆ ಮಾಡಿದ RO Plant ಗಳನ್ನು ಪರೀಶಿಲನೆ ಮಾಡಲಾಗಿದೆ. ಸದರಿ ಘಟಕಗಳನ್ನು ಯಾರು ನೋಡಿಕೊಳ್ಳುತ್ತಿಲ್ಲ. ನೀರಿನ ಗುಣಮಟ್ಟವನ್ನು ಪರೀಕ್ಷೆ ಯಾರು ಮಾಡುತ್ತಿಲ್ಲ. ಎಷ್ಟು ಜನ ಸದರಿ ಘಟಕದಿಂದ ನೀರು ತೆಗೆದುಕೊಳ್ಳುತ್ತಿದ್ದರೆಂಬ ವರದಿ ಇಲ್ಲ ಎಂಬ ವಿಷಯಗಳು ಇಲಾಖಾಧಿಕಾರಿಯವರಿಗೆ ಕೇಳಿದಾಗ, ಇಲಾಖಾಧಿಕಾರಿಯವರು ಮಾತನಾಡಿ, RO Plant ಗಳ ನೀರಿನ ಗುಣಮಟ್ಟ ಪರಿಶೀಲನೆ ಮಾಡುವ ಸಲುವಾಗಿ ಟೆಂಡರ್ ಕರೆಯಲಾಗಿದೆ. ಇನ್ನು ನೀರಿನ ಗುಣಮಟ್ಟವನ್ನು ವರ್ಷದಲ್ಲಿ ಎರಡು ಸಾರಿ ಪರಿಶೀಲನೆ ಮಾಡಲಾಗುತ್ತಿದೆ. ಸದರಿ ಘಟಕಗಳ ನಿರ್ವಹಣೆಗಾಗಿ ಗ್ರಾಮ ಪಂಚಾಯತಿಗಳಿಗೆ ಹಸ್ತಾಂತರ ಮಾಡಲಾಗಿದೆ ಎಂದು ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಸದರಿ ಘಟಕಗಳಿಂದ ಎಷ್ಟು ಜನರು ನೀರು ತೆಗೆದುಕೊಳ್ಳುತ್ತಿದ್ದಾರೆ. ಸದರಿ ಘಟಕದ ನೀರಿನ ಗುಣಮಟ್ಟವನ್ನು ಯಾವಾಗ ಪರಿಶೀಲನೆ ಮಾಡಲಾಗಿದೆ, ಆ ಪರಿಶೀಲನೆಯ ಫಲಿತಾಂಶ ಏನಿದೆ, ಮತ್ತು ಮುಂದೆ ಯಾವಾಗ ಪರೀಶಿಲನೆ ಮಾಡಬೇಕು ಎನ್ನುವ ಬಗ್ಗೆ ಒಂದು ರಜಿಸ್ಟರ್ ಇಟ್ಟು ದಾಖಲಾತಿಗಳನ್ನು ನಿರ್ವಹಣೆ ಮಾಡಬೇಕೆಂದು, ಇಲಾಖಾಧಿಕಾರಿಯವರಿಗೆ ಸೂಚಿಸಿದರು.

(ಕ್ರಮ: ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಬೀದರ)

<u>ವಿಷಯ ಸಂಖ್ಯೆ: 16. **KKRDB**:-</u>

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, KKRDB ಯೋಜನೆ ಅಡಿಯಲ್ಲಿ ಯಾವ ವರ್ಷದಿಂದ ಎಷ್ಟು ಕಾಮಗಾರಿಗಳು ಬಾಕಿ ಇವೆ ಎಂದು ಸಂಬಂದಪಟ್ಟ ಅಧಿಕಾರಿಯವರಿಗೆ ಕೇಳಿದರು. ಸಂಬಂಧಪಟ್ಟ ಅಧಿಕಾರಿಯವರು ಮಾತನಾಡಿ, 2015–16ನೇ ಸಾಲಿನ 23 RO Plant ಕಾಮಗಾರಿಗಳನ್ನು RWS ರವರಿಗೆ ಕೊಡಲಾಗಿತ್ತು. ಸದರಿ ಕಾಮಗಾರಿಗಳಲ್ಲಿ 2 ಕಾಮಗಾರಿಗಳು ಬಾಕಿ ಇದ್ದು, ಸದರಿಯವರು ಬೆಸ್‌ಮೆಂಟವರೆಗೆ ಕೆಲಸ ಮುಗಿಸಿರುತ್ತಾರೆ. ಇನ್ನು ಸದರಿ ಕಾಮಗಾರಿಯ ಬಾಕಿ ಕೆಲಸವನ್ನು ಲ್ಯಾಂಡ ಆರ್ಮಿಯವರಿಗೆ ಕೊಡಲಾಗಿರುತ್ತದೆ. ಲ್ಯಾಂಡ ಆರ್ಮಿಯವರು 23 ಕಾಮಗಾರಿಗಳಲ್ಲಿ 21 ಕಾಮಗಾರಿಗಳನ್ನು ಮುಗಿಸಿರುತ್ತಾರೆಂದು ತಿಳಿಸಿದರು. ಲ್ಯಾಂಡ ಆರ್ಮಿಗೆ ಸಂಬಂಧಪಟ್ಟ ಅಧಿಕಾರಿಯವರು ಮಾತನಾಡಿ, ತಮಗೆ ವಹಿಸಿದ ಕೆಲಸವನ್ನು ಸಂಪೂರ್ಣವಾಗಿ ಮುಗಿಸಿರುತ್ತೇವೆ. ಇನ್ನು KKRDB ಯವರು ಸದರಿ RO Plant Commission ಮಾಡಬೇಕೆಂದು ತಿಳಿಸಿ, ಸದರಿ ಎರಡು RO Plant ಕಾಮಗಾರಿಗಳನ್ನು ರದ್ದುಪಡಿಸಲು ಪತ್ರ ಬರೆಯಲಾಗಿದೆ ಎಂದು ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಸದರಿ ಎರಡು ಕಾಮಗಾರಿಗಳನ್ನು ರದ್ದುಪಡಿಸಿ, 2015–16ನೇ ಸಾಲಿನ ಕಾಮಗಾರಿಗಳನ್ನು ಮುಕ್ತಾಯಗೊಳಿಸಿ ಎಂದು ಸಂಬಂಧಪಟ್ಟ ಅಧಿಕಾರಿಯವರಿಗೆ ತಿಳಿಸಿದರು.

ಮುಂದುವರೆದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, 2016–17ನೇ ಸಾಲಿನ ಎಷ್ಟು ಕಾಮಗಾರಿಗಳು ಬಾಕಿ ಇವೆ ಎಂದು ಸಂಬಂಧಪಟ್ಟ ಅಧಿಕಾರಿಯವರಿಗೆ ಕೇಳಿದರು. ಸಂಬಂಧಪಟ್ಟ ಅಧಿಕಾಯವರು ಮಾತನಾಡಿ, 2016–17ನೇ ಸಾಲಿನ 10 ಕಟ್ಟಡ ಕಾಮಗಾರಿಗಳು ಬಾಕಿ ಇದ್ದು, ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್ ರವರು ಅನುಷ್ಠಾನ ಮಾಡುತ್ತಿದ್ದಾರೆಂದು ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಸದರಿ ಬಾಕಿ ಕಾಮಗಾರಿಯನ್ನು ಯಾವಾಗ ಮುಗಿಸುತ್ತೀರೆಂದು ಲ್ಯಾಂಡ್ ಆರ್ಮಿಯ ಅಧಿಕಾರಿಯವರಿಗೆ ಕೇಳಿದರು. ಲ್ಯಾಂಡ ಆರ್ಮಿಗೆ ಸಂಬಂಧಪಟ್ಟ ಅಧಿಕಾರಿಯವರು ಮಾತನಾಡಿ, ಸದರಿ ಕಾಮಗಾರಿಗಳು ಹಾಸ್ಟಲ್ ಕಾಮಗಾರಿಗಳಾಗಿದ್ದು, ಏಪ್ರಿಲ್ 2020ಕ್ಕೆ ಎಲ್ಲಾ ಕಾಮಗಾರಿಗಳು ಮುಗಿಸುವುದಾಗಿ ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಸದರಿ ಬಾಕಿ ಕಾಮಗಾರಿಗಳನ್ನು ಏಪ್ರಿಲ್ 2020ಕ್ಕೆ ಮುಗಿಸಿದ ನಂತರ 2016–17ನೇ ಸಾಲಿನ ಕಾಮಗಾರಿಗಳು ಮುಕ್ತಾಯಗೊಳಿಸಿ ಎಂದು ಸಂಬಂಧಪಟ್ಟ ಅಧಿಕಾರಿಯವರಿಗೆ ತಿಳಿಸಿದರು. KKRDB ಗೆ ಸಂಬಂಧಪಟ್ಟ ಅಧಿಕಾರಿಯವರು ಮಾತನಾಡಿ, 2017–18 ಸಾಲಿನ 20 ಕಾಮಗಾರಿಗಳು ಬಾಕಿ ಇವೆ. ಅವುಗಳಲ್ಲಿ PWD -3, PRE -4 , PMGSY – 9, KRIDL- 4, ಕಾಮಗಾರಿಗಳು ಮಾಡಬೇಕಾಗಿರುತ್ತದೆಂದು ತಿಳಿಸಿ, ಇನ್ನು 2014–15 ರಿಂದ 2017–18 ರವರೆಗಿನ ಎಲ್ಲಾ ಬಾಕಿ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ತೆಗೆದುಕೊಂಡು, <u>ಮುಂದಿನ ಏಪ್ರಿಲ್ 2020</u>ರ ಒಳಗೆ ಮುಗಿಸುವುದಾಗಿ ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಸದರಿ ಬಾಕಿ ಕಾಮಗಾರಿಗಳನ್ನು ಏಪ್ರಿಲ್ 2020 ಕ್ಕೆ ಮುಗಿಸಿ, 2015–16ನೇ ಸಾಲಿನಿಂದ 2017–18 ರ ವರೆಗೆ ಎಲ್ಲಾ ಕಾಮಗಾರಿಗಳನ್ನು ಮುಕ್ತಾಯಗೊಳಿಸಬೇಕು, ಮತ್ತು 2018–19ನೇ ಹಾಗೂ 2019–20ನೇ ಸಾಲಿನ ಕಾಮಗಾರಿಗಳನ್ನು ಕುರಿತು Follow up ಮಾಡಿ ಎಂದು ಸಂಬಂಧಪಟ್ಟ ಅಧಿಕಾರಿಯವರಿಗೆ ಕಟ್ಟುನಿಟ್ಟಾಗಿ ಸೂಚಿಸಿದರು.

<u>(ಕ್ರಮ: ಜಿಲ್ಲಾಧಿಕಾರಿಗಳ ಕಚೇರಿ, ಕೆ.ಕೆ.ಆರ್.ಡಿ.ಬಿ., (ಕೋಶ) ಬೀದರ)</u>

**24x7 Water Supply:-**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, 24x7 ಕಾಮಗಾರಿಗಳು ಯಾವ ಹಂತದಲ್ಲಿವೆ ಎಂದು ಸಂಬಂಧಪಟ್ಟ ಅಧಿಕಾರಿಯವರಿಗೆ ಕೇಳಿದರು. AEE ರವರು ಮಾತನಾಡಿ, phase 1ರಲ್ಲಿ ಎಲ್ಲಾ ನಿರ್ಮಾಣ ಕಾಮಗಾರಿಗಳು ಮುಗಿದಿದ್ದು, Phase 2 ರಲ್ಲಿ ಸಣ್ಣಪುಟ್ಟ ರಿಪೇರಿ ಕಾಮಗಾರಿಗಳು ತೆಗೆದುಕೊಂಡು ಮುಗಿಸಲಾಗಿದ್ದು, ಇನ್ನು, Phase 3 ರಲ್ಲಿ ಸದರಿ ಕಾಮಗಾರಿಗಳ ನಿರ್ವಹಣೆ ಮಾಡುವ ಕೆಲಸ ನಡೆಯುತ್ತಿದೆ ಎಂದು ತಿಳಿಸಿದರು.

(ಕ್ರಮ: 24x7 Water Supply)

ವಿಷಯ ಸಂಖ್ಯೆ 17: ಸ್ವಚ್ಛ ಭಾರತ ಮಿಷನ್ [SBM]:-

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಸ್ವಚ್ಛ ಭಾರತ ಮಿಷನ್ ಯೋಜನೆ ಅಡಿಯಲ್ಲಿ ರಾಜ್ಯ ಮಟ್ಟದಲ್ಲಿ ಜಿಲ್ಲೆಯ ಪ್ರಗತಿಯು ಕೇವಲ 3.1% ಇದೆ ಎಂದು ಅಸಮಧಾನ ವ್ಯಕ್ತಪಡಿಸಿ, ಯಾಕೆ ಇಷ್ಟು ಕಡಿಮೆ ಪ್ರಗತಿಯಾಗಿರುತ್ತದೆಂದು ಸಂಬಂಧಪಟ್ಟ ಅಧಿಕಾರಿಯವರಿಗೆ ಕೇಳಿದರು. ಸಂಬಂಧಪಟ್ಟ ಅಧಿಕಾರಿಯವರು ಮಾತನಾಡಿ, ಜಿಲ್ಲೆಯ ಭಾಲ್ಕಿ ತಾಲ್ಲೂಕನ್ನು ಹೊರತುಪಡಿಸಿ, ಉಳಿದ ಎಲ್ಲಾ ತಾಲ್ಲೂಕುಗಳು ODF ಎಂದು ಘೋಷಣೆಯಾಗಿ, ಸದರಿ ತಾಲ್ಲೂಕುಗಳಲ್ಲಿ ಶೇಕಡಾ 90% ಆರ್ಥಿಕ ಸಾಧನೆಯಾಗಿರುತ್ತದೆಂದು ತಿಳಿಸಿದರು.

(ಕ್ರಮ:- ಸ್ವಚ್ಛ ಭಾರತ ಮಿಷನ್)

ವಿಷಯ ಸಂಖ್ಯೆ 17: ವಸತಿ ಶಾಖೆ:-

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ವಸತಿ ಯೋಜನೆಯಡಿ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ ಎಂದು ಸಂಬಂಧಪಟ್ಟ ಅಧಿಕಾರಿಯವರಿಗೆ ಕೇಳಿದರು. ಯೋಜನಾ ನಿರ್ದೇಶಕರು ಪ್ರಸ್ತುತ ವರ್ಷದಲ್ಲಿ ನಿವೇಶನ ಹಂಚಿಕೆಯ ಗುರಿ ಹೊಂದಲಾಗಿದ್ದು, ಇಲಾಖೆಯಲ್ಲಿ 40 ಎಕರೆ 20 ಗುಂಟೆ ಜಾಗ ಲಭ್ಯವಿದ್ದು, ಸದರಿ ಜಾಗದಲ್ಲಿ 21 ಎಕರ ಜಮೀನಿನಲ್ಲಿ 729 ನಿವೇಶನಗಳನ್ನಾಗಿ ವಿಂಗಡಿಸಿ, ವಿತರಣೆ ಮಾಡಲಾಗುತ್ತದೆಂದು ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ನಿವೇಶನ ಇದ್ದವರಿಗೆ ಮಾತ್ರ ಮನೆ ಕೊಡುತ್ತಾರೆ, ನಿವೇಶನ ಇಲ್ಲದವರಿಗೆ ಮನೆ ಕೊಡುತ್ತಿಲ್ಲ ಎಂದು ಹೇಳಿ, ಸದರಿ ನಿವೇಶನಗಳನ್ನು ಯಾವಾಗ ವಿತರಣೆ ಮಾಡುತ್ತೀರಿ ಎಂದು ಯೋಜನಾ ನಿರ್ದೇಶಕರಿಗೆ ಕೇಳಿದರು. ಯೋಜನಾ ನಿರ್ದೇಶಕರು ಮಾತನಾಡಿ, ಸದರಿ ನಿವೇಶನಗಳ ಹಂಚಿಕೆಗಾಗಿ ಗ್ರಾಮ ಪಂಚಾಯತಿಗಳಲ್ಲಿ ಸಭೆಗಳನ್ನು ಮಾಡಿ, ಫಲಾನುಭವಿಗಳನ್ನು ಆಯ್ಕೆ ಮಾಡಿ, ಅದರಲ್ಲಿ ಅರ್ಹರಾದವರಿಗೆ ಕೊಡಲಾಗುತ್ತದೆಂದು ತಿಳಿಸಿದರು. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಮಾತನಾಡಿ, ಸದರಿ ವಿಷಯದ ಕುರಿತು ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಿ ಎಂದು ಯೋಜನಾ ನಿರ್ದೇಶಕರಿಗೆ ತಿಳಿಸಿದರು.

(ಕ್ರಮ:- ವಸತಿ ಶಾಖೆ ಜಿ.ಪಂ.)

**MLA Lad :-**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, MLA Lad ಯೋಜನೆ ಅಡಿಯಲ್ಲಿ Expenditure ನಲ್ಲಿ ಜಿಲ್ಲೆಯು ಯಾವ ಸ್ಥಾನದಲ್ಲಿದೆ ಎಂದು ಸಂಬಂಧಪಟ್ಟ ಅಧಿಕಾರಿಯವರಿಗೆ ಕೇಳಿದರು. ಸಂಬಂಧಪಟ್ಟ ಅಧಿಕಾರಿಯವರು ಮಾತನಾಡಿ, ಸದರಿ ಯೋಜನೆ ಅಡಿಯಲ್ಲಿ Expenditure ನಲ್ಲಿ ಜಿಲ್ಲೆಯು 14ನೇ ರ್‍ಯಾಂಕ್ ಸ್ಥಾನದಲ್ಲಿದೆ. ಇನ್ನು 2013–14 ರಿಂದ 2019–20ನೇ ಸಾಲಿಗಾಗಿ ರೂ.145.00 ಕೋಟಿ ಅನುದಾನ ಮಂಜೂರಾಗಿತ್ತು. ಅದರಲ್ಲಿ ರೂ. 94 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಇದರಲ್ಲಿ ರೂ.87.00 ಕೋಟಿ ಅನುದಾನಕ್ಕೆ ಆಡಳಿತಾತ್ಮಕ ಅನುಮೋದನೆ ಪಡೆದು, ಅನುದಾನವನ್ನು ಖರ್ಚು ಮಾಡಲಾಗಿರುತ್ತದೆ. ಮತ್ತೆ ರೂ.7.00 ಕೋಟಿ ಅನುದಾನಕ್ಕೆ ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಲಾಗಿದೆ. ಇನ್ನು ಅನುಷ್ಠಾನ ಇಲಾಖೆಯಿಂದ ರೂ.10.00 ಕೋಟಿ ಬರಬೇಕಾಗಿರುತ್ತದೆ ಎಂದು ತಿಳಿಸಿ, ಇನ್ನು ಒಟ್ಟಾರೆಯಾಗಿ PD ಯವರ ಖಾತೆಯಲ್ಲಿ ರೂ.33.3 ಕೋಟಿ ಅನುದಾನ ದಿನಾಂಕ:01.04.2019 ರಿಂದ ಜಮೆ ಇದ್ದು, ಅದರಲ್ಲಿ ರೂ.17.37 ಕೋಟಿ ಅನುದಾನ ಖರ್ಚು ಮಾಡಲಾಗಿರುತ್ತದೆ. ಇನ್ನು ಡಿಸೆಂಬರ ಅಂತ್ಯಕ್ಕೆ ರೂ.15.66 ಕೋಟಿ ಅನುದಾನ ಸದರಿಯವರ ಖಾತೆಯಲ್ಲಿ ಬಾಕಿ ಇರುತ್ತದೆಂದು ತಿಳಿಸಿದರು.

ಜಿಲ್ಲಾಧಿಕಾರಿಯವರು ಮಾತನಾಡಿ, ಬೇರೆ ಬೇರೆ ಬ್ಯಾಂಕ್‌ಗಳಿಗೆ ಅನುದಾನ ಬರುವುದರಿಂದ ಸದರಿ ಅನುದಾನವನ್ನು ನೋಡಿಕೊಳ್ಳಲು ಹಾಗೂ ಖರ್ಚುವೆಚ್ಚಗಳನ್ನು ನಿರ್ವಹಣೆ ಮಾಡಲು ಎಲ್ಲಾ ಕಛೇರಿಗಳಲ್ಲಿ ಒಬ್ಬ ಅಕೌಂಟ್ಸ್ ಅಧಿಕಾರಿಯನ್ನು ನೇಮಕ ಮಾಡಿಬೇಕೆಂಬ ಅಭಿಪ್ರಾಯವನ್ನು ಸಭೆಯಲ್ಲಿ ವ್ಯಕ್ತಪಡಿಸಿ, ಸದರಿ ವಿಷಯದ ಕುರಿತು ಪ್ರಸ್ತಾವನೆ ಸಲ್ಲಿಸುವುದಾಗಿ, ಸದರಿ ಪ್ರಸ್ತಾವನೆಗೆ ಮಂಜೂರಾತಿ ಮಾಡಿಸಿಕೊಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರಿಗೆ ಹೇಳಿದರು.

<u>(ಕ್ರಮ: ಜಿಲ್ಲಾಧಿಕಾರಿಗಳ ಕಛೇರಿ, **MLA Lad Section** ವಿಭಾಗ)</u>

**MP Lad :-**

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, MP Lad ಯೋಜನೆ ಅಡಿಯಲ್ಲಿ Expenditure ನಲ್ಲಿ ಜಿಲ್ಲೆಯು ಯಾವ ಸ್ಥಾನದಲ್ಲಿದೆ ಎಂದು ಸಂಬಂಧಪಟ್ಟ ಅಧಿಕಾರಿಯವರಿಗೆ ಕೇಳಿದರು. 16th LS ನಲ್ಲಿ 10 ಕಂತುಗಳಲ್ಲಿ ಅನುದಾನ ಬಿಡುಗಡೆಯಾಗಬೇಕಾಗಿತ್ತು. ಅದರಲ್ಲಿ 9 ಕಂತುಗಳ ಹಣ ಬಿಡುಗಡೆಯಾಗಿದ್ದು, ಇನ್ನು 1 ಕಂತಿನ ಹಣ ಬರಬೇಕಾಗಿರುತ್ತದೆ. ಸದರಿ ಕಂತುಗಳಲ್ಲಿ ರೂ.25.00 ಕೋಟಿ ಅನುದಾನ ಮಂಜೂರಾಗಿದ್ದು, ಅದರಲ್ಲಿ ರೂ. 24.00 ಕೋಟಿ ಅನುದಾನಕ್ಕೆ ಕ್ರಿಯಾ ಯೋಜನೆ ತಯ್ಯಾರಿಸಿ, ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿದ್ದು, ಸದರಿ ಅನುದಾನದಲ್ಲಿ ರೂ. 21.57 ಕೋಟಿ ಅನುದಾನ ಖರ್ಚಾಗಿರುತ್ತದೆ.ಇನ್ನು Impliment Agency ಯಿಂದ ರೂ.3.00 ಕೋಟಿ ಅನುದಾನ ಬರಬೇಕಾಗಿರುತ್ತದೆಂದು ತಿಳಿಸಿ, ಇನ್ನು 17th LS ನಲ್ಲಿ ಮೊದಲನೆ ಕಂತಿನ ಹಣ ಬಿಡುಗಡೆಯಾಗಿದ್ದು, ಅದರಲ್ಲಿ ಕ್ರಿಯಾ ಯೋಜನೆ ತಯ್ಯಾರಿಸಿ, ಆಡಳಿತಾತ್ಮಕ ಅನುಮೋದನೆ ಪಡೆದು, ಇಲ್ಲಿಯವರೆಗೆ ರೂ.1.50 ಕೋಟಿ ಅನುದಾನ ಖರ್ಚಾಗಿರುತ್ತದೆಂದು ಸಭೆಯಲ್ಲಿ ತಿಳಿಸಿದರು.

ಜಿಲ್ಲಾಧಿಕಾರಿಯವರು ಮಾತನಾಡಿ, MLA and MP Lad ಯೋಜನೆ ಅಡಿಯಲ್ಲಿ 2013–14 ರಿಂದ Implimeting Agency ಯವರಾದ PRED and PWD ಯವರಿಂದ ಸುಮಾರು 650 ಕಾಮಗಾರಿಗಳ Estimate ಬರಬೇಕಾಗಿರುತ್ತದೆ. ಸದರಿ ವಿಷಯದ ಕುರಿತು ಈಗಾಗಲೇ ಅವರಿಗೆ ನೋಟಿಸ್ ಕೂಡ ಕೊಡಲಾಗಿದೆ. ಆದರೂ Estimate ಗಳನ್ನು ಸಲ್ಲಿಸಿರುವುದಿಲ್ಲ ಎಂಬ ವಿಷಯವನ್ನು ಜಿಲ್ಲಾ ಉಸ್ತುವಾರಿ

ಕಾರ್ಯದರ್ಶಿಯವರ ಗಮನಕ್ಕೆ ತಂದು. PRED ರವರು ಎಲ್ಲಾ ತಾಲ್ಲೂಕುಗಳು ಸೇರಿದಂತೆ ಒಟ್ಟು MLA Lad ನ 228 ಹಾಗೂ MP ladನ 412 Estimate ಗಳನ್ನು ಸಲ್ಲಿಸಬೇಕಾಗಿರುತ್ತದೆಂದು ತಿಳಿಸಿ, ಸದರಿ Estimate ಗಳನ್ನು ಯಾವಾಗ ಸಲ್ಲಿಸುತ್ತೀರೆಂದು PRED ಗೆ ಸಂಬಂಧಪಟ್ಟ ಅಧಿಕಾರಿಯವರಿಗೆ ಕೇಳಿದರು. PRED ಗೆ ಸಂಬಂಧಪಟ್ಟ ಅಧಿಕಾರಿಯವರು ಮಾತನಾಡಿ, ಸದರಿ ವಿಷಯದ ಕುರಿತು ಎಲ್ಲಾ ತಾಲ್ಲೂಕಿನ AEE ರವರ ಸಭೆ ಕರೆದು, ಆದಷ್ಟು ಬೇಗ Estimate ಗಳನ್ನು ಸಲ್ಲಿಸಲು ನಿರ್ದೇಶನ ನೀಡಲಾಗಿದ್ದು, ಈ ತಿಂಗಳಲ್ಲಿ ಎಲ್ಲಾ Estimate ಗಳನ್ನು ಸಲ್ಲಿಸುವುದಾಗಿ ತಿಳಿಸಿದರು. ಜಿಲ್ಲಾಧಿಕಾರಿಯವರು ಮಾತನಾಡಿ, PRED ರವರು ಬಿಲ್ಲಗಳನ್ನು ಸರಿಯಾದ ರೀತಿಯಲ್ಲಿ ಸಲ್ಲಿಸುತ್ತಿಲ್ಲ. ಈ ರೀತಿಯಾದರೆ ಮುಂದೆ ಸದರಿ ಬಿಲ್ಲುಗಳನ್ನು ತಿರಸ್ಕಾರ ಮಾಡುವುದಾಗಿ PRED ರವರಿಗೆ ಎಚ್ಚರಿಕೆ ನೀಡಿದರು.

<u>(ಕ್ರಮ: ಜಿಲ್ಲಾಧಿಕಾರಿಗಳ ಕಚೇರಿ, MP Lad Section Bidar, PRED ZP & PWD ಬೀದರ)</u>

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಡಾ॥ ಇ.ವಿ. ರಮಣ ರೆಡ್ಡಿ,)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ.

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಪ್ರತೀ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ

### -:ಮೈಸೂರು ಜಿಲ್ಲೆ:-

| ಕ್ರ. ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ಮೈಸೂರು |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ|| ಜಿ. ಕಲ್ಪನ, ಭಾ.ಆ.ಸೇ., |
| 3 | ಭೇಟಿಯಾದ / ಪ್ರವಾಸದ ದಿನಾಂಕ | 02-01-2020 ರಿಂದ 03-01-2020 ರವರೆಗೆ |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | • ದಿನಾಂಕ 02-01-2020 ರಂದು ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕು ಬನ್ನೂರು ಪಟ್ಟಣದಲ್ಲಿನ ಫುಟ್‌ಬಾಲ್ ಕ್ರೀಡಾಂಗಣಕ್ಕೆ ಭೇಟಿ ನೀಡಲಾಯಿತು. ಸದರಿ ಫುಟ್‌ಬಾಲ್ ಮೈದಾನದಲ್ಲಿ ಅಭಿವೃದ್ಧಿ ಕಾಮಗಾರಿಗಳು ವಿಳಂಬವಾಗಿರುವುದು ಕಂಡುಬಂದಿದ್ದು, ಈ ಕುರಿತು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಕರ್ನಾಟಕ ಗ್ರಾಮೀಣ ಮೂಲಭೂತ ಅಭಿವೃದ್ಧಿ ನಿಗಮದ ಅಧಿಕಾರಿಗಳಿಗೆ ಮತ್ತು ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈಸೂರು ಜಿಲ್ಲೆ, ಇವರಿಗೆ ಮಾರ್ಗದರ್ಶನ ನೀಡಲಾಯಿತು. ಕ್ರೀಡಾಂಗಣ ನಿರ್ಮಾಣ/ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಂಡು ನಾಲ್ಕು ತಿಂಗಳ ಒಳಗಾಗಿ ಪೂರ್ಣಗೊಳಿಸುವಂತೆ ನಿರ್ದೇಶನ ನೀಡಲಾಯಿತು.<br>• ದಿನಾಂಕ 03-01-2020 ರಂದು ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಮೈಸೂರು ಜಿಲ್ಲಾ ಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ 2019-20 ರ ಉದ್ಘಾಟನಾ ಸಮಾರಂಭದಲ್ಲಿ ಮಾನ್ಯ ವಸತಿ ರೇಷ್ಮೆ ಮತ್ತು ತೋಟಗಾರಿಕೆ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರು, ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಮಾನ್ಯ ಸಂಸದರು, ಮೈಸೂರಿನ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರುಗಳು ಮತ್ತು ಇತರೆ ಗಣ್ಯ ವ್ಯಕ್ತಿಗಳೊಂದಿಗೆ ಭಾಗವಹಿಸಲಾಯಿತು.<br>• ದಿನಾಂಕ 03-01-2020 ರಂದು ಮಾನ್ಯ ವಸತಿ ರೇಷ್ಮೆ ಮತ್ತು ತೋಟಗಾರಿಕೆ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ್ ಸಭಾ ಭವನದಲ್ಲಿ ನಡೆದ ತ್ರೈಮಾಸಿಕ ಕೆಡಿಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಮಾನ್ಯ ಸಂಸದರು, ಮೈಸೂರಿನ ಎಲ್ಲಾ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರುಗಳು ಮತ್ತು ಇತರೆ ಗಣ್ಯ ವ್ಯಕ್ತಿಗಳೊಂದಿಗೆ ಭಾಗವಹಿಸಲಾಯಿತು.<br>• ಭಾಗವಹಿಸಲಾಯಿತು. ಸದರಿ ಸಭೆಯಲ್ಲಿ ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ವಯಸ್ಕರ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮೈಸೂರು ವೈದ್ಯಕೀಯ ಕಾಲೇಜು, ಆಯುಷ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಡಾ: ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ವಾಲ್ಮೀಕಿ ಮಹರ್ಷಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಡಿ.ದೇವರಾಜ್ ಅರಸು ಅಭಿವೃದ್ಧಿ ನಿಗಮ, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಸಾಮಾಜಿಕ ಅರಣ್ಯ, ಮೈಸೂರು ಪ್ರಾದೇಶಿಕ ಅರಣ್ಯ ವಿಭಾಗ, ಮೈಸೂರು ವನ್ಯಜೀವಿ ವಿಭಾಗ, ಸಮಾಜ ಕಲ್ಯಾಣ ಇಲಾಖೆ, |

| | | |
|---|---|---|
| | | ಮೈಸೂರು ಹಾಲು ಒಕ್ಕೂಟ, ಮೀನುಗಾರಿಕೆ ಇಲಾಖೆ, ಸಹಕಾರ, ಇಲಾಖೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಖಾದಿ ಮತ್ತು ಗ್ರಾಮೋದ್ಯೋಗ ವಿಭಾಗ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಸಾರ್ವಜನಿಕ ಗ್ರಂಥಾಲಯ (ನಗರ), ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಇತರೆ ಇಲಾಖೆಗಳ ಪ್ರಗತಿ ಪರಿಶೀಲನೆಯನ್ನು ವಿಮರ್ಶಿಸಲಾಯಿತು.<br>• ಸದರಿ ಸಭೆಯಲ್ಲಿ ಮಳೆಯಿಂದ ಹಾನಿಯಾದ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳ ಪುನರ್ ನಿರ್ಮಾಣ ಕಾಮಗಾರಿಗಳನ್ನು ಕೈಗೊಂಡು ಅಗತ್ಯ ಕ್ರಮವಹಿಸುವಂತೆ ತೀರ್ಮಾನಿಸಲಾಯಿತು.<br>• ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯಡಿ ಉದ್ಯೋಗ ನೀಡಿದ ಕುರಿತು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿ ಅಗತ್ಯ ಕ್ರಮವಹಿಸುವಂತೆ ತೀರ್ಮಾನಿಸಲಾಯಿತು.<br>• ಸ್ವಚ್ಛ ಭಾರತ ಅಭಿಯಾನದಡಿಯಲ್ಲಿ ತ್ಯಾಜ್ಯ ನಿರ್ವಹಣೆಗಾಗಿ ಸಂಸ್ಕರಣಾ ಘಟಕ ಸ್ಥಾಪಿಸುವ ಕುರಿತು ಚರ್ಚಿಸಿ ಕ್ರಮವಹಿಸುವಂತೆ ಸಭೆಯಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಲಾಯಿತು.<br>• ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನವನ್ನು ಒದಗಿಸುವ ಕುರಿತು ಚರ್ಚಿಸಲಾಯಿತು ಹಾಗೂ ತೀವ್ರತರವಾದ ದೈಹಿಕ ವಿಕಲಚೇತನರಿಗೆ ಚಾಲನಾ ಪರವಾನಗಿ ನೀಡಲು ವಿಧಿಸಿರುವ ಕೆಲವು ಷರತ್ತುಗಳನ್ನು ಸರಳೀಕರಣಗೊಳಿಸುವ ಬಗ್ಗೆ ಕ್ರಮವಹಿಸುವಂತೆ ತೀರ್ಮಾನಿಸಲಾಯಿತು.<br>• ಬಹುಗ್ರಾಮಗಳ ಕುಡಿಯುವ ನೀರು ಯೋಜನೆ ಪ್ರಗತಿಯ ಬಗ್ಗೆ ಪರಾಮರ್ಶಿಸಲಾಯಿತು. ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ಕೂಡಲೇ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು. |

Kalpana.G

(ಡಾ: ಜಿ/ಕಲ್ಪನ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

**ದಿನಾಂಕ 06-01-2020 ರಂದು ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಜಿಲ್ಲೆಗೆ ಭೇಟಿ ನೀಡಿರುವ ಕುರಿತು ವರದಿ**

ದಿನಾಂಕ 06-01-2020 ರಂದು ಮಧ್ಯಾಹ್ನ 3:00 ಗಂಟೆಗೆ ನಾನು ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಜಿಲ್ಲೆಗೆ ಭೇಟಿ ನೀಡಿರುತ್ತೇನೆ. ಜಿಲ್ಲೆಯಲ್ಲಿ ವಿವಿಧ ಅಭಿವೃದ್ಧಿ ವಿಷಯಗಳ ಕುರಿತು ಪ್ರಾದೇಶಿಕ ಆಯುಕ್ತರು, ಜಿಲ್ಲಾಧಿಕಾರಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಅಪರ ಜಿಲ್ಲಾಧಿಕಾರಿ, ಅಪರ ಜಿಲ್ಲಾಧಿಕಾರಿ (ವಿಪತ್ತು ನಿರ್ವಹಣೆ) ಮತ್ತು ವ್ಯವಸ್ಥಾಪಕ ನಿರ್ದೇಶಕರು, ಬೆಳಗಾವಿ ಸ್ಮಾರ್ಟ್ ಸಿಟಿ ಲಿ., ಇವರುಗಳೊಂದಿಗೆ ಚರ್ಚಿಸಿರುತ್ತೇನೆ.

ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಪ್ರವಾಹಕ್ಕೆ ಒಳಗಾದ ಪ್ರದೇಶದ ಜನರಿಗೆ ಪ್ರವಾಹ ಪರಿಹಾರ ಕಾಮಗಾರಿಗಳ ಪ್ರಗತಿ ಪರಿಶೀಲನೆ ಮಾಡಲು ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯನ್ನು ತೆಗೆದುಕೊಂಡಿರುತ್ತೇನೆ. ಸದರಿ ಸಭೆಯಲ್ಲಿ 14 ತಾಲ್ಲೂಕುಗಳ ತಹಶೀಲ್ದಾರರುಗಳೊಂದಿಗೆ ವಿಡಿಯೋ ಸಂವಾದದ ಮೂಲಕ ಚರ್ಚಿಸಲಾಗಿರುತ್ತದೆ. ಚರ್ಚೆಯ ಸಂದರ್ಭದಲ್ಲಿ ಈ ಕೆಳಕಂಡ ಮುಖ್ಯ ಅಂಶಗಳು ಕಂಡು ಬಂದಿವೆ;

1) ಪ್ರವಾಹದಿಂದ ಹಾನಿಯಾದ ಮನೆಗಳ ನಿರ್ಮಾಣದ ಪ್ರಗತಿ ಕುಂಠಿತವಾಗಿದೆ. ಮನೆಗಳನ್ನು ಕಳೆದುಕೊಂಡವರ ವಿವರಗಳನ್ನು ಅನುಮೋದಿಸಿ ಅಪ್‌ಲೋಡ್ ಮಾಡಲಾಗಿರುತ್ತದೆ. ಎಲ್ಲರಿಗೂ ಒಂದು ಕಂತು ಹಣ ಕೂಡಾ ಪಾವತಿ ಮಾಡಲಾಗಿದೆ. ಆದರೆ, ಮನೆಗಳ ನಿರ್ಮಾಣದ ಪ್ರಗತಿ ತುಂಬಾ ನಿಧಾನವಾಗಿದೆ. ಅದಕ್ಕೆ ಕಾರಣಗಳು ಈ ಕೆಳಕಂಡಂತಿದೆ;

ಎ) ಶೇ 25ಕ್ಕಿಂತಲೂ ಹೆಚ್ಚು ಹಾನಿಗಳಿಗೂ ರೂ.5 ಲಕ್ಷ ಪರಿಹಾರವನ್ನು ಮಂಜೂರು ಮಾಡಲಾಗಿದೆ. ಆದರೆ, ಫಲಾನುಭವಿಗಳು ತಮ್ಮ ಮನೆಗಳು ಸಂಪೂರ್ಣವಾಗಿ ಕೆಡವಲು ಹಿಂಜರಿಯುತ್ತಿದ್ದಾರೆ. ಸಂಪೂರ್ಣವಾಗಿ ಮನೆಯನ್ನು ಕೆಡವದಿದ್ದರೆ ಪರಿಹಾರ ಮೊತ್ತ ರೂ.5 ಲಕ್ಷಗಳನ್ನು ನೀಡಲು ಸಾಧ್ಯವಿಲ್ಲವೆಂದು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಸೂಚಿಸಿದೆ. ಇದರಿಂದಾಗಿ ಮನೆ ನಿರ್ಮಾಣದ ಪ್ರಗತಿ ಕುಂಠಿತವಾಗಿದೆ;

ಬಿ) ಕೆಲವು ಫಲಾನುಭವಿಗಳು ಸಂಪೂರ್ಣವಾಗಿ ಮನೆ ಬಿದ್ದಿರುವ ನಿವೇಶನವನ್ನು ಬಿಟ್ಟು ತಮ್ಮದೇ ಆದ ಬೇರೆ ನಿವೇಶನದಲ್ಲಿ ಮನೆಯನ್ನು ಕಟ್ಟಲು ಅನುಮೋದನೆ ಕೇಳುತ್ತಿದ್ದಾರೆ. ಇದಕ್ಕೆ ಅನುಮೋದನೆ ವಸತಿ ಇಲಾಖೆಯಿಂದ ಬರುವುದು ಬಾಕಿ ಇರುತ್ತದೆ.

ಸಿ) ಅಥಣಿ ತಾಲ್ಲೂಕಿನ 18 ಗ್ರಾಮಗಳು ನೀರಾವರಿ ಇಲಾಖಾ ವತಿಯಿಂದ ಪುನರ್ ವಸತಿಗೆ ಒಳಗಾಗಿದ್ದರೂ ಅವರಿಗೆ ಪರ್ಯಾಯ ನಿವೇಶನ ದೊರೆಯದ ಕಾರಣ ಅವರು ಹೋಗಿರುವುದಿಲ್ಲ. ಈ 18 ಗ್ರಾಮಗಳಲ್ಲಿ ಮನೆಗಳು ಸಂಪೂರ್ಣವಾಗಿ ನಾಶವಾಗಿರುವ ಪ್ರಕರಣಗಳಲ್ಲಿ ಹಾಲಿ ನೀಡಿರುವ ನಿವೇಶನಗಳ ಬದಲು ಬೇರೆ ಕಡೆ ನಿವೇಶನ ನೀಡುವಂತೆ ಬೇಡಿಕೆ ಮಾಡುತ್ತಿದ್ದು ಯಾವುದೇ ಕೆಲಸ ಪ್ರಾರಂಭವಾಗಿರುವುದಿಲ್ಲ.

2) ನಾಲ್ಕು ಸಾವಿರ ಪ್ರಕರಣಗಳಲ್ಲಿ ಟಿನ್ ಶೆಡ್/ಗುಡಿಸಲುಗಳು ಸಂಪೂರ್ಣವಾಗಿ ನಾಶವಾದ ಪ್ರಕರಣಗಳಲ್ಲಿ ಹೆಚ್ಚಿನ ಪರಿಹಾರದ ಬೇಡಿಕೆ ಇರುತ್ತದೆ.

3) 9,187 ಪ್ರಕರಣಗಳಲ್ಲಿ ಮನೆ ಹಾನಿಯಾದ ವಿವರಗಳನ್ನು ಅಪ್‌ಲೋಡ್ ಮಾಡಲು ಬಾಕಿ ಇತ್ತು. ಆದರೆ ಆಗಸ್ಟ್ ತಿಂಗಳಲ್ಲಿ ಹಾನಿಗೊಳಗಾದ ಮನೆಗಳ ವಿವರಗಳನ್ನು ಅನುಮೋದನೆಗಾಗಿ ತಂತ್ರಾಂಶದಲ್ಲಿ ಅಪ್‌ಲೋಡ್ ಮಾಡಲು ಈಗ ಅನುಮತಿ ಇರುವುದಿಲ್ಲ. ಆಗಸ್ಟ್ ತಿಂಗಳ ಪ್ರವಾಹದ ಪರಿಣಾಮವಾಗಿ ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳಲ್ಲಿ ಬಿದ್ದ ಮನೆಗಳ ವಿವರಗಳನ್ನು ಅಪ್‌ಲೋಡ್ ಮಾಡಲು ಜಿಲ್ಲಾಡಳಿತ ಅನುಮತಿ ಕೋರಿದೆ. ಈ ಪ್ರಸ್ತಾವನೆ ವಸತಿ ಇಲಾಖೆಯಲ್ಲಿ ಬಾಕಿ ಇರುತ್ತದೆ. ವಸತಿ ಇಲಾಖೆಯ ಕಾರ್ಯದರ್ಶಿಗಳು ಇದನ್ನು ಆರ್ಥಿಕ ಇಲಾಖೆಗೆ ಸಹಮತಿಗಾಗಿ ಕಳುಹಿಸಲಾಗಿದೆ ಎಂದು ತಿಳಿಸಿರುತ್ತಾರೆ.

4) ಲೋಕೋಪಯೋಗಿ ಇಲಾಖೆಯ ವತಿಯಿಂದ ಮಳೆಯಿಂದ ಹಾನಿಗೊಳಗಾದ ರಸ್ತೆಗಳ ಪುನರ್ ನಿರ್ಮಾಣದ ಕೆಲಸದ ಪ್ರಗತಿಯ ಕುರಿತು ಪರಿಶೀಲಿಸಿದೆ. ಬಹುತೇಕ ಟೆಂಡರ್‌ಗಳನ್ನು ಅಂತಿಮಗೊಳಿಸಲಾಗಿದೆ. ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

5) ಅಂಗನವಾಡಿ ಕಟ್ಟಡಗಳ ಹಾನಿ ಹಾಗೂ ಪುನರ್ ನಿರ್ಮಾಣದ ಪ್ರಗತಿ ನಿಧಾನವಾಗಿ ನಡೆದಿದೆ. 19 ಆಸ್ಪತ್ರೆಗಳು ಹಾನಿಯಾಗಿದ್ದು ಅವುಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ವಿಭಾಗದವರಿಂದ ರಿಪೇರಿ ಮಾಡಿಸಲಾಗುತ್ತಿದೆ.

6) ಕುಡಿಯುವ ನೀರಿನ ಕಾಮಗಾರಿಗಳು ಪ್ರಗತಿಯಲ್ಲಿದೆ. ಬೆಳಗಾವಿ ವಿಭಾಗದಲ್ಲಿ ಯೋಜನೆಗಳು ಸಂಪೂರ್ಣವಾಗಿ ಮುಗಿದಿವೆ. ಚಿಕ್ಕೋಡಿ ವಿಭಾಗದಲ್ಲಿ ಪ್ರಗತಿ ಕುಂಠಿತವಾಗಿದೆ.

ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಬಾಕಿ ಇರುವ ಕಾಮಗಾರಿಗಳ ಕೆಲಸವನ್ನು ತ್ವರಿತವಾಗಿ ಮುಗಿಸಲು ಸೂಚಿಸಲಾಯಿತು. ಜಿಲ್ಲಾಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರತೀ ವಾರ ಪ್ರವಾಹಕ್ಕೊಳಗಾದ ತಾಲ್ಲೂಕುಗಳ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆ ನಡೆಸುವಂತೆ ಸೂಚನೆ ನೀಡಲಾಯಿತು.

(ಎಲ್.ಕೆ.ಅತೀಕ್) 14/1/2020

ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಡಾ॥ ಎನ್.ನಾಗಾಂಬಿಕಾದೇವಿ, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 24.01.2020 ರಂದು ಬೆಳಿಗ್ಗೆ 10:30 ಗಂಟೆಗೆ ಜಿಲ್ಲಾಧಿಕಾರಿಗಳ ಸಭಾಂಗಣ, ಜಿಲ್ಲಾಡಳಿತ ಭವನದಲ್ಲಿ ನಡೆಸಲಾದ ಚಿಕ್ಕಬಳ್ಳಾಪುರ ಜಿಲ್ಲೆಯ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ನಡಾವಳಿಗಳು.**

********

**ಅಧ್ಯಕ್ಷತೆ: ಡಾ॥ ಎನ್.ನಾಗಾಂಬಿಕಾದೇವಿ,** ಭಾ.ಆ.ಸೇ.,
**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,**
**ಸಹಕಾರ ಇಲಾಖೆ ಹಾಗೂ ಚಿಕ್ಕಬಳ್ಳಾಪುರ**
**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.**

12/2/2020

**ಸಭೆಯಲ್ಲಿ ಹಾಜರಿದ್ದವರು :**

1) ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ.
2) ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.
3) ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ.
4) ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ.
5) ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ.
6) ಜಿಲ್ಲಾ ಅಧಿಕಾರಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ.
7) ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.
8) ಹಿರಿಯ ಸಹಾಯಕ ನಿರ್ದೇಶಕರು, ವಾರ್ತ ಮತ್ತು ಪ್ರಚಾರ ಇಲಾಖೆ, ಚಿಕ್ಕಬಳ್ಳಾಪುರ.
9) ಉಪನಿರ್ದೇಶಕರು, ರೇಷ್ಮೆ ಇಲಾಖೆ, ಚಿಕ್ಕಬಳ್ಳಾಪುರ.
10) ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ.
11) ಉಪನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಚಿಕ್ಕಬಳ್ಳಾಪುರ.
12) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ.
13) ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಚಿಕ್ಕಬಳ್ಳಾಪುರ.
14) ಕಾರ್ಯಪಾಲಕ ಅಭಿಯಂತರರು, ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕಬಳ್ಳಾಪುರ.
15) ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳು ಚಿಕ್ಕಬಳ್ಳಾಪುರ ಜಿಲ್ಲೆ.
16) ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಣಾಧಿಕಾರಿಗಳು, ಚಿಕ್ಕಬಳ್ಳಾಪುರ.
17) ಇತರೆ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಡಾ॥ ಎನ್.ನಾಗಾಂಬಿಕಾ ದೇವಿ, ಭಾ.ಆ.ಸೇ., ರವರಿಗೆ ಅಪರ ಜಿಲ್ಲಾಧಿಕಾರಿಗಳು ಸ್ವಾಗತ ಕೋರಿ ಜಿಲ್ಲೆಯ ಎಲ್ಲಾ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ಕೋರಿದರು. ನಂತರ ಸಭೆಯನ್ನು ಪ್ರಾರಂಭಿಸಿ ಈ ಕೆಳಕಂಡ ಇಲಾಖೆಗಳ ಬಗ್ಗೆ ಪ್ರಗತಿ ಪರಿಶೀಲನೆಯನ್ನು ನಡೆಸಲಾಯಿತು.

**ಇಲಾಖಾವಾರು ಪ್ರಗತಿ ಪರಿಶೀಲನೆ:-**

1) **ಕಂದಾಯ ಇಲಾಖೆ :-**

ಅಪರ ಜಿಲ್ಲಾಧಿಕಾರಿಗಳು ಮಾತನಾಡಿ, ಕಂದಾಯ ವಿಷಯಗಳ ಬಗ್ಗೆ ತಿಳಿಸಿದರು.

- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬಾಕಿಯಿರುವ ಪಹಣಿ ಕಾಲಂ 3 & 9ಕ್ಕೂ ತಾಳೆಯಿಲ್ಲದ ಒಟ್ಟು 4186 ಪ್ರಕರಣಗಳಿದ್ದು, ಸದರಿ ಪ್ರಕರಣಗಳನ್ನು ಇತ್ಯರ್ಥಪಡಿಸಲು ವಿಶೇಷ ಕಾರ್ಯಗಾರವನ್ನು ಹಮ್ಮಿಕೊಳ್ಳುವುದರ ಮೂಲಕ ಎಲ್ಲಾ ತಹಶೀಲ್ದಾರ್‌ಗಳು ತುರ್ತಾಗಿ ವಿಲೇವಾರಿಗೊಳಿಸಲು ಸೂಚಿಸಲಾಯಿತು.

- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 94ಸಿ ಯೋಜನೆಯಡಿಯಲ್ಲಿ ಒಟ್ಟು 8537 ಅರ್ಜಿಗಳು ಸ್ವೀಕೃತವಾಗಿದ್ದು, ಈ ಪೈಕಿ 8218 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಬಾಕಿ 319 ಅರ್ಜಿಗಳು ಇರುತ್ತವೆ. ಬಾಕಿ ಉಳಿಸಿಕೊಂಡಿರುವ ಚಿಕ್ಕಬಳ್ಳಾಪುರ, ಗೌರಿಬಿದನೂರು, ಶಿಡ್ಲಘಟ್ಟ ತಾಲ್ಲೂಕು ತಹಶೀಲ್ದಾರ್ ರವರುಗಳು ಒಂದು ವಾರದಲ್ಲಿ ವಿಲೇವಾರಿ ಮಾಡಿ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ವಿತರಣೆ ಮಾಡಲು ಕ್ರಮ ಕೈಗೊಳ್ಳಲು ಸೂಚಿಸಿದರು.
- ಜಿಲ್ಲೆಯಲ್ಲಿ 18 ಗ್ರಾಮಗಳಿಗೆ ರುದ್ರಭೂಮಿ ಸೌಲಭ್ಯವಿಲ್ಲದಿರುವುದು ಕಂಡು ಬಂದಿದ್ದು, 09 ಗ್ರಾಮಗಳಿಗೆ ಗುರುತಿಸಿರುವ ಜಮೀನುಗಳು ಗುಂಡುತೋಪು ಆಗಿರುವ ಕಾರಣ ಮಂಜೂರಾತಿಗಾಗಿ ಸರ್ಕಾರದ ಮಟ್ಟದಲ್ಲಿ ಬಾಕಿ ಇರುತ್ತದೆ. 05 ಗ್ರಾಮಗಳಿಗೆ ಕ.ಭೂ.ಅಧಿನಿಯಮ 1964ಕಲಂ 68(1)ರಡಿಯಲ್ಲಿ ಪ್ರಕ್ರಿಯೆಗಳನ್ನು ನಡೆಸಲು ಚಾಲ್ತಿಯಲ್ಲಿರುತ್ತದೆ. 04 ಗ್ರಾಮಗಳಿಗೆ ತಹಶೀಲ್ದಾರ್ ರವರಲ್ಲಿ ಬಾಕಿ ಇದ್ದು, ಎಲ್ಲಾ ಗ್ರಾಮಗಳಲ್ಲಿ ರುದ್ರಭೂಮಿ ಸೌಲಭ್ಯವನ್ನು ಒದಗಿಸಿ, ಅಭಿವೃದ್ಧಿಪಡಿಸಲು ಸೂಚಿಸಿದರು.
- ಸಾಮಾಜಿಕ ಭದ್ರತಾ ಯೋಜನೆಯಡಿಯಲ್ಲಿ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳಿಗೆ ಆಧಾರ್ ಜೋಡಣೆಯಲ್ಲಿ ಶೇ90% ರಷ್ಟು ಪ್ರಗತಿ ಸಾಧಿಸಿದ್ದು, ಬಾಕಿ ಇರುವ 10% ರಷ್ಟು ಪೂರ್ಣ ಪ್ರಮಾಣದಲ್ಲಿ ಆಧಾರ್ ಜೋಡಣೆ ಮಾಡಿ ಶೇ 100%ರಷ್ಟು ಸಾಧಿಸಲು ಸೂಚಿಸಿದರು.
- ಪಿಂಚಣಿ ಸರಿಯಾದ ರೀತಿಯಲ್ಲಿ ಫಲಾನುಭವಿಗಳಿಗೆ ತಲುಪುತ್ತಿರುವ ಬಗ್ಗೆ ಪರಿಶೀಲನೆ ಮಾಡಲು ಹಾಗೂ ಬಾಕಿ ಉಳಿದಿರುವ ಕಡತಗಳನ್ನು ತುರ್ತು ಪೂರ್ಣಗೊಳಿಸಲು ಸೂಚಿಸಲಾಯಿತು.
- ಬಗರ್ ಹುಕ್ಕುಂ ಸಾಗುವಳಿ ಅರ್ಜಿಗಳ ವಿಲೇವಾರಿಗೆ ಸಂಬಂಧಿಸಿದಂತೆ ಸಮಿತಿ ರಚನೆ ಮಾಡುವ ಬಗ್ಗೆ ಸ್ಥಳೀಯ ಶಾಸಕರು ಶಿಫಾರಸ್ಸು ಮಾಡದೇ ಇದ್ದಲ್ಲಿ ಸಮಿತಿ ರಚನೆ ಮಾಡುವ ಸಲುವಾಗಿ ತಮ್ಮ ಕಛೇರಿಗೆ ಪತ್ರವನ್ನು ಸಲ್ಲಿಸಲು ಸೂಚಿಸಿದರು.
- ಆಶ್ರಯ ಯೋಜನೆಯಡಿಯಲ್ಲಿ ಅರ್ಹ ಫಲಾನುಭವಿಗಳ ಹಕ್ಕುಪತ್ರಗಳನ್ನು ತಯಾರಿಸಲಾಗಿದ್ದು, ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ವಿತರಿಸಲು ಶಾಸಕರ ದಿನಾಂಕವನ್ನು ಪಡೆದು ಹಕ್ಕು ಪತ್ರಗಳನ್ನು ವಿತರಿಸಲು ಕ್ರಮಕೈಗೊಳ್ಳಲು ಸೂಚಿಸಿದರು.
- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪೈಕಿ ಪಹಣಿಗಳನ್ನು ಒಟ್ಟುಗೂಡಿಸುವಲ್ಲಿ ಒಟ್ಟು 18468 ಪ್ರಕರಣಗಳು ಬಾಕಿ ಇದ್ದು, ಈ ಪ್ರಕರಣಗಳನ್ನು ತುರ್ತಾಗಿ ವಿಲೇವಾರಿಗೊಳಿಸಲು ಕ್ರಮ ಕೈಗೊಳ್ಳಲು ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ರವರಿಗೆ ತಿಳಿಸಿದರು.
- ಅಪರ ಜಿಲ್ಲಾಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಒತ್ತುವರಿ ತೆರವುಗೊಳಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ ಹಾಗೂ ಒಂದು ವಾರದಲ್ಲಿ 05 ಕೆರೆಗಳು ಮತ್ತು 05 ಸರ್ಕಾರಿ ಜಮೀನುಗಳ ಒತ್ತುವರಿಯನ್ನು ತೆರವುಗೊಳಿಸಲು ಗುರಿಯನ್ನು ನಿಗಧಿಪಡಿಸಲಾಗಿದೆ. ಪ್ರತಿ ಸೋಮುವಾರ ಬೆಳಗ್ಗೆ 9.30ರಿಂದ10.30 ಗಂಟೆವರೆಗೆ ಜಿಲ್ಲೆಯ ಎಲ್ಲಾ ಕಂದಾಯ ಅಧಿಕಾರಿಗಳಿಗೆ ವೀಡಿಯೋ ಸಂವಾದ ಸಭೆಯನ್ನು ಏರ್ಪಡಿಸಲಾಗಿದೆ ಎಂದು ತಿಳಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಉಪವಿಭಾಗಾಧಿಕಾರಿಗಳು ಹಾಗೂ ಜಿಲ್ಲೆಯ ಎಲ್ಲಾ ತಹಶೀಲ್ದಾರ್, ಚಿಕ್ಕಬಳ್ಳಾಪುರ ಜಿಲ್ಲೆ.)**

2) **<u>ಕೃಷಿ ಇಲಾಖೆ :-</u>**

ಜಂಟಿ ನಿರ್ದೇಶಕರು, ಕೃಷಿ ಇಲಾಖೆ ರವರು ಮಾತನಾಡಿ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಹಿಂಗಾರು ಹಂಗಾಮಿನಲ್ಲಿ ಉತ್ತಮ ಮಳೆಯಾಗಿರುವುದರಿಂದ ರಾಗಿ, ಮುಸುಕಿನ ಜೋಳ, ಹುರುಳಿ, ಕಡಲೆ, ಸೂರ್ಯಕಾಂತಿ ಬೆಳೆಗಳು ಉತ್ತಮವಾದ ಇಳುವರಿಯಾಗಿರುತ್ತದೆಂದು ತಿಳಿಸಿದರು.

- ಪಿ.ಎಂ. ಕಿಸಾನ್ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ ಮೊದಲನೇ ಕಂತಿನಲ್ಲಿ 102483, 2 ನೇ ಕಂತಿನಲ್ಲಿ 101240, 3ನೇ ಕಂತಿನಲ್ಲಿ 78626, 4ನೇ ಕಂತಿನಲ್ಲಿ 122 ಮತ್ತು ರಾಜ್ಯ ಸರ್ಕಾರದಿಂದ 78010 ಫಲಾನುಭವಿಗಳಿಗೆ ಈಗಾಗಲೇ ಹಣ ಪಾವತಿಯಾಗಿರುವುದನ್ನು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು, ಮಾತನಾಡಿ ಪಿ.ಎಂ. ಕಿಸಾನ್ ಯೋಜನೆಯಡಿಯಲ್ಲಿ ಮರಣ ಹೊಂದಿದವರು ಒಟ್ಟು 53102 ಮತ್ತು ಅನಿವಾಸಿಗಳು 38336 ಜಿಲ್ಲೆಯಲ್ಲಿ ಇರುವುದರಿಂದ ಈ ಬಗ್ಗೆ ತಹಶೀಲ್ದಾರ್ ಗಳು ಹಾಗೂ ಕಂದಾಯ ಅಧಿಕಾರಿಗಳು ಪರಿಶೀಲಿಸಿ ಸಂಬಂಧಪಟ್ಟ ವಾರಸುದಾರರಿಗೆ ಖಾತೆ ವರ್ಗಾಯಿಸಲು ಹಿಂದಿನ ಸಭೆಯಲ್ಲಿ ನಿರ್ದೇಶನ ನೀಡಲಾಗಿತ್ತು, ಮತ್ತೊಮ್ಮೆ ವಿಶೇಷ ಕ್ರಿಯಾ ಯೋಜನೆಯನ್ನು ರೂಪಿಸಿಕೊಂಡು ಫವತಿದಾರರ ಖಾತೆಗಳನ್ನು ಸಂಬಂಧಪಟ್ಟ ವಾರಸುದಾರರಿಗೆ ಖಾತೆ ಕ್ರಮ ವಹಿಸಲು ಸೂಚಿಸಿದರು.

- ಅನಿವಾಸಿಗಳಿಗೆ ಭೂ ಕಂದಾಯ ಕಾಯ್ದೆಯಡಿ ವಾರಸುದಾರರಿಗೆ ನೋಟಿಸು ನೀಡಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು. ಪಿ.ಎಂ. ಕಿಸಾನ್ ಯೋಜನೆಯನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ಕ್ರಮವಹಿಸಲು ಸೂಚಿಸಿದರು.
- ಬೆಳೆ ಸಮೀಕ್ಷೆ ಕಾರ್ಯವು ಜಿಲ್ಲೆಯಲ್ಲಿ 100% ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ ಹಾಗೂ ಹಿಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಪ್ರಕ್ರಿಯೆ ಆರಂಭವಾಗಿದೆ ಎಂದು ತಿಳಿಸಿದರು .
- 2018ರ ಮುಂಗಾರು ಹಂಗಾಮಿನ ಬೆಳೆ ವಿಮೆಯನ್ನು ಒಟ್ಟು 22514 ರೈತರಿಗೆ ಒಟ್ಟು 3762.77 ಲಕ್ಷಗಳನ್ನು ಬಿಡುಗಡೆಗೊಳಿಸಿದೆ. ಈ ಪೈಕಿ ಬಾಕಿ 18884 ರೈತರಿಗೆ ರೂ, 3114.51 ಲಕ್ಷಗಳು ಬಿಡುಗಡೆಯಾಗ ಬೇಕಾಗಿರುತ್ತದೆ. 2019-20ನೇ ಸಾಲಿನಲ್ಲಿ ಒಟ್ಟು 10449 ಫಲಾನುಭವಿಗಳು ನೊಂದಣಿಯಾಗಿರುವುದಾಗಿ ತಿಳಿಸಿದರು. 2018ನೇ ಸಾಲಿನ ಉಳಿದ ಫಲಾನುಭವಿಗಳಿಗೂ ಶೀಘ್ರವಾಗಿ ಬೆಳೆವಿಮೆಯ ಮೊತ್ತವನ್ನು ಪಾವತಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಆಯೋಜಿಸಿ ಸಂಬಂಧಪಟ್ಟ ವಿಮೇ ಕಂಪನಿಗೆ ಸೂಚಿಸಲಾಗಿರುತ್ತದೆಂದು ತಿಳಿಸಿದರು. ಬಾಕಿ ಇರುವ ಫಲಾನುಭವಿಗಳಿಗೆ ಬೆಳೆ ವಿಮೆ ಮೊತ್ತವನ್ನು ತುರ್ತಾಗಿ ಪಾವತಿಸಲು ಕ್ರಮವಹಿಸಲು ಸೂಚಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿಗಳು, ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಮತ್ತು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳು, ಚಿಕ್ಕಬಳ್ಳಾಪುರ)**

3) **ತೋಟಗಾರಿಕಾ ಇಲಾಖೆ:-**

ತೋಟಾಗಾರಿಕೆ ಇಲಾಖೆ ಅಧಿಕಾರಿ ಚಿಕ್ಕಬಳ್ಳಾಪುರ ರವರು ಮಾತನಾಡಿ, ತೋಟಾಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ, ಯೋಜನೆಗಳಾದ ಪಿ.ಎಮ್.ಕೆ.ಎಸ್.ವೈ (ಸೂಕ್ಷ್ಮ ನೀರಾವರಿ), ರಾಷ್ಟೀಯ ತೋಟಾಗಾರಿಕೆ ಮಿಷನ್, ರಾಷ್ಟೀಯ ಕೃಷಿ ವಿಕಾಸ ಯೋಜನೆ, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ, ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಶೇ 66% ರಷ್ಟು ಪ್ರಗತಿ ಸಾಧಿಸಲಾಗಿದೆಯೆಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ರವರು ಮಾತನಾಡಿ, ಗುಲಾಬಿ ಬೆಳೆಯನ್ನು ನರೇಗಾ ಯೋಜನೆಯಡಿ ಹೊಸದಾಗಿ ಒಳಪಡಿಸಲಾಗಿದ್ದು ಈವರೆಗೂ 67.89 ಲಕ್ಷಗಳ ಮೊತ್ತದ ಕಾಮಗಾರಿಗಳಿಗೆ ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆಗೆ ಸಲ್ಲಿಸಲಾಗಿರುತ್ತಯೆಂದು ತಿಳಿಸಿದರು ಹಾಗೂ ಹೊಸದಾಗಿ Double Planting ದ್ರಾಕ್ಷಿ ಹಾಗೂ ಶೇಕರಣಾ ಘಟಕ (Pack House) ಕಾಮಗಾರಿಗಳಿಗೆ ಅಂದಾಜು ಪಟ್ಟಿ ತಯಾರಿಸಿ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆಯೆಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ತೋಟಗಾರಿಕೆ ಬೆಳೆಗಳಿಗೆ ಉತ್ತಮ ಮಾರುಕಟ್ಟೆಯ ಸೌಲಭ್ಯವನ್ನು ಕಲ್ಪಿಸಲು ಕ್ರಮವಹಿಸಲು ಸೂಚಿಸಲಾಯಿತು.

**(ಕ್ರಮ: ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ, ಚಿಕ್ಕಬಳ್ಳಾಪುರ)**

4) **ರೇಷ್ಮೆ ಇಲಾಖೆ:-**

ಉಪನಿರ್ದೇಶಕರು, ರೇಷ್ಮೆ ಇಲಾಖೆ, ಚಿಕ್ಕಬಳ್ಳಾಪುರ ರವರು ಮಾತನಾಡಿ, ರೇಷ್ಮೆ ಬೆಳೆಯು ಉತ್ತಮ ಇಳುವರಿ ಇರುವುದಾಗಿ ಹಾಗೂ ರೇಷ್ಮೆ ಇಲಾಖೆಯ ವಿವಿಧ ಕಾರ್ಯಕ್ರಮಗಳಲ್ಲಿ ಶೇ95%ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ವಿಶ್ವದಲ್ಲಿಯೇ ಶಿಷ್ಟಫಟ್ಟ ರೇಷ್ಮೆಯು ಅತ್ಯಂತ ಮೃದವಾದ ರೇಷ್ಮೆಯಾಗಿದೆ. ಇಂತಹ ಮೃದವಾದ ರೇಷ್ಮೆ ಹೊಂದಿರುವಂತಹ ಜಿಲ್ಲೆ ನಮ್ಮದಾಗಿರುವುದರಿಂದ

ಶಿಡ್ಲಘಟ್ಟ ಮಾರುಕಟ್ಟೆ ರೇಷ್ಮೆಯನ್ನು ಅಭಿವೃದ್ಧಿ ಪಡಿಸಿ, ಪ್ರವಾಸ ತಾಣವಾಗಿ ಮಾಡುವಂತೆ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

(ಕ್ರಮ: ರೇಷ್ಮೆ ಉಪನಿರ್ದೇಶಕರು, ಚಿಕ್ಕಬಳ್ಳಾಪುರ)

5) ಕುಡಿಯುವ ನೀರಿನ ಸರಬರಾಜು ಕುರಿತು:-

ಸಹಾಯಕ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಚಿಕ್ಕಬಳ್ಳಾಪುರ ರವರು ಮಾತನಾಡಿ, ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು 60 ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದ್ದು, 14 ಗ್ರಾಮಗಳಲ್ಲಿ ಟ್ಯಾಂಕರ್‌ಗಳ ಮೂಲಕ ಮತ್ತು 46 ಗ್ರಾಮಗಳಲ್ಲಿ ಖಾಸಗಿ ಕೊಳವೆಬಾವಿಗಳ ಮುಖಾಂತರ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆಯೆಂದು ತಿಳಿಸಿದರು.

- ನಗರ ಪ್ರದೇಶದ ವ್ಯಾಪ್ತಿಯಲ್ಲಿ ಚಿಂತಾಮಣಿ ತಾಲ್ಲೂಕಿನಲ್ಲಿ ಒಟ್ಟು 28 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, 85 ಟ್ಯಾಂಕರ್‌ಗಳ ಮುಖಾಂತರ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆಯೆಂದು ತಿಳಿಸಿದರು.
- ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳಲು ಮತ್ತು ಶುದ್ಧ ನೀರಿನ ಘಟಕಗಳು ಸರಿಯಾದ ರೀತಿಯಲ್ಲಿ ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.
- ಜಿಲ್ಲೆಯ ಎಲ್ಲಾ ಶಾಲಗಳಿಗೆ, ವಸತಿ ನಿಲಯಗಳ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗದಂತೆ ಕ್ರಮವಹಿಸಲು ಸೂಚಿಸಲಾಯಿತು.

(ಕ್ರಮ: ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ/ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿ/ ಜಿಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ/ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಜಿಲ್ಲೆಯ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು)

6) ನರೇಗಾ ಯೋಜನೆ:-

ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಮಾತನಾಡಿ, ಪ್ರಾಜೆಕ್ಟ್-100 ಎಂಬ ಕಾರ್ಯಕ್ರಮದಡಿ 4000 ಕಾಮಗಾರಿಗಳನ್ನು ಅನುಮೋದಿಸಿದ್ದು, 1200 ಕಾಮಗಾರಿಗಳು ಪ್ರಗತಿಯಲ್ಲಿವುದರಿಂದ ಮಾನವ ದಿನಗಳು ಸೃಜನೆಯಾಗಿರುತ್ತದೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ 2019-20 ನೇ ಸಾಲಿನಲ್ಲಿ ಶೇ. 92.83 ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆಯೆಂದು ತಿಳಿಸಿದರು. ವೇಜ್ ಪೆಂಡೆನ್ಸಿ 12 ಕೋಟಿ ಹಾಗೂ ಮೆಟೀರಿಯಲ್ ಪೆಂಡೆನ್ಸಿ 18 ಕೋಟಿ ಒಟ್ಟು 30 ಕೋಟಿ ಸರ್ಕಾರದಿಂದ ಬಾಕಿ ಉಳಿದಿರುವುದೆಂದು ತಿಳಿಸಲಾಯಿತು.

ಸ್ವಚ್ಛ ಭಾರತ್ ಮಿಷನ್ ಅಡಿ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್‌ಗಾಗಿ 45 ಗ್ರಾಮ ಪಂಚಾಯ್ತಿಗಳಿಗೆ ಅನುಮೋದನೆಯಾಗಿದ್ದು, 13 ಗ್ರಾಮಪಂಚಾಯ್ತಿಗಳಲ್ಲಿ ಸರ್ಕಾರದ ಹಂತದಲ್ಲಿಬಾಕಿ ಉಳಿದಿರುತ್ತದೆ.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಉಳಿದಂತ ಎಲ್ಲಾ ಕಡೆ ಸಾಲಿಡ್ ವೇಸ್ಟ್ ಮ್ಯಾನೇಜ್‌ಮೆಂಟ್ ಕಾರ್ಯವನ್ನು ಪ್ರಾರಂಭಿಸಬೇಕೆಂದು ತಿಳಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ)

7) ವಸತಿ ಯೋಜನೆ:-

ಆಶ್ರಯ ಯೋಜನೆಯಡಿಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ ಒಟ್ಟು 326-07 ಎಕರೆ ಜಮೀನನ್ನು ಮಂಜೂರು ಮಾಡಲಾಗಿದ್ದು, ಮತ್ತು ನಗರ ಪ್ರದೇಶದಲ್ಲಿ 149-14 ಎಕರೆ ಜಮೀನನ್ನು ಮಂಜೂರು ಮಾಡಲಾಗಿದೆ ಮಂಜೂರು ಮಾಡಿರುವ ಜಮೀನಿನಲ್ಲಿ ಲೇ ಔಟ್ (ಬಡಾವಣೆ) ಗಳನ್ನು ಜರೂರಾಗಿ ನಿರ್ಮಾಣ ಮಾಡಿ ಮನೆಗಳ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲು ಸೂಚಿಸಿದರು.

- ವಸತಿ ಯೋಜನೆಯಡಿಯಲ್ಲಿ ನಿಗಧಿಪಡಿಸಿರುವ ಗುರಿಯನ್ನು ಪೂರ್ಣ ಪ್ರಮಾಣದಲ್ಲಿ ಪ್ರಗತಿ ಸಾಧಿಸಿ, ಗುರಿಗಿಂತ ಹೆಚ್ಚಿನ ಸಾಧನೆ ಮಾಡಿ ಮನೆ ಇಲ್ಲದವರಿಗೆ ಅರ್ಹ ಫಲಾನುಭವಿಗಳಿಗೆ ಮನೆ ನಿರ್ಮಾಣ ಮಾಡಿಕೊಡಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಯೋಜನಾ ನಿರ್ದೇಶಕರು, ಚಿಕ್ಕಬಳ್ಳಾಪುರ)

8) **ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ:-**

ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆ ಇಲಾಖೆ, ರವರು ಮಾತನಾಡಿ, ರೈತರ ಬಳಿ ಲಭ್ಯವಿರುವ ಮೇವು ಮುಂದಿನ 24 ವಾರಗಳ ಅವಧಿಗೆ ಸಾಕಾಗುತ್ತದೆ ಎಂದು ತಿಳಿಸಿದರು.

- ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಈ ಜಿಲ್ಲೆಯಲ್ಲಿ 03 ತಾಲ್ಲೂಕುಗಳನ್ನು ಬರ ಪೀಡಿತ ತಾಲ್ಲೂಕುಗಳೆಂದು ಸರ್ಕಾರವು ಘೋಷಿಸಿರುವುದರಿಂದ ಸದರಿ ತಾಲ್ಲೂಕುಗಳಲ್ಲಿ ಜಾನುವಾರಿಗಳಿಗೆ ಮೇವಿನ ಕೊರತೆಯಾಗದಂತೆ ಮುಂಜಾಗ್ರತೆ ಕ್ರಮ ಕೈಗೊಳ್ಳಲು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಚಿಕ್ಕಬಳ್ಳಾಪುರ)**

9) **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:-**

ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮಾತನಾಡಿ, ಪ್ರತಿ ಗ್ರಾಮ ಪಂಚಾಯ್ತಿಯ ಬಾಪೂಜಿ ಸೇವಾ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ 147430 ಆರೋಗ್ಯ ಕಾರ್ಡ್‌ನ್ನು ವಿತರಿಸಲಾಗುತ್ತಿದ್ದು, ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದಾಗಿ ತಿಳಿಸಿದರು.

- ಜನನಿ ಸುರಕ್ಷಾ ಯೋಜನೆ ಮತ್ತು ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮಗಳಲ್ಲಿ ಉತ್ತಮ ಪ್ರಗತಿ ಸಾಧಿಸಲು ಸೂಚಿಸಿದರು.
- ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಅಗತ್ಯವಿರುವ ವೈದ್ಯಾಧಿಕಾರಿಗಳನ್ನು ಕಾಲ-ಕಾಲಕ್ಕೆ ನೇಮಿಸಿಕೊಳ್ಳಲು ಸೂಚಿಸಲಾಯಿತು.

**(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾಪಂಚಾಯತ್ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ)**

10) **ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ:-**

ಉಪನಿರ್ದೇಶಕರು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ ರವರು ಮಾತನಾಡಿ, ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಉತ್ತಮ ಫಲಿತಾಂಶಕ್ಕಾಗಿ, ಎಸ್.ಎಸ್.ಎಲ್.ಸಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಭಾನುವಾರದಂದು ಹಾಗೂ ಸಂಜೆ ವೇಳೆಯ ನಡೆಯುವ ತರಬೇತಿಯೊಂದಿಗೆ ಲಘು ಉಪಹಾರವನ್ನು ನೀಡಲಾಗುತ್ತಿದ್ದು, ಶಿಕ್ಷಕರು ಉತ್ಸಾಹದಿಂದ ಉಪನ್ಯಾಸ ಮಾಡುತ್ತಿದ್ದಾರೆ. ಹಾಗು ಎಸ್.ಎಸ್.ಎಲ್.ಸಿ ಉತ್ತಮ ಫಲಿತಾಂಶಕ್ಕಾಗಿ ವಿಶೇಷ ತರಗತಿಗಳನ್ನು ಆರಂಭಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, 100% ರಷ್ಟು ಫಲಿತಾಂಶ ಬರುವಂತೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.

- ಮಕ್ಕಳ ಕಲಿಕಾ ಮಟ್ಟವನ್ನು ಹೆಚ್ಚಿಸಲು ಕ್ರಮ ವಹಿಸಲು ಸೂಚಿಸಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾಪಂಚಾಯತ್ ಹಾಗೂ ಉಪನಿರ್ದೇಶಕರು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ)**

11) **ಹಿಂದುಳಿದ ವರ್ಗಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ:-**

ಜಿಲ್ಲಾ ಅಧಿಕಾರಿಗಳು ಮಾತನಾಡಿ, ಬಾಗೇಪಲ್ಲಿ ತಾಲ್ಲೂಕಿನಲ್ಲಿ 01 ನಿವೇಶನ ಮಂಜೂರು ಮಾಡಲು ಬಾಕಿ ಇರುತ್ತದೆಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಜಮೀನನ್ನು ಗುರಿತಿಸಿ, ತುರ್ತಾಗಿ ಸಂಬಂಧಪಟ್ಟ ಇಲಾಖೆಗೆ ಮಂಜೂರಿ ಮಾಡಿ ವರ್ಗಾವಣೆ ಮಾಡುವಂತೆ ಕ್ರಮವಹಿಸಲು ತಹಶೀಲ್ದಾರ್, ಬಾಗೇಪಲ್ಲಿ ತಾಲ್ಲೂಕು ರವರಿಗೆ ಸೂಚಿಸಲಾಯಿತು.

ವಸತಿ ನಿಲಯದಲ್ಲಿರುವ ಮಕ್ಕಳು 100% ರಷ್ಟು ಫಲಿತಾಂಶ ಬರುವಂತೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು.

**(ಕ್ರಮ: ಜಿಲ್ಲಾ ಅಧಿಕಾರಿಗಳು, ಸಮಾಜ/ಹಿಂದುಳಿದ/ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ)**

12) <u>ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:-</u>

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಅಂಗನವಾಡಿ ಮಕ್ಕಳಿಗೆ ಬಿಸಿಯೂಟ ಯೋಜನೆ ವ್ಯವಸ್ಥಿತವಾಗಿ ನಡೆಯುತ್ತಿದೆಯೆಂದು ತಿಳಿಸಿದರು.

- ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಮಾತನಾಡಿ, ಉಪನಿರ್ದೇಶಕರು ಶಿಕ್ಷಣ ಇಲಾಖೆ ಮತ್ತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆಯನ್ನು ಮಾಡಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಅಂಗನವಾಡಿ ಕಟ್ಟಡ ನಿರ್ಮಿಸಲು ಬಾಕಿ ಇರುವ ನಿವೇಶನಗಳ ಈಗಾಗಲೇ ನೀಡಲಾಗಿದೆ ಎಂದು ತಿಳಿಸಿದರು. ಕಟ್ಟಡಗಳನ್ನು ತುರ್ತಾಗಿ ನಿರ್ಮಿಸಲು ಸೂಚಿಸಿದರು.
- ಮಕ್ಕಳ ಅಪೌಷ್ಠಿಕತೆ ಮಟ್ಟವನ್ನು ಹಿಂದಿನ ಸಭೆಯಲ್ಲಿ 195 ರಿಂದ 156 ಕ್ಕೆ ಕಡಿಮೆ ಮಾಡಲಾಗಿದೆ ಅಪೌಷ್ಠಿಕತೆ ಮಕ್ಕಳನ್ನು ಆರೋಗ್ಯ ಕೆಂದ್ರದಲ್ಲಿ ಸೇರ್ಪಡೆ ಮಾಡಿ ಅವರ ಪೌಷ್ಠಿಕ ಮಟ್ಟವನ್ನು ಸುಧಾರಿಸುವ ಕಾರ್ಯವನ್ನು ಮಾಡಲಾಗುತ್ತಿದೆ ಎಂದು ತಿಳಿಸಿದರು.
- ಇಲಾಖೆ ಯೋಜನೆಗಳನ್ನು ಉತ್ತಮ ಪ್ರಗತಿ ಸಾಧಿಸಲು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ)**

ಈ ಮೇಲ್ಕಂಡ ಇಲಾಖೆಗಳ ಬಗ್ಗೆ ಪ್ರಗತಿ ಪರಿಶೀಲನೆಯನ್ನು ನಡೆಸಿ ನೀಡಿದ ನಿರ್ದೇಶನಗಳಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ಅಧಿಕಾರಿಗಳಿಗೂ ಅನುಪಾಲನಾ ವರದಿಯನ್ನು ಸಲ್ಲಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಅಪರ ಜಿಲ್ಲಾಧಿಕಾರಿಗಳು ರವರು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**(ಡಾ॥ ಎನ್.ನಾಗಾಂಬಿಕಾದೇವಿ, ಭಾ.ಆ.ಸೇ.)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಸಹಕಾರ ಇಲಾಖೆ ಮತ್ತು
ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ,
ಕರ್ನಾಟಕ ಸರ್ಕಾರ, ಬೆಂಗಳೂರು.

<u>ಪ್ರತಿಯನ್ನು:</u>

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
4. ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ರವಾನಿಸುತ್ತಾ ಸಭಾ ನಡಾವಳಿಗೆ ಅನುಪಾಲನ ವರದಿಯನ್ನು ಸಲ್ಲಿಸಲು ಸೂಚಿಸಿದೆ.
5. ಜಿಲ್ಲೆಯ ಎಲ್ಲಾ ಆಯುಕ್ತರು, ನಗರ ಸಭೆ / ಪೌರಾಯುಕ್ತರು ಪುರಸಭೆ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.
6. ಹೆಚ್ಚುವರಿ ಪ್ರತಿ.

**ದಿನಾಂಕ:23-01-2020ರಂದು ಮಾನ್ಯ ಶ್ರೀ ಎಸ್.ಆರ್.ಉಮಾಶಂಕರ್, ಭಾ.ಆ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆ.**

-0-

ಜಿಲ್ಲಾಧಿಕಾರಿಗಳು, ಉಸ್ತುವಾರಿ ಕಾರ್ಯದರ್ಶಿಯವರನ್ನು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಹಾಗೂ ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳನ್ನು ಮತ್ತು ಮಾಧ್ಯಮದ ಪ್ರತಿನಿಧಿಗಳನ್ನು ಸಭೆಗೆ ಸ್ವಾಗತಿಸಿ ಉಸ್ತುವಾರಿ ಕಾರ್ಯದರ್ಶಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು.

ಸಭೆಯ ಪ್ರಾರಂಭದಲ್ಲಿ ಶಿಕ್ಷಣ ಇಲಾಖೆಯಿಂದ ತಯಾರಿಸಲಾದ ಎಸ್.ಎಸ್.ಎಲ್.ಸಿ ಮಾದರಿ ಪ್ರಶ್ನೆಪತ್ರಿಕೆಯನ್ನು ಸಭಾಧ್ಯಕ್ಷರು ಬಿಡುಗಡೆ ಮಾಡಿದರು.

**1. ಶಿಕ್ಷಣ ಇಲಾಖೆ:-** ಇಲಾಖೆಯ ಪ್ರಗತಿಯನ್ನು ಪರಿಶೀಲಿಸಲಾಯಿತು. ಜಿಲ್ಲೆಯಲ್ಲಿ ಉತ್ತಮ ಅಭಿವೃದ್ಧಿಯನ್ನು ಪಡೆಯಬೇಕಾದರೆ ಅಲ್ಲಿಯ ಶಿಕ್ಷಣದ ವ್ಯವಸ್ಥೆ ಬಹಳ ಮುಖ್ಯವಾದದ್ದು. ಈ ನಿಟ್ಟಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಬೇಕಾಗಿರುವುದು ಅತೀ ಅವಶ್ಯವಾಗಿರುತ್ತದೆ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿ ಸುಮಾರು 86% ವಿದ್ಯಾರ್ಥಿಗಳು ಪಾಸಗಿದ್ದರೂ ಉನ್ನತ ಶಿಕ್ಷಣಕ್ಕೆ ಹೋಗುವವರು ಕೇವಲ 27% ಮಾತ್ರ, ಆದ್ದರಿಂದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಬೇಕಾಗಿರುತ್ತದೆ. ಕೋಲಾರ, ಹಾವೇರಿ, ಮುಧೋಳ ತಾಲ್ಲೂಕು ಯಡಿಹಳ್ಳಿ ಗ್ರಾಮದಲ್ಲಿ, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಶಾಸಕರೇ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ ಗುಣಮಟ್ಟದ ಶಿಕ್ಷಣ ಕೊಡಿಸಲು ಶ್ರಮಿಸುತ್ತಿದ್ದಾರೆ. ಹಾಗಾಗಿ ಆ ಜಿಲ್ಲೆಗಳ ಪರೀಕ್ಷಾ ಗುಣಮಟ್ಟವು ಉತ್ತಮವಾಗಿರಲು ಸಾಧ್ಯವಾಗಿರುತ್ತದೆ. ಅದರಂತೆ ದಾವಣಗೆರೆ ಜಿಲ್ಲೆಯಲ್ಲಿಯೂ ಸಹ ಇರುವ ಶಾಲೆಗಳನ್ನು ಶಾಸಕರು, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಅಧಿಕಾರಿಗಳು ದತ್ತು ಪಡೆದು, ಆಗಾಗ ಭೇಟಿ ನೀಡಿ ಅಲ್ಲಿಯ ಆಗುಹೋಗುಗಳನ್ನು ಪರಿಶೀಲಿಸುತ್ತಿರುವುದರಿಂದ ಆ ಶಾಲೆಯ ಮಕ್ಕಳ ಅಭಿವೃದ್ಧಿ ಹಾಗೂ ಉನ್ನತೀಕರಣದ ಶಿಕ್ಷಣ ನೀಡಲು ವಿಶೇಷ ಕಾಳಜಿ ವಹಿಸಿದ್ದಲ್ಲಿ ಉತ್ತಮ ಪ್ರಜೆಗಳನ್ನು ಪಡೆಯಬಹುದೆಂದು, ಅವರೇ ಮುಂದಿನ ಸಮಾಜದ ಆಸ್ತಿಗಳಾಗುತ್ತಾರೆ. ಇದರಿಂದ ಸರ್ಕಾರಿ ಶಾಲೆಗಳನ್ನು ಉಳಿಸಿದಂತಾಗುತ್ತದೆ ಎಂದು ಸಭಾಧ್ಯಕ್ಷರು ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದರು. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿ ಉತ್ತಮ ಗುಣ ಮಟ್ಟ ಹಾಗೂ ತಿಳುವಳಿಕೆಯನ್ನು ನೀಡಿದ್ದೆ ಆದರೆ ಮುಂದೆ ಉತ್ತಮ ಫಲ ಸಿಗುತ್ತದೆ. ತಮ್ಮ ಜೀವನ ನಿರ್ವಹಣೆಗೆ ಯಾವುದಾದರೂ ಉತ್ತಮ ಕೆಲಸದ ಆಯ್ಕೆಯನ್ನು ಅವರೇ ಮಾಡಿಕೊಳ್ಳುತ್ತಾರೆ. ದೈವದತ್ತವಾದ ವಿದ್ಯೆಯನ್ನು ಪಡೆದ ಮಕ್ಕಳಿಗೆ ಶಿಕ್ಷಣ ನೀಡುವುದರ ಜೊತೆಗೆ ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಆದಷ್ಟು ಪ್ರಯತ್ನ ಪೂರ್ವಕ ಮುಂಚೂಣಿಯಲ್ಲಿ ತರಲು ವಿಶೇಷ ಪ್ರಯತ್ನ ಮಾಡಬೇಕೆಂದು ಎಲ್ಲಾ ಶಿಕ್ಷಕರಿಗೆ ತಿಳಿಸುವಂತೆ ಸಭಾಧ್ಯಕ್ಷರು, ಇಲಾಖಾಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರು ಇರುತ್ತಾರೆ. ಅವರಿಗೆ ಉತ್ತಮ ವೇತನವನ್ನು ಸಹ ನೀಡಲಾಗುತ್ತಿದೆ, ಪ್ರತಿ ಮಗುವಿಗೆ ಗಮನಕೊಟ್ಟು ಉತ್ತಮ ಶಿಕ್ಷಣವನ್ನು ನೀಡಬೇಕಾಗಿರುವುದು ಅವರ ಕರ್ತವ್ಯವಾಗಿರುತ್ತದೆ. ಇದಕ್ಕೆ ಮೇಲ್ವಿಚಾರಣೆ ಇಲ್ಲದೇ ಇರುವುದರಿಂದ ತೊಂದರೆಯಾಗಿರುತ್ತದೆ ಹಾಗಾಗಿ

ಮೇಲ್ವಿಚಾರಣೆ ಬೇಕಾಗಿದೆ. ಎಲ್ಲಾ ಇಲಾಖಾಧಿಕಾರಿಗಳು ತಮ್ಮ ತಮ್ಮ ಇಲಾಖೆಯ ಕರ್ತವ್ಯದ ಜೊತೆಗೆ ಒಂದೊಂದು ಶಾಲೆಯನ್ನು ದತ್ತು ತೆಗೆದುಕೊಂಡು ಉತ್ತಮ ಶಿಕ್ಷಣ ನೀಡುವ ನಿಟ್ಟಿನಲ್ಲಿ ಕ್ರಮ ಜರುಗಿಸುವುದು ಅವಶ್ಯವಾಗಿರುತ್ತದೆ ಎಂದು ಸಭಾಧ್ಯಕ್ಷರು ಇಲಾಖಾಧಿಕಾರಿಗಳಿಗೆ ತಿಳಿಸಿದರು.

ಈ ಬಾರಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ 1.20ಲಕ್ಷ ವಿದ್ಯಾರ್ಥಿಗಳಿದ್ದು, ಶಾಲೆಗಳನ್ನು ದತ್ತು ಪಡೆಯುವುದರಿಂದ ಪ್ರೌಢ ಶಿಕ್ಷಣದ ಸಂಖ್ಯೆಯನ್ನು ಇನ್ನೂ ಹೆಚ್ಚಿಸಬಹುದಾಗಿರುತ್ತದೆ. ಆ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ರೂಪಿಸಿದ ಹಾಗೆಯೂ ಆಗುತ್ತದೆ. ಕಳೆದ ಬಾರಿ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶ ಶೇ. 86.28 ಪಡೆದಿದ್ದು, ಈ ಬಾರಿ ಇನ್ನೂ ಉತ್ತಮ ಸಾಧನೆ ಮಾಡಬೇಕು. 7ನೇ ತರಗತಿಗೆ ಸದರಿ ಸಾಲಿನಲ್ಲಿ ಪಬ್ಲಿಕ್ ಪರೀಕ್ಷೆಯ ಬದಲು ಸಾಮಾನ್ಯ ಪರೀಕ್ಷೆಯನ್ನು ನಡೆಸಲಾಗುತ್ತದೆ. ಸರ್ಕಾರಿ ಶಾಲೆಗಳಿಗೆ ಸಂಬಂಧಿಸಿದಂತೆ ಸ್ಥಳಗಳ ಮಾಹಿತಿಯನ್ನು ಆನ್‌ಲೈನ್ ಅಪ್‌ಡೇಟ್‌ಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ದಾಖಲೆ ಇಲ್ಲದ ಶಾಲೆಗಳಿಗೆ ಜಿಲ್ಲಾಧಿಕಾರಿಗಳ ಮೂಲಕ ನಿಯಮಾನುಸಾರ ಖಾತೆ ಮಾಡಿಸಿಕೊಂಡು ಅಪ್‌ಡೇಟ್ ಮಾಡಲು ಸಭಾಧ್ಯಕ್ಷರು ಇಲಾಖಾಧಿಕಾರಿಗಳಿಗೆ ಸೂಚಿಸಿದರು.

ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗಾಗಿ ರಾಜ್ಯಕ್ಕೆ ರೂ.240 ಕೋಟಿ ಮಂಜೂರಾಗಿದ್ದರೂ ಸಹ ಜಿಲ್ಲೆಗಳಿಂದ ಸಮರ್ಪಕ ಪ್ರಸ್ತಾವನೆಗಳು ಬರದೇ ಇದ್ದುದರಿಂದ ಸದರಿ ಅನುದಾನವನ್ನು ಬಳಕೆಯಾಗಿರುವುದಿಲ್ಲ, ನಮ್ಮ ಜಿಲ್ಲೆಯಿಂದ ಶಾಸಕರಿಗೆ ಹಾಗೂ ಲೋಕಸಭಾ ಸದಸ್ಯರಿಗೆ ಒತ್ತಾಯ ಮಾಡಿ ಶಾಸಕರ ನಿಧಿಯಿಂದ ಶಿಕ್ಷಣ ಇಲಾಖೆಗೆ ಅನುದಾನವನ್ನು ಪಡೆದುಕೊಂಡು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಭೆಗೆ ಸಭಾಧ್ಯಕ್ಷರು ವಿವರಿಸಿದರು.

ದಾವಣಗೆರೆ ಜಿಲ್ಲೆಯ ಅತೀ ಹಿಂದುಳಿದ ಜಗಳೂರು ತಾಲ್ಲೂಕಿನ ತುಟ್ಟ ತುದಿಗಿರುವ ಶಾಲೆಯೊಂದಕ್ಕೆ ಜಿಲ್ಲೆಯ ಅಧಿಕಾರಿಗಳೊಂದಿಗೆ ಸರ್ಕಾರಿ ಬಸ್ಸಿನಲ್ಲಿ ಪ್ರಯಾಣಿಸಿ ಭೇಟಿ ನೀಡಿ, "ಕನಸು ಬಿತ್ತುವ ಕೆಲಸ, ರಾಷ್ಟ್ರ ಕಟ್ಟುವ ಕೆಲಸ" ಇದರಡಿ ಬೆಳಗಿನಿಂದ ಸಾಯಂಕಾಲದವರೆಗೂ ಅಲ್ಲಿಯ ಮಕ್ಕಳೊಂದಿಗೆ ಸಂವಾದದ ರೂಪದಲ್ಲಿ ಅವರಿಗೆ ಧೈರ್ಯ ತುಂಬಿ ಗುಣಮಟ್ಟದ ಪರೀಕ್ಷೆಯನ್ನು ಬರೆಯುವಂತೆ ಎಲ್ಲಾ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಈಗಾಗಲೇ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ತಮ್ಮ ಆದೇಶದಂತೆ ಗ್ರಾಮೀಣ ಭಾಗದ ಅಂತಹ ಶಾಲೆಗಳನ್ನು ದತ್ತು ತೆಗೆದುಕೊಳ್ಳುವ ನಿಟ್ಟಿನಲ್ಲಿ ಕ್ರಮ ಜರುಗಿಸಲಾಗುವುದೆಂದು ಜಿಲ್ಲಾಧಿಕಾರಿಗಳು ಸಭೆಗೆ ವಿವರಿಸಿದರು.

ಇಲಾಖೆಯಿಂದ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ಎಸ್.ಡಿ.ಎಂ.ಸಿಯವರಿಂದ ಅನುಷ್ಠಾನಗೊಳಿಸಬೇಕೆಂದು ಬಂದಿರುವ ಆದೇಶದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

**(ಕ್ರಮ: ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ದಾವಣಗೆರೆ.)**

**2. ಕಂದಾಯ ಇಲಾಖೆ:-**

**ವಿಪತ್ತು ನಿರ್ವಹಣೆ :**

ಇಲಾಖೆಯ ಪ್ರಗತಿಯನ್ನು ಪರಿಶೀಲಿಸಲಾಯಿತು. 2019 ಆಗಸ್ಟ್ ಮಾಹೆಯಲ್ಲಿ ಅತೀ ವೃಷ್ಠಿಯಿಂದ ಬಿ ವರ್ಗದ 15 ಮನೆಗಳು ಹಾಗೂ ಸಿ ವರ್ಗದ 297 ಮನೆಗಳು ಹಾನಿಯಾಗಿದ್ದು, ಬಿ ವರ್ಗದ 15 ಮನೆಗಳಿಗೆ ತಲಾ ರೂ.1.00 ಲಕ್ಷದಂತೆ ಮೊದಲನೇ ಕಂತು ರಾಜೀವಗಾಂಧಿ ವಸತಿ ನಿಗಮದಿಂದ ಫಲಾನುಭವಿಗಳ ಖಾತೆಗೆ ಜಮೆ

ಆಗಿರುತ್ತದೆ ಹಾಗೂ ಸಿ ವರ್ಗದ 297 ಮನೆಗಳಿಗೆ ತಲಾ ರೂ.50,000 ರಂತೆ ಈಗಾಗಲೇ ಪಾವತಿಸಲಾಗಿರುತ್ತದೆ. ಅದರಂತೆ ಸೆಪ್ಟೆಂಬರ್ ಮತ್ತು ಅಕ್ಟೋಬರ್ 2019ರ ಮಾಹೆಯಲ್ಲಿ ಎ ವರ್ಗದ 8, ಬಿ ವರ್ಗದ 9 ಮತ್ತು ಸಿ ವರ್ಗದ 1216 ಮನೆಗಳು ಹಾನಿಯಾಗಿದ್ದು, ಎ ಮತ್ತು ಬಿ ವರ್ಗದ ಮನೆಗಳಿಗೆ ತಲಾ ರೂ.1.00 ಲಕ್ಷದಂತೆ ಮೊದಲನೇ ಕಂತು ರಾಜೀವಗಾಂಧಿ ವಸತಿ ನಿಗಮದಿಂದ ಫಲಾನುಭವಿಗಳ ಖಾತೆಗೆ ಜಮೆ ಆಗಿರುತ್ತದೆ ಹಾಗೂ ಸಿ ವರ್ಗದ 1216 ಮನೆಗಳಿಗೆ ತಲಾ ರೂ.50,000 ರಂತೆ ಈಗಾಗಲೇ ಪಾವತಿಸಲಾಗಿರುತ್ತದೆ ಹಾಗೂ ಎ ಮತ್ತು ಬಿ ವರ್ಗದ 18 ಮನೆಗಳು ತಳಪಾಯ ಹಂತ ಮುಕ್ತಾಯವಾಗಿದ್ದು ಜಿಪಿಎಸ್ ಸಹಾ ಮಾಡಲಾಗಿರುತ್ತದೆ ಉಳಿದ 14 ಮನೆಗಳಿಗೆ ಶೀಘ್ರ ತಳಪಾಯ ಹಂತ ಪೂರ್ಣಗೊಳಿಸಲು ತಿಳಿಸಲಾಗಿರುತ್ತದೆ.

2019-20 ಮುಂಗಾರು ಹಂಗಾಮಿನಲ್ಲಿ ಅತೀವೃಷ್ಟಿಯಿಂದ ಹಾನಿಗೊಳಗಾದ ಬೆಳೆಗಳ ವಿವರಗಳನ್ನು ಪರಿಹಾರ ತಂತ್ರಾಂಶದಲ್ಲಿ ದಾಖಲಿಸಲಾಗಿದ್ದು, ಈಗಾಗಲೇ ಪರಿಹಾರದ ಮೊತ್ತ ಸರ್ಕಾರದಿಂದ ಫಲಾನುಭವಿಗಳ ಖಾತೆಗಳಿಗೆ ಜಮೆ ಆಗಿರುತ್ತದೆ. ಮೂಲಸೌಕರ್ಯ ದುರಸ್ತಿಗೆ ಜಿಲ್ಲೆಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ ತೀವ್ರ ಹಾನಿಗೊಳಗಾದ ಕಾಲುವೆ, ಸೇತುವೆ ದುರಸ್ತಿಗಾಗಿ ರೂ.46.00 ಲಕ್ಷದ ಅಂದಾಜು ಮೊತ್ತದ 31 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ನೀರಾವರಿ ನಿಗಮಕ್ಕೆ ಮಂಜೂರಾತಿ ನೀಡಲಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

**ಸಾಮಾಜಿಕ ಭದ್ರತಾ ಯೋಜನೆ:** ಸಾಮಾಜಿಕ ಭದ್ರತಾ ಯೋಜನೆಯಡಿ ಜಿಲ್ಲೆಯಲ್ಲಿ ಪಿಂಚಣಿ ಅದಾಲತ್ ಮಾಡುವ ಮೂಲಕ ಸರ್ಕಾರವೇ ಫಲಾನುಭವಿಗಳ ಮನೆ ಬಾಗಿಲಿಗೆ ಹೋಗಿ ಸುಮಾರು 25000 ಫಲಾನುಭವಿಗಳನ್ನು ಗುರುತಿಸಿ ಅವರಿಗೆ ಸೌಲಭ್ಯ ನೀಡಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

**ವಸತಿ ಶಾಲೆಗಳಿಗೆ ಜಮೀನು ಮಂಜೂರಾತಿ:** ವಸತಿ ಶಾಲೆಗಳಿಗೆ ಬೇಕಾಗಿರುವ ಜಮೀನನ್ನು ಈಗಾಗಲೇ ಮಂಜೂರು ಮಾಡಲಾಗಿದ್ದರೂ ಅವುಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡು ಕಟ್ಟಡಗಳನ್ನು ಇಲಾಖೆಗಳಿಂದ ಪ್ರಾರಂಭ ಮಾಡಿರುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಸಭೆಗೆ ವಿವರಿಸಿದರು. ಇಲಾಖೆಯ ವಶಕ್ಕೆ ಜಮೀನುಗಳನ್ನು ಕೂಡಲೇ ಪಡೆದುಕೊಂಡು ಖಾತೆ ಮಾಡಿಸಿಕೊಳ್ಳುವಂತೆ ಸುಮಾರು 30-40 ವರ್ಷಗಳ ಹಿಂದೆ ಅನೇಕ ಶಾಲೆಗಳಿಗೆ ಜಮೀನುಗಳನ್ನು ದಾನ ರೂಪವಾಗಿ ನೀಡಲಾಗಿದ್ದು, ಅವುಗಳನ್ನು ಇದುವರೆಗೂ ಹದ್ದುಬಸ್ತು ಮಾಡಿಕೊಳ್ಳದೇ ಇಲಾಖೆಯ ಹೆಸರಿಗೆ ಖಾತೆ ಮಾಡಿಕೊಳ್ಳದೇ ಇರುವುದರಿಂದ ದಾನ ನೀಡಿದ ತಲೆಮಾರಿನ ಮಕ್ಕಳು ಮೊಮ್ಮಕ್ಕಳು ಮಾಡುತ್ತಿರುವ ತಗಾದೆಯಿಂದ ಅನೇಕ ಪ್ರಕರಣಗಳು ನ್ಯಾಯಾಲಯದಲ್ಲಿರುತ್ತವೆ. ಆದ್ದರಿಂದ ಇನ್ನು ಮುಂದಾದರೂ ಎಲ್ಲಾ ಇಲಾಖೆಗಳು ತಮ್ಮ ತಮ್ಮ ಜಮೀನನ್ನು ಹದ್ದುಬಸ್ತು ಮಾಡಿಕೊಂಡು ಖಾತೆ ಮಾಡಿಸಿಕೊಳ್ಳಲು, ಒಂದು ವೇಳೆ ತೊಂದರೆ ಇರುವ ಕೆಲವು ಭಾಗಗಳಲ್ಲಿ ಫಾರಂ ನಂ.11, 12ರಲ್ಲಿ ಜಿಲ್ಲಾಧಿಕಾರಿಗಳಿಂದ ಖಾತೆ ಮಾಡಿಸಿಕೊಳ್ಳಲು ತಕ್ಷಣ ಕೂಡಲೇ ಕ್ರಮ ಕೈಗೊಳ್ಳುವಂತೆ ಸಭಾಧ್ಯಕ್ಷರು ಇಲಾಖಾಧಿಕಾರಿಗಳಿಗೆ ಸೂಚಿಸಿದರು.

ಕಳೆದ ಸಾಲಿನಲ್ಲಿ ಜಿಲ್ಲೆಯ ಎಲ್ಲಾ ಅಧಿಕಾರಿಗಳ ಗುಣಮಟ್ಟದ ಕೆಲಸ ನಿರ್ವಹಣೆಯಿಂದ ಉತ್ತಮ ರ್‍ಯಾಂಕಿಂಗ್ ಪಡೆದುಕೊಂಡಿದ್ದು, ಈ ಬಾರಿ ರ್‍ಯಾಂಕಿಂಗ್ ಕಡಿಮೆಯಾಗಿರುವುದರಿಂದ ಎಲ್ಲಾ ಅಧಿಕಾರಿಗಳು ಹೆಚ್ಚಿನ ನಿಗಾವಹಿಸಿ ಕೆಲಸ ಕಾರ್ಯಗಳನ್ನು ನಿರ್ವಹಿಸುವಂತೆ ಸಭಾಧ್ಯಕ್ಷರು ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಎಲ್ಲಾ ಇಲಾಖಾ ಮುಖ್ಯಾಧಿಕಾರಿಗಳು, ದಾವಣಗೆರೆ.)**

**3. ಅನುದಾನ ಬಿಡುಗಡೆ ಬಗ್ಗೆ**

1. ದಾವಣಗೆರೆ ಜಿಲ್ಲೆಯ ನ್ಯಾಮತಿ ಹೊಸ ತಾಲ್ಲೂಕು ಆಗಿದ್ದು, ಆಡಳಿತ ಭವನ ಕಟ್ಟಡ ನಿರ್ಮಾಣಕ್ಕೆ ಸುಮಾರು ಅಂದಾಜು ರೂ.10.00 ಕೋಟಿಗೆ ಕ್ರಿಯಾ ಯೋಜನೆ ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದುವರೆಗೂ ಅನುದಾನ ಬಿಡುಗಡೆಯಾಗಿರುವುದಿಲ್ಲ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳು ಸಭಾಧ್ಯಕ್ಷರನ್ನು ಕೋರಿದರು.
2. ದಾವಣಗೆರೆ ಜಿಲ್ಲೆಯ ಹೊನ್ನಾಳಿಯಲ್ಲಿ ಸಬ್‌ಡಿವಿಜನ್ ಎ.ಸಿ. ಆಫೀಸ್ ಕಛೇರಿ ಕಟ್ಟಡಕ್ಕೆ ರೂ.1.00 ಕೋಟಿಗೆ ಕ್ರಿಯಾ ಯೋಜನೆ ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದುವರೆಗೂ ಅನುದಾನ ಬಿಡುಗಡೆಯಾಗಿರುವುದಿಲ್ಲ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳು ಸಭಾಧ್ಯಕ್ಷರನ್ನು ಕೋರಿದರು.
3. ದಾವಣಗೆರೆ ಜಿಲ್ಲೆಯ ತ್ಯಾವಣಿಗೆ ಗ್ರಾಮದಲ್ಲಿ ಪಶುಪಾಲನಾ ಆಸ್ಪತ್ರೆ ನಿರ್ಮಾಣಕ್ಕೆ ಸರ್ಕಾರಿ ಜಾಗ ಮಂಜೂರು ಮಾಡಬೇಕಾಗಿದ್ದು, ನೀರಾವರಿ ಇಲಾಖೆಗೆ ಸಂಬಂಧಪಟ್ಟ ಜಮೀನು ಬಹಳ ಇದ್ದು, ಅದರಲ್ಲಿ 100*100 ಜಮೀನನ್ನು ಪಶುಪಾಲನಾ ಇಲಾಖೆಗೆ ಹಸ್ತಾಂತರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದ್ದರೂ ಇದುವರೆಗೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳು ಸಭಾಧ್ಯಕ್ಷರನ್ನು ಕೋರಿದರು.
4. ದಾವಣಗೆರೆ ನಗರದಲ್ಲಿ ರಂಗಮಂದಿರ ನಿರ್ಮಾಣಕ್ಕೆ (ಸೌಂಡ್‌ಪ್ರೂಫ್ ಮಾಡಲು) ರೂ.5.00 ಕೋಟಿಗೆ ಕ್ರಿಯಾ ಯೋಜನೆ ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದುವರೆಗೂ ಅನುದಾನ ಬಿಡುಗಡೆಯಾಗಿರುವುದಿಲ್ಲ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳು ಸಭಾಧ್ಯಕ್ಷರನ್ನು ಕೋರಿದರು. ಸಭಾಧ್ಯಕ್ಷರು ಅಂದಾಜು ಪಟ್ಟಿಯನ್ನು ಮರುಪರಿಶೀಲಿಸಿ, ಪರಿಷ್ಕೃತ ಪ್ರಸ್ತಾವನೆ ಸಿದ್ದಪಡಿಸಿ ಸಲ್ಲಿಸಲು ಸೂಚಿಸಿದರು.

(ಕ್ರಮ: ಸಂಬಂಧಪಟ್ಟ ಅಧಿಕಾರಿಗಳು)

**4. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:-** ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನಲ್ಲಿ ಸದರಿ ಯೋಜನೆಯಡಿ ಲೇಬರ್ ಓರಿಯೇಂಟೆಡ್ ಕಾಮಗಾರಿಗಳನ್ನೇ ಹೆಚ್ಚಾಗಿ ತೆಗೆದುಕೊಳ್ಳಲು, ಪ್ರತಿ ದಿನ ಕೈಗೊಳ್ಳಲಾದ ಕಾಮಗಾರಿಗಳ ಛಾಯಾ ಚಿತ್ರವನ್ನು ಅಪ್‌ಲೋಡ್ ಮಾಡುವಂತೆ, 60:40ನ್ನು 90:10 ಮಾಡಲು ಪ್ರಯತ್ನಿಸಲಾಗುತ್ತಿದೆ. ಈ ಯೋಜನೆಯಡಿ ಹಣ ದುರುಪಯೋಗ ಮತ್ತು ಕಳಪೆ ಕಾಮಗಾರಿ ಕೈಗೊಂಡ 5 ಜನರನ್ನು ಅಮಾನತ್ತು ಮಾಡಲಾಗಿದೆ. ಇತ್ತೀಚೆಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಗ್ರಾಮ ಪಂಚಾಯಿತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗಿದೆ, ಇದರಲ್ಲಿ ಭಾಗಿಯಾದ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್ ಇವರು ಸಭಾಧ್ಯಕ್ಷರ ಗಮನಕ್ಕೆ ತಂದರು. ಹಣ ದುರುಪಯೋಗ ಮತ್ತು ಕಳಪೆ ಕಾಮಗಾರಿ ಕೈಗೊಂಡಂತಹ ಹೊರಗುತ್ತಿಗೆ ಆಧಾರದ ಸಿಬ್ಬಂದಿಯ ಮೇಲೂ ಸಹ ಕ್ರಿಮಿನಲ್ ಮೊಕದ್ದಮೆಯನ್ನು ಹೂಡುವಂತೆ, ಸದರಿ ಯೋಜನೆಯಡಿ ಶಾಲಾ ಕಾಂಪೌಡು ಹಾಗೂ ಶಾಲಾ ಶೌಚಾಲಯಗಳ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತೆ ಸಭಾಧ್ಯಕ್ಷರು ಇಲಾಖಾಧಿಕಾರಿಗಳಿಗೆ ಸೂಚಿಸಿದರು.

(ಕ್ರಮ: ಉಪಕಾರ್ಯದರ್ಶಿ, ಜಿ.ಪಂ., ದಾವಣಗೆರೆ.)

**5. ಸ್ವಚ್ಛ ಭಾರತ್ ಮಿಷನ್:-** ಇಲಾಖೆಯ ಪ್ರಗತಿಯನ್ನು ಪರಿಶೀಲಿಸಲಾಯಿತು. ಘನ ತ್ಯಾಜ್ಯ ನಿರ್ವಹಣಾ ಘಟಕ 72 ಗುರಿ ಇದ್ದು, ಅದರಲ್ಲಿ 17 ಘಟಕಗಳಿಗೆ ಸರ್ಕಾರದಿಂದ ಡಿ.ಪಿ.ಆರ್. ಅನುಮೋದನೆ ನೀಡಲಾಗಿರುತ್ತದೆ, ಎಲ್ಲಾ ಗ್ರಾಮ ಪಂಚಾಯತಿಯಲ್ಲಿಯೂ ಘನ ತ್ಯಾಜ್ಯ ನಿರ್ವಹಣಾ ಘಟಕವನ್ನು ಮಾಡಬೇಕೆಂದು ಸರ್ಕಾರದ ಆದೇಶ ಬಂದಿರುವುದಾಗಿ, ಕೆಲವು ಗ್ರಾಮ ಪಂಚಾಯತಿಗಳಲ್ಲಿ ಜಾಗದ ಸಮಸ್ಯೆ ಇರುವುದಾಗಿ ಸಭೆಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಭೆಗೆ ತಿಳಿಸಿದರು. ಮುಂದಿನ ದಿನಗಳಲ್ಲಿ ಘನ ತ್ಯಾಜ್ಯ ನಿರ್ವಹಣೆ ಕೆಲಸ ತುಂಬಾ ಕಷ್ಟಕರವಾಗಲಿರುವುದರಿಂದ, ಸಾಧ್ಯವಾದಷ್ಟು ಹೆಚ್ಚಿನ ಗಮನಹರಿಸಿ, ವಿಶೇಷ ಕಾಳಜಿ ವಹಿಸಿ, ಘಟಕಗಳನ್ನು ನಿರ್ವಹಿಸುವಂತೆ, ಜಾಗದ ಸಮಸ್ಯೆ ಇರುವ ಕಡೆ ಜಿಲ್ಲಾಧಿಕಾರಿಗಳಿಂದ ಜಾಗವನ್ನು ಪಡೆದು ಕ್ರಮ ಜರುಗಿಸುವಂತೆ ಸಭಾಧ್ಯಕ್ಷರು ಸೂಚಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು, ಜಿ.ಪಂ., ದಾವಣಗೆರೆ.)**

**6. ಕೃಷಿ ಇಲಾಖೆ:** ಇಲಾಖೆಯ ಪ್ರಗತಿಯನ್ನು ಪರಿಶೀಲಿಸಲಾಯಿತು. ಸಾವಯವ ಕೃಷಿಗೆ ಉತ್ತೇಜನ ನೀಡಿ ರೈತರಿಗೆ ಈ ಬಗ್ಗೆ ಹೆಚ್ಚಿನ ಅರಿವು ಮೂಡಿಸಬೇಕು. ಇದಕ್ಕೆ ಹಾಕುವ ಬಂಡವಾಳ ಕಡಿಮೆ ಇದ್ದು, ಲಾಭವನ್ನು ಗಳಿಸಬಹುದಾದ ಯೋಜನೆ ಇದಾಗಿದ್ದು, ಸಾವಯವ ಬೀಜ ಅಂದರೆ ಗೋಧಿ, ಜೋಳ, ನವಧಾನ್ಯಗಳು, ಹಣ್ಣು, ತರಕಾರಿ ಇವುಗಳಿಗೆ ಉತ್ತಮ ಬೇಡಿಕೆ ಇದ್ದು, ಇವುಗಳನ್ನು ಬೆಳೆಯಲು ರೈತರಿಗೆ ತಿಳಿಸಬೇಕೆಂದು ಸಭಾಧ್ಯಕ್ಷರು ಇಲಾಖಾಧಿಕಾರಿಗಳಿಗೆ ಸೂಚಿಸಿದರು. ಸಾವಯವ ಕೃಷಿಯನ್ನು ಮಾಡಲು ರೈತರು ಮುಂದೆ ಬರುತ್ತಿಲ್ಲ ಎಂದು ಇಲಾಖಾಧಿಕಾರಿಗಳು ಸಭೆಯ ಗಮನಕ್ಕೆ ತಂದರು. ರೈತ ಉತ್ತಮ ಬೆಳೆಯನ್ನು ಬೆಳೆಯಬೇಕು ಎಂದು ಸಾಲ ಮಾಡಿ ಬೀಜ ಮತ್ತು ಗೊಬ್ಬರವನ್ನು ಹಾಕಿ ಬೆಳೆಯುತ್ತಾನೆ. ಉತ್ತಮ ಬೆಳೆಯು ಬಂದಾಗ ದರ ಕಡಿಮೆಯಾಗಿ, ಮಾಡಿದ ಸಾಲವನ್ನು ಸಹ ತೀರಿಸಲಾಗದೇ ಕಂಗಾಲಾದ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಇದನ್ನು ತಪ್ಪಿಸಲು ಹೆಚ್ಚು ಸಾವಯವ ಕೃಷಿಯನ್ನು ಬೆಳೆಯಲು ರೈತರಿಗೆ ಉತ್ತೇಜನ ನೀಡಬೇಕೆಂದು ಹಾಗೂ ಇಲಾಖೆಯಿಂದ ಸಹಾಯಧನ ರೂಪದಲ್ಲಿ ನಿರ್ಮಿಸಲಾಗುತ್ತಿರುವ ಕೃಷಿ ಹೊಂಡದಲ್ಲಿ ಬಿದ್ದು ಸತ್ತವರ ಸಂಖ್ಯೆ ಜಾಸ್ತಿಯಾಗಿರುತ್ತದೆ. ಅದಕ್ಕೆ ಉಪಯೋಗಿಸುತ್ತಿರುವ ಪ್ಲಾಸ್ಟಿಕ್ ಕವರು ಜಾರುತ್ತಿರುವುದರಿಂದ ಬಿದ್ದ ವ್ಯಕ್ತಿ ಮೇಲೆ ಬರಲು ಸಾಧ್ಯವೇ ಇಲ್ಲ, ಒಂದು ವೇಳೆ ಈಜಲು ಬರುತ್ತಿದ್ದರೂ ಎಷ್ಟು ಹೊತ್ತು ಈಜಲು ಸಾಧ್ಯ, ಆದ್ದರಿಂದ ಈಗ ನಿರ್ಮಿಸಲಾಗುತ್ತಿರುವ ಕೃಷಿ ಹೊಂಡದ design change ಮಾಡಲು ಸಭಾಧ್ಯಕ್ಷರು ಇಲಾಖಾಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ದಾವಣಗೆರೆ.)**

**7. ಸಾಮಾಜಿಕ ಅರಣ್ಯ:** ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸುಮಾರು 25 ಜನರಿಗೆ 8-9 ತಿಂಗಳಿಂದ ಗೌರವ ಧನದ ತೊಂದರೆಯಾಗಿರುತ್ತದೆ ಎಂದು ಉಪ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು. ಸಂಬಂಧಪಟ್ಟ ಇಲಾಖಾ ಮುಖ್ಯಾಧಿಕಾರಿಗಳಿಗೆ ತಮ್ಮನ್ನು ಸಂಪರ್ಕ ಮಾಡಲು ತಿಳಿಸಬೇಕೆಂದು ಸಭಾಧ್ಯಕ್ಷರು ಸೂಚಿಸಿದರು.

**(ಕ್ರಮ: ಸಾಮಾಜಿಕ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ, ದಾವಣಗೆರೆ.)**

**8. ಅಭಿವೃದ್ಧಿ ನಿಗಮಗಳು:** ಎಲ್ಲಾ ನಿಗಮಗಳ ವಿವಿಧ ಯೋಜನೆಗಳಾದ ಗಂಗಾ ಕಲ್ಯಾಣ ಮುಂತಾದವುಗಳಲ್ಲಿ ಇದುವರೆಗೆ ಫಲಾನುಭವಿಗಳ ಆಯ್ಕೆ ಆಗದೇ ಇರುವ ನಿಗಮಗಳು ಸಂಬಂಧಪಟ್ಟ ಶಾಸಕರುಗಳಿಂದ ಕೂಡಲೇ ಆಯ್ಕೆ ಪಟ್ಟಿಯನ್ನು ಪಡೆಯುವಂತೆ, ಅದು ಸಾಧ್ಯವಾಗದೇ ಇದ್ದಲ್ಲಿ, ಜಿಲ್ಲಾಧಿಕಾರಿಗಳು

ಸಹ ಆಯ್ಕೆ ಪಟ್ಟಿಯನ್ನು ಪ್ರಕಟಿಸಬಹುದಾಗಿದ್ದು, ಯಾವುದಕ್ಕೂ ಕೂಡಲೇ ಕ್ರಮ ಜರುಗಿಸಲು ಇಲಾಖಾಧಿಕಾರಿಗಳಿಗೆ ಸಭಾಧ್ಯಕ್ಷರು ಸೂಚಿಸಿದರು.

**(ಕ್ರಮ: ಜಿಲ್ಲಾ ಅಧಿಕಾರಿಗಳು, 1. ಡಿ.ದೇವರಾಜ್ ಅರಸ್ ಅಭಿವೃದ್ಧಿ ನಿಗಮ, 2. ಕರ್ನಾಟಕ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, 3. ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, 4. ನಿಜ ಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ)**

**9. ಕೌಶಲ್ಯಾಭಿವೃದ್ಧಿ:-** ಕೇಂದ್ರ ಸರ್ಕಾರದಿಂದ ನಡೆಸಲಾಗುತ್ತಿರುವ ಕೌಶಲ್ಯಾಭಿವೃದ್ಧಿ ತರಬೇತಿಗಳಲ್ಲಿ ಹಳೆಯ ಕಾಲದ ತರಬೇತಿಗಳನ್ನೇ ಮುಂದುವರೆಸದೆ ಹೊಸದಾಗಿ ಸೋಲಾರ್ ಲ್ಯಾಂಪ್, ಸೋಲಾರ್ ಬ್ಯಾಟರಿ, ಸೋಲಾರ್ ಮಿಷನ್, ಮುಂತಾದವುಗಳನ್ನು ದುರಸ್ಥಿಪಡಿಸುವ ಹೊಸ ಹೊಸ ಸಮಾಜಕ್ಕೆ ಉಪಯುಕ್ತವಾಗುವ ರೀತಿಯಲ್ಲಿ ತರಬೇತಿಯನ್ನು ನಡೆಸಿದ್ದಲ್ಲಿ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಕ್ರಮ ಜರುಗಿಸಲು ಸಭಾಧ್ಯಕ್ಷರು ಇಲಾಖಾಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ:ಕೌಶಲ್ಯಾಭಿವೃದ್ಧಿ ಅಧಿಕಾರಿಗಳು, ದಾವಣಗೆರೆ)**

**10. ಕರ ವಸೂಲಾತಿ:-** ತೆರಿಗೆ ಸಂಗ್ರಹಣ ಕಾರ್ಯಕ್ರಮವು ಮಂದಗತಿಯಲ್ಲಿ ಸಾಗುತ್ತಿದ್ದು, ಬಾಕಿ ವಸೂಲಾತಿಯೂ ಬಹಳ ಇರುತ್ತದೆ. ಗ್ರಾಮೀಣಾಭಿವೃದ್ಧಿ ಹಾಗೂ ಜಿಲ್ಲಾ ಅಭಿವೃದ್ಧಿಯೂ ತೆರಿಗೆ ಸಂಗ್ರಹವನ್ನೇ ಆಧರಿಸಿರುವುದರಿಂದ ಈ ಬಗ್ಗೆ ಹೆಚ್ಚಿನ ನಿಗಾ ವಹಿಸುವಂತೆ ಹಾಗೂ ತೆರಿಗೆ ಸಂಗ್ರಹಣೆಯನ್ನು ಚೆನ್ನಾಗಿ ಮಾಡುತ್ತಿರುವ ಬಿಲ್ ಕಲೆಕ್ಟರ್‌ಗಳಿಗೆ ಪ್ರಶಸ್ತಿ, ಪ್ರೋತ್ಸಾಹ ನೀಡಿ, ಗೌರವಿಸಿದ್ದಲ್ಲಿ ಅದು ಮಾದರಿಯಾಗಿ ಆ ನಿಟ್ಟಿನಲ್ಲಿ ಬಿಲ್ ಕಲೆಕ್ಟರ್‌ಗಳು ತೆರಿಗೆ ಸಂಗ್ರಹಣೆಗೆ ಆಸಕ್ತಿವಹಿಸಿ ಮಾಡುತ್ತಾರೆ ಎಂದು ಸಭಾಧ್ಯಕ್ಷರು ಸಲಹೆ ನೀಡಿದರು.

**(ಕ್ರಮ: ಉಪ ಕಾರ್ಯದರ್ಶಿ, ಜಿ.ಪಂ.ದಾವಣಗೆರೆ)**

ಅಪರ ಜಿಲ್ಲಾಧಿಕಾರಿಯವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

(ಎಸ್.ಆರ್. ಉಮಾಶಂಕರ್, ಭಾ.ಆ.ಸೇ.,)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)
ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ದಿನಾಂಕ: 14-01-2020 ರಂದು ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ, ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಹಾಗೂ ಚಾಮರಾಜನಗರ್ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು. ಚಾಮರಾಜನಗರ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ಸಭಾ ನಡವಳಿ.**

ಹಾಜರಿದ್ದವರು:

1. ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಹಾಗೂ ಚಾಮರಾಜನಗರ್ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು. ಚಾಮರಾಜನಗರ
2. ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಾಮರಾಜನಗರ
4. ಉಪವಿಭಾಗಾಧಿಕಾರಿ, ಕೊಳ್ಳೇಗಾಲ ಉಪವಿಭಾಗ, ಕೊಳ್ಳೇಗಾಲ
5. ಜಿಲ್ಲಾ ಮಟ್ಟದ ಅಧಿಕಾರಿಗಳು, ಚಾಮರಾಜನಗರ ಜಿಲ್ಲೆ

ಮಾನ್ಯ ಜಿಲ್ಲಾಧಿಕಾರಿಗಳು, ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು. ಚಾಮರಾಜನಗರ ರವರಿಗೆ ಮತ್ತು ಸಭೆಗೆ ಹಾಜರಿದ್ದ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸ್ವಾಗತವನ್ನು ಕೋರಿದರು.

ಇ-ಆಫೀಸ್ :

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಎಲ್ಲಾ ಜಿಲ್ಲಾ ಮಟ್ಟದ ಕಛೇರಿಯ ಅಧಿಕಾರಿಗಳಿಗೆ 01-01-2020 ರಿಂದ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ಇ-ಆಫೀಸ್ ತಂತ್ರಾಂಶದಲ್ಲಿ ಕಾರ್ಯನಿರ್ವಹಿಸುವಂತೆ ಸರ್ಕಾರ ನಿರ್ದೇಶನ ನೀಡಿದ್ದು, ಅದರಂತೆ ಜಿಲ್ಲೆಯ ಎಲ್ಲಾ ಕಛೇರಿಗಳಲ್ಲಿ ಇ-ಆಫೀಸ್ ತಂತ್ರಾಂಶದ ಮೂಲಕ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸೂಚಿಸುತ್ತಾ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಾಮರಾಜನಗರ ಹಾಗೂ ಹೆಚ್ಚುವರಿ ಪೋಲೀಸ್ ವರಿಷ್ಠಾಧಿಕಾರಿಗಳು, ಚಾಮರಾಜನಗರ ಜಿಲ್ಲೆ ರವರಿಗೆ ಜಿಲ್ಲಾ ಪಂಚಾಯತ್ ಕಛೇರಿ ಹಾಗೂ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳ ಕಛೇರಿಯಲ್ಲಿ ಇ-ಆಫೀಸ್ ತಂತ್ರಾಂಶದ ಮೂಲಕ ಕಛೇರಿಯ ಕೆಲಸ ಕಾರ್ಯಗಳನ್ನು ಕಡ್ಡಾಯವಾಗಿ ನಿರ್ವಹಿಸಲು ಸೂಚಿಸಿದರು. ಅರಣ್ಯ ಇಲಾಖೆ ಹಾಗೂ ಇತರೆ ಇಲಾಖೆಗಳಲ್ಲಿ ಇ-ಆಫೀಸ್ ತಂತ್ರಾಂಶವನ್ನು ಅನುಷ್ಠಾನಗೊಳಿಸಲು ಏನಾದರೂ ತೊಂದರೆ ಇರುವ ಕುರಿತು ತಿಳಿಸಲು ಸೂಚಿಸಿದರು.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಚಾಮರಾಜನಗರ ವೃತ್ತ, ಚಾಮರಾಜನಗರ ರವರು ಈಗಾಗಲೇ ಇ-ಆಫೀಸ್ ತಂತ್ರಾಂಶದಲ್ಲಿ ಕಡತಗಳನ್ನು ರಚಿಸಲಾಗುತ್ತಿದ್ದು, ಇನ್ನೊಂದು ವಾರದಲ್ಲಿ ಇ-ಆಫೀಸ್‌ರಲ್ಲಿ ಪೂರ್ಣ ಪ್ರಮಾಣವಾಗಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುವುದು ಎಂದು ಹಾಗೂ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ನಿರ್ದೇಶಕರು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಗುಂಡ್ಲುಪೇಟೆ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮಲೈ ಮಹದೇಶ್ವರ ವನ್ಯ ಜೀವಿ ವಿಭಾಗ, ಕೊಳ್ಳೇಗಾಲ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಕಾವೇರಿ ವನ್ಯ ಜೀವಿ ವಿಭಾಗ, ಕೊಳ್ಳೇಗಾಲ ರವರು ತಮ್ಮ ಕಛೇರಿಗಳಲ್ಲಿ ಇ-ಆಫೀಸ್ ತಂತ್ರಾಂಶವನ್ನು ಅಳವಡಿಸಿ ಕೊಂಡಿದ್ದೇವೆ ಎಂದು ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿ ರವರು ಇ-ಆಫೀಸ್ ಅನ್ನು ಸರ್ಕಾರಿ ಕಛೇರಿಗಳಲ್ಲಿ ಅನುಷ್ಠಾನಗೊಳಿಸಲು ಮುಖ್ಯವಾಗಿ 02 ರಿಂದ 03 ಸ್ಕ್ಯಾನರ್‌ಗಳು ಮಾತ್ರ ಅವಶ್ಯಕವಾಗಿದ್ದು, ನ್ಯಾಯಾಲಯ ಪ್ರಕರಣ ಹಾಗೂ ನೆನಪೋಲೆ ಪತ್ರಗಳನ್ನು (existing files) ಹೊರತುಪಡಿಸಿ, ಹೊಸ ಕಡತಗಳನ್ನು ಇ- ಆಫೀಸ್ ತಂತ್ರಾಂಶಕ್ಕೆ ಸ್ಕ್ಯಾನರ್ ಮಾಡಿ ದಾಖಲಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಾಮರಾಜನಗರ, ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ನಿರ್ದೇಶಕರು , ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ, ಹಾಗೂ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ನಿರ್ದೇಶಕರು , ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ )

....... 2/-

**ಮಳೆ ವರದಿ :**

2019-20 ನೇ ಸಾಳಿನ ಹಿಂಗಾರು ಹಂಗಾಮಿನಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಜಿಲ್ಲಾದ್ಯಂತ ಡಿಸೆಂಬರ್ ಮಾಹೆಯ ವರೆಗೆ 791.2 ಮಿ.ಮೀ ವಾಡಿಕೆ ಮಳೆ ಇದ್ದು, 900.4 ಮಿ.ಮೀ ಹೆಚ್ಚು ಮಳೆಯಾಗಿರುತ್ತದೆ ಎಂದು ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು. ಪ್ರಸಕ್ತ ಮಾಹೆಯಲ್ಲಿ 1.3 ಮಿ ಮೀ ವಾಡಿಕೆ ಮಳೆಯಾಗಬೇಕಾಗಿದ್ದು 0.22 ಮಿಮೀ ಮಳೆಯಾಗಿರುತ್ತದೆ ಎಂದು ಸಭೆಗೆ ಮಾಹಿತಿಯನ್ನು ನೀಡಿದರು.

**ಕೃಷಿ ಇಲಾಖೆ :**

ಚಾಮರಾಜನಗರ ಜಿಲ್ಲೆಯಲ್ಲಿ ಈ ಬಾರಿ ಉತ್ತಮವಾಗಿ ಮಳೆಯಾಗಿರುವುದರಿಂದ ಹಿಂಗಾರು ಹಂಗಾಮಿನಲ್ಲಿ 38229 ಹೆಕ್ಟೇರ್ ಜಮೀನಿನಲ್ಲಿ ಪ್ರಮುಖವಾಗಿ ಭತ್ತ, ರಾಗಿ, ಮುಸುಕಿನ ಜೋಳ, ಹುರುಳಿ ಮತ್ತು ಹಸಿಕಡಲೆ ಬೆಳೆಗಳು ಬಿತ್ತನೆಯಾಗಿರುತ್ತದೆ. 2019-20ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ ಚಾಮರಾಜನಗರ ತಾಲ್ಲೂಕಿನಲ್ಲಿ 8117 ಹೆಕ್ಟೇರ್ ಅಷ್ಟು ಬಿತ್ತನೆಯಾಗಿದ್ದು, ಗುಂಡ್ಲುಪೇಟೆಯಲ್ಲಿ 16655 ಹೆಕ್ಟೇರ್, ಕೊಳ್ಳೇಗಾಲ ತಾಲ್ಲೂಕಿನಲ್ಲಿ 11047 ಹೆಕ್ಟೇರ್, ಯಳಂದೂರು ತಾಲ್ಲೂಕಿನಲ್ಲಿ 2410 ಹೆಕ್ಟೇರ್ ರಂತೆ ಒಟ್ಟಾರೆ ಜಿಲ್ಲೆಯಲ್ಲಿ 38229 ಹೆಕ್ಟೇರ್ ಅಷ್ಟು ಬಿತ್ತನೆಯಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಜಂಟಿ ನಿರ್ದೇಶಕರಿಗೆ ಚಾಮರಾಜನಗರ ಜಿಲ್ಲೆಯಲ್ಲಿ ಉತ್ತಮವಾಗಿ ಮಳೆಯಾಗಿರುವುದರಿಂದ ರಸಗೊಬ್ಬರದ ಅವಶ್ಯಕತೆ ಹೆಚ್ಚಾಗಿರುತ್ತದೆ. ರಸಗೊಬ್ಬರದ ದಾಸ್ತಾನಿನ ಕೊರತೆ ಉಂಟಾಗದಂತೆ ಕ್ರಮವಹಿಸಲು ಸೂಚಿಸಿದರು.

**(ಕ್ರಮ: ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಚಾಮರಾಜನಗರ)**

**ಬೆಳೆ ಸಮೀಕ್ಷೆ:**

2019-20 ನೇ ಸಾಲಿನ ಪೂರ್ವ ಮಂಗಾರು ಮತ್ತು ಮುಂಗಾರು ಹಂಗಾಮಿನಲ್ಲಿ ಬೆಳೆ ಸಮೀಕ್ಷೆ ಕಾರ್ಯ ಮುಕ್ತಾಯಗೊಂಡಿರುತ್ತದೆ. ಈ ಬಗ್ಗೆ ರೈತರ ಪಟ್ಟಿಯನ್ನು ತಾಲ್ಲೂಕು ಮಟ್ಟದಲ್ಲಿ ಎಲ್ಲಾ ತಹಶೀಲ್ದಾರ್ ರವರ ಕಾರ್ಯಾಲಯ ಹಾಗೂ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗಳಲ್ಲಿ ಬೆಳೆ ಸಮೀಕ್ಷೆ ಪೂರ್ಣಗೊಂಡಿರುವ ಪಟ್ಟಿಯನ್ನು ನಾಮಫಲಕಗಳಲ್ಲಿ ಪ್ರದರ್ಶಿಸುವಂತೆ ಹಾಗೂ ಹೋಬಳಿ ಮಟ್ಟದಲ್ಲಿ ಎಲ್ಲಾ ನಾಡ ಕಛೇರಿ, ಗ್ರಾಮ ಪಂಚಾಯಿತಿ ಕಛೇರಿಗಳು ಹಾಘೂ ರೈತ ಸಂಪರ್ಕ ಕೇಂದ್ರಗಳ ನಾಮಫಲಕಗಳಲ್ಲಿ ಪಟ್ಟಿಗಳನ್ನು ಪ್ರಚುರ ಪಡಿಸಿ ಈ ಮೂಲಕ ರೈತರು ಆಕ್ಷೇಪಣೆಗಳನ್ನು ಸಲ್ಲಿಸಲು ಅನುವು ಮಾಡಿಕೊಡುವಂತೆ ಮಾನ್ಯ ಜಿಲ್ಲಾ ಉಸ್ಸುವಾರಿ ಕಾರ್ಯದರ್ಶಿಗಳು ಸೂಚಿಸಿದರು.

ಮುಂದುವರೆದು, 2019-20 ನೇ ಸಾಲಿನಲ್ಲಿ ಹಿಂಗಾರು ಹಂಗಾಮಿನ ಸಮೀಕ್ಷೆಗೆ ಆಯ್ಕೆಯಾದ ಹಳ್ಳಿಗಳಿಗೆ ಪಿ.ಆರ್‌ಗಳು ಮತ್ತು ಮೇಲ್ವಿಚಾರಕರನ್ನು ತ್ವರಿತಗತಿಯಲ್ಲಿ ನೇಮಕ ಮಾಡುವಂತೆ ಹಾಗೂ ಬೆಳೆ ಸಮೀಕ್ಷೆ ಕಾರ್ಯವನ್ನು ಕೂಡಲೆ ಪ್ರಾರಂಭಿಸಿ ನಿಗಧಿತ ಸಮಯದಲ್ಲಿ ಪೂರ್ಣಗೊಳಿಸಲು ಸೂಚಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಚಾಮರಾಜನಗರ, ತಹಶೀಲ್ದಾರ್, ಚಾಮರಾಜನಗರ/ ಗುಂಡ್ಲುಪೇಟೆ/ ಯಳಂದೂರು/ ಕೊಳ್ಳೇಗಾಲ, ಹನೂರು, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಚಾಯಿತಿ, ಚಾಮರಾಜನಗರ /ಯಳಂದೂರು / ಗುಂಡ್ಲುಪೇಟೆ/ ಕೊಳ್ಳೇಗಾಲ)**

**ಕರ್ನಾಟಕ ರೈತ ಸುರಕ್ಷ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆ :**

ಕರ್ನಾಟಕ ರೈತ ಸುರಕ್ಷ ಪ್ರಧಾನ ಮಂತ್ರಿ ಫಸಲ್ ಬೀಮಾ ಯೋಜನೆಯಡಿ 2016-17ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ 49132 ರೈತ ಫಲಾನುಭವಿಗಳಿಗೆ 2548.35 ಲಕ್ಷ ವಿಮಾ ಮೊತ್ತ ಜಾರಿಯಾಗಿದ್ದು, ಅದರಲ್ಲಿ 17013 ರೈತ ಫಲಾನುಭವಿಗಳಿಗೆ 1194.25 ಲಕ್ಷ ರೂ.ಗಳ ವಿಮಾ ಮೊತ್ತ

ಪಾವತಿಯಾಗಿರುತ್ತದೆ. ಉಳಿದಂತೆ 1354.10 ಲಕ್ಷ ವಿಮಾ ಮೊತ್ತ ರೈತ ಫಲಾನುಭವಿಗಳಿಗೆ ಪಾವತಿಯಾಗಬೇಕಾಗಿದ್ದು, ಕೃಷಿ ಆಯುಕ್ತರ ಹೆಸರಿನಲ್ಲಿ ESCROW account ತೆರೆಯಲಾಗಿರುತ್ತದೆ. ಈ ಸಂಬಂಧ ಈಗಾಗಲೇ 3512 ಜನ ರೈತ ಫಲಾನುಭವಿಗಳ ದಾಖಲಾತಿಗಳನ್ನು ಸಂಗ್ರಹಿಸಿ, 231.60 ಲಕ್ಷ ಮೊತ್ತಕ್ಕೆ ಕೇಂದ್ರ ಕಛೇರಿ, ಕೃಷಿ ಇಲಾಖೆ, ಬೆಂಗಳೂರು ಇಲ್ಲಿಗೆ ಸಲ್ಲಿಸಲಾಗಿರುತ್ತದೆ ಹಾಗೂ 8140 ರೈತ ಫಲಾನುಭವಿಗಳ ದಾಖಲಾತಿಗಳನ್ನು ಸಂಗ್ರಹಿಸಿ ಡಾಟಾ ಎಂಟ್ರಿ ಕಾರ್ಯ ಮುಗಿದ ನಂತರ ಕೇಂದ್ರ ಕಛೇರಿ, ಕೃಷಿ ಇಲಾಖೆ, ಬೆಂಗಳೂರು ಗೆ ಸಲ್ಲಿಸಲಾಗುವುದು ಎಂದು ಮಾನ್ಯ ಜಿಲ್ಲಾಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಬೆಳೆ ವಿಮಾ ಮೊತ್ತ ಪಡೆಯಲು ಈಗಾಗಲೇ ಸಂಗ್ರಹಿಸಲಾಗಿರುವ ರೈತ ಫಲಾನುಭವಿಗಳ ಪಟ್ಟಿಯನ್ನು ಕೂಡಲೇ ಕೇಂದ್ರ ಕಛೇರಿಗೆ ಕಳುಹಿಸಿಕೊಡಲು ಹಾಗೂ ಬಾಕಿ ಉಳಿದಿರುವ ಫಲಾನುಭವಿಗಳ ದಾಖಲಾತಿಗಳನ್ನು ತ್ವರಿತಗತಿಯಲ್ಲಿ ಸಂಗ್ರಹಿಸಲು ಕ್ರಮ ವಹಿಸುವಂತೆ ಸೂಚಿಸಿದರು.

**( ಕ್ರಮ: ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಚಾಮರಾಜನಗರ)**

**ಎಸ್.ಸಿ.ಪಿ/ಟಿಎಸ್.ಪಿ ಯೋಜನೆ :**

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಕಡಿಮೆ ಪ್ರಗತಿ ಸಾಧಿಸಿದ 10 ಇಲಾಖೆಗಳ ಪ್ರಗತಿಯ ಬಗ್ಗೆ ಮಾತನಾಡುತ್ತಾ, ಎಲ್ಲಾ ಇಲಾಖೆಗಳು ಪ್ರತಿ ಮಾಹೆ ವಿಳಂಬವಾಗಿ ಪ್ರಗತಿ ವರದಿಯನ್ನು ಸಲ್ಲಿಸುತ್ತಿದ್ದು, ನಿಗಧಿತ ನಮೂನೆಯಲ್ಲಿ ನಿಗಧಿತ ಅವಧಿಯೊಳಗೆ Google Sheet ಸೃಜಿಸಿ ಪ್ರತಿ ಮಾಹೆ ಇಲಾಖಾವಾರು ಪ್ರಗತಿಯನ್ನು ಅಪ್ ಲೋಡ್ ಮಾಡುವಂತೆ ಸೂಚಿಸುತ್ತಾ, ಪ್ರಗತಿಯ ವರದಿಯನ್ನು ಸಂಬಂಧಪಟ್ಟ ಇಲಾಖೆಗಳಿಗೆ ರವಾನಿಸಿ, ಮುಂದಿನ ಸಭೆಯಲ್ಲಿ ಸಂಬಂಧಪಟ್ಟ ಇಲಾಖೆಯವರು ಪ್ರಗತಿಯ ವರದಿಯ ಮಾಹಿತಿಯನ್ನು ಒದಗಿಸಲು ಸೂಕ್ತ ಕ್ರಮವಹಿಸುವಂತೆ ಸೂಚಿಸಲಾಯಿತು.

**(ಕ್ರಮ: ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಚಾಮರಾಜನಗರ ಹಾಗೂ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಚಾಮರಾಜನಗರ)**

**ಕಾವೇರಿ ನೀರಾವರಿ ನಿಗಮ ನಿಯಮಿತ :**

ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ, ಅಟ್ಟುಗುಳಿಪುರರವರು ಈ ಯೋಜನೆಯ ಅಡಿಯಲ್ಲಿ ಗುಂಡ್ಲುಪೇಟೆ ಮತ್ತು ಚಾಮರಾಜನಗರ ತಾಲ್ಲೂಕಿನ ಒಟ್ಟು 11 ಕೆರೆಗಳಿಗೆ ನೀರು ತುಂಬಿಸಲು ಉದ್ದೇಶಿಸಲಾಗಿದ್ದು, ಆಲಂಬೂರು ಏತ ಯೋಜನೆಯ ಮುಂದುವರೆದ ಭಾಗವಾಗಿ ಈ ಕಾಮಗಾರಿಯನ್ನು ಕೈಗೊಳ್ಳಲು ಸರ್ಕಾರ ಆದೇಶ ನೀಡಿರುವುದರಿಂದ ಆಲಂಬೂರು ಏತ ಯೋಜನೆಯ ಕಾಮಗಾರಿಯನ್ನು ನಿರ್ವಹಿಸಿರುವ ಗುತ್ತಿಗೆದಾರರಿಗೆ ಉತ್ತೂರು ಏತ ಯೋಜನೆಯನ್ನು Turn Key ಆಧಾರದ ಮೇರೆಗೆ ವಹಿಸಲಾಗಿದೆ. ಪ್ರಸ್ತುತ ದಿನಾಂಕ: 14-12-2019 ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು, ಚಾಮರಾಜನಗರ ಜಿಲ್ಲೆ ರವರು ಚಾಲನೆಗೊಳಿಸಿರುತ್ತಾರೆ. ಇದರಡಿ ಬರುವ ವಡ್ಡಗೆರೆ ಕೆರೆಗೆ ನೀರನ್ನು ತುಂಬಿಸಲಾಗಿದ್ದು, ಕೋಡಿ ಬಿದ್ದು ಮುಂದಿನ ಹಿರಿಯೂರು ಕೆರೆಗೆ ನೀರು ಹರಿಸಲಾಗುತ್ತಿದೆ. ಹಾಗೂ ಬೀಡರ್ ಮುಖಾಂತರ ಕರಕಲ ಮಾದಹಳ್ಳಿ ಕೆರೆಗೂ ಸಹ ನೀರನ್ನು ಹರಿಸಲಾಗುತ್ತಿದ್ದು. ವಡ್ಡಗರೆ ಕೆರೆಯ ಕೆಳಭಾಗದಲ್ಲಿ ಬರುವ ಕೆರೆಗಳಿಗೆ ನೀರನ್ನು ಹರಿಸಲು ಫೀಡರ್ ನಾಲೆಗಳಲ್ಲಿ ಜಂಗಲ್ ಮತ್ತು Trench ಗಳನ್ನು ಮಾಡಿ ನೀರನ್ನು ಹರಿಸಲು ಕ್ರಮವಹಿಸಲಾಗುತ್ತಿದೆ.

ಚಾಮರಾಜನಗರ ತಾಲ್ಲೂಕಿನ ಭಾಗದ ಕೆರೆಗಳಿಗೆ ಗ್ರ್ಯಾವಿಟಿ ಮೇನ್‌ಗೆ ಪಿ.ಎಸ್.ಸಿ ಪೈಪ್‌ಲೈನ್ ಅಳವಡಿಸಲು ಒಟ್ಟು 17.00 ಕಿ.ಮೀ ಕಾಮಗಾರಿಯಲ್ಲಿ 1.90 ಕಿ.ಮೀ ಅಷ್ಟು ಪೈಪ್ ಲೈನ್ ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಈ ಪ್ರದೇಶದಲ್ಲಿ ಹೆಚ್ಚಿನ ಕಲ್ಲು ಪದರಗಳು (Soft &Hard Rock) ಇರುವುದರಿಂದ ಪ್ರಗತಿಯು ವಿಳಂಬವಾಗಿದ್ದು, ಸದರಿ ಕಾಮಗಾರಿಗೆ ಅವಶ್ಯವಿರುವ 900, 600, 400 ಎಂ.ಎಂ ವ್ಯಾಸದ ಪಿ.ಎಸ್.ಸಿ ಪೈಪ್‌ಗಳನ್ನು ಗುತ್ತಿಗೆದಾರರು ಕಾಮಗಾರಿಯ ಸ್ಥಳಕ್ಕೆ

... ...4

ಸರಬರಾಜು ಮಾಡಲಾಗುತ್ತಿದ್ದು, ಸದರಿ ಕಾಮಗಾರಿಯನ್ನು ಮಾರ್ಚ್ 2020ರ ಅಂತ್ಯದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ, ಅಟ್ಟುಗುಳಿಪುರ ರವರು ನಂಜನಗೂಡು ಮತ್ತು ಗುಂಡ್ಲುಪೇಟೆ ತಾಲ್ಲೂಕಿನ 12 ಕೆರೆಗಳಿಗೆ ನೀರು ತುಂಬಿಸುವ ಗಾಂಧೀಗ್ರಾಮ ಏತ ಯೋಜನೆಯ ಎರಡು ಹಂತಗಳಲ್ಲಿ 1ನೇ ಹಂತವನ್ನು ದಿನಾಂಕ 05-03-2018 ರಂದು 1ನೇ ಹಂತವನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರಿಂದ Trail Run ಮಾಡುವ ಮೂಲಕ ಚಾಲನೆ ಮಾಡಲಾಗಿರುತ್ತದೆ. ಪ್ರಸ್ತುತ ಸಾಲಿನಲ್ಲಿ ದಿನಾಂಕ 22-07-2019 ರಿಂದ ಮೊದಲನೇ ಹಂತದ ಕೆರೆಗಳಿಗೆ ನೀರನ್ನು ತುಂಬಿಸಲಾಗುತ್ತಿದೆ. ಪ್ರಸ್ತುತ ಗುಂಡ್ಲುಪೇಟೆ ತಾಲ್ಲೂಕಿನ ಕಮರಹಳ್ಳಿ ಕೆರೆಗೆ ನೀರನ್ನು ಹರಿಸಲಾಗುತ್ತಿದೆ. ಪ್ರಸ್ತುತ ಎರಡನೇ ಹಂತದ ಪಂಪ್ ಹೌಸ್ ಮತ್ತು ಪೈಪ್ ಲೈನ್ ಕಾಮಗಾರಿಯು ಪೂರ್ಣಗೊಂಡಿದ್ದು, ವಿದ್ಯುತ್ ಲೈನ್ ಕಾಮಗಾರಿಗೆ ಸಂಬಂಧಿಸಿದಂತೆ ವಿದ್ಯುತ್ ಲೈನ್ ಕಾಮಗಾರಿ ಮತ್ತು ಬ್ರೇಕರ್ ಅಳವಡಿಸುವ ಕಾಮಗಾರಿ ಬಾಕಿ ಇರುತ್ತದೆ. ಪ್ರಸ್ತುತ ಕಾರ್ಯಪಾಲಕ ಅಭಿಯಂತರರು, ಚೆಸ್ಕಾಂ ವಿಭಾಗ, ಚಾಮರಾಜನಗರ ರವರು ಹಾಲಿ ಇರುವ ಬೇಗೂರು ಸ್ಟೇಷನ್‌ನಲ್ಲಿ ಬ್ರೇಕರ್ ಅಳವಡಿಸಲು ಅನುಮತಿ ನೀಡಿರುವುದರಿಂದ ವಿದ್ಯುತ್ ಲೈನ್ ಕಾಮಗಾರಿಯನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗಿದೆ. ವಿದ್ಯುತ್ ಲೈನ್ ಕಾಮಗಾರಿಯು ಪೂರ್ಣಗೊಂಡ ನಂತರ ಎರಡನೇ ಹಂತವನ್ನು ಚಾಲನೆಗೊಳಿಸಿ ಕೆರೆಗಳ ನೀರು ತುಂಬಿಸಲು ಕ್ರಮವಹಿಸಲಾಗುವುದು ಹಾಗೂ ಸದರಿ ಕಾಮಗಾರಿಯನ್ನು ಬಾಕಿ ಉಳಿದಿರುವ ಕಾಮಗಾರಿಗಳನ್ನು ಮಾರ್ಚ್ 2020ರ ಅಂತ್ಯದೊಳಗೆ ಪೂರ್ಣಗೊಳಿಸಲು ಪೂರ್ಣಗೊಳಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

ಮುಂದುವರೆದು, ಸುತ್ತೂರು ಏತ ಯೋಜನೆಯಡಿ ನಂಜನಗೂಡು, ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕಿನ 24 ಕೆರೆಗಳಿಗೆ ಕುಡಿಯುವ ನೀರಿಗಾಗಿ ಕಬಿನಿ ನದಿಯಿಂದ ಕೆರೆ ತುಂಬಿಸುವ ಯೋಜನೆಯು ಪ್ರಗತಿಯಲ್ಲಿದ್ದು, ಮೊದಲನೇ ಹಂತದ ಮತ್ತು ಎರಡನೇ ಹಂತದ ಪಂಪ್ ಹೌಸ್ ಮತ್ತು ಪೈಪ್‌ಲೈನ್ ಕಾಮಗಾರಿಯನ್ನು ತ್ವರಿತಗತಿಯಲ್ಲಿ ಕ್ರಮಕೈಗೊಳ್ಳಲಾಗುತ್ತಿದ್ದು, ಮಾರ್ಚ್ 2020ರ ಮಾಹೆಯ ಅಂತ್ಯಕ್ಕೆ ಕಾಮಗಾರಿಯನ್ನು ಪೂರ್ಣಗೊಳಿಸಿ ಕೆರೆಗಳಿಗೆ ನೀರನ್ನು ಹರಿಸಲು ಕ್ರಮವರ್ಹಿಸಲಾಗುವುದು. ಈ ಯೋಜನೆಗೆ ಅಗತ್ಯವಿರುವ ಪಂಪ್ಸ್, ಟ್ರಾನ್ಸ್‌ಫಾರ್ಮರ್ ಮತ್ತು ಮೋಟಾರ್ಸ್‌ಗಳನ್ನು ಮತ್ತು ಎಂ.ಎಸ್.ಪೈಪ್‌ಗಳನ್ನು ಗುತ್ತಿಗೆದಾರರು ಖರೀದಿಸಿರುತ್ತಾರೆ ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಉತ್ತೂರು ನಿಂದ ಕೆರೆಗಳಿಗೆ ನೀರು ತುಂಬಿಸುವ ಯೋಜನೆಯ ಅಡಿಯಲ್ಲಿ ಬರುವ ಪಿ.ಎಸ್.ಸಿ ಪೈಪ್ ಲೈನ್ ಅಳವಡಿಸುವ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಿ ಕಾಮಗಾರಿಯನ್ನು ಮುಕ್ತಾಯಗೊಳಿಸುವಂತೆ ಹಾಗೂ ಗಾಂಧಿ ಗ್ರಾಮ ಏತ ಯೋಜನೆಯಡಿಯಲ್ಲಿ 2ನೇ ಹಂತದಲ್ಲಿ ಕೂಡಲೇ ವಿದ್ಯುತ್ ಕಾಮಗಾರಿಯನ್ನು ಪೂರ್ಣಗೊಳಿಸಿ 2ನೇ ಹಂತವನ್ನು ಚಾಲನೆಗೊಳಿಸಬೇಕೆಂದು ಸೂಚಿಸಿದರು. ಹಾಗೂ ಸುತ್ತೂರು ಏತ ಯೋಜನೆಯನ್ನು ಕಾಮಗಾರಿಯನ್ನು ಮಾರ್ಚ್ 2020ರ ಮಾಹೆಗೆ ಪೂರ್ಣಗೊಳಿಸಿ ಕೆರೆಗಳಿಗೆ ನೀರನ್ನು ಹರಿಸುವಂತೆ ರವರಿಗೆ ಸೂಚಿಸಿದರು.

**(ಕ್ರಮ: ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ ನಿಯಮಿತ, ನಂಜನಗೂಡು)**

**ಆಹಾರ ಇಲಾಖೆ (ಬೆಂಬಲ ಬೆಲೆ ಯೋಜನೆ) :**

2019-20 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿಯಲ್ಲಿ ಸಣ್ಣ ಮತ್ತು ಅತೀ ಸಣ್ಣ ರೈತರಿಂದ ಭತ್ತ ಮತ್ತು ರಾಗಿ ಬೆಳೆಯನ್ನು ಖರೀದಿಸಲಾಗುತ್ತಿದೆ. ಈ ಸಂಬಂಧ ಜಿಲ್ಲೆಯಲ್ಲಿ 06 ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ಉಪ ನಿರ್ದೇಶಕರು ಆಹಾರ ಇಲಾಖೆ, ಚಾಮರಾಜನಗರ ರವರು ಸಭೆಗೆ ಮಾಹಿತಿಯನ್ನು ನೀಡಿದರು ಹಾಗೂ ಈ ಸಂಬಂಧ ಕೆಲವು ಸಮಸ್ಯೆಗಳಿರುವ ಕುರಿತು ಸಹ ಪ್ರಸ್ತಾಪಿಸಿದರು.

... ... 5

ಫ್ರೂಟ್ಸ್ ಐಡಿಯನ್ನು ಬೆಳೆ ಸಮೀಕ್ಷೆ ಸರ್ವೆಯಲ್ಲಿ ಲಿಂಕ್ ಮಾಡಿರುವುದರಿಂದ ಬೆಳೆ ಮತ್ತು ವಿಸ್ತೀರ್ಣ ತಪ್ಪಾಗಿರುವುದನ್ನು ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ. ಇದರಿಂದ ರೈತರ ನೋಂದಣಿ ಪ್ರಕ್ರಿಯೆ ವಿಳಂಬವಾಗುತ್ತಿರುವ ಕುರಿತು ತಿಳಿಸುತ್ತಾ, ಬೆಳೆ ಸಮೀಕ್ಷೆ ಸೂಪರ್‌ವೈಸರ್‌ಗಳು ಬೆಳೆ ಮತ್ತು ವಿಸ್ತೀರ್ಣವನ್ನು ತಿದ್ದುಪಡಿ ಮಾಡಬಹುದಾಗಿರುತ್ತದೆ ಮತ್ತು ಆಹಾರ ಇಲಾಖೆಯವರು ವಿಸ್ತೀರ್ಣ ಮತ್ತು ಸರ್ವೆ ನಂಬರ್‌ಗಳನ್ನು ಸೇರಿಸಲು ಅವಕಾಶವಿರುತ್ತದೆ ಎಂದು ಸಭೆಯಲ್ಲಿ ತಿಳಿಸಿದರು.

ಎಂಎಸ್‌ಪಿ ಖರೀದಿ ಕೇಂದ್ರದಲ್ಲಿ ರಾಜ್ಯ ಉಗ್ರಾಣ ನಿಗಮ ಇವರಿಗೆ ನೀಡಿರುವ ಲಾಗಿನ್‌ನಲ್ಲಿ ರೈತರು ಬೆಳೆದಿರುವ ಬೆಳೆ ಪರಿಶೀಲನೆ ಮಾಡುವಾಗ ಫ್ರೂಟ್ಸ್ ಐಡಿ ದತ್ತಾಂಶದಲ್ಲಿ ಬೆಳೆ ವಿವರವನ್ನು ನಮೂದಾಗದೇ ಇರುವುದರಿಂದ ಖರೀದಿ ಕೇಂದ್ರದಲ್ಲಿ ನೊಂದಾಯಿಸಲು ತೊಂದರೆಯಿರುತ್ತದೆ ಆದರೆ ಕೃಷಿ ಇಲಾಖೆಯ ಫ್ರೂಟ್ಸ್ ತಂತ್ರಾಂಶದಲ್ಲಿ ಬೆಳೆ ವಿವರವನ್ನು ನಮೂದಿಸಲು ಸಾಧ್ಯವಿಲ್ಲ ಹಾಗೂ ಆಹಾರ ಇಲಾಖೆಯ ಎಂ.ಎಸ್.ಪಿ ತಂತ್ರಾಂಶದಲ್ಲಿ ಸರ್ವೆ ನಂಬರ್ ಹಾಗೂ ಬೆಳೆ ವಿವರವನ್ನು ಸೇರಿಸಲು ಅವಕಾಶವಿರುತ್ತದೆ ಎಂದು ಸಭೆಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರು.

**(ಕ್ರಮ: ಉಪ ನಿರ್ದೇಶಕರು, ಆಹಾರ ಇಲಾಖೆ, ಚಾಮರಾಜನಗರ)**

**<u>ಬಹುಗ್ರಾಮಗಳ ಕುಡಿಯುವ ನೀರು:</u>**

ಮಾನ್ಯ ಉಸ್ತುವಾರಿ ಕಾರ್ಯದರ್ಶಿ ರವರು ಮುಂದಿನ ದಿನಗಳಲ್ಲಿ ಬೇಸಿಗೆ ಕಾಲ ಪ್ರಾರಂಭವಾಗುತ್ತಿರುವುದರಿಂದ ನೀರಿನ ಸಮಸ್ಯೆ ಹೆಚ್ಚಾಗುವ ಸಂಭವವಿರುತ್ತದೆ. ಆದ್ದರಿಂದ ಬಹುಗ್ರಾಮಗಳ ಕುಡಿಯುವ ನೀರಿನ ಯೋಜನೆಯನ್ನು ಆದಷ್ಟು ಬೇಗ ಪೂರ್ಣಗೊಳಿಸಲು ಸೂಕ್ತ ಕ್ರಮವಹಿಸುವಂತೆ ಕಾರ್ಯಪಾಲಕ ಇಂಜಿನಿಯರ್ ರವರಿಗೆ ಸೂಚಿಸಿದರು.

ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಾಮರಾಜನಗರ ರವರು ಕೊಳ್ಳೇಗಾಲ ಮತ್ತು ಯಳಂದುರು ತಾಲ್ಲೂಕು ವ್ಯಾಪ್ತಿಯ ಬಹುಗ್ರಾಮ ಯೋಜನೆಯನ್ನು ಪ್ರಾರಂಭಿಸಲಾಗಿದ್ದು, ಟೆಂಡರ್ ಕಾಲಮಿತಿಯೊಳಗೆ ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಿ ಕೊಳ್ಳಲಾಗಿದ್ದು, ಉಮ್ಮತ್ತೂರು ಗ್ರಾಮದ ಶುದ್ಧಿಕರಣದ ಬಳಿ ಶೇ. 5 ರಷ್ಟು ವ್ಯರ್ಥವಾಗುತ್ತಿರುವ ತ್ಯಾಜ್ಯ ನೀರನ್ನು ಹಾಲಿ ಕೆರೆಯಲ್ಲಿ ಶೇಖರಣೆಯಾಗುತ್ತಿದ್ದು, ಇದರಿಂದ ಸುತ್ತಮುತ್ತಲಿನ ಗ್ರಾಮಗಳಲ್ಲಿನ ಅಂತರ್ಜಲ ಮಟ್ಟ ಹೆಚ್ಚಾಗುತ್ತಿದೆ. ಮುಂದೆ ಬೇಸಿಗೆ ಕಾಲದಲ್ಲಿ ನದಿಯಿಂದ ನೀರು ಸರಬರಾಜಿನಲ್ಲಿ ವ್ಯತ್ಯಯವಾದಲ್ಲಿ ಶೇ.5 ರಷ್ಟು ನೀರನ್ನು ಮರು ಬಳಕೆ ಮಾಡಿ, ಶುದ್ಧೀಕರಿಸಿ ಕುಡಿಯುವ ನೀರಿಗೆ ಸರಬರಾಜು ಮಾಡಲು ಕಾರ್ಯಕ್ರಮ ರೂಪಿಸಿ, ಮುಖ್ಯ ಇಂಜಿನಿಯರ್ ರವರಿಗೆ ಜಿಲ್ಲಾ ಪಂಚಾಯತ್ ಕಾರ್ಯಾಲಯದ ಮುಖಾಂತರ ಪ್ರಸ್ತಾವನೆ ಸಲ್ಲಿಸಲು ಕ್ರಮವಹಿಸಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಚಾಮರಾಜನಗರ ರವರು ಕೆ.ಆರ್.ಐ.ಡಿ.ಎಲ್ ರವರಿಂದ ನಿರ್ವಹಣೆಗಾಗಿ ಪಡೆದಿರುವ 60 ಶುದ್ಧೀಕರಣ ಘಟಕಗಳ ಮಾಹಿತಿಯನ್ನು ನೀಡಲು ಸೂಚಿಸಿರುವ ಮೇರೆಗೆ, ಕಾರ್ಯಪಾಲಕ ಇಂಜಿನಿಯರ್ ರವರು 36 ಘಟಕಗಳ ದುರಸ್ಥಿಗಾಗಿ ರೂ.40 ಲಕ್ಷಗಳಿಗೆ ಅಂದಾಜು ತಯಾರಿಸಲಾಗಿದ್ದು, ನಿಯಮಾನುಸಾರ ತುರ್ತಾಗಿ ದುರಸ್ಥಿಪಡಿಸಲು ಕ್ರಮವಹಿಸಿರುವುದಾಗಿ ತಿಳಿಸಿದರು.

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಬಹುಗ್ರಾಮ ಯೋಜನೆಯಿಂದ ಉಮ್ಮತ್ತೂರು ಗ್ರಾಮದ ಬಳಿಯ ಶುದ್ಧೀಕರಣ ಘಟಕದಿಂದ ಶೇ5 ರಷ್ಟು ವ್ಯರ್ಥವಾಗುತ್ತಿರುವ ತ್ಯಾಜ್ಯ ನೀರನ್ನು ಮರು ಬಳಕೆ ಮಾಡುವ ಬಗ್ಗೆ ಕ್ರಮವಹಿಸಿ, ಸೂಕ್ತವಾಗಿ ಬಳಕೆ ಮಾಡಲು ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಾಮರಾಜನಗರ)**

**ಅರಣ್ಯ ಇಲಾಖೆ :**

ಅರಣ್ಯಾ ಇಲಾಖೆಗೆ ಸಂಬಂಧಿಸಿದಂತೆ, ಯಾವುದಾದರೂ ಸಮಸ್ಯೆಗಳು ಇದ್ದಲ್ಲಿ ತಿಳಿಸುವಂತೆ ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರು ಸೂಚಿಸಿರುವುದರ ಮೇರೆಗೆ, ಅರಣ್ಯಾ ಸಂರಕ್ಷಣಾಧಿಕಾರಿಗಳು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ ರವರು ಮುಂದಿನ ಮಾಹೆಯಲ್ಲಿ ಬೇಸಿಗೆ ಕಾಲ ಪ್ರಾರಂಭವಾಗುವುದರಿಂದ ಅರಣ್ಯಾ ಪ್ರದೇಶಗಳಲ್ಲಿ ಕಾಡ್ಗಿಚ್ಚು ಆಗುವ ಸಂಭವವಿದ್ದು, ಮುಂಜಾಗ್ರತೆಯ ಕ್ರಮವಹಿಸಲು ಈಗಾಗಲೇ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶವನ್ನು 13 ವಲಯಗಳನ್ನಾಗಿ ವಿಂಗಡಿಸಿ 03 ಉಪವಿಭಾಗಗಳನ್ನು ಹೊಂದಲಾಗಿರುತ್ತದೆ. ಅರಣ್ಯಾ ಪ್ರದೇಶವನ್ನು ಬೆಂಕಿಯಿಂದ ರಕ್ಷಿಸುವುದಕ್ಕಾಗಿ ಒಟ್ಟು 430 ಸ್ಥಳೀಯ ಗಿರಿಜನರು ಹಾಗೂ ಇತರರನ್ನು ದಿನಾಂಕ: 01-01-2020 ರಿಂದ ಬೆಂಕಿ ವಾಚರ್‌ಗಳನ್ನಾಗಿ ನೇಮಕ ಮಾಡಿಕೊಳ್ಳಲಾಗಿದ್ದು, ಸದರಿಯವರುಗಳಿಗೆ ದೈನಂದಿನ ಕೂಲಿ ಹಣದ ಜೊತೆಗೆ ಆಹಾರ ಪದಾರ್ಥಗಳನ್ನೂ ಸಹ ಪ್ರತ್ಯೇಕವಾಗಿ ಪೂರೈಕೆ ಮಾಡಲಾಗುತ್ತಿದ್ದು, ಅಪಘಾತ ವಿಮೆ ಸೌಲಭ್ಯಕ್ಕೆ ಒಳಪಡಿಸಲಾಗಿರುತ್ತದೆ.

ಮುಂದುವರೆದು ಬೆಂಕಿ ರಕ್ಷಣೆ ಕೆಲಸಗಳಿಗೆ ಅನುಕೂಲವಾಗುವುದಕ್ಕಾಗಿ ಪ್ರಸ್ತುತ ಸಾಲಿನಲ್ಲಿ ಒಟ್ಟು 500 ಲೀಟರ್ ಸಾಮರ್ಥ್ಯದ 12 ವಾಟರ್ ಟ್ಯಾಂಕರ್‌ಗಳನ್ನು ಖರೀದಿಸಲಾಗಿರುತ್ತದೆ. ಅಗ್ನಿಶಾಮಕ ಇಲಾಖೆಯಿಂದ ವಾಹನಗಳ ಸೇವೆಯನ್ನು ಪಡೆದು, ಸಿಬ್ಬಂದಿಗಳನ್ನೂ ಸಹ ಬೆಂಕಿ ರಕ್ಷಣೆಯ ಕೆಲಸಗಳಲ್ಲಿ ತೊಡಗಿಸಿ, ಬೇಸಿಗೆಯ ಕಾಲ ಮುಗಿಯುವ ವರೆಗೆ ಬೆಂಕಿ ನಂದಿಸುವ ಉಪಕರಣಗಳನ್ನು ಪಡೆದುಕೊಳ್ಳಲಾಗಿರುತ್ತದೆ.

2019-20ನೇ ಸಾಲಿನಲ್ಲಿ ಮಾನವ-ವನ್ಯಪ್ರಾಣಿ ಸಂಘರ್ಷವನ್ನು ತಡೆಗಟ್ಟುವುದಕ್ಕಾಗಿ ಗುಂಡ್ಲುಪೇಟೆ ತಾಲ್ಲೂಕಿನ ಓಂಕಾರ ಅರಣ್ಯಾ ವಲಯದ ಗಡಿ ರೇಖೆಯಲ್ಲಿ ಒಟ್ಟು 21.37 ಕಿ.ಮೀ ಉದ್ದದಷ್ಟು ಆನೆ ತಡೆ ಕಂದಕಗಳನ್ನು ನಿರ್ಮಾಣ ಮಾಡಲಾಗುತ್ತಿರುತ್ತದೆ. ಹಾಗೂ ಕುಂದುಕೆರೆ ವಲಯದ ವ್ಯಾಪ್ತಿಯಲ್ಲಿ 3 ಕಿ.ಮೀ ಮತ್ತು ಜಿ.ಎಸ್ ಬೆಟ್ಟ ವಲಯದ ವ್ಯಾಪ್ತಿಯಲ್ಲಿ 4.70 ಕಿ.ಮೀ ಉದ್ದದಷ್ಟು ಆನೆ ತಡೆ ಕಂದಕಗಳ ಉನ್ನತೀಕರಣದ ಕೆಲಸಗಳು ಪ್ರಗತಿಯಲ್ಲಿದ್ದು, ಜಿ.ಎಸ್ ಬೆಟ್ಟ ವಲಯ ಹಾಗೂ ಕಲುಮದುಕೆರೆ ವಲಯಗಳ ವ್ಯಾಪ್ತಿಯಲ್ಲಿ ಒಟ್ಟು 10 ಕಿ.ಮೀ ಉದ್ದದಷ್ಟು ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಮಾಡುವ ಕಾಮಗಾರಿಗಳನ್ನು ಕೈಗೊಳ್ಳಲು ಅವಶ್ಯಕತೆ ಇರುವ ಅನುದಾನಕ್ಕೆ ಮೇಲಧಿಕಾರಿಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ ಎಂದು ಅರಣ್ಯಾ ಸಂರಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಂರಕ್ಷಣಾಧಿಕಾರಿಗಳು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ ರವರು ಸಭೆಯಲ್ಲಿ ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಮುಂದಿನ ದಿನಗಳಲ್ಲಿ ಬೇಸಿಗೆ ಕಾಲ ಪ್ರಾರಂಭವಾಗಲಿದ್ದು, ಅರಣ್ಯಾ ಪ್ರದೇಶದಲ್ಲಿ ಕಾಡ್ಗಿಚ್ಚು ಆಗುವ ಸಂಭವವಿದ್ದು, ಮುಂಜಾಗ್ರತೆಯ ಕ್ರಮವಹಿಸಿ, ಅರನ್ಯ ವ್ಯಾಪ್ತಿಗೆ ಸೇರಿರುವ ಗ್ರಾಮಗಳಿಗೆ ಮತ್ತು ರೈತರ ಜಮೀನುಗಳಿಗೆ ಕಾಡಾನೆಗಳು ಅರಣ್ಯಾ ಪ್ರದೇಶದಿಂದ ಪ್ರವೇಶಿಸುವುದುನ್ನು ತಡೆಗಟ್ಟಲು ಆನೆ ಕಂದಕಗಳನ್ನು ನಿರ್ಮಿಸಿ, ಮಾನವ ಪ್ರಾಣಿ ಸಂಘರ್ಷವನ್ನು ತಡೆಗಟ್ಟಲು ಅಗತ್ಯ ಕ್ರಮವಹಿಸುವಂತೆ ಸೂಚಿಸಿದರು.

**(ಕ್ರಮ: ಅರಣ್ಯಾ ಸಂರಕ್ಷಣಾಧಿಕಾರಿಗಳು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಬಂಡೀಪುರ, ಅರಣ್ಯಾ ಸಂರಕ್ಷಣಾಧಿಕಾರಿಗಳು, ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ, ಹಾಗೂ ಉಪ ಅರಣ್ಯಾ ಸಂರಕ್ಷಣಾಧಿಕಾರಿಗಳು ಮಲೈಮಹದೇಶ್ವರ ವನ್ಯ ಜೀವಿ ವಿಭಾಗ, ಹನೂರು, ಉಪ ಅರಣ್ಯಾ ಸಂರಕ್ಷಣಾಧಿಕಾರಿಗಳು ಕಾವೇರಿ ವನ್ಯ ಜೀವಿ ವಿಭಾಗ, ಕೊಳ್ಳೇಗಾಲ)**

**(ರಾಜೇಂದರ್ ಕುಮಾರ್ ಕಟಾರಿಯಾ)**
ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ
ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ
ಕಾರ್ಯದರ್ಶಿಗಳು, ಚಾಮರಾಜನಗರ

# ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ ಬೆಂಗಳೂರು ಹಾಗೂ ಹಾಸನ ಜಿಲ್ಲೆ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ 31-01-2020 ರಂದು ಹಾಸನ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.

ಹಾಜರಾತಿ:

ಹಾಜರಾತಿ ವಹಿಯಲ್ಲಿರುವಂತೆ:

ಜಿಲ್ಲಾಧಿಕಾರಿಗಳು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ, ದಿನಾಂಕ 24-01-2020 ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ನೀಡಿದ ನಿರ್ದೇಶನದಂತೆ ಕೈಗೊಂಡಿರುವ ಕ್ರಮದ ಬಗ್ಗೆ ಈ ಸಭೆಯನ್ನು ನಡೆಸಿರುವುದು ಎಂಬುದಾಗಿ ಮಾಹಿತಿ ನೀಡಿದರು.

1. **ಕೃಷಿ ಇಲಾಖೆ:**

ಜಂಟಿ ಕೃಷಿ ನಿರ್ದೇಶಕರು ಮಾತನಾಡಿ ಜಿಲ್ಲೆಯಲ್ಲಿ ಈ ಬಾರಿ 1075 ಮಿ.ಮಿ. ವಾಡಿಕೆ ಮಳೆಗಿಂತ 1432 ಮಿ.ಮಿ. ಮಳೆಯಾಗಿದ್ದು ಶೇ. 43% ರಷ್ಟು ಅಧಿಕವಾಗಿದೆ. ಅಧಿಕ ಮಳೆಯಾಗಿದ್ದರೂ ಸಹಾ ಬೆಳೆ ಚೆನ್ನಾಗಿ ಬಂದಿದೆ ಯಾವುದೇ ತೊಂದರೆ ಇರುವುದಿಲ್ಲ. ರಾಗಿ ಬೆಳೆಯಲ್ಲಿ ಇಳುವರಿ ಕಮ್ಮಿಯಾಗಿದ್ದು ರೈತರಿಗೆ ನಷ್ಟ ಉಂಟಾಗಿದೆ ಎಂಬುದಾಗಿ. ನೀರಿನ ಸೌಲಭ್ಯವಿರುದ ಕಡೆಯಲ್ಲಿ ರಾಗಿ, ಜೋಳ, ಕೆಲವು ಕಡೆಗಳಲ್ಲಿ ತೊಗರಿ ಬಿತ್ತನೆ ಕಾರ್ಯ ಪೂರ್ಣಗೊಂಡಿದೆ ರಸಗೊಬ್ಬರ ದಾಸ್ತಾನು ಸಮರ್ಪಕವಾಗಿದೆ, ಬಿತ್ತನೆ ಬೀಜ ದಾಸ್ತಾನು ಇರುತ್ತದೆ ಎಂದು ಮಾಹಿತಿ ನೀಡಿದರು. ಪ್ರಧಾನಮಂತ್ರಿ ಕಿಸಾಜ್ ಯೋಜನೆಯಡಿ ಸಣ್ಣ ಮತ್ತು ಅತಿ ಸಣ್ಣ ರೈತರ ಕುಟುಂಬದವರಿಗೆ ವರ್ಷಕ್ಕೆ ರೂ. 6000/- (ಪ್ರತಿ ಮೂರು ತಿಂಗಳಿಗೆ ರೂ.2000/- ರಂತೆ) ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತಿದೆ. ಇಲ್ಲಿಯವರೆಗೆ ಜಿಲ್ಲೆಯಲ್ಲಿ ಒಟ್ಟು 387000/- ಅರ್ಜಿಗಳು ಸ್ವೀಕೃತಗೊಂಡಿದ್ದು ಆನ್ ಲೈನ್ ನಲ್ಲಿ ಡಾಟಾ ಎಂಟ್ರಿ ಮಾಡಿ ಹಣವನ್ನು ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆ ಎಂಬುದಾಗಿ ಮಾಹಿತಿ ನೀಡಿದರು.

ಈ ಬಗ್ಗೆ ಮಾತನಾಡಿದ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ರಾಗಿ, ಜೋಳ ಬೆಳೆಗಳ ಜೊತೆಗೆ ಇತರೆ ಅಲ್ಪಾವಧಿ ಬೆಳೆಗಳನ್ನು ಬೆಳೆಸುವಂತೆ ರೈತರಿಗೆ ಪ್ರೋತ್ಸಾಹಿಸಿದ್ದರೆ ನಷ್ಟವನ್ನು ಕಡಿಮೆ ಮಾಡಬಹುದಾಗಿದ್ದು ಏಕೆ ಮಾಡಲಿಲ್ಲ ಎಂಬ ಬಗ್ಗೆ ಮಾಹಿತಿ ಕೋರಿದರು.

ಉತ್ತರವಾಗಿ ಜಂಟಿ ಕೃಷಿ ನಿರ್ದೇಶಕರು, ಈ ಬಗ್ಗೆ ಅನೇಕ ಬಾರಿ ಮಾಹಿತಿ ನೀಡಿದ್ದರೂ ಸಹಾ ಯಾವುದೇ ರೈತರು ಈ ಬಗ್ಗೆ ಒಲವು ತೋರಿಸುತ್ತಿಲ್ಲ. ಅಲ್ಲದೆ ತೊಗರಿ ಬೆಳೆಯು ತಡವಾಗಿ ಕಟಾವಿಗೆ ಬರುವುದರಿಂದ ಬೆಳೆ ಕಾಯ್ದುಕೊಳ್ಳಲು ತೊಂದರೆಯಾಗುತ್ತದೆ ಆದ್ದರಿಂದ ಈ ಬೆಳೆಯನ್ನು ಬೆಳೆಯಲು ರೈತರು ಮನಸ್ಸು ಮಾಡುವುದಿಲ್ಲ. ಕೆಲವೊಂದು ರೈತರು ನೀರಿನ ಸೌಲಭ್ಯವಿರುವ ಕಡೆಗಳಲ್ಲಿ ತರಕಾರಿಗಳನ್ನು ಬೆಳೆಯುತ್ತಿದ್ದಾರೆ ಎಂಬುದಾಗಿ ಮಾಹಿತಿ ನೀಡಿದರು.

ಮುಂದುವರೆದು ಮಾತನಾಡಿದೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ರೈತ ಸಂಪರ್ಕ ಸಭೆ ನಡೆಸಿ ಮಿಶ್ರ ಬೇಸಾಯದ ಬಗ್ಗೆ ಮಾಹಿತಿ ನೀಡಿ ರೈತರು ಆರ್ಥಿಕವಾಗಿ ಸದೃಢರಾಗುವಂತೆ ಮಾಡಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಿದರು. ಇದರಿಂದ ರೈತರ ಆತ್ಮಹತ್ಯೆಯನ್ನು ಸಹಾ ತಡೆಯಬಹುದಾಗಿದೆ ಎಂಬುದಾಗಿ ತಿಳಿಸಿದರು.

ಅಲ್ಲದೆ ರೈತರಿಗೆ ನರೇಗಾದಡಿಯಲ್ಲಿ ಕೆಲಸ ನೀಡುವುದರಿಂದ ಬೇಸಾಯದಿಂದ ಉಂಟಾದ ನಷ್ಟವನ್ನು ಸರಿದೂಗಿಸಲು ಹಾಗೂ ಆರ್ಥಿಕವಾಗಿ ಸದೃಢರಾಗುವಂತೆ ಮಾಡಬಹುದು ಈ ಬಗ್ಗೆ ಜಿಲ್ಲಾ ಪಂಚಾಯತ್ ಸಹಯೋಗದೊಂದಿಗೆ ಕಾರ್ಯ ನಿರ್ವಹಿಸುವಂತೆ ಸೂಚಿಸಿದರು. ಅಲ್ಲದೆ ಉತ್ತರ ಕರ್ನಾಟಕದಲ್ಲಿ ಬೆಳೆಯುವ ಅಲ್ಪಕಾಲಿಕ ಹತ್ತಿ ಬೆಳೆಯನ್ನು ಪ್ರಾಯೋಗಿಕವಾಗಿ ಬೆಳೆಯುವಂತೆ ಈ ಬಗ್ಗೆ ಕೃಷಿ ವಿಜ್ಞಾನಿಗಳಿಂದ ಮಾಹಿತಿ ಪಡೆಯುವಂತೆ ಸೂಚಿಸಿದರು.

ಎಲ್ಲಾ ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಸುತ್ತೋಲೆ ಮುಖಾಂತರ ಕೂಡಲೇ ಎನ್.ಆರ್.ಇ.ಜಿ.ಪಿ ಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಲು ಆದೇಶಿಸಿದರು.

ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಡಿಯಲ್ಲಿ ಬರುವ ಸಣ್ಣ ಮತ್ತು ಅತಿ ಸಣ್ಣ ರೈತರ ಮಾಹಿತಿಯನ್ನು ಭೂಮಿ ತಂತ್ರಾಂಶದಿಂದ ಪಡೆದು ಸರ್ಕಾರವೇ ನೇರವಾಗಿ ಸಂಬಂಧಪಟ್ಟ ರೈತರ ಬ್ಯಾಂಕ್ ಖಾತೆಗೆ ಹಣವನ್ನು ಪಾವತಿಸಲು ಕ್ರಮ ಕೈಗೊಳ್ಳಬುಹದಾಗಿದೆ ಎಂದು ಅಭಿಪ್ರಾಯಿಸಿದರು.

ಮುಂದುವರೆದು ಮಾತನಾಡಿದ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಬೆಳೆ ವಿಮೆಯ ಬಗ್ಗೆ ಮಾಹಿತಿ ನೀಡುವಂತೆ ತಿಳಿಸಿದರು.

ಈ ಬಗ್ಗೆ ಕೃಷಿ ಜಂಟಿ ನಿರ್ದೇಶಕರು, ಬೆಳೆ ವಿಮೆ ಬಗ್ಗೆ ವ್ಯಾಪಕ ಪ್ರಚಾರ ಕೈಗೊಂಡಿದ್ದರೂ ಸಹ ಕಳೆದ ಬಾರಿಗಿಂತ ಈ ಬಾರಿ ಬೆಳೆಗಳಿಗೆ ವಿಮೆ ಮಾಡಿಸಲು ಯಾವ ರೈತರೂ ಮುಂದೆ ಬರುತ್ತಿಲ್ಲ. ಬ್ಯಾಂಕಿನಿಂದ ಬೆಳೆಯ ಬಗ್ಗೆ ಸಾಲ ಪಡೆದಿದ್ದರೆ ಎಷ್ಟು ಸಾಲ ಪಡೆದಿರುತ್ತಾರೋ ಅಷ್ಟು ಮೊತ್ತಕ್ಕೆ ಮಾತ್ರ ಬ್ಯಾಂಕಿನಿಂದ ವಿಮೆ ಮಾಡಿಸುತ್ತಾರೆ. ಈ ಬಾರಿ ಉತ್ತಮ ಮಳೆಯಾಗಿರುವುದರಿಂದ ಉತ್ತಮ ಬೆಳೆ ನಿರೀಕ್ಷೆಯಲ್ಲಿರುತ್ತಾರೆ, ಕಳೆದ ಬಾರಿಯ ಬೆಳೆ ನಷ್ಟದ ಬಾಬ್ತು ಪರಿಹಾರ ಬಂದಿರುವುದಿಲ್ಲ, ಬೆಳೆಗಳ ಮೇಲೆ ವಿಮೆ ಮಾಡಿಸಿದ ಪೂರ್ಣ ಹಣ ವಿಮಾ ಕಂಪನಿಯಿಂದ ಬಿಡುಗಡೆಯಾಗುವುದಿಲ್ಲ, ವಿಮಾ ಕಂಪನಿಯಿಂದ ಬಿಡುಗಡೆಯಾಗುವ ಹಣ ನಷ್ಟವನ್ನು ಸರಿದೂಗಿಸುವುದಿಲ್ಲ ಆದ್ದರಿಂದ ರೈತರು ವಿಮೆಯ ಬಗ್ಗೆ ಆಸಕ್ತಿ ತೋರುತ್ತಿಲ್ಲ ಎಂಬುದಾಗಿ ಮಾಹಿತಿ ನೀಡಿದರು. ಸಾಮಾನ್ಯವಾಗಿ ರಾಗಿ, ಜೋಳ, ಬತ್ತ ಮುಂತಾದ ಬೆಳೆಗಳ ಮೇಲೆ ರೈತರು ಸಾಲ ಪಡೆಯುವುದಿಲ್ಲ. ವ್ಯಾವಹಾರಿಕ ಬೆಳೆಗಳ ಮೇಲೆ ಮಾತ್ರ ಸಾಲ ಪಡೆಯುತ್ತಾರೆ. ಅಂತಹ ಸಾಲದ ಮೊತ್ತಕ್ಕೆ ಸಮನಾಗಿ ಮಾತ್ರ ವಿಮೆಯನ್ನು ಬ್ಯಾಂಕಿನವರು ಮಾಡಿಸುತ್ತಾರೆ ಎಂಬುದಾಗಿ ಮಾಹಿತಿ ನೀಡಿದರು.

ಪಿ.ಎಂ.ವೈ.ಎಸ್.ವೈ. ರಡಿಯಲ್ಲಿ ನಿಗಧಿಪಡಿಸಿರುವ ಗುರಿ ಸಂಖ್ಯೆಯು ಸಂಶಯಾಸ್ಪದವಾಗಿರುವ ಬಗ್ಗೆ ಮತ್ತೊಮ್ಮೆ ಪರಿಶೀಲಿಸುವಂತೆ ಜಂಟಿ ಕೃಷಿ ನಿರ್ದೇಶಕರಿಗೆ ನಿರ್ದೇಶನ ನೀಡಿದರು.

ಬೆಳೆ ವಿಮೆ ಮಾಡಿಸುವ ಬಗ್ಗೆ ಕೃಷಿ ಇಲಾಖೆಯಿಂದಲೇ ವ್ಯಾಪಕ ಪ್ರಚಾರ ನೀಡಲು ಕೃಷಿ ಆಯುಕ್ತರಿಗೆ ಅರೆ ಸರ್ಕಾರಿ ಪತ್ರವನ್ನು ತಮ್ಮಿಂದ ಬರೆಯುವಂತೆ ಸೂಚನೆ ನೀಡಿದರು.

ಈ ಬಗ್ಗೆ ಮಾತನಾಡಿದ ಮಾನ್ಯ ಜಿಲ್ಲಾಧಿಕಾರಿಗಳು ವಿಮಾ ಕಂಪನಿಯವರು ಸ್ಯಾಂಪಲ್ ಸರ್ವೆ ನಡೆಸಿ 5 ವರ್ಷಗಳ ಬೆಳೆ ನಷ್ಟದ ಮಾಹಿತಿಯ ಆಧಾರದ ಮೇಲೆ ವಿಮಾ ಹಣವನ್ನು ನಿಗಧಿ ಮಾಡುತ್ತಾರೆ. ಅಲ್ಲದೆ ವಿಮಾ ಪಾಲಿಸಿದ ಕಾನೂನುಗಳಿಗೆ ಅನುಸಾರವಾಗಿ ಬೆಳೆ ನಷ್ಟದ ಶೇಕಡವಾರು ಗುರುತಿಸಿ ಪರಿಹಾರ ನೀಡುತ್ತಾರೆ. ಎಲ್ಲಾ ರೈತರಿಗೂ ಒಂದೇ ಸಮನಾಗಿ ನಷ್ಟದ ಹಣ ಬಿಡುಗಡೆಯಾಗುವುದಿಲ್ಲ ಎಂಬುದಾಗಿ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳಿಗೆ ಮಾಹಿತಿ ನೀಡಿದರು.

ಈ ಬಗ್ಗೆ ಮಾತನಾಡಿದ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು, ಬಿತ್ತನೆ ಇಲ್ಲದ ಸಮಯದಲ್ಲಿ ರೈತರಿಗೆ ನರೇಗಾ ಕಾರ್ಯಕ್ರಮದಡಿಯಲ್ಲಿ ಕೆಲಸ ನೀಡುವಂತೆ ಸೂಚಿಸಿದರು. ಬೆಳೆ ವಿಮೆಯ ಬಗ್ಗೆ ಹಾಗೂ ಮಿಶ್ರ ಬೆಳೆ ಬೇಸಾಯದ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳುವಂತೆ ಕೃಷಿ ಜಂಟಿ ನಿರ್ದೇಶಕರಿಗೆ ಸೂಚನೆ ನೀಡಿದರು.

(ಕ್ರಮ: ನರೇಗಾ, ಜಿಲ್ಲಾ ಪಂಚಾಯತ್, ಮತ್ತು ಜಂಟಿ ಕೃಷಿ ನಿರ್ದೇಶಕರು)

2. <u>ಆರೋಗ್ಯ ಇಲಾಖೆ:</u>

ಜಿಲ್ಲಾ ಆರೋಗ್ಯ ಮತ್ತು ಕುಟುಂಬಕಲ್ಯಾಣಾಧಿಕಾರಿಗಳು, ಹಾಸನ ರವರು ಮಾನ್ಯ ಉಸ್ತುವಾರಿ ಸಚಿವರ ಸಭೆಯಲ್ಲಿ ತಾಲ್ಲೂಕು ಕೇಂದ್ರಗಳಲ್ಲಿರುವ ಆಸ್ಪತ್ರೆಗಳಲಿ ಅನುಕೂಲತೆಗಳಿದ್ದರೂ ಸಹಾ ಗರ್ಭಿಣಿ ಸ್ತ್ರೀಯರು ಹೆರಿಗೆಗಾಗಿ ಖಾಸಗಿ ಆಸ್ಪತ್ರೆಗಳಿಗೆ ಹೋಗುತ್ತಿದ್ದಾರೆ, ಸರ್ಕಾರದ 108 ವಾಹನದ ಚಾಲಕರು ಶಾಮೀಲಾಗಿ / ಕಮೀಷನ್ ಗಾಗಿ ಖಾಸಗಿ ಆಸ್ಪತ್ರೆಗಳಿಗೆ ರೋಗಿಗಳನ್ನು ಕರೆದುಕೊಂಡುಹೋಗುತ್ತಿದ್ದಾರೆ. ಈ ಬಗ್ಗೆ ಯಾವ ಕ್ರಮ ಕೈಗೊಂಡಿದ್ದೀರ ಎಂಬ ಬಗ್ಗೆ ಪ್ರಸ್ತಾವನೆಯನ್ನು ಮಾಡಿದರು ಎಂಬುದಾಗಿ ಮಾಹಿತಿ ನೀಡಿದರು.

ಮುಂದುವರೆದು ಮಾತನಾಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬಕಲ್ಯಾಣಾಧಿಕಾರಿಗಳು ಆಲೂರು, ಅರಕಲಗೂಡು ತಾಲ್ಲೂಕುಗಳಲ್ಲಿ ಖಾಸಗಿ ಆಸ್ಪತ್ರೆಗಳು ಇಲ್ಲದಿರುವುದರಿಂದ ಎಲ್ಲಾ ರೋಗಿಗಳು ತಾಲ್ಲೂಕು ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿರುತ್ತಾರೆ. ತುರ್ತು ಪರಿಸ್ಥಿತಿಯಲ್ಲಿ ಮಾತ್ರ ಜಿಲ್ಲಾ ಆಸ್ಪತ್ರೆಗೆ ಕಳುಹಿಸಲಾಗುತ್ತಿದೆ. ಖಾಸಗಿ ಆಸ್ಪತ್ರೆಗಳಿರುವ ತಾಲ್ಲೂಕುಗಳಲ್ಲಿ ಹಳ್ಳಿಗಳಿಂದ 108 ವಾಹನದಲ್ಲಿ ಕರೆತರಲಾಗುವ ಯಾವುದೇ ರೋಗಿಗಳನ್ನು / ಗರ್ಭಿಣಿ ಸ್ತ್ರೀಯರನ್ನು ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳಿಗೆ ಕಡ್ಡಾಯವಾಗಿ ಕರೆತರುವಂತೆ 108 ರ ವಾಹನ ಚಾಲಕರಿಗೆ ಸೂಚನೆ ನೀಡಲಾಗಿರುತ್ತದೆ. ಸೂಚನೆಯನ್ನು ಮೀರಿದ ವಾಹನ ಚಾಲಕರಿಗೆ ನೋಟೀಸ್ ನೀಡಲಾಗಿರುತ್ತದೆ. ತಾಲ್ಲೂಕು ಕೇಂದ್ರದ ಆಸ್ಪತ್ರೆಗಳಲ್ಲಿ ಎಲ್ಲಾ ರೀತಿಯ ಸುಸಜ್ಜಿತ ಸೌಕರ್ಯಗಳಿದ್ದು ಅದರ ಸದುಪಯೋಗಪಡಿಸಿಕೊಳ್ಳುವಂತೆ ಅಂಗನವಾಡಿ ಕಾರ್ಯಕರ್ತೆಯರ ಮೂಲಕ ತಿಳುವಳಿಕೆ ನೀಡಲಾಗುತ್ತಿದೆ. ಅತಿ ತುರ್ತು ಪರಿಸ್ಥಿತಿಯಲ್ಲಿ ತಾಲ್ಲೂಕು ವೈದ್ಯಾಧಿಕಾರಿಗಳ ಅನುಮತಿಯ ಮೇರೆಗೆ ಖಾಸಗಿ ಆಸ್ಪತ್ರೆಗಳಿಗೆ ತುರ್ತು ಚಿಕಿತ್ಸೆಗಾಗಿ ಕಳುಹಿಸಿಕೊಡಲಾಗುತ್ತಿದೆ ಎಂಬುದಾಗಿ ಮಾಹಿತಿ ನೀಡಿದರು. ಖಾಸಗಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ವೈದ್ಯರು ತಮ್ಮ ರೋಗಿಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸುತ್ತಿದ್ದು, ಈ ಬಗ್ಗೆ ಎಲ್ಲಾ ಸರ್ಕಾರಿ ವೈದ್ಯರುಗಳಿಗೆ ಎಚ್ಚರಿಕೆ ನೀಡಲಾಗಿದೆ. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂಬುದಾಗಿ ಮಾಹಿತಿ ನೀಡಿದರು.

ಅಲ್ಲದೆ ಈ ವರ್ಷದಲ್ಲಿ ಶೇ. 70% ರಷ್ಟು ಹೆರಿಗೆಗಳು ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ನಡೆಯುತ್ತಿದ್ದು ಉಳಿದ ಶೇ. 30% ಹೆರಿಗೆಗಳು ಖಾಸಗಿ ಆಸ್ಪತೆಗಳಲ್ಲಿ ನಡೆಯುತ್ತಿದೆ ಎಂಬುದಾಗಿ ಮಾಹಿತಿ ನೀಡಿದರು.

ಈ ಬಗ್ಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಯಾವುದೇ ಕಾರಣಕ್ಕೂ ಹಳ್ಳಿಗಳಿಂದ ಬಂದ ರೋಗಿಗಳು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪಡೆಯುವುದು ನಿಲ್ಲಬೇಕು. ತಾಲ್ಲೂಕು ಕೇಂದ್ರಗಳಲ್ಲಿ ನುರಿತ ವೈದ್ಯರ ಹಾಗೂ ಔಷದಿಗಳ ಕೊರತೆಯಿದ್ದಲ್ಲಿ ಕೂಡಲೆ ಭರ್ತಿ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಮುಂದುವರೆದು ಮಾತನಾಡಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಖಾಸಗಿ ಆಸ್ಪತೆಗಳಲ್ಲಿ ಜನನವಾದ ಶಿಶುಗಳ ಅಂಕಿಅಂಶಗಳನ್ನು ಯಾರು ನೀಡುತ್ತಾರೆ, ಹುಟ್ಟಿದ ದೃಡೀಕರಣಪತ್ರವನ್ನು ಯಾರು ನೀಡುತ್ತಾರೆ ಎಂಬ ಬಗ್ಗೆ ಮಾಹಿತಿ ಕೋರಿದರು.

ಈ ಬಗ್ಗೆ ಮಾತನಾಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಖಾಸಗಿ ಆಸ್ಪತ್ರೆಯವರು ಶಿಶು ಜನನದ ಬಗ್ಗೆ ಯಾವುದೇ ಮಾಹಿತಿಯ ಇಲಾಖೆಗೆ ನೀಡುವುದಿಲ್ಲ. ಆದರೆ ಅಂಗನವಾಡಿ ಕಾರ್ಯಕರ್ತರಿಂದ ಜನನದ ಬಗ್ಗೆ ಮಾಹಿತಿಯನ್ನು ಪಡೆಯಲಾಗುವುದು. ಶಿಶುವಿನ ಕಡೆಯವರಿಗೆ ಆಸ್ಪತ್ರೆಯಲ್ಲಿ ಶಿಶು ಜನನವಾಗಿರುವ ಬಗ್ಗೆ ದೃಡೀಕರಣ ಪತ್ರವನ್ನು ನೀಡುತ್ತಾರೆ ಅದನ್ನು ಸಂಬಂಧಪಟ್ಟ ಕಛೇರಿಗೆ ನೀಡಿ ಜನನ ದೃಡೀಕರಣ ಪತ್ರವನ್ನು ಪಡೆಯುತ್ತಾರೆ ಎಂಬುದಾಗಿ ಮಾಹಿತಿ ನೀಡಿದರು.

<u>ಆಯುಷ್ಮಾನ್ ಭಾರಂತ ಆರೋಗ್ಯ ಕರ್ನಾಟಕ:</u> ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ (ಪಿಎಂಜೆಎವೈ) ಯೋಜನೆಯಾಗಿದ್ದು ಬಿ.ಪಿ.ಎಲ್ ಪಡಿತರ ಚೀಟಿ ಪಡೆದಿರುವ ಕುಟುಂಬದವರಿಗೆ ವಾರ್ಷಿಕ ರೂ. 5.00 ಲಕ್ಷದವರಿಗೆ ಉಚಿತ ವೈದ್ಯಕೀಯ ಸೌಲಭ್ಯ ದೊರೆಯುವುದು. ಬಡತನದ ರೇಖೆಗಿಂತ ಮೇಲೆ ಇರುವ ಎಪಿಎಲ್ ಕುಟುಂಬಕ್ಕೆ, ಚಿಕಿತ್ಸಾ ವೆಚ್ಚದ (ಪ್ಯಾಕೇಜ್ ದರ) ಶೇ.30ರಷ್ಟು ನೆರವು, ವಾರ್ಷಿಕ ಗರಿಷ್ಠ 1.5 ಲಕ್ಷ ರೂ. ತನಕ ಸಿಗಲಿದೆ. ಈ ಪ್ರಯೋಜನವನ್ನು ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಪಡೆಯಬಹುದಾಗಿದೆ ಎಂಬುದಾಗಿ ಒಂದು ದಿನಕ್ಕೆ 15 ರಿಂದ 20 ಕಾರ್ಡಗಳನ್ನು ಅಪ್ ಲೋಡ್ ಮಾಡಿ ನೀಡಲಾಗುತ್ತಿದೆ. ಸರ್ವರ್ ತೊಂದರಿಯಂದಾಗಿ ಹೆಚ್ಚು ಕಾರ್ಡಗಳನ್ನು ವಿತರಿಸಲು ಸಾದ್ಯವಾಗುತ್ತಿಲ್ಲ ಮಾಹಿತಿ ನೀಡಿದರು. ಈ ಯೋಜನೆಯಡಿ ಬಿಪಿಎಲ್ ನಕಲು, ಆಧಾರ್ ಕಾರ್ಡ ನಕಲಿನೊಂದಿಗೆ ರೂ. 15.00 ಶಿಲ್ಕವನ್ನು ಪಾವತಿಸಿ ಕಾರ್ಡಗಳನ್ನು ಪಡೆಯಬಹುದಾಗಿದೆ. ಜಿಲ್ಲೆಯಲ್ಲಿನ ಒಟ್ಟು 14 ಲಕ್ಷ ಬಿ.ಪಿ.ಲ್ ಚೀಟಿಗಳ ಪೈಕಿ 5,81,000 ಕುಟುಂಬಗಳಿಗೆ ಈ ಯೋಜನೆಯಡಿ ಕಾರ್ಡಗಳನ್ನು ನೀಡಲಾಗಿದೆ. ಎಲ್ಲಾ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಹಾಗೂ ಈ ಯೋಜನೆಯಡಿ ನೊಂದಾಯಿತಗೊಂಡಿರುವ ಖಾಸಗಿ ಆಸ್ಪತ್ರೆಗಳಲ್ಲಿ ಕಾರ್ಡಗಳನ್ನು ನೀಡಲಾಗುತ್ತಿದೆ. ಅಲ್ಲದೆ ತಾಲ್ಲೂಕು ಪಂಚಾಯತ್ ಕಛೇರಿಗಳಲ್ಲಿಯೂ ಸಹಾ ಕಾರ್ಡಗಳನ್ನು ನೀಡಲಾಗುತ್ತಿದೆ. ಈ ಯೋಜನೆಯಡಿ ಚಿಕಿತ್ಸೆ ಪಡೆದುಕೊಂಡರೆ ಸಂಬಂಧಪಟ್ಟ ಆಸ್ಪತ್ರೆ ಆಸ್ಪತ್ರೆಗೆ ಪ್ರೋತ್ಸಾಹಧನ ನೀಡಲಾಗುವುದು. ಜಿಲ್ಲೆಯ ವಿಭಾಗಾಧಿಕಾರಿಗಳು ಈ ಯೋಜನೆಯ ಅದ್ಯಕ್ಷರಾಗಿದ್ದು ಸಂಬಂಧಪಟ್ಟ ತಾಲ್ಲೂಕಿನ ಶಾಸಕರು, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿಗಳು ಸದಸ್ಯರಾಗಿರುತ್ತಾರೆ ಎಂಬದಾಗಿ ಮಾಹಿತಿ ನೀಡಿದರು.

ಜಿಲ್ಲೆಯಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಹೆರಿಗೆ ಪ್ರಮಾಣ 68.88% ರಷ್ಟಿದ್ದು ಉಳಿದ 31.12% ರಷ್ಟು ಹೆರಿಗೆಗಳು ಖಾಸಗಿ ಆಸ್ಪತ್ರೆಯಲ್ಲಿ ನಡೆಯುತ್ತಿದ್ದು ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆ ಪ್ರಮಾಣ ಹೆಚ್ಚಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹಾಸನ ಇವರಿಗೆ ಸೂಚಿಸಿದರು. ಅರಸೀಕೆರೆ & ಚನ್ನರಾಯಪಟ್ಟಣ ತಾಲ್ಲೂಕು ವ್ಯಾಪ್ತಿಯ ಖಾಸಗಿ ಆಸ್ಪತ್ರೆಯಲ್ಲಿ ಹೆರಿಗೆ ಪ್ರಮಾಣ ಹೆಚ್ಚಾಗಿದ್ದು, ಈ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಸೂಚಿಸಲಾಯಿತು.

ಅರಸೀಕೆರೆ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗೆ 6 ತಿಂಗಳ ಹಿಂದೆ ಸ್ತ್ರೀರೋಗ ತಜ್ಞರನ್ನು ನೇಮಕ ಮಾಡಲಾಗಿದ್ದು ಕಡ್ಡಾಯವಾಗಿ ಸರ್ಕಾರಿ ಆಸ್ಪತ್ರೆಯಲ್ಲಿಯೇ ಹೆರಿಗೆ ನಿರ್ವಹಿಸುವಂತೆ ಸದರಿ ವೈದ್ಯರಿಗೆ ನಿರ್ದೇಶನ ನೀಡುವಂತೆ ಮತ್ತು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಕಡ್ಡಾಯವಾಗಿ ಹೆರಿಗೆ ನಿರ್ವಹಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ & ಯಾವುದೇ ಕಾರಣಕ್ಕೂ ಹೆರಿಗೆಗಾಗಿ ಖಾಸಗೀ ಆಸ್ಪತ್ರೆಗೆ ರೆಫರ್ ಮಾಡದಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸೂಚಿಸಲಾಯಿತು.

ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಸಾರ್ವಜನಿಕರಿಗೆ ಆರೋಗ್ಯ ಸೇವೆಯನ್ನು ಒದಗಿಸುವಲ್ಲಿ ವ್ಯತ್ಯಯ ಉಂಟಾಗದಂತೆ ಸೂಕ್ತ ಕ್ರಮ ವಹಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸೂಚಿಸಲಾಯಿತು.

ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿಯಲ್ಲಿ ಡಿಸೆಂಬರ್-2019 ರ ಅಂತ್ಯದವರೆಗೂ ಒಟ್ಟು 581089 ಹೆಲ್ತ್ ಕಾರ್ಡುಗಳನ್ನು ವಿತರಿಸಲಾಗಿದ್ದು, ಪ್ರಸ್ತುತ ಸರ್ವರ್‌ನ ತಾಂತ್ರಿಕ ತೊಂದರೆಯಿದ್ದು ಹೆಲ್ತ್ ಕಾರ್ಡ್ ವಿತರಿಸಲು ಸಂಬಂಧಪಟ್ಟವರೊಂದಿಗೆ ವ್ಯವಹರಿಸಿ ತಾಂತ್ರಿಕ ತೊಂದರೆಯನ್ನು ಸರಿಪಡಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸೂಚಿಸಲಾಯಿತು, ಮುಂದುವರೆದು ಗ್ರಾಮ ಪಂಚಾಯಿತಿಗಳಲ್ಲಿ ಹೆಲ್ತ್ ಕಾರ್ಡ್ ವಿತರಿಸಲು ಸೂಕ್ತ ಕೈಗೊಳ್ಳಲು CPO ರವರಿಗೆ ಸೂಚಿಸಲಾಯಿತು.

ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿ ಸಂಗ್ರಹವಾಗುವ ಹಣವನ್ನು ಸಮರ್ಪಕವಾಗಿ ವಿನಿಯೋಗಿಸಲು ಜಿಲ್ಲಾ ಆರೋಗ್ಯ ಸುರಕ್ಷಾ ಸಮಿತಿಯ ಸಭೆ ಕರೆದು ಸೂಕ್ತ ಕ್ರಮ ಕೈಗೊಳ್ಳುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚನೆ ನೀಡಿದರು.
(ಕ್ರಮ: ಉಪ ವಿಭಾಗಾಧಿಕಾರಿಗಳು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ನಿರ್ದೇಶಕರು, ಹಿಮ್ಸ್, ಹಾಸನ)

3. **ಗಂಗಾ ಕಲ್ಯಾಣ ಯೋಜನೆ:**

ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಬಾವಿಗಳಿಗೆ ವಿದ್ಯುದೀಕರಣದ ಬಗ್ಗೆ ವಿವಿಧ ಅಭಿವೃದ್ಧಿ ನಿಗಮದ ಅಧಿಕಾರಿಗಳು ಈ ಕೆಳಕಂಡಂತೆ ಮಾಹಿತಿ ನೀಡಿದರು.

| ಕ್ರಸಂ | ನಿಗಮದ ಹೆಸರು | 2018-19 | 2019-20 | ಒಟ್ಟು |
|---|---|---|---|---|
| 1 | ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, | 63 | 56 | 119 |
| 2 | ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, | 4 | 4 | 8 |
| 3 | ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, | 43 | 10 | 53 |
| 4 | ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ, | 12 | 10 | 22 |
| | ಒಟ್ಟು | 122 | 80 | 202 |

ಹಾಸನ ಜಿಲ್ಲೆಯಲ್ಲಿ ಒಟ್ಟು 202 ಕೊಳವೆ ಬಾವಿಗಳ ವಿದ್ಯುದೀಕರಣ ಬಾಕಿ ಇದ್ದು ಈ ಬಗ್ಗೆ ಚೆಸ್ಕಾಂ ರವರಿಗೆ ಮಾಹಿತಿ ನೀಡಲಾಗಿದೆ ಎಂಬುದಾಗಿ ಮಾಹಿತಿ ನೀಡಿದರು.

ಮುಂದುವರೆದು ಮಾತನಾಡಿದ ಚೆಸ್ಕಾಂನ ಕಾರ್ಯಪಾಲಕ ಅಭಿಯಂತರರು ನಮ್ಮ ಕೇಂದ್ರ ಕಛೇರಿಯಿಂದ ಒಮ್ಮೆ ಟೆಂಡರ್ ಕರೆಯಲು 2.00 ಕೋಟಿ ಹಣ ನಿಗದಿಪಡಿಸಿ ಟೆಂಡರ್ ಕರೆಯಲಾಗುವುದು. ಇದು ಪೂರ್ಣಗೊಂಡ ನಂತರ ಮತ್ತೊಮ್ಮೆ ಟೆಂಡರ್ ಕರೆಯುವ ಪದ್ಧತಿ ಇದ್ದು ಇದರಿಂದ ವಿಳಂಬವಾಗುತ್ತಿದೆ ಮಾರ್ಚ್ 2020ರ ಅಂತ್ಯಕ್ಕೆ ಬಾಕಿ ಇರುವ 202 ಕೊಳವೆಬಾವಿಗಳನ್ನು ವಿದ್ಯುದ್ದೀಕರಣಗೊಳಿಸುವುದಾಗಿ ಮಾಹಿತಿ ನೀಡಿದರು. ಮುಂದುವರೆದು ನಿಗಮದಿಂದ ಒಂದು ಘಟಕಕ್ಕೆ ರೂ.50,000/-ದಂತೆ ವಿದ್ಯುದ್ದೀಕರಣಕ್ಕೆ ಹಣ ಪಾವತಿಸುತ್ತಿದ್ದು ಅಂದಾಜು ವೆಚ್ಚ ಪ್ರತೀ ಘಟಕಕ್ಕೆ ರೂ.2.00 ರಿಂದ 3.00 ಲಕ್ಷ ಆಗುತ್ತಿದ್ದು, ಇದಕ್ಕೆ ನಿಗಮಕ್ಕೆ ಆರ್ಥಿಕ ಸಮಸ್ಯೆ ಎದುರಾಗುತ್ತಿದೆ ಎಂದು ತಿಳಿಸಿದರು.

ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು SCP /TSP ಯೋಜನೆಯಡಿ ಲಭ್ಯವಿರುವ ಹಣವನ್ನು ಇದಕ್ಕೆ ಉಪಯೋಗಿಸಿಕೊಂಡು ವಿದ್ಯುದ್ದೀಕರಣಗೊಳಿಸಲು ಸೂಚಿಸಿದರು.

ಮುಂದುವರೆದು ಮಾತನಾಡಿದ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು, ಒಂದು ವರ್ಷಕ್ಕೆ ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುದೀಕರಣಕ್ಕಾಗಿ ಪ್ರಸ್ತಾವನೆ ಬರುತ್ತದೆ ಎಂಬ ಮಾಹಿತಿ ಪಡೆದು ಒಮ್ಮೆಲೇ ಚೆಸ್ಕಾಂನಿಂದ ಟೆಂಡರ್ ಕರೆಯುವಂತೆ ಚೆಸ್ಕಾಂ ಕಾರ್ಯಪಾಲಕ ಅಭಿಯಂತರರಿಗೆ ಸೂಚನೆ ನೀಡಿದರು. ಈ ಬಗ್ಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಪ್ರತಿ 15 ದಿನಗಳೊಗೊಮ್ಮೆ ಮೇಲ್ವಿಚಾರಣೆ ನಡೆಸುವಂತೆ ಸೂಚನೆ ನೀಡಿದರು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಡಾ:ಬಿ.ಅರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ)

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮುಂದಿನ ಪ್ರಗತಿ ಪರಿಶೀಲನಾ ಸಭೆಯೊಳಗಾಗಿ ಇಲಾಖೆಗಳಿಗೆ ನೀಡಿರುವ ಸೂಚನೆಗಳಂತೆ ಕ್ರಮ ವಹಿಸುವಂತೆ ಸೂಚನೆ ನೀಡುತ್ತಾ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ನವೀನ್ ರಾಜ್ ಸಿಂಗ್, ಐ.ಎ.ಎಸ್.)
ವ್ಯವಸ್ಥಾಪಕರು ನಿರ್ದೇಶಕರು
ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್, ಬೆಂಗಳೂರು
ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

## ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಸರ್ಕಾರದ ಪ್ರಮುಖ ಅಭಿವೃದ್ಧಿ ಯೋಜನೆಗಳು ಹಾಗೂ ವಿಷಯಗಳ ಕುರಿತು ನಡೆಸಲಾದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು

---

**:: ಅಧ್ಯಕ್ಷತೆ ::**

**ಡಾ: ಶಾಲಿನಿ ರಜನೀಶ್, ಐ ಎ ಎಸ್.,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ , ಬೆಂಗಳೂರು
ಹಾಗೂ ಚಿಕ್ಕಮಗಳೂರು ಜಿಲ್ಲಾ
ಉಸ್ತುವಾರಿ ಕಾರ್ಯದರ್ಶಿಯವರು

**:: ಸ್ಥಳ ::**
ಜಿಲ್ಲಾಧಿಕಾರಿ ಕಚೇರಿ ಸಭಾಂಗಣ,
ಚಿಕ್ಕಮಗಳೂರು

ದಿನಾಂಕ: 24.01.2020
ಬೆಳಿಗ್ಗೆ: 10.30 ಗಂಟೆ

**:: ಉಪಸ್ಥಿತಿ ::**

**1. ಡಾ: ಬಗಾದಿ ಗೌತಮ್, ಐ ಎ ಎಸ್.,**
ಜಿಲ್ಲಾಧಿಕಾರಿ, ಚಿಕ್ಕಮಗಳೂರು.

**2. ಶ್ರೀಮತಿ ಅಶ್ವಥಿ, ಐ ಎ ಎಸ್.,**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂ ಚಾಯ್ತಿ, ಚಿಕ್ಕಮಗಳೂರು

**ಹಾಜರಿದ್ದವರು:-**

ಅಪರ ಜಿಲ್ಲಾಧಿಕಾರಿ ಚಿಕ್ಕಮಗಳೂರು ಹಾಗೂ ಹಾಜರಿಯಂತೆ ಅಧಿಕಾರಿಗಳು.

ಪ್ರಥಮವಾಗಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ನೂತನವಾಗಿ ನೇಮಕವಾಗಿ, ಪ್ರಥಮ ಬಾರಿಗೆ ಜಿಲ್ಲೆಗೆ ಆಗಮಿಸಿರುವಂತೆ ಜಿಲ್ಲಾಡಳಿತ ಪರವಾಗಿ ಸ್ವಾಗತಿಸುತ್ತಾ, ಹಾಗೂ ಸಭೆಗೆ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿ, ಮಾನ್ಯ ಜಿಲ್ಲಾ

ಉಸ್ತುವಾರಿ ಕಾರ್ಯದರ್ಶಿಗಳು ಸಭೆಯ ಅಧ್ಯಕ್ಷತೆ ವಹಿಸಿ ಸಭೆ ನಡೆಸಿಕೊಡಲು ವಿನಂತಿಸಲಾಯಿತು. ಅದೇ ರೀತಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಜರಿದ್ದ ಅಧಿಕಾರಿಗಳ ಪರಿಚಯ ಮಾಡಿಕೊಂಡರು.

**ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ವಿಷಯವಾರು ಚರ್ಚಿಸಿ, ತೀರ್ಮಾನ ಕೈಗೊಳ್ಳಲಾಯಿತು.**

| ಚರ್ಚೆ | ತೀರ್ಮಾನ |
|---|---|
| **(1) ಬಸವ ವಸತಿ (ಗ್ರಾಮೀಣ)**<br>ಜಿಲ್ಲೆಯಲ್ಲಿ ಒಟ್ಟು 11306 ಫಲಾನುಭವಿಗಳು ಆಯ್ಕೆಯಾಗಿದ್ದು, ಆ ಪೈಕಿ 5200 ಮನೆಗಳು ಪೂರ್ಣವಾಗಿರುವುದನ್ನು ಹಾಗೂ 2774 ಮನೆಗಳು ಪ್ರಾರಂಭವಾಗದೇ ಇರುವುದನ್ನು ಗಮನಿಸಲಾಯಿತು.<br><br>**(2) ಡಾ: ಬಿ.ಆರ್.ಅಂಬೇಡ್ಕರ್ ನಿವಾಸ ಯೋಜನೆ (ಗ್ರಾಮೀಣ)**<br>ಜಿಲ್ಲೆಯಲ್ಲಿ ಒಟ್ಟು 4113 ಫಲಾನುಭವಿಗಳ ಪೈಕಿ 1447 ಫಲಾನುಭವಿಗಳು ಈವರೆವಿಗೆ ಪ್ರಾರಂಭಿಸದೇ ಇರುವುದನ್ನು ಗಮನಿಸಲಾಯಿತು.<br><br>**(3) ಡಾ: ಬಿ.ಆರ್.ಅಂಬೇಡ್ಕರ್ ನಿವಾಸ ಯೋಜನೆ (ನಗರ)**<br>ಜಿಲ್ಲೆಯಲ್ಲಿ ಒಟ್ಟು 359 ಫಲಾನುಭವಿಗಳಿದ್ದು, ಆ ಪೈಕಿ 178 ಮನೆಗಳು ಪೂರ್ಣಗೊಂಡಿರುತ್ತವೆ. 111 ಮನೆಗಳು ಪ್ರಾರಂಭ ವಾಗದೇ ಇರುವ ಬಗ್ಗೆ ಗಮನಿಸಲಾಯಿತು. | • ಪ್ರಾರಂಭಿಸದೇ ಬಾಕಿ ಇರುವ 2774 ಮನೆಗಳನ್ನು ಕೂಡಲೇ ಪ್ರಾರಂಭಿಸುವಂತೆ ಸೂಚಿಸಿದರು.<br>• ಮೂರು ತಿಳುವಳಿಕೆ ನೀಡಿದ್ದಾಗ್ಯೂ ಮನೆಗಳನ್ನು ಪ್ರಾರಂಭಿಸದೇ ಇರುವುದಕ್ಕೆ ಫಲಾನುಭವಿಗಳ ಸಮಸ್ಯೆ ತಿಳಿದು ಬಗೆಹರಿಸಲು EO/PDO ಗೆ ಸೂಚಿಸಿದರು.<br>• ಮನೆಗಳ ನಿರ್ಮಾಣಕ್ಕೆ ಅವಶ್ಯವಾಗಿರುವ ಮರಳು, ಇಟ್ಟಿಗೆ ಇತ್ಯಾದಿ ಸಂಪನ್ಮೂಲ ಹಾಗೂ ಕೌಶಲ್ಯ ಸಲಹೆ ಸಹಕಾರಗಳನ್ನು ತಾಲ್ಲೂಕು ಪಂಚಾಯ್ತಿಯ ವತಿಯಿಂದ ಹಾಗೂ ಸ್ಥಳೀಯ ಇಂಜಿನಿಯರಿಂಗ್ ಇಲಾಖಾ ಅಧಿಕಾರಿಗಳು ನೀಡುವಂತೆ ಸೂಚಿಸಲಾಯಿತು.<br>• ಪಿ.ಡಿ.ಓ. ಮತ್ತು ಗ್ರಾಮ ಲೆಕ್ಕಿಗರು ಒಂದು ವಾರದಲ್ಲಿ ಪೂರ್ಣಗೊಂಡ ಮನೆಗಳನ್ನು ಪರಿಶೀಲಿಸಿ ದೃಢೀಕರಣಗಳನ್ನು ನೀಡಲು ಸೂಚಿಸಲಾಯಿತು. ಅದರಂತೆ ವಸತಿ ಇಲಾಖೆಯಿಂದ ಅನುದಾನ ಬಿಡುಗಡೆ ಮಾಡಲಾಗುವುದು.<br><br>**(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಮುಖ್ಯ ಯೋಜನಾಧಿಕಾರಿ, ಜಿಲ್ಲಾಪಂಚಾಯ್ತಿ ಹಾಗೂ ಎಲ್ಲಾ ತಾಲ್ಲೂಕು ಪಂಚಾಯ್ತಿ, ಕಾರ್ಯನಿರ್ವಾಹಕ ಅಧಿಕಾರಿಗಳು)** |

| | |
|---|---|
| **(4) ಪ್ರಧಾನ್ ಮಂತ್ರಿ ಆವಾಸ್ ಯೋಜನಾ (PMAY) (ಗ್ರಾಮೀಣ)**<br>ಜಿಲ್ಲೆಯಲ್ಲಿ ಒಟ್ಟು 332 ಫಲಾನುಭವಿಗಳಿದ್ದು, 77 ಪ್ರಕರಣಗಳಲ್ಲಿ ಈವರೆವಿಗೆ ಮನೆಗಳು ಪ್ರಾರಂಭಿಸದೇ ಇರುವುದನ್ನು ಗಮನಿಸಲಾಯಿತು.<br>ಈ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡುತ್ತಾ ವಸತಿ ಯೋಜನೆಗಳಲ್ಲಿ ಫಲಾನುಭವಿಗಳು ಮನೆಗಳನ್ನು ಪ್ರಾರಂಭಿಸಲು ಆಸಕ್ತಿ ತೋರುತ್ತಿಲ್ಲವೆಂದು ಹಲವಾರು ಫಲಾನುಭವಿಗಳು ಕೂಲಿ ಕೆಲಸ ಇತ್ಯಾದಿ ಕೃಷಿ ಚಟುವಟಿಕೆಗಳ ಸಂಬಂಧವಾಗಿ ಇತರೆ ಜಾಗಗಳಿಗೆ ತೆರಳಿರುತ್ತಾರೆಂದು ತಿಳಿಸಿರುತ್ತಾರೆ.<br>ಈ ಬಗ್ಗೆ ಫಲಾನುಭವಿಗಳು ಕೂಲಿ ಕೆಲಸ ಇತ್ಯಾದಿಗಳಿಗೆ ಹೊರ ಸ್ಥಳಗಳಿಗೆ ಹೋಗಿರುವರೇ ವಿನಃ ಪೂರ್ಣವಾಗಿ ವಲಸೇ ಹೋಗಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಸ್ಥಳೀಯವಾಗಿ ವಿಚಾರಣೆಯನ್ನು ನಡೆಸಿ ಅದರಂತೆ ಹಿಂಬಾಲಿಕಾ ಕ್ರಮ ಅವಶ್ಯವಾಗಿರುತ್ತದೆ.<br>ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಕಡೂರು ತಾಲ್ಲೂಕಿನಲ್ಲಿ ಪ್ರಾರಂಭವಾಗದೇ ಇರುವ 39 ಪ್ರಕರಣಗಳಲ್ಲಿ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಸ್ಪಷ್ಟ ಕಾರಣವನ್ನು ನೀಡುವಂತೆ ಮತ್ತು ಅದೇ ರೀತಿ ಮನೆ ಪ್ರಾರಂಭಿಸುವ ಕ್ರಮವಹಿಸಿ ವರದಿ ನೀಡಲು ತಿಳಿಸಿದರು. | ಯೋಜನೆಯಡಿ ಕೇವಲ 332 ಫಲಾನುಭವಿಗಳನ್ನು ಆಯ್ಕೆಗೊಳಿಸಿದ್ದು ತುಂಬಾ ಕಡಿಮೆ ಸಂಖ್ಯೆಯಾಗಿರುತ್ತದೆ. ಆದ್ದರಿಂದ Socio Economic and Caste Census (SECC) 2011 ದತ್ತಾಂಶದಂತೆ ಗ್ರಾಮೀಣ ಪ್ರದೇಶದ ವಸತಿ ರಹಿತ ಫಲಾನುಭವಿಗಳ ಪಟ್ಟಿಯೊಂದಿಗೆ ಪರಿಶೀಲಿಸಿ ಅರ್ಹರಿರುವ ಫಲಾನುಭವಿಗಳನ್ನು ಪ್ರಧಾನ್ ಮಂತ್ರಿ ಆವಾಸ್ ಯೋಜನಾ (PMAY)ದಲ್ಲಿ ಸೇರಿಸುವಂತೆ ತಿಳಿಸಲಾಯಿತು.<br>**(ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು)** |

| | |
|---|---|
| **(5) ವಾಜಪೇಯಿ ನಗರ ಯೋಜನೆ ಅಡಿ ಹೆಚ್ಚುವರಿ ಮನೆ ನಿರ್ಮಾಣ ಗುರಿ:**<br>ಯೋಜನೆಯಡಿ 425 ಫಲಾನುಭವಿಗಳು ದಾಖಲಿದ್ದು, ಆ ಪೈಕಿ ಶೇ.50ರಷ್ಟು ಅಂದರೆ 202 ಮನೆಗಳು ಪೂರ್ಣಗೊಂಡಿದ್ದು, 122 ಮನೆಗಳು ಪ್ರಾರಂಭಿಸದೇ ಇರುವುದನ್ನು ಗಮನಿಸಲಾಯಿತು. | ನಿರ್ಮಿತಿ ಕೇಂದ್ರ ಮತ್ತು ಎನ್ ಆರ್ ಎಲ್ ಎಂ ಮೂಲಕ ಮನೆ ನಿರ್ಮಾಣಕ್ಕೆ ಅವಶ್ಯವಿರುವ ಸಾಮಾಗ್ರಿಗಳನ್ನು ಸಮುದಾಯ ಚಟುವಟಿಕೆ ರೂಪದಲ್ಲಿ ಫಲಾನುಭವಿಗೆ ಲಭ್ಯವಾಗುವಂತೆ ಮಾಡಿದಲ್ಲಿ ನಿರ್ಮಾಣ ಪ್ರಗತಿ ಮತ್ತು ಇದರಿಂದ ಆರ್ಥಿಕ ಬೆಳವಣಿಗೆ ಸಹ ಸಾಧ್ಯವಾಗುವುದೆಂದು ಅಭಿಪ್ರಾಯಿಸಿದರು.<br>**(ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು)** |
| **(6) ದೇವರಾಜ ಅರಸು ವಸತಿ ಯೋಜನೆ (ನಗರ)**<br>ಯೋಜನೆಯಡಿ 68 ಫಲಾನುಭವಿಗಳು ಆಯ್ಕೆಯಾಗಿದ್ದು, 22 ಮನೆಗಳು ಪೂರ್ಣಗೊಂಡಿರುತ್ತದೆ. 13 ಮನೆಗಳು ತರೀಕೆರೆ ಪುರಸಭೆ ವ್ಯಾಪ್ತಿಯಲ್ಲಿ ಪ್ರಾರಂಭಿಸದೇ ಇರುವುದನ್ನು ಗಮನಿಸಲಾಯಿತು.<br>ಫಲಾನುಭವಿಗಳನ್ನು ಗುರುತಿಸಿ ನಿಗಮಕ್ಕೆ ಗುರಿ ನಿಗದಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಹಾಗೂ ದಿನಾಂಕ:10-01-2020ರಂದು ನಡೆದ ಸಮಿತಿ ಸಭೆಯಲ್ಲಿ ಪುನ: 83 ವಸತಿರಹಿತರವನ್ನು ಗುರುತಿಸಲಾಗಿದೆ ಹಾಗೂ 12 ಜನ ವಸತಿರಹಿತ ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಪ್ರಸ್ತಾವನೆಯನ್ನು ಶೀಘ್ರದಲ್ಲಿಯೇ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದಾಗಿ ಸಭೆಗೆ ತಿಳಿಸಿದರು. | **(ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು)** |

| | |
|---|---|
| **(7) PMAY (ನಗರ)- Beneficiary Led Construction (BLC)**<br>ಜಿಲ್ಲೆಯಲ್ಲಿ ಒಟ್ಟು 1524 ಮನೆಗಳಡಿ 390 ಪ್ರಕರಣಗಳಲ್ಲಿ ಈವರೆವಿಗೆ ಮನೆಗಳನ್ನು ಪ್ರಾರಂಭಿಸದೇ ಇರುವುದನ್ನು ಗಮನಿಸಲಾಯಿತು. | • ಪ್ರಾರಂಭಿಸದೇ ಬಾಕಿ ಇರುವ 390 ಮನೆಗಳನ್ನು ಕೂಡಲೇ ಪ್ರಾರಂಭಿಸುವಂತೆ ಸೂಚಿಸಿದರು.<br><br>**(ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು)** |
| **8) PMAY (ನಗರ)- (AHP)**<br>ಫಲಾನುಭವಿಯ ವಂತಿಕೆ ಪಾವತಿಸುವ ಕುರಿತು ಮನೆ ನಿರ್ಮಾಣ ಮಾಡಲು ಬ್ಯಾಂಕ್ ನಿಂದ ಸಾಲ ಮಂಜೂರು ಮಾಡುವ ಕುರಿತು ದಿನಾಂಕ: 28.11.2019ರಂದು ಫಲಾನುಭವಿಗಳು ಹಾಗೂ ಲೀಡ್ ಬ್ಯಾಂಕ್ ವ್ಯವಸ್ಥಾಪಕರ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಯಲ್ಲಿ ಮನೆ ಕಟ್ಟಲು ಪ್ರಾರಂಭಿಸಿದ ನಂತರ ಸಾಲ ನೀಡುವುದಾಗಿ ಲೀಡ್ ಬ್ಯಾಂಕ್ ವ್ಯವಸ್ಥಾಪಕರು ತಿಳಿಸಿರುತ್ತಾರೆಂದು ಹಾಗೂ ಈಗಾಗಲೇ 1511 ಫಲಾನುಭವಿಗಳು ಆಯ್ಕೆ ಆಗಿದ್ದು, 579 ಜನ ಫಲಾನುಭವಿಗಳ ದಾಖಲೆಗಳನ್ನು PMAY ವೆಬ್ ಸೈಟ್ ನಲ್ಲಿ ನಮೂದಿಸಲಾಗಿದ್ದು, 100 ಫಲಾನುಭವಿಗಳ ದಾಖಲಾತಿಗಳನ್ನು ಸಂಗ್ರಹಿಸಿದ್ದು, ನಿಗಮದ ವೆಬ್ ಸೈಟ್ ನಲ್ಲಿ ಕಾಲೋಚಿತಗೊಳಿಸಲಾಗುತ್ತಿದೆ. ಉಳಿದ 832 ಫಲಾನುಭವಿಗಳ ದಾಖಲಾತಿಗಳನ್ನು ಪಡೆಯಲು ಕರ ವಸೂಲಿಗಾರರು ಹಾಗೂ ಕಂದಾಯ ನಿರೀಕ್ಷಕರ ತಂಡ ಮಾಡಿ ದಾಖಲಾತಿಗಳನ್ನು ಪಡೆಯಲಾಗುತ್ತಿದೆ ಎಂದು ತಿಳಿಸಿದರು. | • ಈ ಬಗ್ಗೆ ನಗರಸಭೆ ಅಧಿಕಾರಿಗಳು ಸೂಕ್ತ ಹಿಂಬಾಲಿಕ ಕ್ರಮವನ್ನು ತ್ವರಿತವಾಗಿ ಕೈಗೊಂಡು ದಾಖಲೆಗಳ ಸಂಗ್ರಹಣೆ ಮಾಡಿ ಯೋಜನೆಯು ಫಲಕಾರಿ ರೀತಿಯಲ್ಲಿ ಅನುಷ್ಠಾನಗೊಳಿಸಲು ಸೂಚಿಸಲಾಯಿತು.<br>• ಫಲಾನುಭವಿಯ ವಂತಿಕೆ ನೀಡಲು ಮುಂದೆ ಬಾರದಿದ್ದಲ್ಲಿ ಆಧ್ಯಾರ್ಪಣೆ ಮಾಡಿ ಬದಲಿಗೆ ಅರ್ಹರನ್ನು ಗುರುತಿಸುವ ಕ್ರಮವಹಿಸಲು ಸೂಚಿಸಲಾಯಿತು.<br><br>ಈ ಬಗ್ಗೆ ಅಧ್ಯಕ್ಷರು ಮಾತನಾಡುತ್ತಾ ಸಭೆಯಲ್ಲಿ ಹಾಜರಿದ್ದ ಲೀಡ್ ಬ್ಯಾಂಕ್ ಮ್ಯಾನೇಜರ್ ರವರಿಗೆ ಸಾಲ ಮಂಜೂರಾತಿಯನ್ನು ನೀಡುವಲ್ಲಿ ಆಕ್ಷೇಪಣೆ ಅಥವಾ ವಿಳಂಬವಾಗುತ್ತಿದೆಯೇ ಎಂದು ಕೇಳಲಾಗಿ, ಫಲಾನುಭವಿಗಳು ಮನೆ ನಿರ್ಮಾಣದ ಪ್ರಾರಂಭಿಕ ಹಂತದ ದಾಖಲೆಯನ್ನು ಬ್ಯಾಂಕಿಗೆ ಒದಗಿಸಿದಲ್ಲಿ ನಗರಸಭೆಗೆ ಸಾಲದ ಮೊತ್ತವನ್ನು ನೀಡಲಾಗುವುದೆಂದು ತಿಳಿಸಿದರು.<br>• **(ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು)** |

| | |
|---|---|
| **9) PMAY (ನಗರ)- (CLSS)**<br><br>ಜಿಲ್ಲೆಯಲ್ಲಿ ಈ ಯೋಜನೆಯಡಿ ಒಟ್ಟು 143 ಫಲಾನುಭವಿಗಳು ಆಯ್ಕೆಯಾಗಿರುವುದನ್ನು ಗಮನಿಸಲಾಯಿತು. ಈ ಬಗ್ಗೆ ಯೋಜನಾ ನಿರ್ದೇಶಕರು ಮಾಹಿತಿಯನ್ನು ನೀಡುತ್ತಾ ಸದರಿ ಫಲಾನುಭವಿಗಳಿಗೆ ನಗರದ ವಿವಿಧ ಬ್ಯಾಂಕ್ ಗಳಿಂದ ಸಾಲ ಸೌಲಭ್ಯ ಮಂಜೂರಾಗಿರುವುದಾಗಿ ತಿಳಿಸಿದರು. ಮುಂದಿನ ಹಂತದ ಪ್ರಗತಿಯನ್ನು ಅಯಾ ಬ್ಯಾಂಕ್ ವತಿಯಿಂದ ಪರಿಶೀಲಿಸಿ ಸಹಾಯಧನ ಪಡೆಯುವ ಕ್ರಮವಹಿಸಬೇಕಿರುತ್ತದೆ ಎಂದು ತಿಳಿಸಿದರು. | • ಈ ಬಗ್ಗೆ ಬ್ಯಾಂಕ್ ಅಧಿಕಾರಿಗಳು ಮುಂದಿನ ಕ್ರಮವನ್ನು ತ್ವರಿತವಾಗಿ ಕೈಗೊಂಡು ಫಲಕಾರಿ ರೀತಿಯಲ್ಲಿ ಫಲಾನುಭವಿಗೆ ಯೋಜನೆಯ ಅನುಕೂಲ ಪಡೆಯಲು ಸಹಕರಿಸುವಂತೆ ಸೂಚಿಸಲಾಯಿತು.<br>• ವ್ಯವಸ್ಥಾಪಕರು, ಲೀಡ್ ಬ್ಯಾಂಕ್ ಇವರು ಹೆಚ್ಚಿನ ಬ್ಯಾಂಕ್ ಸಾಲ ನೀಡುವ ಬಗ್ಗೆ ಎಲ್ಲಾ ತಾಲ್ಲೂಕುಗಳ ಲೀಡ್ ಬ್ಯಾಂಕ್ ಗಳ ವ್ಯವಸ್ಥಾಪಕರ ಮೂಲಕ ಪ್ರತಿ ಗ್ರಾಮ ಪಂಚಾಯತ್ ನಲ್ಲಿ ಮನೆ ಇಲ್ಲದಿರುವವರ ಸಭೆಯನ್ನು ಕರೆದು ಯೋಜನೆ ಬಗ್ಗೆ ಜಾಗೃತಿ ಮೂಡಿಸಿ, Single Window ವ್ಯವಸ್ಥೆ ಮೂಲಕ ಸಾಲ ಅನುಮೋದನೆಗೆ ಕ್ರಮ ವಹಿಸುವುದು.<br><br>**(ಕ್ರಮ: ವ್ಯವಸ್ಥಾಪಕರು, ಲೀಡ್ ಬ್ಯಾಂಕ್)** |
| **11) ಗೃಹಸಾಲ ಮಂಜೂರಿ:**<br><br>ಜಿಲ್ಲೆಯಲ್ಲಿ ದಿನಾಂಕ:01.04.2019 ರಿಂದ 31.12.2019ರ ಅಂತ್ಯಕ್ಕೆ ಒಟ್ಟು 842 ಪ್ರಕರಣಗಳಲ್ಲಿ ರೂ 12954.00 ಲಕ್ಷ ಮೊತ್ತದ ಸಾಲವನ್ನು ನೀಡಲಾಗಿರುತ್ತದೆ.<br><br>ಈ ವಿಚಾರದಲ್ಲಿ ವ್ಯವಸ್ಥಾಪಕರು ಲೀಡ್ ಬ್ಯಾಂಕ್ ರವರು ಮಾಹಿತಿ ನೀಡುತ್ತಾ ಸಾಲ ಪಡೆಯುವ ವ್ಯಕ್ತಿಯು ಆತನ ಮನೆ ನಿರ್ಮಾಣದ ಅಂದಾಜಿನ ಶೇ 80 ಬಾಗದ ಮೊತ್ತವನ್ನು ಸಾಲವಾಗಿ ನೀಡಲಾಗುವುದೆಂದೂ, ಈ ಸಂಬಂಧ ವ್ಯಕ್ತಿಯು ತನ್ನ ನಿವೇಶನ/ ಮನೆ /ಆದಾಯ ದಾಖಲೆಗಳನ್ನು ನೀಡುವುದರ ಜೊತೆಗೆ ಅಡಮಾನವನ್ನು ಸಹ ಮಾಡುವ ಅವಶ್ಯಕತೆ ಇರುವುದಾಗಿ ಮತ್ತು ಕೃಷಿ ಭೂಮಿಯಲ್ಲಿ ಮನೆ ಸಾಲ ಪಡೆಯುವುದಾದಲ್ಲಿ ಜಮೀನು ಅನ್ಯಕ್ರಾಂತವಾಗಿರುವುದು ಅವಶ್ಯವೆಂದು ತಿಳಿಸಿದರು | • ಗೃಹನಿರ್ಮಾಣ ಸಾಲ ಅಪೇಕ್ಷಿಸುವ ವ್ಯಕ್ತಿಗಳು ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸುವ ಕೋರಿಕೆ ಪ್ರಸ್ತಾವನೆಗಳು ಬಂದಲ್ಲಿ ತಹಸೀಲ್ದಾರ್ ಹಾಗೂ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಕ್ರಮವಹಿಸುವಂತೆ ಸೂಚಿಸಲಾಯಿತು.<br>• ವಸತಿರಹಿತರ ಫಲಾನುಭವಿ ಪಟ್ಟಿಯನ್ನು ತಾಲ್ಲೂಕು ಪಂಚಾಯ್ತಿ/ ಗ್ರಾಮಪಂಚಾಯ್ತಿ ಅಧಿಕಾರಿಗಳು ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್ ರವರಿಗೆ ಒದಗಿಸಿ ಆ ಮೂಲಕ ಲೀಡ್ ಬ್ಯಾಂಕ್ ಮ್ಯಾನೇಜರ್ ರವರು ಸಂಬಂಧಿಸಿದ ಬ್ಯಾಂಕ್ ಗಳ ಮೂಲಕ ಸಾಲ ದೊರಕಿಸುವ ವ್ಯವಸ್ಥೆ ಮಾಡುವಂತೆ ಸೂಚಿಸಲಾಯಿತು. ಈ ಬಗ್ಗೆ ಸುತ್ತೋಲೆಯನ್ನು ಎಲ್ಲಾ ಬ್ಯಾಂಕ್ ಗಳಿಗೆ ನೀಡುವಂತೆ ಸೂಚಿಸಲಾಯಿತು. |

**11) ವಿಪತ್ತು ನಿರ್ವಹಣೆ:**

2019ರ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಯಲ್ಲಿನ ತೀವ್ರ ಮಳೆಯಿಂದ ಉಂಟಾದ ಅತೀವೃಷ್ಠಿ ಹಿನ್ನಲೆಯಲ್ಲಿ ಮನೆಗಳ ಹಾನಿಯ ಬಗ್ಗೆ ಪರಿಶೀಲಿಸಲಾಯಿತು.

**`ಎ` ವರ್ಗದ ಮನೆಗಳು:-**

ಜಿಲ್ಲೆಯಲ್ಲಿ ಒಟ್ಟು 464 ಮನೆಗಳು ಪೂರ್ಣ ಹಾನಿಗೊಂಡಿದ್ದು, ಆ ಪೈಕಿ 54 ಮನೆಗಳು ಮಾತ್ರ ಪ್ರಾರಂಭವಾಗಿ ವಿವಿಧ ಹಂತದಲ್ಲಿರುವುದನ್ನು ಗಮನಿಸಲಾಯಿತು. ಮೂಡಿಗೆರೆ ತಾಲ್ಲೂಕಿನಲ್ಲಿ 358 ಮನೆಗಳು ಹಾನಿಗೊಂಡಿದ್ದು, ಈ ಬಗ್ಗೆ ಕಾರ್ಯನಿರ್ವಹಣಾಧಿಕಾರಿ ಮಾಹಿತಿ ನೀಡುತ್ತಾ, ಮನೆಗಳನ್ನು ಪ್ರಾರಂಭಿಸಲು ಮರಳಿನ ವ್ಯವಸ್ಥೆ ದೊರಕಿದಲ್ಲಿ ಫಲಾನುಭವಿಗಳು ಮನೆಗಳನ್ನು ಪ್ರಾರಂಭಿಸಲು ಮುಂದಾಗುವ ಸಾಧ್ಯತೆಗಳಿವೆ ಎಂದು ತಿಳಿಸಿದರು.

ಈ ವಿಚಾರದ ಕುರಿತು ಜಿಲ್ಲಾ ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಚಿಕ್ಕಮಗಳೂರು ರವರು ಮಾಹಿತಿ ನೀಡುತ್ತಾ

- ಕೊಪ್ಪ, ಶೃಂಗೇರಿ ಹಾಗೂ ನ.ರಾ.ಪುರ ತಾಲ್ಲೂಕುಗಳಲ್ಲಿ ತಲಾ 1 ಮರಳು ಬ್ಲಾಕ್ ಗಳು ಚಾಲ್ತಿಯಲ್ಲಿದ್ದು, ಗಣಿಗಾರಿಕೆ ಪ್ರಾರಂಭವಾಗಿರುತ್ತದೆ. ಮುಂದಿನ ವಾರದಲ್ಲಿ ಸಾರ್ವಜನಿಕರಿಗೆ ಪರವಾನಿಗೆ ನೀಡುವ ಕ್ರಮವಹಿಸ ಲಾಗುವುದು. ಈ ಬ್ಲಾಕ್ ಗಳಲ್ಲಿ ಸಂಗ್ರಹಣೆಯಾಗಿರುವ ಮರಳಿನ ಪ್ರಮಾಣದಲ್ಲಿ ಶೇ 25 ಭಾಗದ ಮರಳನ್ನು ವಿವಿಧ ಯೋಜನೆಗಳ ಮನೆ ಮನೆ ನಿರ್ಮಾಣದ ಪ್ರಗತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಗಂಭೀರವಾಗಿ ಪರಿಗಣಿಸುವುದರಿಂದ ಪ್ರಾರಂಭಿಸಲು ಬಾಕಿ ಇರುವ 410 ಮನೆಗಳನ್ನು ಕೂಡಲೇ ಪ್ರಾರಂಭಿಸಲು ಈ ಬಗ್ಗೆ ತಹಸೀಲ್ದಾರರು ಮತ್ತು ತಾಲ್ಲೂಕು ಪಂಚಾಯ್ತಿ ಅಧಿಕಾರಿಗಳು ಆದ್ಯತೆಯ ಮೇಲೆ ಕ್ರಮವಹಿಸಿ ಈ ಮಾಹೆಯ ಅಂತ್ಯದೊಳಗೆ ಶೇ 100 ರಷ್ಟು ಪ್ರಗತಿ ಸಾಧಿಸಲು ಸೂಚಿಸಿದರು.
- ಜಿ.ಪಿ.ಎಸ್. ಕ್ರಮವಹಿಸಲು ಬಾಕಿ ಇರುವ ಪ್ರಕರಣಗಳ ಬಗ್ಗೆ ಕೂಡಲೇ ಪಿ.ಡಿ.ಓ./ ಗ್ರಾ.ಲೆ.ಗಳು ಕ್ರಮವಹಿಸುವಂತೆ ತಿಳಿಸಿದರು .
- ಜಿಲ್ಲಾಧಿಕಾರಿಗಳು ತಿಳಿಸಿರುವಂತೆ ಮೂಡಿಗೆರೆ ಮತ್ತು ಇತರೆ ತಾಲ್ಲೂಕುಗಳ ಪಿ ಡಿ ಓ ಹಾಗೂ ಗ್ರಾ:ಲೆ ರವರು ತಮ್ಮ ವ್ಯಾಪ್ತಿಯಲ್ಲಿ ಬರುವ ಹಾನಿಗೊಂಡ ಮನೆಗಳ ನಿರ್ಮಾಣಕ್ಕೆ ಮರಳಿನ ಅವಶ್ಯಕತೆ ಇದ್ದಲ್ಲಿ ಫಲಾನುಭವಿಗಳ ಪಟ್ಟಿ ತಯಾರಿಸಿ ಹಿರಿಯ ಭೂವಿಜ್ಞಾನಿ ರವರಿಗೆ ತಲುಪಿಸುವಂತೆ ಸೂಚಿಸಿದರು.
- ಭೂ ವಿಜ್ಞಾನಿರವರು ಮರಳು ಬ್ಲಾಕ್ ಗಳ ವಿವರವನ್ನು ಆಯಾ ಆಯಾ ತಾಲ್ಲೂಕು ಪಂಚಾಯ್ತಿಗಳಿಗೆ ನೀಡುವಂತೆ ಸೂಚಿಸಿದರು.
- ಮರಳಿನ ಅವಶ್ಯಕತೆ ಇರುವ ಫಲಾನುಭವಿಗಳು ಸದರಿ ಬ್ಲಾಕ್ ಗಳ ಮೂಲಕ ಮರಳು ಪಡೆಯಲು ಅವಕಾಶವಿದ್ದು, ಫಲಾನುಭವಿಗಳು ಪ್ರಯೋಜನ ಪಡೆಯಲು ತಿಳಿಸುವಂತೆ ತಹಸೀಲ್ದಾರ್ ಹಾಗೂ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಿದರು.
- ಅದೇ ರೀತಿ ಪಿ.ಡಿ.ಓ ರವರು ಪ್ರತೀ ಮೂರು ದಿನಗಳಿಗೆ ಒಮ್ಮೆ ಹಿರಿಯ ಭೂವಿಜ್ಞಾನಿಗಳನ್ನು ಸಂಪರ್ಕಿಸಿ ಮರಳು ಕೊರತೆ ನಿವಾರಣಾ ಕ್ರಮವಹಿಸಲು ತಿಳಿಸಿದರು.

| | |
|---|---|
| ನಿರ್ಮಾಣಕ್ಕೆ ಬಳಸಲು ಅನುವು ಮಾಡಲಾಗಿದೆ.<br>• ಪಟ್ಟಾ ಜಮೀನುಗಳಲ್ಲಿ ಮಳೆಯಿಂದ ಜಮಾ ಗೊಂಡಿರುವ ಮರಳನ್ನು ವಿಲೇವಾರಿ ಮಾಡುವ ಬಗ್ಗೆ ಸರ್ಕಾರದ ಆದೇಶದಂತೆ ದಿನಾಂಕ: 31.12.2019ರವರೆಗೆ ರಾಜಧನ/ಶುಲ್ಕ ಪಾವತಿಸಿ ಕೊಂಡು ಪಟ್ಟಾದಾರನಿಗೆ ಮರಳು ಬಳಕೆಗೆ ಅವಕಾಶ ಕಲ್ಪಿಸಲಾಗಿದೆ. ಆ ಪ್ರಕಾರ 34 ಫಲಾನುಭವಿಗಳಿಗೆ 1300 ಎಂ.ಟಿ ಘರವಾನಿಗೆ ವಿತರಣೆಯಾಗಿರುತ್ತದೆ. ದಿನಾಂಕ 31.12.2019ರಲ್ಲಿ ಹಲವಾರು ಬೇಡಿಕೆ ಅರ್ಜಿಗಳು ಬಂದಿರುತ್ತವೆ. ಆದರೆ ಸದರಿ ಸರ್ಕಾರದ ಆದೇಶದ ಅವಧಿಯು ದಿನಾಂಕ 31.12.2019ಕ್ಕೆ ಮುಕ್ತಾಯವಾಗಿರುವುದರಿಂದ ಅವಧಿ ವಿಸ್ತರಣೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.<br>• ಮೂಡಿಗೆರೆ ತಾಲ್ಲೂಕಿನ ಉದುಸೆ ಮರಳು ಬ್ಲಾಕ್ ವಿಚಾರದಲ್ಲಿ ಈ ಹಿಂದೆ ಹರಾಜು ಮೂಲಕ ಗುತ್ತಿಗೆ ನೀಡಿದ್ದು, ಗುತ್ತಿಗೆದಾರರು ನಿಯಮ ಪಾಲಿಸದ ಕಾರಣ ರದ್ದತಿ ಕ್ರಮವಹಿಸಲಾಗಿದೆ. ಇದರಿಂದ ಈ ಬ್ಲಾಕ್ ಕ ನಿಂದ ಮರಳು ಪಡೆಯಲು ಸಾಧ್ಯವಾಗುವುದಿಲ್ಲ. | **(ಕ್ರಮ: ತಹಸೀಲ್ದಾರರು, ಕಾರ್ಯನಿರ್ವಾಹಕ ಅಧಿಕಾರಿ, ಹಿರಿಯ ಭೂವಿಜ್ಞಾನಿ)**<br>• ಜಿಲ್ಲಾಧಿಕಾರಿಗಳು ತಿಳಿಸಿದಂತೆ ನರಸಿಂಹರಾಜಪುರ ತಾಲ್ಲೂಕಿನ ಬಂಡಿಮಠ ಸಂತ್ರಸ್ಥರಿಗೆ ಆಶ್ರಯ ನಿವೇಶನ ಅಥವಾ ಅರಣ್ಯ ಕಾಯ್ದೆ ಸೆಕ್ಷನ್ 4(1)ರಡಿ/ ಡೀಮ್ಡ್ ಅರಣ್ಯ ವ್ಯಾಪ್ತಿಯಿಂದ ಮುಕ್ತವಾಗಿರುವ ಕಂದಾಯ ಭೂಮಿಯನ್ನು ಗುರುತಿಸಿ ಪ್ರಸ್ತಾವನೆ ಸಲ್ಲಿಸಲು ತಿಳಿಸಿದರು.<br><br>**(ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಮಗಳೂರು)**<br><br>ಜಿಲ್ಲಾಧಿಕಾರಿಗಳು ಪ್ರಸ್ತಾಪಿಸುತ್ತಾ ಮೂಡಿಗೆರೆ ಮತ್ತು ಇತರೆ ತಾಲ್ಲೂಕುಗಳ ಪಿ ಡಿ ಓ ಹಾಗೂ ಗ್ರಾಮಲೆಕ್ಕಿಗರು ತಮ್ಮ ವ್ಯಾಪ್ತಿಯಲ್ಲಿ ಬರುವ ಹಾನಿಗೊಂಡ ಮನೆಗಳ ನಿರ್ಮಾಣಕ್ಕೆ ಮರಳಿನ ಅವಶ್ಯಕತೆ ಇದ್ದಲ್ಲಿ ಫಲಾನುಭವಿಗಳ ಪಟ್ಟಿ ತಯಾರಿಸಿ ಹಿರಿಯ ಭೂವಿಜ್ಞಾನಿ ರವರಿಗೆ ತಲುಪಿಸುವಂತೆ ಸೂಚಿಸಿದರು. ಮುಂದುವರೆದು ಮರಳಿನ ಅವಶ್ಯಕತೆ ಇರುವ ಫಲಾನುಭವಿಗಳು ಸದರಿ ಬ್ಲಾಕ್ ಗಳ ಮೂಲಕ ಪಡೆಯಲು ಅವಕಾಶವಿದ್ದು, ಈ ಬಗ್ಗೆ ಸರ್ಕಾರಿ ದರ ಪ್ರತಿ ಎಂ.ಟಿಗೆ ರೂ 1017/- ಮತ್ತು ಸಾಗಾಣಿಕೆ ವೆಚ್ಚ ಭರಿಸಬೇಕಾಗುವುದರಿಂದ ಫಲಾನುಭವಿಗಳು ಪ್ರಯೋಜನ ಪಡೆಯಲು ತಿಳಿಸು ವಂತೆ ತಹಸೀಲ್ದಾರ್ ಹಾಗೂ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಸೂಚಿಸಿದರು. ಅದೇ ರೀತಿ ಪಿ.ಡಿ.ಓ ರವರು ಪ್ರತೀ ಮೂರು ದಿನಗಳಿಗೆ ಒಮ್ಮೆ ಹಿರಿಯ ಭೂವಿಜ್ಞಾನಿಗಳನ್ನು ಸಂಪರ್ಕಿಸಿ ಮರಳು ಕೊರತೆ ನಿವಾರಣಾ ಕ್ರಮವಹಿಸಲು ತಿಳಿಸಿದರು. |

| | |
|---|---|
| **`ಬಿ` ವರ್ಗದ ಮನೆಗಳು:-**<br>ಜಿಲ್ಲೆಯಲ್ಲಿ 2019ರ ಅತೀವೃಷ್ಠಿಯಿಂದ ಒಟ್ಟು 549 ಬಿ ವರ್ಗದ ಮನೆಗಳಿರುವುದನ್ನು ಗಮನಿಸಲಾಯಿತು. ಈ ಬಗ್ಗೆ ಅಪರ ಜಿಲ್ಲಾಧಿಕಾರಿಗಳು ಪ್ರಸ್ತಾಪಿಸುತ್ತಾ, ಬಿ ವರ್ಗದ ಮನೆಗಳಿಗೆ ಈ ಮೊದಲು ಪೂರ್ಣ ಹಾನಿಯೆಂದು ಪರಿಗಣಿಸಿ ಪುನರ್ ನಿರ್ಮಾಣಕ್ಕಾಗಿ ರೂ 1.00ಲಕ್ಷ ಮೊತ್ತವನ್ನು ಪ್ರಾರಂಭಿಕವಾಗಿ ನೀಡಲಾಗಿರುತ್ತದೆಂದೂ, ಆದರೆ ಈ ವರ್ಗದ ಮನೆಗಳ ಪೈಕಿ ಹಲವಾರು ಮನೆಗಳು ಪುನರ್ ನಿರ್ಮಾಣದ ಸ್ಥಿತಿಯಲ್ಲಿ ಇಲ್ಲದೆ ಕೇವಲ ದುರಸ್ತಿ ಅವಶ್ಯಕತೆ ಇರುವುದರಿಂದ ಅಂತಹ ಫಲಾನುಭವಿಗಳು ಸದರಿ ಮನೆಗಳನ್ನು ಪೂರ್ಣ ನೆಲಸಮ ಮಾಡಿ ಪುನರ್ ನಿರ್ಮಿಸಲು ಮುಂದಾಗದ ಕಾರಣ ಈ ಬಗ್ಗೆ ದುರಸ್ತಿಗಾಗಿ ಅವಕಾಶವನ್ನು ಕಲ್ಪಿಸಲಾಗಿರುತ್ತದೆ ಎಂದು ದುರಸ್ತಿಗಾಗಿ ರೂ 3.00ಲಕ್ಷ ಮೊತ್ತವನ್ನು ನೀಡಲಾಗುವುದೆಂದು ತಿಳಿಸಿದರು.<br><br>ಈ ಕುರಿತು ಜಿಲ್ಲಾಧಿಕಾರಿಗಳು ತಹಸೀಲ್ದಾರರಿಂದ ಮಾಹಿತಿ ಪಡೆಯಲಾಗಿ 549 ಮನೆಗಳ ಪೈಕಿ 372 ಮನೆಗಳು ದುರಸ್ತಿಗಾಗಿ ಮತ್ತು 177 ಮನೆಗಳು ಪುನರ್ ನಿರ್ಮಾಣಕ್ಕೆ ಯೋಗ್ಯವಾಗಿರುವುದಾಗಿ ಮಾಹಿತಿಯನ್ನು ಪಡೆದರು. ಉಳಿದಂತೆ ವಿವಿಧ ಹಂತದಲ್ಲಿ ಪ್ರಗತಿ ಯಲ್ಲಿರುವ ಮನೆಗಳ ಜಿ ಪಿ ಎಸ್ ಸಂಗ್ರಹಣೆಯನ್ನು ಕೂಡಲೇ ಪಿ ಡಿ ಓ ರವರು ನಿರ್ವಹಿಸುವಂತೆ ಸೂಚಿಸಿದರು. | • ತಹಸೀಲ್ದಾರರು ನೀಡಿದ ಮಾಹಿತಿಯಂತೆ 372 ಮನೆಗಳು ದುರಸ್ತಿಗಾಗಿ ಮತ್ತು 177 ಮನೆಗಳು ಪುನರ್ ನಿರ್ಮಾಣಕ್ಕೆ ಬಾಕಿ ಇರುವುದನ್ನು ಕೂಡಲೇ ಪ್ರಾರಂಭಿಸುವಂತೆ ಸೂಚಿಸಿದರು.<br>• ಪುನರ್ ನಿರ್ಮಾಣ ಆಗಬೇಕಾಗಿರುವ ಎಲ್ಲಾ ಮನೆಗಳನ್ನು ಕೂಡಲೇ ಪ್ರಾರಂಭಿಸುವಂತೆ ಹಾಗೂ ದುರಸ್ತಿ ಆಗಬೇಕಾಗಿರುವ ಮನೆಗಳ ಜಿ ಪಿ ಎಸ್ ಕ್ರಮವನ್ನು 2 ದಿನದೊಳಗೆ ಕೈಗೊಳ್ಳುವಂತೆ ಸೂಚಿಸ ಲಾಯಿತು.<br>• ಪುನರ್ವಸತಿಗಾಗಿ ಅರಣ್ಯ ಇಲಾಖೆಯಿಂದ ಅಭಿಪ್ರಾಯ ನೀಡಬೇಕಾದ ಹಂತೂರು ಮತ್ತು ಬಿ.ಹೊಸಳ್ಳಿ ಗ್ರಾಮದ ಪ್ರಸ್ತಾವನೆಗಳಿಗೆ ಅಭಿಪ್ರಾಯವನ್ನು ತ್ವರಿತವಾಗಿ ನೀಡುವಂತೆ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ದೂರವಾಣಿ ಮೂಲಕ ಕೋರಲಾಯಿತು.<br>**(ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಮಗಳೂರು)**<br>• ಭೂವಿಜ್ಞಾನ ಇಲಾಖೆಯ ಸಮೀಕ್ಷೆಯಲ್ಲಿ ಅಭಿಪ್ರಾಯಿಸಿರುವ ಅಸುರಕ್ಷಿತ ಪ್ರದೇಶದ ಸಂತ್ರಸ್ಥರಿಗೆ ಬದಲಿ ಭೂಮಿಯನ್ನು ನೀಡಿದ ನಂತರ, ಸಂತ್ರಸ್ಥರು ಹೊಂದಿದ್ದ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆದ ಕೂಡಲೇ ಅಂತಹ ಪ್ರದೇಶದಲ್ಲಿ ಅರಣ್ಯ ಇಲಾಖೆಯವರು ಇಲಾಖಾ ವತಿಯಿಂದ ಬಿದಿರು |

ಮುಂದುವರೆದು ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವುದೇ ಸಾರ್ವಜನಿಕ ಉಪಯೋಗಕ್ಕೆ ಭೂಮಿಯನ್ನು ಕಾಯ್ದಿರಿಸುವ ವಿಚಾರದಲ್ಲಿ ಪರಿಶೀಲಿಸಲಾಗಿ, ಶೇ 40 ರಷ್ಟು ಭೂಮಿಯು ಅರಣ್ಯ ವ್ಯಾಪ್ತಿಗೆ ಬರುವುದು ಕಂಡು ಬರುತ್ತದೆ. ಆ ಪ್ರಕಾರ ಅತೀವೃಷ್ಟಿಯಿಂದ ಹಾನಿಗೊಂಡ ಕೆಲ ಪ್ರದೇಶಗಳಲ್ಲಿ ಮನೆಗಳನ್ನು ಅಲ್ಲಿಯೇ ನಿರ್ಮಿಸಲು ಅಸುರಕ್ಷತೆಯ ಪರಿಸ್ಥಿತಿ ಇರುವುದಾಗಿದೆ. ಈ ಬಗ್ಗೆ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ ತಂಡವು ಸ್ಥಳಕ್ಕೆ ಭೇಟಿ ನೀಡಿ ಸರ್ವೆ ನಡೆಸಿ ಭೂಕುಸಿತದ ಹಲವು ಪ್ರದೇಶಗಳು ಅಸುರಕ್ಷಿತವಾಗಿರುವುದನ್ನು ವರದಿಯಲ್ಲಿ ಸ್ಪಷ್ಟಪಡಿಸಿರುತ್ತಾರೆ. ಪುನರ್ವಸತಿಗಾಗಿ ಭೂಮಿ ಕಾಯ್ದಿರಿಕೆಗೆ ಸಂಬಂಧಿಸಿದಂತೆ ಹಂತೂರು, ಬಿ.ಹೊಸಳ್ಳಿ ಮತ್ತು ಮಾವಿನಕೆರೆ ಗ್ರಾಮಗಳಲ್ಲಿ ಭೂಮಿಯನ್ನು ಗುರುತಿಸಲಾಗಿದ್ದು, ಈ ಬಗ್ಗೆ ಅರಣ್ಯ ಇಲಾಖೆಯ ನಿರಾಕ್ಷೇಪಣೆ ಅವಶ್ಯವಿದ್ದು, ಅರಣ್ಯ ಇಲಾಖೆಯು ಅಭಿಪ್ರಾಯ ನೀಡಲು ಬಾಕಿ ಇರುವುದಾಗಿ ತಿಳಿಸಿದರು.

ತಹಸೀಲ್ದಾರ್ ಹಾಗೂ ಕಾರ್ಯನಿರ್ವಹಣಾಧಿಕಾರಿಗಳು ಪುನರ್ವಸತಿಗಾಗಿ ಕೆಲವು ಖಾಸಗಿ ಹಿಡುವಳಿದಾರರು ಜಮೀನನ್ನು ದಾನ/ಕ್ರಯ ಇತ್ಯಾದಿ ಮೂಲಕ ವಿಲೇವಾರಿ ಮಾಡುವ ಬಗ್ಗೆ ಮಾತುಕತೆ ನಡೆಸಿ ಸಮಂಜಸವಾದ ತೀರ್ಮಾನ ಕೈಗೊಳ್ಳಬೇಕಾಗುತ್ತದೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಉಪಅರಣ್ಯಸಂರಕ್ಷಣಾಧಿಕಾರಿಗಳು ಪ್ರಸ್ತಾಪಿಸುತ್ತಾ, ಮಾವಿನಕೆರೆ ಪ್ರಕರಣದಲ್ಲಿ ಒಪ್ಪಿಗೆ ಸೂಚಿಸಿ ಅಭಿಪ್ರಾಯಿಸಲಾಗಿದೆ ಎಂದು ಉಳಿದಂತೆ ಹಂತೂರು ಮತ್ತು ಬಿ.ಹೊಸಳ್ಳಿ ಪ್ರಕರಣದಲ್ಲಿ ಅರಣ್ಯಸಂರಕ್ಷಣಾಧಿಕಾರಿ, ಗಡಿ ಮತ್ತು ಭೂಮಾಪನ ರವರಿಗೆ ಇತ್ಯಾದಿ ತಳಿಗಳ ನೆಡುತೋಪು ಮಾಡುವಂತೆ ಸೂಚಿಸಲಾಯಿತು. ಇದಕ್ಕಾಗಿ ಸದರಿ ಭೂಮಿಯ ಸಮೀಕ್ಷೆ ಮಾಡಿ ಅವಶ್ಯವಿರುವ ಪ್ಲಾಂಟೇಷನ್ ಗಿಡಗಳನ್ನು ಕೂಡಲೇ ಸಂಗ್ರಹಿಸುವ ಕ್ರಮವಹಿಸಲು ಸೂಚಿಸಲಾಯಿತು.

**(ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ಅರಣ್ಯ)**

- ಪುನರ್ವಸತಿ ವಿಚಾರದಲ್ಲಿ ಆ ಭಾಗದ ಸಂತ್ರಸ್ಥರು/ನಿವಾಸಿಗಳು ತಾವು/ ತಮ್ಮ ಪೂರ್ವಜರು ನೆಲೆಸಿ/ಹುಟ್ಟಿಬೆಳೆದ ಪ್ರದೇಶವನ್ನು ಬಿಟ್ಟುಕೊಡುವಲ್ಲಿ ಭಾವನಾತ್ಮಕ ಸಂಬಂಧವಿರುತ್ತದೆಂದು ಆದ್ದರಿಂದ ಸದರಿ ಅಸುರಕ್ಷಿತ ಪ್ರದೇಶವನ್ನು ತಡೆಗೋಡೆ ಇತ್ಯಾದಿ ರಕ್ಷಣಾತ್ಮಕ ಕಾಮಗಾರಿಯಿಂದ ಸುರಕ್ಷತೆಗೊಳಿಸುವ ಸಾಧ್ಯತೆ ಇರುವ ಬಗ್ಗೆ ಪರಿಶೀಲಿಸಬಹುದೆಂದು, ಈ ಬಗ್ಗೆ ಇಂಜಿನಿಯರಿಂಗ್ ಇಲಾಖೆಯವರು ಪರಿಶೀಲನೆ ನಡೆಸಲು ಸೂಚಿಸಲಾಯಿತು.

**(ಕ್ರಮ: ತಹಸೀಲ್ದಾರರು, ಕಾರ್ಯನಿರ್ವಹಣಾಧಿಕಾರಿಗಳು, ಉಪಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಲೋಕೋಪಯೋಗಿ/ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಅಪರ ಜಿಲ್ಲಾಧಿಕಾರಿ)**

ಪ್ರಸ್ತಾವನೆ ಸಲ್ಲಿಸಿರುವುದಾಗಿ ತಿಳಿಸಿದರು.

**<u>ಭೂಕುಸಿತ ಪ್ರದೇಶಗಳಲ್ಲಿ ತಡೆಗಟ್ಟುವ ಕ್ರಮ:</u>**

ಗಣಿ ಮತ್ತು ಭೂವಿಜ್ಞಾನ ಇಲಾಖಾ ವತಿಯಿಂದ ಆಗಸ್ಟ್ 2019ರ ಅತೀವೃಷ್ಠಿಯಿಂದ ಭೂಕುಸಿತ ಉಂಟಾದ ಪ್ರದೇಶಗಳಲ್ಲಿ ವೈಜ್ಞಾನಿಕ ಸಮೀಕ್ಷೆ ನಡೆಸಿ ಈ ಕೆಳಕಂಡಂತೆ ಭೂಕುಸಿತ ತಡೆ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ ಈ ಕೆಳಗಿನಂತೆ ಶಿಫಾರಸ್ಸು ಮಾಡಿರುತ್ತಾರೆ.

| | |
|---|---|
| ಇಳಿಜಾರು ಪ್ರದೇಶಗಳಲ್ಲಿ ನೀರಿನ ಸರಾಗವಾದ ಹರಿಯುವಿಕೆಗೆ ಸಮರ್ಪಕವಾದ ಮತ್ತು ಉಚಿತವಾದ ಕಾಲುವೆಗಳು, ಮೋರಿಗಳು ಮತ್ತು ಒಳ ಚರಂಡಿಗಳ ನಿರ್ಮಾಣ ಮಾಡುವುದರಿಂದ ಮಣ್ಣಿನಲ್ಲಿ ನೀರಿನ ಇಂಗುವಿಕೆ ಸಮರ್ಥ್ಯ ಕಡಿಮೆಗೊಳಿಸಿ ನೀರಿನ ಸರಾಗವಾದ ಹರಿವಿಗೆ ಅನುಕೂಲ ಮಾಡುವುದು | (ಕ್ರಮ: ಲೋಕೋಪಯೋಗಿ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ & ಗ್ರಾಮ ಪಂಚಾಯಿತಿ) |
| ಅಸ್ಥಿರ ಇಳಿಜಾರು ಪ್ರದೇಶಗಳಲ್ಲಿ ಸಮರ್ಪಕವಾದ ಕಾಲುವೆಗಳ ನಿರ್ಮಾಣ ಮಾಡುವುದು. ಇದರಿಂದ ಮಣ್ಣಿನ ಕಣಗಳ ನಡುವಿನ ಜಲ ಸೆಳೆತ ಸಾಮರ್ಥ್ಯ ಕಡಿಮೆಯಾಗಿ ಭೂಕುಸಿತ ತಡೆಗಟ್ಟಬಹುದು. | (ಕ್ರಮ: ಲೋಕೋಪಯೋಗಿ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ & ಗ್ರಾಮ ಪಂಚಾಯಿತಿ) |

- ಈ ಬಗ್ಗೆ ಅರಣ್ಯ ಇಲಾಖಾ ವತಿಯಿಂದ ಭೂಕುಸಿತ ಪ್ರದೇಶಗಳಲ್ಲಿರುವ ಸರ್ಕಾರಿ ಜಾಗಗಳಲ್ಲಿ ಮತ್ತು ಸಾರ್ವಜನಿಕ ಆಸ್ತಿ-ಪಾಸ್ತಿಗಳ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸಿದ ನಂತರ ಸರ್ಕಾರಕ್ಕೆ ಪಡೆಯುವ ಸದರಿ ಹಿಡುವಳಿ ಪ್ರದೇಶಗಳಲ್ಲಿ ಪ್ಲಾಂಟೇಷನ್ /ನೆಡುತೋಪು ಮಾಡುವ ಕ್ರಮವಹಿಸಲು ತಿಳಿಸಲಾಯಿತು.
- ಅದೇ ರೀತಿ ಇಂಜಿನಿಯರಿಂಗ್ ಇಲಾಖೆಯು ಭೂಕುಸಿತ ಪ್ರದೇಶ ಗಳಲ್ಲಿ ಅವಶ್ಯಾನುಸಾರ ತಡೆಗೋಡೆ ಇತ್ಯಾದಿ ಸಿವಿಲ್ ಕಾಮಗಾರಿ ಗಳನ್ನು ಇಲಾಖಾವತಿಯಿಂದ ಕೈಗೊಂಡು ಸೂಕ್ತ ಭೂಕುಸಿತ ತಡೆಯುವಿಕೆ ಕ್ರಮವಹಿಸಲು ಸೂಚಿಸಲಾಯಿತು.

**(ಕ್ರಮ: ಅರಣ್ಯ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಮತ್ತು ಲೋಕೋಪಯೋಗಿ ಇಲಾಖೆ)**

| | | |
|---|---|---|
| ಇಳಿಜಾರು ಪ್ರದೇಶಗಳಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಹೆಚ್ಚಿನ ಭಾರದ ವಾಹನಗಳ ಚಾಲನೆಗೆ ಅನುಕೂಲವಾಗುವಂತಹ ಗುಣಮಟ್ಟದ ರಸ್ತೆ ನಿರ್ಮಾಣ ಸಾಮಗ್ರಿಗಳನ್ನು ಬಳಸುವುದು. | (ಕ್ರಮ: ಲೋಕೋಪಯೋಗಿ ಇಲಾಖೆ & ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ) | |
| ರಸ್ತೆ ಬದಿಯ ಇಳಿಜಾರು ಪ್ರದೇಶಗಳಲ್ಲಿ ಬುಡಮಟ್ಟದ ಸಾಮರ್ಥ್ಯ ಹೆಚ್ಚಿಸಲು ಕಾಂಕ್ರೀಟ್ ರಚನೆಗಳನ್ನು ನಿರ್ಮಾರ್ಣ ಮಾಡುವುದು. | (ಲೋಕೋಪಯೋಗಿ ಇಲಾಖೆ & ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ) | |
| ನೀರಿನ ಸರಾಗ ಹರಿವಿಗಾಗಿ ನದಿ ಪಾತ್ರದ ಎರಡೂ ಬದಿಗಳ ಪ್ರದೇಶಗಳಲ್ಲಿ ಕೃಷಿ ಚಟುವಟಿಕೆ ಗಳು ಮತ್ತು ತೋಟಗಾರಿಕೆ ಚಟುವಟಿಕೆ ಗಳನ್ನು ನಿಯಂತ್ರಿಸುವುದು. | (ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ) | |
| ಇಳಿಜಾರಿನ ಬುಡ ಪ್ರದೇಶಗಳಲ್ಲಿ ಯಾವುದೇ ರೀತಿಯ ಮಣ್ಣಿನ ಅಗೆಯುವಿಕೆ, ಗಣಿಗಾರಿಕೆ ಅಥವಾ ಅಸ್ಥಿರಗೊಳಿಸುವುದನ್ನು ನಿಯಂತ್ರಿಸುವುದು. | (ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಂದಾಯ ಇಲಾಖೆ, ಲೋಕೋಪಯೋಗಿ ಇಲಾಖೆ & ಅರಣ್ಯ ಇಲಾಖೆ) | |

| | | |
|---|---|---|
| ಅತಿಯಾದ ಇಳಿಜಾರು ಪ್ರದೇಶಗಳಲ್ಲಿ ಹೆಚ್ಚಿನ ಕೋನದ ರಚನೆಗಳ ನಿರ್ಮಾಣ ಮಾಡುವ ಮೊದಲು ಆ ಪ್ರದೇಶದ ಇಳಿಜಾರಿನ ಸ್ಥಿರತೆಯ ಮೌಲ್ಯ ಮಾಪನ ನಡೆಸುವುದು. | (ಕ್ರಮ: ಲೋಕೋಪಯೋಗಿ ಇಲಾಖೆ & ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ) | |
| ಮಳೆಗಾಲದ ಸಮಯದಲ್ಲಿ ಹೆಚ್ಚಿನ ಕೊನದ ಇಳಿಜಾರು ಪ್ರದೇಶಗಳ ಬಗ್ಗೆ ನಿರಂತರವಾಗಿ ಮೇಲ್ವಿಚಾರಣೆ ನಡೆಸಿ ನಿಗಾ ವಹಿಸುವುದು ಹಾಗೂ ಇಳಿಜಾರು ಪ್ರದೇಶಗಳಲ್ಲಿ ಕಂಡುಬರುವ ಭೌತಿಕ ಬದಲಾವಣೆ ಮತ್ತು ಹಿಂದಿನ ಬಿರುಕುಗಳ ಅಗಲೀ ಕರಣ ಕಂಡುಬಂದಲ್ಲಿ ಸಂಬಂಧಿಸಿದ ಇಲಾಖೆಯ ಗಮನಕ್ಕೆ ತರುವುದು. | (ಕ್ರಮ:ತಾಲ್ಲೂಕು ಆಡಳಿತ ಮತ್ತು ಗ್ರಾಮ ಪಂಚಾಯಿತಿ) | |

**ಮೂಲಭೂತ ಸೌಲಭ್ಯಗಳ ದುರಸ್ಥಿ/ ಪುನಶ್ಚೇತನ ಕಾಮಗಾರಿಗಳು:**

ಆಗಸ್ಟ್ 2019ರ ಅತೀವೃಷ್ಠಿಯಿಂದ ಹಾನಿಗೊಂಡ ಸಾರ್ವಜನಿಕ ಮೂಲ ಸೌಲಭ್ಯಗಳ ದುರಸ್ಥಿ / ಪುನಶ್ಚೇತನ ಕಾಮಗಾರಿಗಳನ್ನು ಎನ್ ಡಿ ಆರ್ ಎಫ್ / ಎಸ್ ಡಿ ಆರ್ ಎಫ್ ಮಾರ್ಗಸೂಚಿಯಂತೆ ಕೈಗೊಳ್ಳಲು ಕಂದಾಯ ಇಲಾಖೆಯಿಂದ ಜಿಲ್ಲೆಗೆ ರೂ 20.00 ಕೋಟಿ ಅನುದಾನ ವನ್ನು ನೀಡಲಾಗಿದ್ದು, ಸದರಿ ರೂ 20.00 ಕೋಟಿಗಳಿಗೆ ಒಟ್ಟು 845 ಕಾಮಗಾರಿಗಳಿಗೆ

- ಅಂದಾಜು ಸಲ್ಲಿಸಲು ಬಾಕಿ ಇರುವ ಕಾಮಗಾರಿಗಳಿಗೆ ಈ ವಾರದಲ್ಲಿ ಅಂದಾಜು ಸಲ್ಲಿಸುವಂತೆ ಮತ್ತು ಪ್ರಾರಂಭವಾಗದೇ ಇರುವ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಲು ಅದೇ ರೀತಿ ವಿವಿಧ ಹಂತದಲ್ಲಿರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಲಾಯಿತು.

| | |
|---|---|
| ಅನುಮೋದನೆ ನೀಡಲಾಗಿದೆ. ಆ ಪೈಕಿ ರೂ 54.30 ಲಕ್ಷ ಮೊತ್ತದ ಕಾಮಗಾರಿ ಗಳಿಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ಅಂದಾಜು ಸಲ್ಲಿಸಲು ಬಾಕಿ ಇರುತ್ತದೆ. 38 ಕಾಮಗಾರಿಗಳು ಪ್ರಾರಂಭಿಸಲು ಬಾಕಿ ಇರುತ್ತದೆ. | **(ಕ್ರಮ: ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು)** |
| • ಲೋಕೋಪಯೋಗಿ ಇಲಾಖಾ ವತಿಯಿಂದ ಅತಿವೃಷ್ಠಿ ಕಾಮಗಾರಿಗಳ ದುರಸ್ತಿಗಾಗಿ ಸದರಿ ಇಲಾಖೆಗೆ ನೇರವಾಗಿ ಒಟ್ಟು 33.98 ಕೋಟಿ ಅನುದಾನವನ್ನು ನೀಡಲಾಗಿದೆ. ಅದರಂತೆ ಇಲಾಖಾ ವತಿಯಿಂದ ಒಟ್ಟು 241 ಕಾಮಗಾರಿಗಳನ್ನು ಕೈಗೊಂಡಿದ್ದು, ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ. | **(ಕ್ರಮ: ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ)** |
| • ಸಣ್ಣನೀರಾವರಿ ಇಲಾಖೆಗೆ ಅತೀವೃಷ್ಠಿ ಸಂಬಂಧವಾಗಿ ಸರ್ಕಾರದಿಂದ ಒಟ್ಟು 863.50 ಲಕ್ಷ ಅನುದಾನವನ್ನು ನೇರವಾಗಿ ಸದರಿ ಇಲಾಖೆಗೆ ನೀಡಲಾಗಿದೆ. ಈ ಬಗ್ಗೆ ಒಟ್ಟು 35 ಕಾಮಗಾರಿಗಳನ್ನು ಕೈಗೊಂಡಿದ್ದು, ವಿವಿಧ ಹಂತದಲ್ಲಿರುತ್ತವೆ. | **(ಕ್ರಮ: ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆ, ಚಿಕ್ಕಮಗಳೂರು ಹಾಗೂ ತರೀಕೆರೆ)** |
| • ಪಂಚಾಯತ್ ರಾಜ್ ಇಲಾಖೆಯಿಂದ ಜಿಲ್ಲೆಗೆ ಒಟ್ಟು 83.22 ಕೋಟಿ ಅನುದಾನವನ್ನು ನೀಡಲಾಗಿದ್ದು, ಆ ಪೈಕಿ ಪಿ ಆರ್ ಇ ಡಿ ಇಲಾಖೆಗೆ ರೂ 52.05 ಕೋಟಿ , ಕೆ ಆರ್ ಆರ್ ಡಿ ಎ ಇಲಾಖೆಗೆ ರೂ 7.87 ಕೋಟಿ ಹಾಗೂ ಕೆ ಆರ್ ಐ ಡಿ ಎಲ್ ಗೆ ರೂ 23.30 ಅನುದಾನವನ್ನು ನೇರವಾಗಿ ಅಯಾಯ ಇಲಾಖೆಗಳಗೆ ನೀಡಲಾಗಿದೆ. | **(ಕ್ರಮ: ಕಾರ್ಯಪಾಲಕ ಇಂಜಿನಿಯರ್, ಪಿಆರ್ ಐಡಿ, ಕೆಆರ್ ಆರ್ ಡಿ ಎ, ಕೆ ಆರ್ ಐ ಡಿ ಎಲ್)** |
| • ಬೆಸ್ಕಾಂ ವತಿಯಿಂದ ರೂ. ಕೋಟಿ ಜಿಲ್ಲಾಧಿಕಾರಿಗಳಿಂದ ಪಡೆಯಲು ಕೋರಿದರು. | ಸದರಿ ಅನುದಾನವನ್ನು CRF ಮಾರ್ಗಸೂಚಿಯಂತೆ ನೀಡಲು ಸೂಚಿಸಲಾಯಿತು. |

| | |
|---|---|
| **12) ಸುಸ್ಥಿರ ಅಭಿವೃದ್ಧಿ (Sustainable Development)** ವಿಚಾರದ ಬಗ್ಗೆ ಪ್ರಸ್ತಾಪಿಸುತ್ತಾ ಈ ಯೋಜನೆಯಡಿ ಉದ್ಯೋಗ ಸೃಜನೆ, ಪೌಷ್ಠಿಕ ಆಹಾರ ಮತ್ತು ನೆಲೆ ಕಲ್ಪಿಸುವ ಮೂಲಕ ಬಡತನ ನಿರ್ಮೂಲನೆ ಯನ್ನು ಬದಿಗೊತ್ತುವ ಉದ್ದೇಶ ಹೊಂದಿದೆ.<br>• | • ಈ ಬಗ್ಗೆ ಎಲ್ಲಾ ಇಲಾಖೆಯ ಅಧಿಕಾರಿಗಳು ಸಮಗ್ರವಾಗಿ ವಿಶೇಷ ಆಂದೋಲನಗಳ ಮೂಲಕ ಅತ್ಯಂತ ಬಡವರ ಕಲ್ಯಾಣಕ್ಕಾಗಿ ಅನುಷ್ಠಾನಗೊಳಿಸಲು ಅವಕಾಶವಿದೆಯೆಂದು ಈ ಬಗ್ಗೆ ಎಲ್ಲಾ ಇಲಾಖಾಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ಚಿಂತನೆ ನಡೆಸಿ ಅನುಷ್ಠಾನಕ್ಕೆ ತರುವಲ್ಲಿ ಮುಂದಾಗುವಂತೆ ಸೂಚಿಸಿದರು ಹಾಗೂ ಪ್ರತಿ ತಿಂಗಳು ಕೆಡಿಪಿ ಸಭೆಯಲ್ಲಿ ಪ್ರಗತಿ ಪರಿಶೀಲನೆ ನಡೆಸುವುದು.<br>**(ಕ್ರಮ: ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು/ಲೀಡ್ ಬ್ಯಾಂಕ್ ಮ್ಯಾನೇಜರ್, ತಹಸೀಲ್ದಾರ್ ಹಾಗೂ ಕಾರ್ಯನಿರ್ವಹಣಾಧಿಕಾರಿ ತಾ.ಪಂ.)** |
| **13) ಬಹು ಗ್ರಾಮ ಕುಡಿಯುವ ನೀರಿನ ಯೋಜನೆ: (Multi Village Drinking Water Scheme):**<br>ಈ ಯೋಜನೆಯಡಿ ಭೌತಿಕ ಮತ್ತು ಆರ್ಥಿಕ ಪ್ರಗತಿಗಳನ್ನು ಪರಿಶೀಲಿಸಲಾಯಿತು. ವಿಚಾರದಲ್ಲಿ ಗ್ರಾಮೀಣ ನೀರು ಸರಬರಾಜು ಇಲಾಖೆ ಇಂಜಿನಿಯರ್ ಪ್ರಸ್ತಾಪಿಸುತ್ತಾ ತರೀಕೆರೆ ತಾಲ್ಲೂಕಿನ ಬೇಲೇನಹಳ್ಳಿ ಹಾಗೂ ಇತರೆ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಯೋಜನೆಯಡಿ ಪೈಪ್ ಲೈನ್ ಅಳವಡಿಸಬೇಕಿದ್ದು, **ಕೆಲ ಭಾಗದಲ್ಲಿ ಅರಣ್ಯ ಪ್ರದೇಶದ ವ್ಯಾಪ್ತಿಯೂ ಬರುವುದರಿಂದ ಅರಣ್ಯ ಇಲಾಖೆಯ ಅನುಮತಿ ಅವಶ್ಯಕವಿದೆಯೆಂದು ತಿಳಿಸಿದರು.** | • ಈ ಬಗ್ಗೆ ಉಪಅರಣ್ಯಸಂರಕ್ಷಣಾಧಿಕಾರಿ, ಭದ್ರಾವತಿರವರು ಕೂಡಲೇ ಅನುಮತಿ ದೊರಕಿಸಿ ಯೋಜನೆಯ ಅನುಷ್ಠಾನಕ್ಕೆ ಸಹಕರಿಸ ಬೇಕೆಂದು ಸೂಚಿಸಲಾಯಿತು<br>• ಯೋಜನೆಯನುಸಾರ ಪ್ರಗತಿ ಆಗದೇ ಇರುವುದರಿಂದ ಯೋಜನೆಯಂತೆ ಅನುಗುಣವಾಗಿ ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಲಾಯಿತು.<br>**(ಕ್ರಮ: ಕಾ:ಪಾ: ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ಉಪಅರಣ್ಯಸಂರಕ್ಷಣಾಧಿಕಾರಿ, ಭದ್ರಾವತಿ)** |
| **14) ಸಕಾಲ ಯೋಜನೆ:**<br>ಸಕಾಲ ಯೋಜನೆಯಡಿ ಡಿಸೆಂಬರ್ ಮಾಹೆಯಲ್ಲಿ ಜಿಲ್ಲೆಯ ಕಂದಾಯ ಇಲಾಖೆಯು 3ನೇ ಸ್ಥಾನ, ಗ್ರಾಮೀಣಾಭಿವೃದ್ಧಿ ಇಲಾಖೆಯು 6ನೇ ಸ್ಥಾನಗಳು ಇತರೆ ಇಲಾಖೆಗಳು 8ನೇ | • ಇತರೆ ಇಲಾಖೆಗಳು ತಮ್ಮ ಇಲಾಖೆಗೆ ಕಲ್ಪಿಸಿರುವ ಸಾರ್ವಜನಿಕ ಉಪಯೋಗದ ಯೋಜನೆ /ಸೌಲಭ್ಯ ಗಳನ್ನು ಪೂರ್ಣ ಪ್ರಮಾಣದಲ್ಲಿ ಸಕಾಲ ಯೋಜನೆ ವ್ಯಾಪ್ತಿಯಲ್ಲಿ ನಿರ್ವಹಿಸುವಂತೆ ಸೂಚಿಸಲಾಯಿತು. |

| | |
|---|---|
| ಸ್ಥಾನದಲ್ಲಿರುವುದನ್ನು ಗಮನಿಸಿದರು. | • ಸಕಾಲ ಯೋಜನೆಯಡಿ ಕಾಲಮಿತಿ ಗತಿಸಿ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ವಿಲೇಗೊಳಿಸುವಂತೆ ಸೂಚಿಸಲಾಯಿತು.<br>**(ಕ್ರಮ: ಎಲ್ಲಾ ಇಲಾಖಾಧಿಕಾರಿಗಳು)** |
| **15) ಅರಣ್ಯ ಇಲಾಖಾ ವಿಷಯಗಳು:**<br>➢ **ಪರಿಭಾವಿತ ಅರಣ್ಯ:**<br>ಜಿಲ್ಲಾಧಿಕಾರಿಗಳು ವಿಷಯ ಪ್ರಸ್ತಾಪಿಸುತ್ತಾ ಚಿಕ್ಕಮಗಳೂರು , ಕೊಪ್ಪ ಮತ್ತು ಭದ್ರಾವತಿ ವಿಭಾಗ (ತರೀಕೆರೆ ತಾಲ್ಲೂಕು) ಸೇರಿದಂತೆ ಒಟ್ಟು 140733.87 ಹೆಕ್ಟೇರ್ ಪ್ರದೇಶವನ್ನು ಪರಿಭಾವಿತ ಅರಣ್ಯವೆಂದು 2004-05ರ ಪೂರ್ವದಲ್ಲಿ ಪ್ರಸ್ತಾಪಿಸಲಾಗಿದ್ದು, ನಂತರ 52900.11 ಹೆಕ್ಟೇರ್ ಪ್ರದೇಶವನ್ನು ಪರಿಭಾವಿತ ಅರಣ್ಯವೆಂದು ಪರಿಗಣಿಸಲು ಉಳಿದ 87833.76 ಹೆಕ್ಟೇರ್ ಭೂಮಿಯನ್ನು ಜಿಲ್ಲೆಯ ಶಿಕ್ಷಣ, ಸಮಾಜ ಕಲ್ಯಾಣ, ಸಣ್ಣ ನೀರಾವರಿ ಮತ್ತು ಗ್ರಾಮೀಣ ಮೂಲ ಸೌಕರ್ಯಗಳಿಗೆ ಬಳಸಲು ಅನುವು ಮಾಡಬೇಕೆಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಾಗಿ ತಿಳಿಸಿದರು. ಕಂದಾಯ ಮತ್ತು ಡೀಮ್ಡ್ ಅರಣ್ಯ ಜಮೀನನ್ನು ಪ್ರತ್ಯೇಕಿಸಿ ಗಡಿ ಗುರುತಿಸುವ ಬಗ್ಗೆ ಜಂಟಿ ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ನಕ್ಷೆ / ವರದಿ ತಯಾರಿಕೆ ಪ್ರಗತಿಯಲ್ಲಿರುವುದಾಗಿ ತಿಳಿಸಿದರು.<br>ಅರಣ್ಯ ಇಲಾಖೆ ಅನುಮತಿ ಬಗ್ಗೆ ಗ್ರಾಮೀಣ ನೀರು ಇಲಾಖೆ ಇಂಜಿನಿಯರ್ ಪ್ರಸ್ತಾಪಿಸುತ್ತಾ ಸಾರ್ವಜನಿಕ ಉದ್ದೇಶದ ನೀರು ಸರಬರಾಜು ಯೋಜನೆ ಸಂಬಂಧವಾಗಿ ಅರಣ್ಯ ಇಲಾಖೆ ಅನುಮತಿಗಾಗಿ ಅರಣ್ಯ ಇಲಾಖೆಯ ತಂತ್ರಾಂಶದಲ್ಲಿ ಆನ್ ಲೈನ್ ಮೂಲಕ ಪ್ರಸ್ತಾವನೆ ಸಲ್ಲಿಸಲಾಗಿದ್ದು, **ಈ ಬಗ್ಗೆ ಇಲಾಖೆಯು ಹಲವಾರು** | ಆನ್ ಲೈನ್ ಮೂಲಕ ಇಲಾಖೆಯ ಅಭಿಪ್ರಾಯಕ್ಕೆ ಪ್ರಸ್ತಾವನೆ ಸಲ್ಲಿಸುವಾಗ ಎಲ್ಲಾ ಅಗತ್ಯ ಮಾಹಿತಿಯನ್ನು ಪಡೆದುಕೊಂಡು ನಂತರ ನಡವಳಿ ಕೈಗೊಳ್ಳಲು ವಿನಾಕಾರಣ ಪತ್ರ ವ್ಯವಹಾರ ಅಥವಾ ತಿರಸ್ಕೃತ ಕ್ರಮವಹಿಸಬಾರದಾಗಿ ಅರಣ್ಯ ಇಲಾಖಾಧಿಕಾರಿಗಳಿಗೆ ಸೂಚಿಸಲಾಯಿತು.<br>• ಚಿಕ್ಕಮಗಳೂರು ತಾಲ್ಲೂಕು ತೇಗೂರು ಗ್ರಾಮದಲ್ಲಿ ಮೆಡಿಕಲ್ ಕಾಲೇಜು ಉದ್ದೇಶಕ್ಕೆ ಭೂಮಿ ಗುರುತಿಸಿದ್ದು, ಈ ಬಗ್ಗೆ ಅರಣ್ಯ ಇಲಾಖೆಯವರು ತ್ವರಿತವಾಗಿ ಇಲಾಖಾ ಅಭಿಪ್ರಾಯ ನೀಡಲು ಸೂಚಿಸಲಾಯಿತು.<br>• ಕೇಂದ್ರೀಯ ವಿದ್ಯಾಲಯಕ್ಕೆ ಸಂಬಂಧಿಸಿದಂತೆ ಭೂಮಿ ಕಾಯ್ದಿರಿಕೆ ಬಗ್ಗೆ ಅರಣ್ಯ ಇಲಾಖೆಯು ತ್ವರಿತವಾಗಿ ಅಭಿಪ್ರಾಯ ನೀಡಲು ಸೂಚಿಸಲಾಯಿತು.<br>• ಪುನರ್ವಸತಿಗಾಗಿ ಭೂಮಿ ಕಾಯ್ದಿರಿಕೆಗೆ ಸಂಬಂಧಿಸಿದಂತೆ ಹಂತೂರು, ಬಿ.ಹೊಸಳ್ಳಿ ಮತ್ತು ಮಾವಿನಕೆರೆ ಗ್ರಾಮಗಳಲ್ಲಿ ಭೂಮಿಯನ್ನು ಗುರುತಿಸಲಾಗಿದ್ದು, ಈ ಬಗ್ಗೆ ಅರಣ್ಯ ಇಲಾಖೆಯು ತ್ವರಿತವಾಗಿ ಅಭಿಪ್ರಾಯ ನೀಡಿ ಪುನರ್ವಸತಿಗೆ ಅವಕಾಶ ಮಾಡಲು ಸೂಚಿಸಲಾಯಿತು. |

| | |
|---|---|
| **ಅಂಶಗಳ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುತ್ತಾರೆ.** ಇದರಿಂದ ಯೋಜನೆಯ ಅನುಷ್ಠಾನವು ವಿಳಂಭವಾಗುವುದಾಗಿ ತಿಳಿಸಿದರು.<br>ಸಹಾಯಕ ಅರಣ್ಯಸಂರಕ್ಷಣಾಧಿಕಾರಿಗಳು, ಭದ್ರಾವತಿ ವಿಭಾಗ ರವರು ಮಾತನಾಡುತ್ತಾ ಇಲಾಖೆಯ ಕೆಲವು ಅಂಶಗಳನ್ನು ಸ್ಪಷ್ಟಪಡಿಸಿಕೊಳ್ಳಲು ಮಾಹಿತಿ ಕೇಳಲಾಗುವುದೆಂದು ಇದರಿಂದಾಗಿ ವಿಳಂಬವಾಗುವುದಾಗಿ ತಿಳಿಸಿದರು. | • **(ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು/ ಕೊಪ್ಪ/ ಭದ್ರಾವತಿ.)** |
| ➢ **<u>ಅಧಿಸೂಚಿತ ಅರಣ್ಯ:</u>**<br>ಚಿಕ್ಕಮಗಳೂರು , ಕೊಪ್ಪ, ಭದ್ರಾವತಿ (ತರೀಕೆರೆ ತಾಲ್ಲೂಕು) ಹಾಗೂ ಭದ್ರಾ ವನ್ಯಜೀವಿ ವ್ಯಾಪ್ತಿಗೆ ಸೇರಿದಂತೆ ಒಟ್ಟು 213101.23 ಹೆಕ್ಟೇರ್ ಪ್ರದೇಶವು ವಿವಿಧ ರೀತಿಯ ಅರಣ್ಯ ಪ್ರದೇಶವಾಗಿರುವುದೆಂದು ಗಮನಿಸಲಾಯಿತು. | • ಅಧಿಸೂಚಿತ ಅರಣ್ಯ ಪ್ರದೇಶದಲ್ಲಿ ಅರಣ್ಯೀಕರಣ ಉದ್ದೇಶಕ್ಕೆ ಅರಣ್ಯ ಇಲಾಖೆ ಯಲ್ಲಿ ಅನುದಾನ ಲಭ್ಯವಿದ್ದಲ್ಲಿ ನರೇಗಾ ಯೋಜನೆಯ ಅನುದಾನವನ್ನು ಹೆಚ್ಚುವರಿ ಯಾಗಿ ಪಡೆದು ಅರಣ್ಯೀಕರಣವನ್ನು ವೃದ್ಧಿ ಗೊಳಿಸಲು ಸೂಚಿಸಲಾಯಿತು.<br>• ಕಿರು ಅರಣ್ಯ ಪ್ರದೇಶಗಳಲ್ಲಿ ಅರಣ್ಯ ಉತ್ಪನ್ನಗಳನ್ನು ಬೆಳೆಯುವ ಗುಂಪುಗಳಿಗೆ **ವಂದನ್** ಯೋಜನೆಯಡಿ ಸೇರಿಸುವ ಕುರಿತು ಪರಿಶೀಲಿಸಲು ಸೂಚಿಸಲಾಯಿತು.<br>• ತಾಂಡಾಗಳಲ್ಲಿ ಮೂಲಸೌಲಭ್ಯ ಕಲ್ಪಿಸುವ ಬಗ್ಗೆ ಕ್ರಿಯಾ ಯೋಜನೆಯನ್ನು ರೂಪಿಸಲು ಸೂಚಿಸಲಾಯಿತು.<br>**(ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು/ಕೊಪ್ಪ/ಭದ್ರಾವತಿ, ಮುಖ್ಯ ಯೋಜನಾಧಿಕಾರಿ, ಜಿಲ್ಲಾಪಂಚಾಯಿತಿ ಮತ್ತು ಯೋಜನಾ ನಿರ್ದೇಶಕರು, ಡಿ ಆರ್ ಡಿ ಎ)** |

| | |
|---|---|
| **16) ಶಿಕ್ಷಕರ ವೇತನ:**<br>ಜಿಲ್ಲೆಯಲ್ಲಿ ವಿದ್ಯಾ ಇಲಾಖೆ, ಸಮಾಜ ಕಲ್ಯಾಣ ಅನುದಾನಿತ, ಅನುದಾನ ರಹಿತ ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಲೆಗಳು ಸೇರಿದಂತೆ ಒಟ್ಟು 1997 ಸಂಸ್ಥೆಗಳು ಇರುವುದನ್ನು ಗಮನಿಸಲಾಯಿತು. ಈ ಬಗ್ಗೆ ಶಿಕ್ಷಕರ ವೇತನ ಕುರಿತು ಪರಿಶೀಲಿಸಲಾಗಿ, ಡಿಸೆಂಬರ್ ಮಾಹೆಯಲ್ಲಿ 50 ಶಿಕ್ಷಕರಿಗೆ ಅನುದಾನದ ಕೊರತೆ ಕಾರಣ ವೇತನ ಪಾವತಿಯಾಗಿಲ್ಲವೆಂದು ಈ ಬಗ್ಗೆ ಅನುದಾನ ಬೇಡಿಕೆಯನ್ನು ಸಲ್ಲಿಸಿರುವುದಾಗಿ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರು ತಿಳಿಸಿದರು.<br>ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಯಾವುದೇ ವೇತನ ಪಾವತಿಗೆ ಬಾಕಿ ಇರುವುದಿಲ್ಲವೆಂದು ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರು ತಿಳಿಸಿದರು. | • ಇನ್ನು ಮುಂದೆ ಅನುದಾನದ ಕೊರತೆ ಸಂಭವಿಸಬಹುದಾದ ಪೂರ್ವದಲ್ಲಿಯೇ ಅನುದಾನ ಬೇಡಿಕೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ವೇತನ ಪಾವತಿಯಲ್ಲಿ ವಿಳಂಬವಾಗದಂತೆ ಕ್ರಮವಹಿಸಲು ಸೂಚಿಸಲಾಯಿತು.<br>•<br>**(ಕ್ರಮ: ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ)** |
| **17) ಸಾಮಾಜಿಕ ಭದ್ರತಾ ಯೋಜನೆ:**<br>ಸಾಮಾಜಿಕ ಭದ್ರತಾ ಯೋಜನೆಯಲ್ಲಿ ಒಟ್ಟು 134053 ಪಿಂಚಣಿದಾರರಿಗೆ ಡಿಸೆಂಬರ್ ತಿಂಗಳವರೆಗೆ ಪಿಂಚಣಿಯನ್ನು ನೀಡಲಾಗಿದೆ, 5530 ಪಿಂಚಣಿದಾರರಿಗೆ ಆಧಾರ್ ಮಾಹಿತಿ ಹಾಗೂ ಬ್ಯಾಂಕ್ ಖಾತೆ ಈ ರೀತಿಯ ವ್ಯತ್ಯಾಸ ಇರುವುದರಿಂದ ಪಾವತಿಯಾಗಿಲ್ಲವೆಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದರು. | • ಸಾಮಾಜಿಕ ಭದ್ರತಾ ಯೋಜನೆಯು ದುರ್ಬಲ ವರ್ಗದವರಿಗೆ ನೀಡುವ ಯೋಜನೆಯಾಗಿದ್ದು, ಪಿಂಚಣಿ ಪಾವತಿಯಲ್ಲಿ ವಿಳಂಬವಾಗದಂತೆ ಆಯಾ ತಿಂಗಳಿನ ಪಿಂಚಣಿಯು ಕಾಲಕಾಲಕ್ಕೆ ಪಾವತಿಯಾಗುವ ಕ್ರಮವಹಿಸಲು ಸೂಚಿಸಲಾಯಿತು.<br>• ಖಜಾನೆ -2 ವಿಚಾರದಲ್ಲಿ ಯಾವುದೇ ತೊಂದರೆ ಅಥವಾ ಅಡಚಣೆ ಇದ್ದಲ್ಲಿ ಗಮನಕ್ಕೆ ತರುವಂತೆ ಸೂಚಿಸಲಾಯಿತು.<br>**(ಕ್ರಮ: ಸಹಾಯಕ ನಿರ್ದೇಶಕರು, ಸಾಮಾಜಿಕ ಭದ್ರತೆ, ಎಲ್ಲಾ ತಹಸೀಲ್ದಾರರು)** |

| | |
|---|---|
| **18) ಅಮೃತ್ ಯೋಜನೆ:**<br>ಚಿಕ್ಕಮಗಳೂರು ನಗರ ವ್ಯಾಪ್ತಿಯಲ್ಲಿ ಒಟ್ಟು 30336 ನಲ್ಲಿ ಸಂಪರ್ಕಗಳ ಪೈಕಿ 15956 ಸಂಪರ್ಕಗಳನ್ನು ಪೂರ್ಣಗೊಳಿಸಿದ್ದು, ಬಾಕಿ ಉಳಿದಿರುವ ಸಂಪರ್ಕವನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸುವುದಾಗಿ ಯೋಜನಾ ನಿರ್ದೇಶಕರು ಡಿಯುಡಿಸಿ ತಿಳಿಸಿದರು. | • ಪೂರ್ಣ ಯೋಜನೆಯನ್ನು ಸಮರ್ಪಕವಾಗಿ ಮಾರ್ಚ್ ಅಂತ್ಯದೊಳಗೆ ಕಡ್ಡಾಯವಾಗಿ ಪೂರ್ಣಗೊಳಿಸುವಂತೆ ಸೂಚಿಸಲಾಯಿತು.<br>**(ಕ್ರಮ: ಯೋಜನಾ ನಿರ್ದೇಶಕರು ಡಿಯುಡಿಸಿ)** |
| **19) ಕಿರು ವಿಮಾನ ನಿಲ್ದಾಣ:**<br>ಚಿಕ್ಕಮಗಳೂರು ತಾಲ್ಲೂಕು ಹಿರೇಮಗಳೂರು ಗ್ರಾಮದಲ್ಲಿ 100.04 ಎಕರೆ ಜಮೀನನ್ನು ಕಾಯ್ದಿರಿಸಲಾಗಿದ್ದು, ಹೆಚ್ಚುವರಿ ಯಾಗಿ 19.04 ಎಕರೆ ಖಾಸಗಿ ಜಮೀನನ್ನು ಖರೀದಿಸುವ ಪ್ರಸ್ತಾಪವಿರುವುದಾಗಿಯೂ, ಈ ಬಗ್ಗೆ ರೂ 7.00 ಕೋಟಿ ಅನುದಾನ ಲಭ್ಯವಿರುವುದಾಗಿ ಜಂಟಿ ನಿರ್ದೇಶಕರು, ಕೈಗಾರಿಕಾ ಇಲಾಖೆರವರು ತಿಳಿಸಿದರು. | • ಚಿಕ್ಕಮಗಳೂರು ಜಿಲ್ಲೆಯು ಪ್ರವಾಸಿಗರ ದೃಷ್ಠಿಯಿಂದ ಪ್ರಮುಖವಾಗಿದ್ದು, ವಿಮಾನ ನಿಲ್ದಾಣದ ಅವಶ್ಯಕತೆ ಇರುವುದರಿಂದ ತ್ವರಿತ ವಾಗಿ ಕ್ರಮವಹಿಸಲು ಸೂಚಿಸಲಾಯಿತು.<br>• ಅವಶ್ಯವಿರುವ 19.04 ಎಕರೆ ಭೂಮಿಯನ್ನು ಸಂಬಂಧಿಸಿದ ಹಿಡುವಳಿ ದಾರರಿಂದ ನೇರವಾಗಿ ಖರೀದಿಸುವ ಬಗ್ಗೆ ತ್ವರಿತವಾಗಿ ಕಾನೂನು ರೀತಿಯ ಕ್ರಮವಹಿಸಲು ಸೂಚಿಸಲಾಯಿತು.<br>• **(ಕ್ರಮ: ಜಂಟಿ ನಿರ್ದೇಶಕರು, ಕೈಗಾರಿಕಾ ಇಲಾಖೆ, ಉಪವಿಭಾಗಾಧಿಕಾರಿ, ಚಿಕ್ಕಮಗಳೂರು)** |

ಅಂತಿಮವಾಗಿ ಸಭಾಧ್ಯಕ್ಷರಾದ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಚಿಕ್ಕಮಗಳೂರು ಜಿಲ್ಲೆಯು ಪ್ರಾಕೃತಿಕ ಸೊಬಗನ್ನು ಹೊಂದಿದ್ದು, ಜಿಲ್ಲೆಯು ಮಲೆನಾಡು ಹಾಗೂ ಬಯಲು ಪ್ರದೇಶದಿಂದ ಕೂಡಿದ್ದು, ಪ್ರವಾಸಿಗರ ಆಕರ್ಷಣೀಯ ತಾಣವಾಗಿದೆ. ಇಂತಹ ಜಿಲ್ಲೆಯ ಅಭಿವೃದ್ಧಿ ಮತ್ತು ಪ್ರಗತಿ ದೃಷ್ಠಿಯಿಂದ ಸರ್ಕಾರದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಕೆಲಸ ಮಾಡಲು ನನಗೆ ಸಂತೋಷವನ್ನು ತಂದಿದೆ. ಅದೇ ರೀತಿ ಈ ನೆಲೆಯಲ್ಲಿ ಸರ್ಕಾರದ ಸೇವೆ ಮಾಡಲು

ಅವಕಾಶ ಸಿಕ್ಕಿರುವುದು ನಮ್ಮೆಲ್ಲರ ಸೌಭಾಗ್ಯವೂ ಆಗಿದೆ. ಇಂತಹ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಎಲ್ಲರೂ ಒಮ್ಮನಸ್ಸಿನಿಂದ ಸೇವೆ ಸಲ್ಲಿಸುವುದು ಅವಶ್ಯವಿರುತ್ತದೆ. ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಬೇಕಾಗುವ ಸಲಹೆ ಸಹಕಾರವನ್ನು ನನ್ನ ವೈಯಕ್ತಿಕ ಗಮನಕ್ಕೆ ತಂದಲ್ಲಿ ಬಗೆಹರಿಸುವ ಕ್ರಮವಹಿಸುತ್ತೇನೆಂದು ತಿಳಿಸಿದರು. ಎಲ್ಲರೂ ಪರಸ್ಪರ ಸಲಹೆ - ಸಹಕಾರ ಸಮಾಲೋಚನೆಯಲ್ಲಿ ಜಿಲ್ಲೆಯನ್ನು ಅಭಿವೃದ್ಧಿ ಪಥದಲ್ಲಿ ಸಾಗಿಸೋಣವೆಂದು ಎಲ್ಲರ ಸಹಕಾರ ಅಪೇಕ್ಷಿಸುತ್ತಾ,

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-

(ಡಾ: ಶಾಲಿನಿ ರಜನೀಶ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯೋಜನೆ,ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಮತ್ತು
ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಸಂ: ಜಿ2 ಸಭೆ 2019 -20

ದಿನಾಂಕ: 24-01-2020

ಪ್ರತಿಯನ್ನು; ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

## ಮಾನ್ಯ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಹಾಗೂ ಮಾನ್ಯ ಶಾಸಕರುಗಳ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಸೂಚಿಸಿರುವ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭಾ ನಡವಳಿ

ಅಧ್ಯಕ್ಷತೆ
ಡಾ.ಶಾಲಿನಿ ರಜನೀಶ್,I.A.S,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ,
ಮತ್ತು ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

ಸ್ಥಳ: ದಿನಾಂಕ;24.01.2020

ಜಿಲ್ಲಾಧಿಕಾರಿ ಕಛೇರಿ ಸಭಾಂಗಣ, ಬೆಳಿಗ್ಗೆ: 9.30 ಗಂಟೆ

ಚಿಕ್ಕಮಗಳೂರು.

ಹಾಜರಿದ್ದವರು:-

1. ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.
2. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು
3. ಅಪರ ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.
4. ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಚಿಕ್ಕಮಗಳೂರು.
5. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು.
6. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಚಿಕ್ಕಮಗಳೂರು.
7. ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿಕ್ಕಮಗಳೂರು.
8. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣಾ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು.
9. ಜಿಲ್ಲಾ ಅಂಗವಿಕಲ ಮತ್ತು ಹಿರಿಯ ನಾಗರೀಕರ ಕಲ್ಯಾಣಾಧಿಕಾರಿ, ಜಿಲ್ಲಾ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಚಿಕ್ಕಮಗಳೂರು.
10. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಿಕ್ಕಮಗಳೂರು/ಮೂಡಿಗೆರೆ/ಶೃಂಗೇರಿ/ಕೊಪ್ಪ/ನರಸಿಂಹರಾಜಪುರ/ಕಡೂರು/ತರೀಕೆರೆ
11. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪವಿಭಾಗ ಚಿಕ್ಕಮಗಳೂರು/ ಮೂಡಿಗೆರೆ/ ಶೃಂಗೇರಿ/ ಕೊಪ್ಪ/ ನರಸಿಂಹರಾಜಪುರ /ಕಡೂರು/ತರೀಕೆರೆ
12. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಉಪವಿಭಾಗ ಚಿಕ್ಕಮಗಳೂರು/ ಮೂಡಿಗೆರೆ/ ಶೃಂಗೇರಿ/ ಕೊಪ್ಪ/ ನರಸಿಂಹರಾಜಪುರ /ಕಡೂರು/ ತರೀಕೆರೆ
13. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕೆ ಆರ್ ಐ ಡಿ ಎಲ್, ಉಪವಿಭಾಗ ಕಡೂರು/ ಚಿಕ್ಕಮಗಳೂರು

-***-

ಪ್ರಾರಂಭದಲ್ಲಿ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಮತ್ತು ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಸಭೆಗೆ ಅಪರ ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತದ ಪರವಾಗಿ ಸ್ವಾಗತಿಸುತ್ತಾ ಅಧ್ಯಕ್ಷತೆ ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು

ಕೋರುತ್ತಾ ಅದೇ ರೀತಿ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಹಾಗೂ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು. ಅಪರ ಮುಖ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳ ಪರಿಚಯ ಮಾಡಿಕೊಂಡರು.

## I . MLA LAD

ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 2013-14 ರಿಂದ ಬಾಕಿ ಇರುವ ಕಾಮಗಾರಿಗಳ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. 2013-14 ನೇ ಸಾಲಿನಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳಿಗೆ ಆಡಳಿತ ಮಂಜೂರಾತಿ ನೀಡಲು ಇನ್ನೂ 25 ಕಾಮಗಾರಿಗಳು ಬಾಕಿ ಇರುವ ಕುರಿತು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಅಸಮಾಧಾನ ವ್ಯಕ್ತಪಡಿಸಿದರು.

| ವರ್ಷ | ಆಡಳಿತ ಮಂಜೂರಾತಿಗೆ ಬಾಕಿ ಇರುವ ಕಾಮಗಾರಿಗಳು | ಪ್ರಗತಿ ಕಾಮಗಾರಿ |
|---|---|---|
| 2013-14 | 25 | 177 |
| 2014-15 | 31 | 208 |
| 2015-16 | 34 | 111 |
| 2016-17 | 49 | 101 |
| 2017-18 | 67 | 193 |
| 2018-19 | 292 | 147 |
| ಒಟ್ಟು | **498** | **937** |

ಈ ಮೇಲಿನಂತೆ 2013-14 ರಿಂದಲೂ ಆಡಳಿತ ಮಂಜೂರಾತಿಗೆ ಮತ್ತು ಕಾಮಗಾರಿ ಪೂರ್ಣಗೊಳ್ಳಲು ಹೆಚ್ಚಿನ ಸಂಖ್ಯೆಯ ಕಾಮಗಾರಿಗಳು ಬಾಕಿ ಇರುತ್ತದೆ. ಈ ಬಗ್ಗೆ ಮಾನ್ಯ ಉಸ್ತುವಾರಿ ಸಚಿವರು ಅನುಷ್ಠಾನಾಧಿಕಾರಿಯವರಿಗೆ ಸ್ಪಷ್ಟ ನಿರ್ದೇಶನವನ್ನು ನೀಡಿದರು. ಶಾಸಕರ ಪ್ರದೇಶಾಭಿವೃದ್ಧಿ ಮಾರ್ಗಸೂಚಿ ಪ್ರಕಾರ ಅನುಷ್ಠಾನಾಧಿಕಾರಿಗಳು ಆಡಳಿತಾತ್ಮಕ ಅನುಮೋದನೆಗೆ 30 ದಿನಗಳೊಳಗೆ ಜಿಲ್ಲಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು, ಈ ಪ್ರಕಾರ ಇನ್ನೂ ಕಾಮಗಾರಿಗಳು ಬಾಕಿ ಇರುವುದರಿಂದ ಈ ಬಗ್ಗೆ ಕೂಡಲೇ ಸಂಬಂಧಪಟ್ಟ ಅನುಷ್ಠಾನಾಧಿಕಾರಿ ರವರು ಕ್ರಮವಹಿಸಬೇಕೆಂದು ಸೂಚನೆ ನೀಡಿ ಈ ಕೆಳಕಂಡಂತೆ ನಿರ್ದೇಶನ ನೀಡಿರುತ್ತಾರೆ.

1. 2013-14 ರಿಂದ ಅಂದಾಜು ಪಟ್ಟಿ ಸಲ್ಲಿಸಲು ಬಾಕಿಯಿರುವ ಕಾಮಗಾರಿಗಳಿಗೆ ಇನ್ನೂ 15 ದಿನಗಳಲ್ಲಿ ಅಂದಾಜು ಪಟ್ಟಿ ಸಲ್ಲಿಸದಿದ್ದಲ್ಲಿ ಅಂತಹ ಕಾಮಗಾರಿಗಳನ್ನು ರದ್ದುಪಡಿಸಲು ಜಿಲ್ಲಾಧಿಕಾರಿಗಳು ಕ್ರಮವಹಿಸತಕ್ಕದ್ದು.

2. 2013-14, 2014-15, 2015-16, 2017-18, 2018-19 ರವರೆಗೆ ಅಡಳಿತ ಮಂಜೂರಾತಿ ನೀಡಿ ಕಾಮಗಾರಿಗಳು ಪ್ರಗತಿ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣ ಮತ್ತು ಅಂತಿಮ ಬಿಲ್ಲಿನ ಮೊತ್ತವನ್ನು ಪಾವತಿಸಲು ಕ್ರಮವಹಿಸತಕ್ಕದ್ದು.

3. ಆಡಳಿತ ಮಂಜೂರಾತಿ ನೀಡಿ ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ಅಂತಿಮ ಬಿಲ್ಲನ್ನು ಸಲ್ಲಿಸಲು ಈ ಕೆಳಗಿನಂತೆ ಗುರಿ ನಿಗಧಿ ಪಡಿಸಲಾಗಿರುವುದು.

| ವರ್ಷ | ಪ್ರಗತಿ ಕಾಮಗಾರಿ | ಗುರಿ |
|---|---|---|
| 2013-14 | 177 | 15 Days |
| 2014-15 | 208 | 20 Days |
| 2015-16 | 111 | 1 Month |
| 2016-17 | 101 | 1 Month |
| 2017-18 | 193 | 1 Month |
| 2018-19 | 147 | 1 Month |

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಈ ಮೇಲಿನಂತೆ ಕಾಮಗಾರಿಗಳನ್ನು ಮುಕ್ತಾಯಗೊಳಿಸಿ ಅವುಗಳನ್ನು ಗಾಂಧಿಸಾಕ್ಷಿ ಕಾಯಕ ತಂತ್ರಾಂಶದಲ್ಲಿ ನಮೂದಿಸಬೇಕು ಎಂದು ಸೂಚಿಸಿದರು.

4. ಮಾರ್ಗಸೂಚಿ ಪ್ರಕಾರ ಆಯಾ ವರ್ಷದಲ್ಲಿ ಅನುಮೋದನೆಗೊಂಡ ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಅನುಷ್ಠಾನಗೊಳಿಸಿ ಪೂರ್ಣಗೊಳಿಸದಿದ್ದಲ್ಲಿ ಮತ್ತು 2 ವರ್ಷಕ್ಕಿಂತ ಹೆಚ್ಚಿರುವ ಬಾಕಿ ಕಾಮಗಾರಿಗಳನ್ನು ರದ್ದುಗೊಳಿಸಲು ಕ್ರಮವಹಿಸಲಾಗುವುದೆಂದು ಸ್ಪಷ್ಟ ಮಾಹಿತಿಯನ್ನು ಅನುಷ್ಠಾನಾಧಿಕಾರಿಗಳಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.
5. ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಮಾರ್ಗಸೂಚಿ ಪ್ರಕಾರ ಅನುಷ್ಠಾನಗೊಳಿಸದಿದ್ದಲ್ಲಿ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ನೇರ ಹೊಣೆಗಾರರಾಗುತ್ತಾರೆ.
6. ಹೆಚ್ಚಿನ ಸಂಖ್ಯೆ ಕಾಮಗಾರಿಗಳು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ರವರಿಗೆ ಸೇರಿರುವುದರಿಂದ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ ರವರು ಕಾಲಕಾಲಕ್ಕೆ ಸಭೆ ನಡೆಸಿ ಪ್ರಗತಿಯನ್ನು ಸಾಧಿಸಲು ಮುಖ್ಯ ಕಾರ್ಯನಿರ್ವಹಣಾಧಿಕಾರಿರವರಿಗೆ ಸೂಚಿಸಲಾಯಿತು.
7. 2019-20 ನೇ ಸಾಲಿನ ಅನುದಾನದಲ್ಲಿ ಒಂದನೇ ಕಂತಿನ ಅನುದಾನ ಮಾತ್ರ ಬಿಡುಗಡೆಯಾಗಿದ್ದು, 2019-20 ರ ಆರ್ಥಿಕ ವರ್ಷದ ಕೊನೆಯಲ್ಲಿದ್ದರೂ ಕೂಡ ಒಂದನೇ ಕಂತಿನ ಅನುದಾನ ಮಾತ್ರ ಬಿಡುಗಡೆಯಾಗಲು ಕಾರಣ ಹಿಂದಿನ ವರ್ಷಗಳ ಅನುಮೋದಿತ ಕಾಮಗಾರಿಗಳು ನಿಗಧಿತ ಅವಧಿಯಲ್ಲಿ ಅನುಷ್ಠಾನಗೊಂಡಿರದೇ ಇರುವುದು ಹಾಗೂ ಪಿ.ಡಿ ಖಾತೆಯ್ಲಲಿ ಅನುದಾನ ಬಳಕೆಯಾಗದೇ ಉಳಿದಿರುವುದು ಆದ್ದರಿಂದ ಎಲ್ಲಾ ಅನುಷ್ಠಾನಾಧಿಕಾರಿಗಳು ಇದರ ಗಂಭೀರತೆಯನ್ನು ಅರಿತು ಶೀಘ್ರವಾಗಿ ಬಾಕಿ ಇರುವ ಕಾಮಗಾರಿಗಳನ್ನು ಸಲ್ಲಿಸಿ ಮುಕ್ತಾಯಗೊಳಿಸಲು ಮಾನ್ಯ ಉಸ್ತುವಾರಿ ಸಚಿವರು ಸೂಚಿಸಿದರು.
8. ಮಾನ್ಯ ಶಾಸಕರುಗಳಿಂದ ಕ್ರಿಯಾ ಯೋಜನೆ ಸಲ್ಲಿಸಲು ಬಾಕಿ ಇರುವುದು ಸಹ ಬಾಕಿ ಇರುವಂತಹ ಶಾಸಕರುಗಳಿಗೆ ಜಿಲ್ಲಾಧಿಕಾರಿಗಳು ಪತ್ರ ಮತ್ತು ಖುದ್ದಾಗಿ ಮಾತನಾಡಿ ಕ್ರಿಯಾ ಯೋಜನೆ ಪಡೆಯತಕ್ಕದ್ದು.

## II. ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ ಪ್ರಗತಿ

2013-14 ರಿಂದ 2018-19 ರವರೆಗೆ ಅನುಮೋದನೆ ನೀಡಿದ ಕಾಮಗಾರಿಗಳ ಪೈಕಿ ಪೂರ್ಣಗೊಂಡ ಕಾಮಗಾರಿಗಳನ್ನು ಹೊರತು ಪಡಿಸಿ ಅಂದರೆ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಡಾಟಾ ಎಂಟ್ರಿ ಮಾಡುವ ಸಂಬಂಧ ಪ್ರಗತಿಯನ್ನು ಸಾಧಿಸುವ ಕುರಿತು ಮಾನ್ಯ ಉಸ್ತುವಾರಿ ಸಚಿವರು ಸೂಚಿಸಿದರು.

| ಕ್ರ. ಸಂ | ಅನುಷ್ಠಾನಾಧಿಕಾರಿ | ಕ್ರಿ.ಯೋ ಅನುಮೋದನೆ | ಆಡಳಿತ ಮಂಜೂರಿ | ತಾಂತ್ರಿಕ ಪರಿಶೀಲನೆ | | ಕಾರ್ಯಾದೇಶ | | ಕಾಮಗಾರಿ ಪ್ರಾರಂಭ | | ಅಳತೆ ಕ್ರಮ | | ಕಾಮಗಾರಿ ಪೂರ್ಣ | |
|---|---|---|---|---|---|---|---|---|---|---|---|---|---|
| | | | | ಡಾಟಾ ಎಂಟ್ರಿ | ಬಾಕಿ | ಡಾಟಾ ಎಂಟ್ರಿ | ಬಾಕಿ | ಡಾಟಾ ಎಂಟ್ರಿ | ಬಾಕಿ | ಡಾಟಾ ಎಂಟ್ರಿ | ಬಾಕಿ | ಡಾಟಾ ಎಂಟ್ರಿ | ಬಾಕಿ |
| 1 | PRED | 675 | 659 | 552 | 107 | 481 | 71 | 477 | 4 | 467 | 10 | 467 | 14 |
| 2 | KRIDL | 376 | 249 | 231 | 18 | 231 | 0 | 231 | 0 | 85 | 146 | 85 | 146 |
| 3 | RWS | 58 | 54 | 54 | 0 | 54 | 0 | 54 | 0 | 46 | 8 | 30 | 24 |
| 4 | PWD | 2 | 0 | 0 | 0 | 0 | 0 | 0 | 0 | 0 | 0 | 0 | 0 |
| 5 | NIRMITHI | 601 | 446 | 395 | 54 | 387 | 8 | 387 | 0 | 300 | 92 | 300 | 87 |
| 6 | DISABLED | 7 | 7 | 0 | 0 | 0 | 0 | 0 | 0 | 0 | 0 | 0 | 0 |
| 7 | DELETED | 101 | 0 | 0 | 0 | 0 | 0 | 0 | 0 | 0 | 0 | 0 | 0 |
| TOTAL | | 1820 | 1415 | 1232 | 179 | 1153 | 79 | 1149 | 4 | 898 | 256 | 882 | 271 |

ಈ ಮೇಲಿನಂತೆ ವಿವರವಾಗಿ ಚರ್ಚಿಸಿ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆಯನ್ನು ನೀಡಿದರು.

1. 2013-14 ರಿಂ 2018-19 ರವರೆಗೆ ಅನುಮೋದನೆ ನೀಡಿದ ಕಾಮಗಾರಿಗಳ ಪೈಕಿ ಪೂರ್ಣಗೊಂಡ ಕಾಮಗಾರಿಗಳನ್ನು ಹೊರತುಪಡಿಸಿ ಪ್ರಗತಿಯಲ್ಲಿರುವ ಮತ್ತು ಪೂರ್ಣಗೊಳ್ಳದೇ ಇರುವ ಕಾಮಗಾರಿಗಳನ್ನು ಖಡ್ಡಾಯವಾಗಿ ಗಾಂಧಿಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಡಾಟಾ ಎಂಟ್ರಿ ಮಾಡಲು ಕ್ರಮವಹಿಸತಕ್ಕದ್ದು, ಮತ್ತು ಯಾವುದೇ ಕಾರಣಕ್ಕೂ ಕಾಮಗಾರಿಗಳನ್ನು ಗಾಂಧಿಸಾಕ್ಷಿ ಕಾಯಕ ತಂತ್ರಾಂಶದಲ್ಲಿ ನಮೂದಿಸದೇ ಬಿಡಬಾರದು. ಗಾಂಧಿಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸದಿದ್ದಲ್ಲಿ ಅನುದಾನ ಬಿಡುಗಡೆಯಾಗುವುದಿಲ್ಲವೆಂದು ಸೂಚನೆ ನೀಡಿದರು. ಹಾಗೂ ಯಾವ ಕಾಮಗಾರಿಗಳನ್ನು ಸಹ ಗಾಂಧಿಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಲು ಯಾವುದು ಬಿಟ್ಟಿಲ್ಲವೆಂದು ಅನುಷ್ಠಾನಾಧಿಕಾರಿಗಳಿಂದ ಪ್ರಮಾಣ ಪತ್ರ ಪಡೆಯಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು.

2. ಗಾಂಧಿಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಡಾಟಾ ಎಂಟ್ರಿ ಸಂಬಂಧ ಅನುಷ್ಠಾನಾಧಿಕಾರಿಗಳವರು ಸ್ವತಃ ಈ ತಂತ್ರಾಂಶದಲ್ಲಿರುವ ಪ್ರಯೋಜನ ಮತ್ತು ಸದುಪಯೋಗ ಪಡೆದುಕೊಳ್ಳಬೇಕು.

3. 1822 ಕಾಮಗಾರಿಗಳಿಗೆ ಗಾಂಧಿಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಲಾಗಿದ್ದು, ಈ ಪೈಕಿ 882 ಕಾಮಗಾರಿಗಳನ್ನು ಮಾತ್ರ ಪೂರ್ಣ ಹಂತದವರೆಗೂ ಡಾಟಾ ಎಂಟ್ರಿ ಮಾಡಲಾಗಿರುತ್ತದೆ. ಶೇ. 50 ರಷ್ಟು ಪ್ರಗತಿ ಸಾಧಿಸಿರುವುದರಿಂದ ಅಸಮದಾನ ವ್ಯಕ್ತಪಡಿಸಿದರು. ಆದ್ದರಿಂದ ಸಂಬಂಧಪಟ್ಟ ಏಜೆನ್ಸಿಯವರು ಕೂಡಲೇ ಡಾಟಾ ಎಂಟ್ರಿ ಮಾಡಬೇಕು.

4. ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದ ಕಾಮಗಾರಿಗಳ ಪೈಕಿ ಇನ್ನೂ 405 ಕಾಮಗಾರಿಗಳು ಆಡಳಿತ ಅನುಮೋದನೆ ನೀಡಲು ಬಾಕಿ ಇರುವುದರಿಂದ ತುರ್ತಾಗಿ ಅಂದಾಜು ಪಟ್ಟಿ ಸಲ್ಲಿಸಿ ಶೇ.75 ರಷ್ಟರ ಅನುದಾನ ಬಿಡುಗಡೆಗೆ ಕ್ರಮವಹಿಸತಕ್ಕದ್ದು, ಹೀಗೆ ಮಾಡಿದ್ದಲ್ಲಿ ವೆಚ್ಚವಾಗಿ ಪಿ.ಡಿ ಖಾತೆಯಲ್ಲಿ ಅನುದಾನ ಕಡಿಮೆ ಆಗುತ್ತದೆ. ಇದನ್ನು 15 ದಿನಗಳಲ್ಲಿ ಪೂರ್ಣಗೊಳಿಸಬೇಕು.

5. ತಾಂತ್ರಿಕ ಪರಿಶೀಲನೆ, ಟೆಂಡರ್ ಪ್ರಕ್ರಿಯೆ ಎಲ್ಲಾ ಹಂತಗಳಲ್ಲಿ ಇನ್ನೂ 15 ದಿನದಲ್ಲಿ ಅನುಷ್ಠಾನಾಧಿಕಾರಿಗಳು ಡಾಟಾ ಎಂಟ್ರಿ ಮಾಡಿ ಮುಗಿಸತಕ್ಕದ್ದು.

## III. ONE TIME SCHEME

ಸರ್ಕಾರದ ಆದೇಶದ ಸಂಖ್ಯೆ ಯೋಇ 200 ಯೋವಿವಿ 2017 ದಿನಾಂಕ:12.12.2017 ರ ಪ್ರಕಾರ 2002-03 ರಿಂದ ಅನುಮೋದನೆ ನೀಡಿದ ಕಾಮಗಾರಿಗಳ ಪೈಕಿ 31.03.2013 ರ ಅಂತ್ಯಕ್ಕೆ ಬಳಕೆಯಾಗದೇ ಉಳಿದಿರುವ ಅನುದಾನದಿಂದ ಒಂದು ಬಾರಿ ವೆಚ್ಚವಾಗಿ ವಿವಿಧ ಇಲಾಖೆ ಕಾಮಗಾರಿಗಳ ನೇರವಾಗಿ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿರುವ ವಿಷಯದ ಬಗ್ಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ವಿವರವಾಗಿ ಚರ್ಚಿಸಿದರು.

| ಇಲಾಖೆ | ಸಂಖ್ಯೆ | ಮೊತ್ತ | ಹಂತ |
|---|---|---|---|
| ಆರೋಗ್ಯ ಇಲಾಖೆ | 2 | 45.60 | ಮುಕ್ತಾಯ |
| ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆ | 2 | 21.38 | ಮುಕ್ತಾಯ |
| ಶಿಕ್ಷಣ ಇಲಾಖೆ | 1 | 91.21 | ಪ್ರಾರಂಭಿಸಬೇಕು |

ಸದರಿ ವಿಷಯಕ್ಕೆ ಸಂಬಂಧಿಸಿದ 5 ಕಾಮಗಾರಿಗಳ ಪೈಕಿ 4 ಪೂರ್ಣಗೊಂಡು ವೆಚ್ಚ ಭರಿಸಲಾಗಿರುತ್ತದೆ. ಆದರೆ ನ.ರಾ ಪುರ ತಾಲ್ಲೂಕಿನ ಸರ್ಕಾರಿ ಜೂನಿಯರ್ ಕಾಲೇಜಿನ ಕೊಠಡಿಗಳ ನಿರ್ಮಾಣ ಕಾಮಗಾರಿ ರೂ. 91.20 ಲಕ್ಷದ ಕಾಮಗಾರಿಯನ್ನು ಅನುಷ್ಠಾನಗೊಳಿಸಿರುವುದಿಲ್ಲ. ಅಂಶದ ಬಗ್ಗೆ ಮಾನ್ಯ ಉಸ್ತುವಾರಿ ಸಚಿವರು ವಿವರವಾಗಿ ಚರ್ಚಿಸಿ ಈ ಕೆಳಕಂಡಂತೆ ಸೂಚನೆಯನ್ನು ನೀಡಿದರು.

1. ಈ ಕಛೇರಿ ಪತ್ರದ ದಿನಾಂಕ:20.12.2017 ರಂದು ಈ ಕಾಮಗಾರಿಗೆ ಅನುದಾನಬೇಕೆಂದು ಕೋರಿರುವ ಅಂಶವನ್ನು ಅಪರ ಜಿಲ್ಲಾಧಿಕಾರಿಗಳು ಉಸ್ತುವಾರಿ ಸಚಿವರ ಅವಗಹಾನೆಗೆ ತಂದಾಗ ಪಿ.ಡಿ ಅಕೌಂಟ್ ನಲ್ಲಿ ಅನುದಾನ ಲಭ್ಯವಿರುವುದರಿಂದ ಸದರಿ ಅನುದಾವನ್ನು ಬಳಕೆ ಮಾಡಿಕೊಂಡು ಉಳಿದ 1 ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

2. ನ.ರಾ ಪುರ ತಾಲ್ಲೂಕಿನ ಸರ್ಕಾರಿ ಜೂನಿಯರ್ ಕಾಲೇಜಿನ ಕೊಠಡಿಗಳ ನಿರ್ಮಾಣ ಕಾಮಗಾರಿಯನ್ನು ಅನುದಾನದ ಕೊರತೆ ಇದೆ ಎಂದು ಮತ್ತು ಟೆಂಡರ್ ಪ್ರಕ್ರಿಯೆ ಅಂತಿಮಗೊಳ್ಳದ ಕಾರಣಕ್ಕೆ ಹಾಗೂ ಬಿಡ್ಡುದಾರರು ಪ್ರಿಮಿಯಂ ಮೊತ್ತವನ್ನು ಹೆಚ್ಚು ನಮೂದಿಸದ ಕಾರಣ ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸದೆ ಸ್ಥಗಿತಗೊಳಿಸುವುದು ಸರಿಯಲ್ಲ. ಈಗಾಗಲೇ ಸರ್ಕಾರದಿಂದ ಸದರಿ ಕಾಮಗಾರಿಯನ್ನು ಅನುಮೋದನೆ ನೀಡಿ ಅನುಷ್ಠಾನಗೊಳಿಸಲು ಸೂಚಿಸಿರುವುದರಿಂದ ಮತ್ತು ಪಿ.ಡಿ ಖಾತೆಯಲ್ಲಿ ಸಾಕಷ್ಟು ಅನುದಾನ ಲಭ್ಯವಿರುವುದರಿಂದ ಸದರಿ ಕಾಮಗಾರಿಯನ್ನು ಕೂಡಲೇ ಕೈಗೆತ್ತಿಕೊಂಡು ಅನುಷ್ಠಾನಗೊಳಿಸುವಂತೆ ಮಾನ್ಯ ಉಸ್ತುವಾರಿ ಸಚಿವರು ಸೂಚಿಸಿದರು.

3. 3 ಬಾರಿ ಟೆಂಡರ್ ಕರೆದರೂ Single Tender ಆಗಿರುತ್ತದೆಂದು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆರವರು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳ ಗಮನಕ್ಕೆ ತರಲಾಯಿತು. ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಅನುಷ್ಠಾನಾದಿಕಾರಿಯನ್ನು ಬದಲಾಯಿಸಿ ಕೆ.ಆರ್.ಐ.ಡಿ.ಎಲ್, ಚಿಕ್ಕಮಗಳೂರು ರವರಿಗೆ ವಹಿಸಲು ಸೂಚಿಸಿದರು.

4. ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ರವರು ಈಗಾಗಲೇ ತಯಾರಿಸಿದ ಅಂದಾಜು ಮೊತ್ತಕ್ಕೆ ಅನುಗುಣವಾಗಿ ಈ ಕಾಮಗಾರಿಯನ್ನು 2 ತಿಂಗಳಲ್ಲಿ ಪೂರ್ಣಗೊಳಿಸುವುದು ಹಾಗೂ ಈಗಾಗಲೇ ಅಂದಾಜು ಪಟ್ಟಿಗೆ ಆಡಳಿತ ಮಂಜೂರಿ ನೀಡಿರುವುದರಿಂದ ಸದರಿ ಅಂದಾಜು ಪಟ್ಟಿಗೆ ಅನುಮೋದಿಸಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವುದು.

## MP LADS

ಮಾನ್ಯ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಡಿಸೆಂಬರ್ -2019 ರ ಅಂತ್ಯದ ವರೆಗೆ ಸಂಸದರವಾರು ಈ ಕೆಳಗಿನಂತೆ ಪ್ರಗತಿಯನ್ನು ವಿಮರ್ಶಿಸಲಾಯಿತು.

### I . ಕು. ಶೋಭಾ ಕರಂದ್ಲಾಜೆ, ಮಾನ್ಯ ಸಂಸದರು, ಉಡುಪಿ- ಚಿಕ್ಕಮಗಳೂರು ಲೋಕಸಭಾ ಕ್ಷೇತ್ರ,

| ವರ್ಷ | ಆಡಳಿತ ಮಂಜೂರತಿ ನೀಡಿದ ಕಾಮಗಾರಿಗಳು | ಆಡಳಿತ ಮಂಜೂರಾತಿಗೆ ಬಾಕಿ ಇರುವ ಕಾಮಗಾರಿಗಳು | ಪೂರ್ಣಗೊಂಡ ಕಾಮಗಾರಿಗಳು | ಪ್ರಗತಿಯಲ್ಲಿರುವ ಕಾಮಗಾರಿಗಳು | ಹಣಬಳಕೆ ಸಲ್ಲಿಕೆ ಮೊತ್ತ (ರೂ. ಲಕ್ಷ) |
|---|---|---|---|---|---|
| 2014-15 | 98 | 2 | 90 | 6 | 188.48 |
| 2015-16 | 79 | 0 | 66 | 13 | 229.43 |
| 2016-17 | 62 | 1 | 50 | 13 | 146.03 |
| 2017-18 | 77 | 9 | 26 | 54 | 53.59 |
| 2018-19 | 0 | 51 | 0 | 0 | 0 |
| ಒಟ್ಟು | **316** | **63** | **232** | **86** | **617.53** |

ಮೇಲಿನಂತೆ ಆಡಳಿತ ಮಂಜೂರಿಗೆ ಸಲ್ಲಿಸಲು ಬಾಕಿ ಇರುವ ಕಾಮಗಾರಿಗಳಿಗೆ ಕೂಡಲೇ ಅಂದಾಜು ಸಲ್ಲಿಸುವಂತೆ ಅನುಷ್ಠಾನಾದಿಕಾರಿಗಳಿಗೆ ಸೂಚಿಸಲಾಯಿತು. ಅದೇ ರೀತಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸುವಂತೆ ತಿಳಿಸಲಾಯಿತು.

### II . ಶ್ರೀ ಜೈ ರಾಮ್ ರಮೇಶ್, ಮಾನ್ಯ ರಾಜ್ಯಸಭಾ ಸದಸ್ಯರು,

| ವರ್ಷ | ಆಡಳಿತ ಮಂಜೂರತಿ ನೀಡಿದ ಕಾಮಗಾರಿಗಳು | ಆಡಳಿತ ಮಂಜೂರಾತಿಗೆ ಬಾಕಿ ಇರುವ ಕಾಮಗಾರಿಗಳು | ಪೂರ್ಣಗೊಂಡ ಕಾಮಗಾರಿಗಳು | ಪ್ರಗತಿಯಲ್ಲಿರುವ ಕಾಮಗಾರಿಗಳು | ಹಣಬಳಕೆ ಸಲ್ಲಿಕೆ ಮೊತ್ತ (ರೂ. ಲಕ್ಷ) |
|---|---|---|---|---|---|
| 2016-17 | 29 | 1 | 24 | 6 | 192.20 |
| 2017-18 | 7 | 2 | 4 | 4 | 0 |
| 2018-19 | 1 | 1 | 0 | 1 | 0 |
| ಒಟ್ಟು | **37** | **4** | **28** | **11** | **192.20** |

ಮೇಲಿನಂತೆ ಆಡಳಿತ ಮಂಜೂರಿಗೆ ಸಲ್ಲಿಸಲು ಬಾಕಿ ಇರುವ ಕಾಮಗಾರಿಗಳಿಗೆ ಕೂಡಲೇ ಅಂದಾಜು ಸಲ್ಲಿಸುವಂತೆ ಅನುಷ್ಠಾನಾದಿಕಾರಿಗಳಿಗೆ ಸೂಚಿಸಲಾಯಿತು. ಅದೇ ರೀತಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸುವಂತೆ ತಿಳಿಸಲಾಯಿತು.

III . **ಶ್ರೀ ಹೆಚ್.ಡಿ ದೇವೇಗೌಡ,** ಮಾನ್ಯ ಸಂಸತ್ ಸದಸ್ಯರು, ಹಾಸನ ಲೋಕಸಭಾ ಕ್ಷೇತ್ರ.

| ವರ್ಷ | ಆಡಳಿತ ಮಂಜೂರತಿ ನೀಡಿದ ಕಾಮಗಾರಿಗಳು | ಆಡಳಿತ ಮಂಜೂರಾತಿಗೆ ಬಾಕಿ ಇರುವ ಕಾಮಗಾರಿಗಳು | ಪೂರ್ಣಗೊಂಡ ಕಾಮಗಾರಿಗಳು | ಪ್ರಗತಿಯಲಿರುವ ಕಾಮಗಾರಿಗಳು | ಹಣಬಳಕೆ ಸಲಿಕೆ ಮೊತ್ತ (ರೂ. ಲಕ್ಷ) |
|---|---|---|---|---|---|
| 2013-14 | 20 | 0 | 17 | 3 | 17.18 |
| 2014-15 | 14 | 0 | 12 | 2 | |
| 2015-16 | 25 | 1 | 21 | 4 | 45.42 |
| 2016-17 | 8 | 6 | 4 | 0 | 6.00 |
| **ಒಟ್ಟು** | **67** | **7** | **54** | **9** | **68.60** |

ಮೇಲಿನಂತೆ ಆಡಳಿತ ಮಂಜೂರಿಗೆ ಸಲ್ಲಿಸಲು ಬಾಕಿ ಇರುವ ಕಾಮಗಾರಿಗಳಿಗೆ ಕೂಡಲೇ ಅಂದಾಜು ಸಲ್ಲಿಸುವಂತೆ ಅನುಷ್ಠಾನಾದಿಕಾರಿಗಳಿಗೆ ಸೂಚಿಸಲಾಯಿತು. ಅದೇ ರೀತಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸುವಂತೆ ತಿಳಿಸಲಾಯಿತು

ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಗೆ ಸಂಬಧಿಸಿದಂತೆ ಹಣಬಳಕೆ ಪತ್ರ, ಆಡಿಟ್ ರಿಪೋರ್ಟ್, ಈವರೆಗೂ ಆಡಳಿತ ಮಂಜೂರಾತಿ ನೀಡಿ ಪೂರ್ಣಗೊಂಡಿರುವ ಕಾಮಗಾರಿಗಳ ವಿವರವನ್ನು ಸರ್ಕಾರಕ್ಕೆ ಸಲ್ಲಿಸಿ ಅಗತ್ಯವಿರುವ ಮುಂದಿನ ಕಂತಿನ ಅನುದಾನವನ್ನು ಪಡೆಯುವಂತೆ ಸೂಚಿಸಿದರು.

1. ಮಾನ್ಯ ಸಂಸದರ ನಿಧಿಯಿಂದ ಅನುಮೋದನೆ ನೀಡಿ ಪೂರ್ಣಗೊಳಿಸಲು ಬಾಕಿ ಇರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಪ್ರಗತಿ ಸಾಧಿಸಲು ಸೂಚನೆ ನೀಡಲಾಯಿತು.

2. ಕಾಲಕಾಲಕ್ಕೆ Monthly Progress Report (MPR) ನ್ನು ಸಲ್ಲಿಸಿ ಅನುದಾನ ಪಡೆಯಲು ಕ್ರಮವಹಿಸುವುದು.

3. ಶ್ರೀ ಜೈ ರಾಮ್ ರಮೇಶ್, ಮಾನ್ಯ ರಾಜ್ಯ ಸಭಾ ಸದಸ್ಯರು ಇವರ ಸಂಸದರ ನಿಧಿಯಿಂದ 2017-18 ಮತ್ತು 2018-19 ನೇ ಸಾಲಿನ ಅನುದಾನ ಬಿಡುಗಡೆಗೊಂಡಿರುವುದಿಲ್ಲ. ಈ ಬಗ್ಗೆ ಪರಿಶೀಲಿಸಿ MPR ಮತ್ತು ಆಡಿಟ್ ವರದಿ ಕಳುಹಿಸಿ ಅನುದಾನವನ್ನು ಪಡೆಯುವುದು.

ಅಪರ ಮುಖ್ಯ ಕಾರ್ಯದರ್ಶಿಗಳು ಮಾತನಾಡುತ್ತಾ, ಯೋಜನೆಯಡಿಯ ಕಾಮಗಾರಿಗಳನ್ನು ಫಲಕಾರಿ ರೀತಿಯಲ್ಲಿ ಪೂರ್ಣಗೊಳಿಸಿ ಹಣಬಳಕೆ ಪತ್ರವನ್ನು ಸಲ್ಲಿಸುವಂತೆ ತಿಳಿಸಿದರು. ಯೋಜನೆಯ ಉಳಿಕೆ ಕಂತಿನ ಅನುದಾನ ಪಡೆಯುವ ಬಗ್ಗೆ ಹಿಂದಿನ ಬಿಡುಗಡೆ ಮೊತ್ತಕ್ಕೆ ಹಣಬಳಕೆ ಪತ್ರ ಸಲ್ಲಿಸಿ ಅನುದಾನ ಪಡೆಯುವಂತೆ ಸೂಚಿಸಿದರು.

ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ತುರ್ತಾಗಿ ಕ್ರಮವಹಿಸುವಂತೆ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ಸೂಚಿಸುತ್ತಾ ಮುಂದಿನ ಸಭೆಯ ವೇಳೆಗೆ ಗಮನಾರ್ಹ ಪ್ರಗತಿ ಸಾಧಿಸಲು ನಿರ್ದೇಶನ ನೀಡಿ ಸಭೆಯನ್ನು ಮುಕ್ತಾಯಗೊಳಿಸಿದರು.

ಡಾ.ಶಾಲಿನಿ ರಜನೀಶ್, I.A.S,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ,
ಮತ್ತು ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

**ಪ್ರತಿಯನ್ನು ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಈ ಕೆಳಕಂಡವರಿಗೆ ಕಳುಹಿಸಿದೆ.**

1. ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಚಿಕ್ಕಮಗಳೂರು.
2. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು.
3. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಚಿಕ್ಕಮಗಳೂರು.
4. ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿಕ್ಕಮಗಳೂರು.
5. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣಾ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು.
6. ಜಿಲ್ಲಾ ಅಂಗವಿಕಲ ಮತ್ತು ಹಿರಿಯ ನಾಗರೀಕರ ಕಲ್ಯಾಣಾಧಿಕಾರಿ, ಜಿಲ್ಲಾ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಚಿಕ್ಕಮಗಳೂರು.
7. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಿಕ್ಕಮಗಳೂರು/ಮೂಡಿಗೆರೆ/ಶೃಂಗೇರಿ/ಕೊಪ್ಪ/ನರಸಿಂಹರಾಜಪುರ/ಕಡೂರು/ತರೀಕೆರೆ.
8. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪವಿಭಾಗ ಚಿಕ್ಕಮಗಳೂರು/ ಮೂಡಿಗೆರೆ/ ಶೃಂಗೇರಿ/ ಕೊಪ್ಪ/ ನರಸಿಂಹರಾಜಪುರ /ಕಡೂರು/ತರೀಕೆರೆ
9. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಉಪವಿಭಾಗ ಚಿಕ್ಕಮಗಳೂರು/ ಮೂಡಿಗೆರೆ/ ಶೃಂಗೇರಿ/ ಕೊಪ್ಪ/ ನರಸಿಂಹರಾಜಪುರ /ಕಡೂರು/ ತರೀಕೆರೆ
10. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕೆ ಆರ್ ಐ ಡಿ ಎಲ್, ಉಪವಿಭಾಗ ಕಡೂರು/ ಚಿಕ್ಕಮಗಳೂರು.
11. ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿ, ಚಿಕ್ಕಮಗಳೂರು ಜಿಲ್ಲೆ

**ದಿನಾಂಕ 20.01.2020 ರಂದು ಅಪರಾಹ್ನ 4.00 ಗಂಟೆಗೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ ನೇತ್ರಾವತಿ ಸಭಾಂಗಣದಲ್ಲಿ ಜರುಗಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು**

---

**ಅಧ್ಯಕ್ಷತೆ:-** ಶ್ರೀ ವಿ.ಪೊನ್ನುರಾಜ್, ಭಾ.ಆ.ಸೇ.,
ವ್ಯವಸ್ಥಾಪಕ ನಿರ್ದೇಶಕರು, ಕೆ.ಪಿ.ಸಿ.ಎಲ್. ಹಾಗೂ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

**ಉಪಸ್ಥಿತರು:**

1. ಶ್ರೀಮತಿ ಸಿಂಧೂ ಬಿ. ರೂಪೇಶ್, ಭಾ.ಆ.ಸೇ.,
   ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ.
2. ಡಾ: ಸೆಲ್ವಮಣಿ ಆರ್., ಭಾ.ಆ.ಸೇ.,
   ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
   ದ.ಕ.ಜಿ.ಪಂ. ಮಂಗಳೂರು.
3. ಶ್ರೀ ಬಿ.ಎಂ. ಲಕ್ಷ್ಮೀ ಪ್ರಸಾದ್, ಐ.ಪಿ.ಎಸ್.,
   ಪೋಲಿಸ್ ಅಧೀಕ್ಷಕರು, ದಕ್ಷಿಣ ಕನ್ನಡ, ಮಂಗಳೂರು

ಹಾಗೂ ಹಾಜರಾತಿ ವಹಿಯಲ್ಲಿ ಸಹಿ ಮಾಡಿರುವ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು

*****

ಸಭೆಯ ಪ್ರಾರಂಭದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ದ.ಕ.ಜಿ.ಪಂ. ಇವರು ಸಭೆಯಲ್ಲಿ ಉಪಸ್ಥಿತರಿದ್ದ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು, ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು, ದ.ಕ.ಜಿಲ್ಲಾ ಪೋಲಿಸ್ ಅಧೀಕ್ಷಕರು, ಮತ್ತು ಎಲ್ಲಾ ಜಿಲ್ಲಾ ಮಟ್ಟದ ಇಲಾಖಾಧಿಕಾರಿಗಳನ್ನು ಸ್ವಾಗತಿಸುತ್ತಾ ಇಂದಿನ ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಸಭಾಧ್ಯಕ್ಷರನ್ನು ಕೋರಿದರು.

ಮಾನ್ಯ ಸಭಾಧ್ಯಕ್ಷರು ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಪ್ರಗತಿ ವಿಮರ್ಶಿಸಿದರು.

**<u>ವಿಪತ್ತು ನಿರ್ವಹಣೆ:</u>**

ವೈಯಕ್ತಿಕ ಮನೆಗಳಿಗೆ ಸಂಬಂಧಿಸಿದಂತೆ ರಾಜೀವ ಗಾಂಧಿ ವಸತಿ ನಿಗಮದಿಂದಲೇ ತಂತ್ರಾಂಶದ ಮೂಲಕ ಮಾಡಲಾಗುತ್ತಿದೆ. ಸಿ ಹಂತದ ಮನೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಎ ಮತ್ತು ಬಿ ವರ್ಗದ ಮನೆಗಳಿಗೆ ಸಂಬಂಧಿಸಿದಂತೆ ಹಂತ ಹಂತವಾಗಿ ತಹಶೀಲ್ದಾರರ ಹಂತದಲ್ಲಿ ಮಾಡಲು ಕ್ರಮವಹಿಸಲಾಗುತ್ತಿದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ರೂ.35.00ಕೋಟಿ ಅನುದಾನ ಬಿಡುಗಡೆಯಾಗಿದ್ದು, ವಿಧಾನಸಭಾ ಕ್ಷೇತ್ರವಾರು ಕಾಮಗಾರಿಗಳನ್ನು ಪ್ರಾರಂಭ ಮಾಡಲಾಗಿರುತ್ತದೆ. ಅಲ್ಲದೇ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮತ್ತು ಲೋಕೋಪಯೋಗಿ ಇಲಾಖೆಗಳಿಗೆ ಅವರವರ ಇಲಾಖೆಗಳಿಂದ ಅನುದಾನ ಬಿಡುಗಡೆಯಾಗಿದ್ದು, ಕ್ರಿಯಾ ಯೋಜನೆಗಳನ್ನು ಮಾಡಲಾಗಿರುತ್ತದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದಾಗ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಮಳೆಹಾನಿ ಯೋಜನೆಯಡಿ 224 ಕಾಮಗಾರಿಗಳು ಮಂಜೂರುಗೊಂಡಿದ್ದು, ರೂ.40.00ಕೋಟಿ ವಿವಿಧ ವಿಧಾನಸಭಾ ಕ್ಷೇತ್ರವಾರು

ಅನುದಾನ ಬಿಡುಗಡೆಯಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ ಎಂದು ಕಾರ್ಯಕಾರಿ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು ಇವರು ತಿಳಿಸಿದರು.

ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ರೂ.27.14ಕೋಟಿ ಅನುದಾನದಡಿ 198 ಕಾಮಗಾರಿಗಳ ಪೈಕಿ ರೂ.16.42ಕೋಟಿ ಅನುದಾನದ 148 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ರೂ.1.07ಕೋಟಿ ಅನುದಾನ ಬಿಡುಗಡೆಯಾಗಿದ್ದು, 50 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ ಎಂದು ಕಾರ್ಯಕಾರಿ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಮಂಗಳೂರು ಇವರು ತಿಳಿಸಿದರು. ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ರೂ.18.15ಕೋಟಿ ಅನುದಾನ ಲೆಕ್ಕಶೀರ್ಷಿಕೆ 5054 ನಡಿ ಮಂಜೂರಾಗಿದ್ದು, 111 ಕಾಮಗಾರಿಗಳು ಮಂಜೂರುಗೊಂಡಿರುತ್ತದೆ. ಅಂದಾಜು ಪಟ್ಟಿ ತಯಾರಿಕಾ ಹಂತದಲ್ಲಿದ್ದು ಒಂದು ವಾರದೊಳಗೆ ಅಂದಾಜು ಪಟ್ಟಿ ತಯಾರಿಸಲಾಗುವುದೆಂದು ಕಾರ್ಯಕಾರಿ ಅಭಿಯಂತರರು, ಕೆ.ಆರ್.ಐ.ಡಿ.ಎಲ್. ಇವರು ತಿಳಿಸಿದರು. ಪಿ.ಎಂ.ಜಿ.ಎಸ್.ವೈ. ಇಲಾಖೆಯಡಿ 60 ಕಾಮಗಾರಿಗಳಿಗೆ ರೂ. 73.16ಲಕ್ಷ ಅನುದಾನ ಮಂಜೂರಾಗಿದ್ದು, ಅಲ್ಪಾವಧಿ ಟೆಂಡರ್ ಕರೆಯಲಾಗಿರುತ್ತದೆ ಎಂದು ಕಾರ್ಯಕಾರಿ ಅಭಿಯಂತರರು, ಪಿ.ಎಂ.ಜಿ.ಎಸ್.ವೈ. ಇವರು ತಿಳಿಸಿದಾಗ, ಪುತ್ತೂರು ತೂಗುಸೇತುವೆ ಕಾಮಗಾರಿಯ ಕುರಿತು ಮಾನ್ಯ ಸಭಾಧ್ಯಕ್ಷರು ಪ್ರಸ್ತಾಪಿಸಿದಾಗ, ಶಾಸಕರು ವಿಶೇಷ ಅನುದಾನ ತರಿಸುವುದಾಗಿ ತಿಳಿಸಿರುತ್ತಾರೆಂದು ಇಲಾಖಾಧಿಕಾರಿಯವರು ತಿಳಿಸಿದರು.

ನೆರೆ ಹಾವಳಿಯಲ್ಲಿ ಪೂರ್ಣವಾಗಿ ಹಾನಿಯಾಗಿರುವ ಮನೆಗಳಿಗೆ ರೂ.5.00ಲಕ್ಷ ಪರಿಹಾರ ನೀಡುವುದಾಗಿ ಸರ್ಕಾರ ಘೋಷಣೆ ಮಾಡಿದ್ದು, ರೂ. 1.00ಲಕ್ಷ ಅನುದಾನವನ್ನು ಸಂಬಂಧಪಟ್ಟ ಫಲಾನುಭವಿಗಳ ಖಾತೆಗೆ ನಗದಾಗಿ ಜಮೆ ಮಾಡಲಾಗಿರುತ್ತದೆ. ಪೂರ್ಣ ಹಾನಿಯಾದ ಮನೆಗಳನ್ನು ಯಾವ ರೀತಿಯಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂಬ ಬಗ್ಗೆ ಮಾಹಿತಿ ನೀಡುವಂತೆ ಮಾನ್ಯ ಸಭಾಧ್ಯಕ್ಷರು ತಿಳಿಸಿದಾಗ, ಬೆಳ್ತಂಗಡಿ ತಾಲೂಕಿನಲ್ಲಿ ಶೇ.75ಕ್ಕಿಂತ ಹೆಚ್ಚು 203 ಮನೆಗಳು ಹಾನಿಯಾಗಿದ್ದು, ಮಂಜೂರುಗೊಂಡಿರುತ್ತದೆ. ಈ ಪೈಕಿ 64 ಮನೆಗಳು ತಳಪಾಯ ಹಂತದಲ್ಲಿದ್ದು, 1 ಗೋಡೆ ಹಂತದಲ್ಲಿದ್ದು, ಉಳಿದ ಮನೆಗಳನ್ನು ಪ್ರಾರಂಭಿಸಲು ಬಾಕಿಯಿರುತ್ತದೆ. ಆದರೆ ಕೆಲವೊಂದು ಎ ಮತ್ತು ಬಿ ಹಂತದಲ್ಲಿರುವ ಫಲಾನುಭವಿಗಳು ಮನೆಗಳನ್ನು ಪೂರ್ಣವಾಗಿ ನಿರ್ಮಾಣ ಮಾಡಲು ಆಸಕ್ತಿ ತೋರಿಸುತ್ತಿಲ್ಲವೆಂದು ತಹಶೀಲ್ದಾರ್ ಬೆಳ್ತಂಗಡಿ ಇವರು ತಿಳಿಸಿದಾಗ, ಫಲಾನುಭವಿಗಳು ಮನೆ ಕಟ್ಟಲು ಆಸಕ್ತಿ ತೋರಿಸದೇ ಇದ್ದಲ್ಲಿ ಅಂತಹ ಫಲಾನುಭವಿಗಳಿಂದ ವಾಸ್ತವ ಅಂಶಗಳ ಹೇಳಿಕೆಯನ್ನು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅಥವ ಗ್ರಾಮಕರಣಿಕರುಗಳ ಮೂಲಕ ಪಡೆದುಕೊಳ್ಳುವಂತೆ ಸೂಚಿಸಿದರು.

ಬಂಟ್ವಾಳ ತಾಲೂಕಿನಲ್ಲಿ ಎ ವರ್ಗದಲ್ಲಿ 31 ಮನೆಗಳಿಗೆ ಹಾನಿಯಾಗಿದ್ದು, 8 ತಳಪಾಯ ಮತ್ತು 2 ಮನೆಗಳು ಗೋಡೆ ಹಂತದಲ್ಲಿರುತ್ತದೆ. ಬಿ ವರ್ಗದಲ್ಲಿ 49 ಮನೆಗಳಿದ್ದು, ಶೇ.75 ರಷ್ಟು ಹಾನಿಯಾದ ಮನೆಗಳ ಫಲಾನುಭವಿಗಳಿಗೆ ಈಗಾಗಲೇ ಮೊದಲನೆ ಹಂತದ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಆದರೆ ಫಲಾನುಭವಿಗಳು ರೂ.5.00ಲಕ್ಷದಲ್ಲಿ ಹೊಸ ಮನೆಯನ್ನು ನಿರ್ಮಿಸಲು ಅಸಾಧ್ಯವಾಗಿದ್ದು, ದುರಸ್ತಿ ಮಾಡಲು ಉಳಿದ ಅನುದಾನವನ್ನು ಬಿಡುಗಡೆ ಮಾಡುವಂತೆ ತಿಳಿಸಿರುತ್ತಾರೆಂದು ಬಂಟ್ವಾಳ ತಹಶೀಲ್ದಾರರು ತಿಳಿಸಿದಾಗ, ಎಲ್ಲಾ ತಾಲೂಕುಗಳ ಮಾಹಿತಿಯನ್ನು

ಪಡೆದುಕೊಂಡು ದುರಸ್ತಿ ಕಾಮಗಾರಿಗೆ ರೂ.5.00ಲಕ್ಷ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿಯವರಿಗೆ ಸಭೆಯಲ್ಲಿ ಸೂಚಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ದ.ಕ.ಜಿಲ್ಲೆ, ಮಂಗಳೂರು)**

**ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ:**

2019–20ನೇ ಸಾಲಿಗೆ 16 ಲಕ್ಷ ಗುರಿಯನ್ನು ನಿಗದಿಪಡಿಸಲಾಗಿದ್ದು, 10,23,000ಮಾನವ ದಿನಗಳನ್ನು ಸೃಜನೆ ಮಾಡಲಾಗಿರುತ್ತದೆ. 5,77,000 ಮಾನವ ದಿನಗಳನ್ನು ಸೃಜನೆ ಮಾಡಲು ಬಾಕಿಯಿರುತ್ತದೆ. ಆದರೆ ಮೆಟಿರಿಯಲ್ ಬಿಲ್ಲು ಹಾಗೂ ಲೇಬರ್ ಕಾಸ್ಟ್ ಕಳೆದ 2 ತಿಂಗಳಿನಿಂದ ಪಾವತಿಯಾಗದೇ ಇರುವುದರಿಂದ ಸಮಸ್ಯೆಯಾಗಿದ್ದು, ರೂ.7.00ಕೋಟಿ ಅನುದಾನ ಬಿಡುಗಡೆಗೆ ಬಾಕಿಯಿರುತ್ತದೆ ಎಂದು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು ತಿಳಿಸಿದರು.

**ಕನ್ನಡ ಅಭಿವೃದ್ಧಿ ಪ್ರಾಧಿಕಾರ:**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬ್ಯಾಂಕ್, ಅಂಚೆ ಕಛೇರಿ ಮತ್ತು ರೈಲ್ವೇ ಇಲಾಖೆಗಳಲ್ಲಿ ಇರುವ ಅಧಿಕಾರಿಗಳಿಗೆ ಕನ್ನಡ ಬಾರದೆ ಇದ್ದು, ಸಾರ್ವಜನಿಕರಿಗೆ ತೀರಾ ತೊಂದರೆಯಾಗಿರುತ್ತದೆ. ಆದ್ದರಿಂದ ಕನ್ನಡೇತರ ಅಧಿಕಾರಿಗಳನ್ನು ಮಾರ್ಗದರ್ಶಿ ಬ್ಯಾಂಕ್‌ನವರು ಗುರುತಿಸಿ ಮಾಹಿತಿಯನ್ನು ನೀಡಿದ್ದಲ್ಲಿ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ವ್ಯವಹಾರಿಕ ಕನ್ನಡ ಭಾಷೆಯ ಕುರಿತು ತರಬೇತಿಯನ್ನು ನೀಡಲಾಗುವುದೆಂದು ಹಾಗೂ ಬ್ಯಾಂಕ್‌ಗಳಲ್ಲಿ ಕನಿಷ್ಠ ಅಗತ್ಯದ ಫಾರಂಗಳನ್ನು, ಚಲನ್‌ಗಳನ್ನು ಕನ್ನಡದಲ್ಲಿಯೇ ಮುದ್ರಿಸಲು ಕ್ರಮ ವಹಿಸುವಂತೆ ಮತ್ತು ಬ್ಯಾಂಕ್‌ಗಳಲ್ಲಿ ಎಷ್ಟು ಕನ್ನಡ ಅರ್ಜಿಗಳನ್ನು ಸ್ವೀಕರಿಸಲಾಗಿದೆ, ಎಷ್ಟು ಅರ್ಜಿಗಳನ್ನು ವಿಲೇಗೊಳಿಸಲಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ತಿಳಿದುಕೊಳ್ಳುವಂತೆ ಸಭೆಯಲ್ಲಿ ತಿಳಿಸಿದಾಗ, ದಕ್ಷಿಣ ಕನ್ನಡದಲ್ಲಿರುವ ಬ್ಯಾಂಕ್‌ಗಳಲ್ಲಿ ಕನ್ನಡೇತರ ಅಧಿಕಾರಿಗಳಿದ್ದಲ್ಲಿ ಅವರು ಕಡ್ಡಾಯವಾಗಿ ಕನ್ನಡವನ್ನು ಕಲಿಯಬೇಕೆಂಬ ಬಗ್ಗೆ ಸೂಚನೆಯನ್ನು ನೀಡುವಂತೆ ಸೂಚಿಸಿದರು.

**(ಕ್ರಮ: ಲೀಡ್ ಬ್ಯಾಂಕ್ ಮ್ಯಾನೇಜರ್, ಮಂಗಳೂರು)**

**ಜಲಾಮೃತ ಯೋಜನೆ:**

ಜಲಾಮೃತ ಯೋಜನೆಯಲ್ಲಿ ಕೆರೆಗಳಲ್ಲಿರುವ ಹೂಳುಗಳನ್ನು ತುಂಬಿಸಿಕೊಡಲು ಅವಕಾಶವಿರುತ್ತದೆ. ಸ್ವತ: ರೈತರು ವಾಹನ ತೆಗೆದುಕೊಂಡು ಬಂದು ತೆಗೆಯಲಾಗಿರುವ ಹೂಳನ್ನು ಜಮೀನಿಗೆ ಹಾಕುವುದು, ಕೆರೆಯ ಹೂಳನ್ನು ತೆಗೆಯಲು ಭರಿಸುವ ವೆಚ್ಚದಲ್ಲಿ ಶೇ.10ರಷ್ಟನ್ನು ಅಲ್ಲಿನ ಸ್ಥಳೀಯರೇ ಭರಿಸಬೇಕಾಗುತ್ತದೆ. ಗ್ರಾಮ ಪಂಚಾಯತ್‌ನಲ್ಲಿ ನೀರು ಮತ್ತು ನೈರ್ಮಲ್ಯ ಸಮಿತಿ ಅಧ್ಯಕ್ಷರು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರು ಪ್ರತ್ಯೇಕವಾದ ಖಾತೆಯನ್ನು ತೆರೆದು ಅನುದಾನವನ್ನು ಒಂದು ವರ್ಷ ಇಡಬೇಕಾಗುತ್ತದೆ ಎಂದು ಮಾರ್ಗಸೂಚಿ ಇರುವುದರಿಂದ ರೈತರು ಹೂಳನ್ನು ತೆಗೆದುಕೊಂಡು ಹೋಗಲು ಯಾರೂ ಮುಂದೆ ಬರುತ್ತಿಲ್ಲವೆಂದು ಕಾರ್ಯಕಾರಿ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಗಳೂರು ಇವರು ತಿಳಿಸಿದಾಗ, ಸದರಿ ವಿಷಯವು ಹಿಂದಿನ ಜಿಲ್ಲಾ ಪಂಚಾಯತ್ ಸಾಮಾನ್ಯ ಸಭೆಯಲ್ಲಿ ಚರ್ಚಿಸಲಾಗಿದ್ದು, ಜಲಾಮೃತ ಯೋಜನೆಯಲ್ಲಿರುವ ಮಾರ್ಗಸೂಚಿಯ ಕೆಲವೊಂದು ಅಂಶಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ

ಸಡಿಲಗೊಳಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆಯೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ತಿಳಿಸಿದರು.

**ಜಲಶಕ್ತಿ ಯೋಜನೆ:**

ಜಲಾನಯನ ಇಲಾಖೆಯಡಿ ಪ್ರಧಾನ ಮಂತ್ರಿ ಕೃಷಿ ಸಂಚಾಯಿನಿಯಡಿ ಜಲಶಕ್ತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, 2019-20ನೇ ಸಾಲಿಗೆ ರೂ.575.00ಲಕ್ಷ ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸಲಾಗಿದ್ದು, 20 ಕಿಂಡಿ ಅಣೆಕಟ್ಟುಗಳನ್ನು ಹಾಗೂ 371 ಆರ್.ಎಂ.ಟಿ. ನಾಳ ಪರಿಷ್ಕರಣೆಯನ್ನು ಮಾಡಲಾಗಿರುತ್ತದೆ. ಉಳಿದ ರೂ.115.70ಲಕ್ಷ ಅನುದಾನವನ್ನು ಖರ್ಚು ಮಾಡಲು ಕ್ರಮವಹಿಸಲಾಗುವುದೆಂದು ಜಂಟಿ ನಿರ್ದೇಶಕರು, ಕೃಷಿ ಇಲಾಖೆ ಇವರು ತಿಳಿಸಿದಾಗ, ಯೋಜನೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡುವಂತೆ ಸೂಚಿಸಲಾಯಿತು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಮಂಗಳೂರು)**

**ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆ:**

ರಾಷ್ಟ್ರೀಯ ಕುಡಿಯುವ ನೀರಿನ ಯೋಜನೆಯಡಿ ಹೊಸ ಕಾಮಗಾರಿ ಹಾಗೂ ಮುಂದುವರಿದ ಕಾಮಗಾರಿಗಳು ಸೇರಿ 513 ಕಾಮಗಾರಿಗಳಿದ್ದು, ಡಿಸೆಂಬರ್ 2019ರ ಭೌತಿಕ ಗುರಿ 250 ನಿಗದಿಯಾಗಿದ್ದು, 242 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಎಂದು ಕಾರ್ಯಕಾರಿ ಅಭಿಯಂತರರು ತಿಳಿಸಿದಾಗ, ಮುಂದುವರಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಶೇ.98 ರಷ್ಟು ಪ್ರಗತಿಯಾಗಿದ್ದು, ಹೊಸ ಕಾಮಗಾರಿಗಳಲ್ಲಿ ಶೇ.4ರಷ್ಟು ಮಾತ್ರ ಪ್ರಗತಿ ಸಾಧಿಸಲಾಗಿರುವ ಕುರಿತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಪ್ರಸ್ತಾಪಿಸಿದಾಗ, 2-3 ಬಾರಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು ಭಾಗವಹಿಸದೇ ಇದ್ದುದರಿಂದ ಪ್ರಗತಿ ಸಾಧಿಸಲು ಅಸಾಧ್ಯವಾಗಿರುತ್ತದೆ. ಪ್ರಸ್ತುತ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ ಎಂದು ಕಾರ್ಯಕಾರಿ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ತಿಳಿಸಿದರು. ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸದೆ ಇರುವುದಕ್ಕೆ ಕಾರಣವೇನು ಎಂಬ ಬಗ್ಗೆ ಪರಿಶೀಲನೆ ಮಾಡುವಂತೆ ಹಾಗೂ ಒಂದು ವೇಳೆ ಟೆಂಡರ್ ಷರತ್ತಿನಲ್ಲಿ ಏನಾದರೂ ವ್ಯತ್ಯಾಸಗಳನ್ನು ಮಾಡಬೇಕಾದಲ್ಲಿ ಕ್ರಮವಹಿಸಲಾಗುವುದೆಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು ಹಾಗೂ ಎಲ್ಲಾ ನೊಂದಣಿ ಮಾಡಲಾಗಿರುವ ಗುತ್ತಿಗೆದಾರರ ಸಭೆಯನ್ನು ಕರೆದು ಸಮಸ್ಯೆಗಳನ್ನು ತಿಳಿದುಕೊಂಡು ವರದಿ ನೀಡುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸೂಚಿಸಿದರು.

**(ಕ್ರಮ: ಕಾರ್ಯಕಾರಿ ಇಂಜಿನಿಯರ್, ಗ್ರಾ.ಕು.ನೀರು ಮತ್ತು ನೈರ್ಮಲ್ಯ ಇಲಾಖೆ, ಮಂಗಳೂರು)**

**ಬಹುಗ್ರಾಮ ಕುಡಿಯುವ ನೀರಿನ ಯೋಜನೆ:**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 7 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳು ಮಂಜೂರಾಗಿದ್ದು, 5 ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿದ್ದು, ನೀರನ್ನು ಒದಗಿಸಲಾಗುತ್ತಿದೆ. ಬಂಟ್ವಾಳ ತಾಲೂಕಿನ 2 ಕಾಮಗಾರಿಗಳು ಪ್ರಗತಿಯಲ್ಲಿದ್ದು, ಫೆಬ್ರವರಿ ಅಂತ್ಯದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಿ ನೀರನ್ನು ಒದಗಿಸಲು ಕ್ರಮವಹಿಸಲಾಗುವುದೆಂದು ಕಾರ್ಯಕಾರಿ ಇಂಜಿನಿಯರ್, ಗ್ರಾಮೀಣ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ತಿಳಿಸಿದರು.

**2018–19ನೇ ಸಾಲಿನ ಟಾಸ್ಕ್‌ಫೋರ್ಸ್ ಕಾಮಗಾರಿ:**

ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿದ್ದು, ಬೇರೆ ಯೋಜನೆಯಡಿ ಕಾಮಗಾರಿಗಳನ್ನು ಮಾಡಲಾಗಿರುವುದರಿಂದ 16 ಕಾಮಗಾರಿಗಳು ಕೈಬಿಡಲಾಗಿರುತ್ತದೆ ಎಂದು ಕಾರ್ಯಕಾರಿ ಇಂಜಿನಿಯರ್, ಗ್ರಾಮೀಣ ನೀರು ಮತ್ತು ನೈರ್ಮಲ್ಯ ಇಲಾಖೆ ಇವರು ತಿಳಿಸಿದರು.

**ನೆರೆ ಹಾವಳಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ವಿವರ:**

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಡಿ ತುರ್ತು ಕಾಮಗಾರಿಗಳು ಕಂಡುಬಂದಿರುವುದಿಲ್ಲ. ಸಣ್ಣ ಪುಟ್ಟ ಕಾಮಗಾರಿಗಳನ್ನು ಗ್ರಾಮ ಪಂಚಾಯತ್ ವತಿಯಿಂದಲೇ ಮಾಡಲಾಗಿರುತ್ತದೆ. ಬಂಟ್ವಾಳ ತಾಲೂಕಿನಲ್ಲಿ 3 ಕಡೆಗಳಲ್ಲಿ ಎನ್.ಡಿ.ಎ. ಯೋಜನೆಯ ಕಾಮಗಾರಿಗಳಿಗೆ ಸಮಸ್ಯೆಗಳಾಗಿದ್ದು ಹಾಗೂ ಸುಳ್ಯ ತಾಲೂಕಿನಲ್ಲಿ ಮಳೆಗಾಲದಲ್ಲಿ ಜಿ.ಎಸ್.ಎಲ್.ಆರ್. ಬಿದ್ದು ಹೋಗಿದ್ದು, ಒಟ್ಟು ರೂ.58.00ಲಕ್ಷದ ಅನುದಾನವನ್ನು ನೀಡುವ ಬಗ್ಗೆ ಆಯುಕ್ತರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ತಿಳಿಸಲಾಗಿದ್ದು, ಅಂದಾಜು ಪಟ್ಟಿಯನ್ನು ತಯಾರಿಸಲಾಗಿರುತ್ತದೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ತಿಳಿಸಿದರು.

**ಕುಡಿಯುವ ನೀರಿನ ಕಾರ್ಯಕ್ರಮ ಆರ್ಥಿಕ ಪ್ರಗತಿ(ನಗರ):**

ಮಂಗಳೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ 81 ಕಾಮಗಾರಿಗಳ ಪೈಕಿ 40 ಕಾಮಗಾರಿಗಳು ಪೂರ್ಣಗೊಂಡಿದ್ದು, 41 ಕಾಮಗಾರಿಗಳು ಬಾಕಿ ಇರುತ್ತದೆ ಎಂದು ಆಯುಕ್ತರು, ಮಂಗಳೂರು ಮಹಾನಗರಪಾಲಿಕೆ ಇವರು ತಿಳಿಸಿದಾಗ, ಉಳ್ಳಾಲ ಪುರಸಭೆಗೆ ಸಂಬಂಧಿಸಿದಂತೆ 8 ಕಾಮಗಾರಿಗಳು ಬಾಕಿ ಇರುತ್ತದೆ. ಮುಲ್ಕಿ ಪುರಸಭೆಗೆ ಸಂಬಂಧಿಸಿದಂತೆ 2 ಕಾಮಗಾರಿಗಳು ಬಾಕಿ ಇರುತ್ತದೆ. ಸುಳ್ಯ ತಾಲೂಕಿನಲ್ಲಿ 2 ಕಾಮಗಾರಿಗಳು ಹಾಗೂ ಬೆಳ್ತಂಗಡಿ ತಾಲೂಕಿನಲ್ಲಿ 4 ಕಾಮಗಾರಿಗಳು ಬಾಕಿ ಇರುತ್ತದೆ. ಈ ಬಗ್ಗೆ ಸಭೆ ನಡೆಸಲಾಗಿ ಜನವರಿ ತಿಂಗಳ ಅಂತ್ಯದೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ಫೆಬ್ರವರಿ ತಿಂಗಳ ಮೊದಲ ವಾರದೊಳಗೆ ಅನುದಾನ ಪಾವತಿಗೆ ಬಿಲ್ಲು ಸಲ್ಲಿಸಿ ಪಾವತಿಗೆ ಕ್ರಮವಹಿಸುವಂತೆ ನಿರ್ದೇಶನ ನೀಡಲಾಗಿರುತ್ತದೆ ಎಂದು ಯೋಜನಾ ನಿರ್ದೇಶಕರು ನಗರಾಭಿವೃದ್ಧಿ ಕೋಶ ಇವರು ತಿಳಿಸಿದರು.

**ಸ್ವಚ್ಛ ಭಾರತ್ ಮಿಷನ್:**

ಸ್ವಚ್ಛ ಭಾರತ್ ಮಿಷನ್ ಕಾರ್ಯಕ್ರಮದಡಿ 2019–20ನೇ ಸಾಲಿಗೆ ವೈಯಕ್ತಿಕ ಶೌಚಾಲಯಕ್ಕೆ ಸಂಬಂಧಿಸಿದಂತೆ 233 ಗುರಿ ನಿಗದಿಯಾಗಿದ್ದು, 216 ಫಲಾನುಭವಿಗಳಿಗೆ ಕಾರ್ಯಾದೇಶವನ್ನು ನೀಡಿ 69 ಫಲಾನುಭವಿಗಳಿಗೆ ಅನುದಾನ ಪಾವತಿ ಹಂತದಲ್ಲಿರುತ್ತದೆ. ಉಳಿದ ಫಲಾನುಭವಿಗಳಿಗೆ ರೇಶನ್ ಕಾರ್ಡ್ ಸಮಸ್ಯೆಯಿರುವುದರಿಂದ ಶೌಚಾಲಯ ನಿರ್ಮಾಣ ಮಾಡಲು ತೊಂದರೆಯಾಗಿದ್ದು, ರೇಶನ್ ಕಾರ್ಡ್ ಅಪಡೇಶನ್ ಪೂರ್ಣಗೊಂಡಲ್ಲಿ ಫಲಾನುಭವಿಗಳಿಗೆ ಶೌಚಾಲಯ ನಿರ್ಮಾಣ ಮಾಡಲಾಗುವುದು. 2018–19ನೇ ಸಾಲಿಗೆ 648 ಶೌಚಾಲಯಗಳ ಗುರಿ ನಿಗದಿಯಾಗಿದ್ದು, 646 ಪೂರ್ಣಗೊಂಡಿದ್ದು, ಕುಕ್ಕಿಪ್ಪಾಡಿ ಮತ್ತು ಕೊಲ್ಲಮೊಗ್ರು 2 ಫಲಾನುಭವಿಗಳಿಗೆ ಅನುದಾನ ಪಾವತಿಗೆ ಬಾಕಿ ಇರುತ್ತದೆ. ಫೆಬ್ರವರಿ 10ನೇ ತಾರೀಖಿನೊಳಗೆ ಎಲ್ಲಾ ಕಾಮಗಾರಿಗಳನ್ನು

ಪೂರ್ಣಗೊಳಿಸುವಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಈಗಾಗಲೇ ಸೂಚನೆಯನ್ನು ನೀಡಲಾಗಿರುತ್ತದೆ ಎಂದು ಮೇಲ್ವಿಚಾರಕರು, ಸ್ವಚ್ಛ ಭಾರತ್ ಮಿಷನ್ ಇವರು ತಿಳಿಸಿದರು.

ಸಾರ್ವಜನಿಕ ಶೌಚಾಲಯ 2018-19ನೇ ಸಾಲಿಗೆ 50 ಗುರಿ ನಿಗದಿಪಡಿಸಲಾಗಿದ್ದು, ಪೂರ್ಣಗೊಂಡಿರುತ್ತದೆ. 2019-20ನೇ ಸಾಲಿಗೆ ಡಿಸೆಂಬರ್ ತಿಂಗಳಲ್ಲಿ ಗ್ರಾಮ ಪಂಚಾಯತ್‌ನಿಂದ ಸ್ವೀಕೃತವಾದ ಪ್ರಸ್ತಾವನೆಗಳ ಪ್ರಕಾರ 71 ಘಟಕಗಳು ಮಂಜೂರುಗೊಂಡಿದ್ದು, ಅನುದಾನ ಬಿಡುಗಡೆಯಾಗಿರುತ್ತದೆ. ಸದರಿ ಕಾಮಗಾರಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದ್ದು, 17 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. 54 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ ಫೆಬ್ರವರಿ ಅಂತ್ಯದೊಳಗೆ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದೆಂದು ಮೇಲ್ವಿಚಾರಕರು, ಸ್ವಚ್ಛ ಭಾರತ್ ಮಿಷನ್ ಇವರು ತಿಳಿಸಿದರು.

ಘನತ್ಯಾಜ್ಯ ಮತ್ತು ದ್ರವತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ 2018-19ನೇ ಸಾಲಿನವರೆಗೆ 47 ಗ್ರಾಮ ಪಂಚಾಯತ್‌ಗಳಿಗೆ ರೂ.20.00ಲಕ್ಷದಂತೆ ಮಂಜೂರುಗೊಂಡಿರುತ್ತದೆ. 37 ಗ್ರಾಮ ಪಂಚಾಯತ್‌ಗಳ ಕಾಮಗಾರಿಗಳು ಪೂರ್ಣಗೊಂಡು ಘಟಕಗಳು ಕಾರ್ಯಾಚರಣೆಯಲ್ಲಿರುತ್ತದೆ. 6 ಕಾಮಗಾರಿಗಳು ಪ್ರಗತಿಯಲ್ಲಿದ್ದು, 4 ಕಾಮಗಾರಿಗಳು ಜಾಗದ ಸಮಸ್ಯೆಯಿಂದಾಗಿ ಪ್ರಾರಂಭಗೊಂಡಿರುವುದಿಲ್ಲ. 2019-20ನೇ ಸಾಲಿಗೆ 40 ಗುರಿ ನಿಗದಿಪಡಿಸಲಾಗಿದ್ದು, 28 ಪ್ರಸ್ತಾವನೆಗಳನ್ನು ಅನುಮೋದನೆಗಾಗಿ ಸರಕಾರಕ್ಕೆ ಸಲ್ಲಿಸಲಾಗಿ 26 ಪ್ರಸ್ತಾವನೆಗಳು ಮಂಜೂರುಗೊಂಡಿರುತ್ತದೆ. ಶೇ.50ರಷ್ಟು ಅನುದಾನ ಬಿಡುಗಡೆಯಾಗಿ, ಟೆಂಡರ್ ಪ್ರಕ್ರಿಯೆಯಲ್ಲಿ 1, ಕಾರ್ಯಾದೇಶ ನೀಡಲು 3, 7 ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದ್ದು, ಮತ್ತು 7 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ ಎಂದು ಮೇಲ್ವಿಚಾರಕರು, ಸ್ವಚ್ಛ ಭಾರತ್ ಮಿಷನ್ ಇವರು ತಿಳಿಸಿದರು.

<u>ನಗರ ಸ್ಥಳೀಯ ಸಂಸ್ಥೆಗಳು:</u>

ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಶೇ.85ರಷ್ಟು ಪ್ರಗತಿಯಾಗಿರುತ್ತದೆ. ಪಚ್ಚನಾಡಿ ಕಾಮಗಾರಿಗೆ ಸಮಸ್ಯೆಯಿರುತ್ತದೆ. ಪುತ್ತೂರು ನಗರಪಾಲಿಕೆಗೆ ಸಂಬಂಧಿಸಿದಂತೆ ರೂ.13.29ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.11.68ಲಕ್ಷ ಅನುದಾನ ಖರ್ಚಾಗಿರುತ್ತದೆ. ಉಳ್ಳಾಲ ನಗರ ಸಭೆಗೆ ಸಂಬಂಧಿಸಿದಂತೆ ಬಿಡುಗಡೆಯಾದ ಅನುದಾನವನ್ನು ಪೂರ್ಣ ಖರ್ಚು ಮಾಡಲಾಗಿರುತ್ತದೆ ಎಂದು ಯೋಜನಾ ನಿರ್ದೇಶಕರು ತಿಳಿಸಿದಾಗ, ಪ್ರತಿ ದಿನ ಎಷ್ಟು ಮನೆಗಳಿಂದ ಕಸ ಸಂಗ್ರಹಣೆ ಮಾಡಲಾಗುತ್ತಿದೆ ಎಂಬ ಬಗ್ಗೆ ಮಾಹಿತಿಯನ್ನು ನೀಡುವಂತೆ ಸೂಚಿಸಲಾಯಿತು.

**(ಕ್ರಮ: ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಮಂಗಳೂರು)**

ಮಂಗಳೂರು ಮಹಾನಗರಪಾಲಿಕೆಯಡಿ ಸಮುದಾಯ ಶೌಚಾಲಯಕ್ಕೆ ಸಂಬಂಧಿಸಿದಂತೆ 23 ಕಡೆಗಳಲ್ಲಿ ಸ್ಥಳ ಗುರುತಿಸಲಾಗಿದ್ದು, ಎನ್.ಜಿ.ಒ. ಗಳ ಮುಖಾಂತರ ಹೊಂದಾಣಿಕೆ ಮಾಡಿಕೊಂಡು ಶೌಚಾಲಯ ನಿರ್ಮಿಸಲು ಕ್ರಮ ವಹಿಸಲಾಗುತ್ತಿದೆ ಎಂದು ಯೋಜನಾ ನಿರ್ದೇಶಕರು ತಿಳಿಸಿದರು.

**ನಗರೋತ್ಥಾನ:**

ನಗರೋತ್ಥಾನಕ್ಕೆ ಸಂಬಂಧಿಸಿದಂತೆ ಒಟ್ಟು ರೂ. 83.08ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ. 82.91ಲಕ್ಷ ಅನುದಾನ ವೆಚ್ಚ ಮಾಡಲಾಗಿ ಶೇ. 99ರಷ್ಟು ಪ್ರಗತಿ ಸಾಧನೆಯಾಗಿರುತ್ತದೆ. ನಗರೋತ್ಥಾನ 3ನೇ ಹಂತದಲ್ಲಿ ರೂ.86.00ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ. 85.75ಲಕ್ಷ ಅನುದಾನ ಖರ್ಚಾಗಿದ್ದು, ಶೇ.99.7ರಷ್ಟು ಪ್ರಗತಿ ಸಾಧನೆಯಾಗಿರುತ್ತದೆ. ಸಿ.ಎಂ.ಎಸ್. ಯೋಜನೆಗೆ ಸಂಬಂಧಿಸಿದಂತೆ ರೂ. 34.55ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಖರ್ಚಾಗಿರುತ್ತದೆ. ನಗರೋತ್ಥಾನ 3ನೇ ಹಂತ (ಮುನಿಸಿಪಾಲಿಟಿ) ಯಡಿ ಒಟ್ಟು 131 ಕಾಮಗಾರಿಗಳು ಮಂಜೂರಾಗಿದ್ದು, 73 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. 30 ಕಾಮಗಾರಿಗಳು ಪ್ರಗತಿಯಲ್ಲಿದ್ದು 28 ಕಾಮಗಾರಿಗಳನ್ನು ಪ್ರಾರಂಭಿಸಲು ಬಾಕಿ ಇರುತ್ತದೆ. ಬಾಕಿ ಇರುವ ಕಾಮಗಾರಿಗಳಿಗೆ ಟೆಂಡರ್ ಕರೆದು ಕಾಮಗಾರಿಯನ್ನು ಅನುಷ್ಠಾನಗೊಳಿಸಿ ಮಾರ್ಚ್-2020ರೊಳಗೆ ಪೂರ್ಣಗೊಳಿಸುವಂತೆ ಸೂಚನೆಯನ್ನು ನೀಡಲಾಗಿರುತ್ತದೆ ಎಂದು ಯೋಜನಾ ನಿರ್ದೇಶಕರು ತಿಳಿಸಿದರು.

**14ನೇ ಹಣಕಾಸು ಯೋಜನೆ:**

ಸದರಿ ಯೋಜನೆಯಡಿ 1977 ಕಾಮಗಾರಿಗಳು ಮಂಜೂರಾಗಿದ್ದು, 1627 ಕಾಮಗಾರಿ ಪೂರ್ಣಗೊಂಡಿರುತ್ತದೆ. 228 ಕಾಮಗಾರಿಗಳು ಪ್ರಗತಿಯಲ್ಲಿದ್ದು 122 ಕಾಮಗಾರಿಗಳನ್ನು ಪ್ರಾರಂಭಿಸಲು ಬಾಕಿ ಇರುತ್ತದೆ. 2016-17 ಹಾಗೂ 2017-18ನೇ ಸಾಲಿಗೆ ಸಂಬಂಧಿಸಿದಂತೆ 163 ಕಾಮಗಾರಿಗಳು ಮಂಜೂರಾಗಿದ್ದು, 109 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. 9 ಕಾಮಗಾರಿಗಳು ಪ್ರಗತಿಯಲ್ಲಿದ್ದು, 45 ಕಾಮಗಾರಿಗಳು ಬಾಕಿಯಿರುತ್ತದೆ ಎಂದು ಯೋಜನಾ ನಿರ್ದೇಶಕರು ತಿಳಿಸಿದರು. ಎಸ್.ಡಬ್ಲ್ಯೂ.ಎಂ. ಗೆ ಸಂಬಂಧಿಸಿದಂತೆ ಸುಳ್ಯ ತಾಲೂಕಿನಲ್ಲಿ ಶೇ.90ರಷ್ಟು ಮಾತ್ರ ಪ್ರಗತಿಯಾಗಿರುವ ಬಗ್ಗೆ ವಿಚಾರಿಸಲಾಗಿ, ಮನೆಗಳು ದೂರವಿರುವುದರಿಂದ 2 ವಾರ್ಡ್‌ಗಳಲ್ಲಿ ಮನೆ ಮನೆಗೆ ಹೋಗಿ ತ್ಯಾಜ್ಯವನ್ನು ಸಂಗ್ರಹಿಸಲು ಸಾಧ್ಯವಾಗಿರುವುದಿಲ್ಲವೆಂದು ಮುಖ್ಯಾಧಿಕಾರಿಯವರು ತಿಳಿಸಿದರು.

**ಅಮೃತ ಯೋಜನೆ:**

ಅಮೃತ ಯೋಜನೆಗೆ ಸಂಬಂಧಿಸಿದಂತೆ ಒಟ್ಟು ರೂ.185.72ಕೋಟಿ ಅನುದಾನದಲ್ಲಿ ರೂ.6.00ಕೋಟಿ ಅನುದಾನದಲ್ಲಿ ಮಂಗಳೂರು ಮಹಾನಗರಪಾಲಿಕೆ ವತಿಯಿಂದ 4 ಪಾರ್ಕ್ ಕಾಮಗಾರಿಗಳು ಹಾಗೂ 2 ಮಳೆ ನೀರಿನ ಚರಂಡಿ ಕಾಮಗಾರಿಗಳು ಪೂರ್ಣಗೊಂಡಿದ್ದು, 3ನೇ ಕಂತಿನ ಅನುದಾನ ಬಿಡುಗಡೆಯಾಗಿರುವುದಿಲ್ಲವೆಂದು ಇಲಾಖಾಧಿಕಾರಿಯವರು ತಿಳಿಸಿದಾಗ, ಒಟ್ಟು ಬಿಡುಗಡೆಯಾದ ಅನುದಾನ, ಯಾವ ಯಾವ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡಲಾಗಿದೆ, ಎಷ್ಟು ಕಾಮಗಾರಿಗಳು ಪೂರ್ಣಗೊಂಡಿದೆ, ಎಷ್ಟು ಅನುದಾನ ಖರ್ಚಾಗಿದೆ ಎಂಬ ಬಗ್ಗೆ ವಿವರವಾದ ವರದಿಯನ್ನು ನೀಡುವಂತೆ ಯೋಜನಾ ನಿರ್ದೇಶಕರಿಗೆ ಸೂಚಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಮಂಗಳೂರು)**

ವಸತಿ ಯೋಜನೆ:

2019-20ನೇ ಸಾಲಿನ ಎಂಪಿಕ್‌ಗೆ ಸಂಬಂಧಿಸಿದಂತೆ 3408 ಗುರಿ ನಿಗದಿಯಾಗಿದ್ದು, 1559 ಮನೆಗಳು ಪೂರ್ಣಗೊಂಡಿರುತ್ತದೆ. ಕಳೆದ 6 ತಿಂಗಳಿನಿಂದ ಅನುದಾನ ಬಿಡುಗಡೆಯಾಗಿರುವುದಿಲ್ಲವೆಂದು ಹಾಗೂ ವಿವಿಧ ವಸತಿ ಯೋಜನೆಯಡಿ 4285 ಮನೆಗಳು ಪ್ರಗತಿಯಲ್ಲಿದ್ದು, ವಿಜಿಲ್ ಆ್ಯಪ್ ಮೂಲಕ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹಾಗೂ ವಿ.ಎ.ಗಳು ಜಿ.ಪಿ.ಎಸ್. ಮಾಡಿ ಜಿಲ್ಲಾ ಪಂಚಾಯತ್‌ಗೆ ಸಲ್ಲಿಸುತ್ತಿದ್ದು, ಜಿಲ್ಲಾ ಪಂಚಾಯತ್‌ನಿಂದ ರಾಜೀವಗಾಂಧಿ ವಸತಿ ನಿಗಮಕ್ಕೆ ಸಲ್ಲಿಸುವ ವ್ಯವಸ್ಥೆ ಮಾಡಲಾಗುವುದೆಂದು ವಸತಿ ಯೋಜನೆ ನೋಡಲ್ ಅಧಿಕಾರಿಯವರು ತಿಳಿಸಿದರು.

ಹಕ್ಕು ಪತ್ರ ಮಾಹಿತಿ:

ನಿವೇಶನ ಹಕ್ಕು ಪತ್ರಕ್ಕೆ ಸಂಬಂಧಿಸಿದಂತೆ 120 ಅರ್ಜಿಗಳು ಆನ್‌ಲೈನ್‌ನಲ್ಲಿ ಬಾಕಿ ಇರುತ್ತದೆ. 2013-14ನೇ ಸಾಲಿನಲ್ಲಿ ಮೂಡಬಿದ್ರೆ ಮತ್ತು ಬೆಳ್ತಂಗಡಿ ತಾಲೂಕಿನಲ್ಲಿ ಬಾಕಿ ಇರುತ್ತದೆ ಎಂದು ಯೋಜನಾ ನಿರ್ದೇಶಕರು ತಿಳಿಸಿದರು. ಸುಳ್ಯ ತಾಲೂಕಿನಲ್ಲಿ 2015-16ನೇ ಸಾಲಿನ 49 ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಮಾಡಲು ಬಾಕಿಯಿದ್ದು, ಹಕ್ಕು ಪತ್ರ ವಿತರಣೆ ಮಾಡುವಾಗ ಡೀಮ್ಡ್ ಫಾರೆಸ್ಟ್ ಎಂದು ಅರಣ್ಯ ಇಲಾಖೆಯವರು ಆಕ್ಷೇಪಣೆ ಹಾಕಿರುತ್ತಾರೆಂದು ಇಲಾಖಾಧಿಕಾರಿಯವರು ತಿಳಿಸಿದಾಗ, ಈ ಬಗ್ಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರೊಂದಿಗೆ ಮಾತನಾಡಿ ಡೀಮ್ಡ್ ಫಾರೆಸ್ಟ್ ಇದ್ದಲ್ಲಿ ಎಫ್.ಸಿ. ಕ್ಲಿಯರೆನ್ಸ್ ಮಾಡಲು ಅರ್ಜಿ ಸಲ್ಲಿಸುವಂತೆ ಸೂಚಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಮಂಗಳೂರು)**

ಪ್ರಧಾನ ಮಂತ್ರಿ ಆವಾಸ್ ಯೋಜನೆ:

ಸದರಿ ಯೋಜನೆಯಡಿ 2357 ಮಂಜೂರಾಗಿದ್ದು, 2356 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ. 1115 ಮನೆಗಳ ಕಾಮಗಾರಿಗಳು ಪೂರ್ಣಗೊಂಡಿದ್ದು, 477 ಕಾಮಗಾರಿಗಳನ್ನು ಪ್ರಾರಂಭಿಸಲು ಬಾಕಿ ಇರುತ್ತದೆ. ಪ್ರಸ್ತುತ ಜಿಯೋ ಟ್ಯಾಗಿಂಗ್ ಕಾರ್ಯ ಪ್ರಗತಿಯಲ್ಲಿರುತ್ತದೆ. ಆದರೆ ಸಿ.ಎಲ್.ಎಸ್.ಎಸ್. ಸಿಬ್ಬಂದಿಗಳು ಇಲ್ಲದೇ ಇರುವುದರಿಂದ ಹೊರಗುತ್ತಿಗೆ ಆಧಾರದಲ್ಲಿ ಸಿಬ್ಬಂದಿಗಳನ್ನು ಪಡೆದು ಅವರಿಗೆ ವೇತನ ಪಾವತಿ ಮಾಡಿದಲ್ಲಿ ಜಿಯೋ ಟ್ಯಾಗಿಂಗ್ ಮಾಡಲು ಯಾವುದೇ ಸಮಸ್ಯೆ ಉಂಟಾಗುವುದಿಲ್ಲವೆಂದು ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ ಇವರು ತಿಳಿಸಿದರು.

ಕಂದಾಯ ಇಲಾಖೆ:

ಘನ ತ್ಯಾಜ್ಯ ಘಟಕದ ಜಾಗಕ್ಕೆ ಸಂಬಂಧಿಸಿದಂತೆ 80 ಪ್ರಕರಣಗಳು ಬಾಕಿಯಿದ್ದು, ವಿವಿಧ ಹಂತದಲ್ಲಿ ಬಾಕಿ ಇರುವ ಮಾಹಿತಿಯನ್ನು ಜಿಲ್ಲಾ ಪಂಚಾಯತ್‌ನಿಂದ ಪಡೆದು, ತಹಶೀಲ್ದಾರ್, ಸರ್ವೆಯರ್ ಹಂತದಲ್ಲಿ ಕ್ರಮ ವಹಿಸಲಾಗುತ್ತಿದೆ. ಬೆಳ್ತಂಗಡಿ ತಾಲೂಕಿನಲ್ಲಿ ಒಟ್ಟು 48 ಗ್ರಾಮ ಪಂಚಾಯತ್‌ಗಳಿದ್ದು, 24 ಗ್ರಾಮ ಪಂಚಾಯತ್‌ಗಳಿಗೆ ಘನತ್ಯಾಜ್ಯ ಘಟಕವನ್ನು ನಿರ್ಮಾಣ ಮಾಡಲಾಗಿರುತ್ತದೆ. ಉಳಿದ 24 ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿವಿಧ ಹಂತದಲ್ಲಿ ಬಾಕಿ ಇರುತ್ತದೆ ಎಂದು ಬೆಳ್ತಂಗಡಿ ತಹಶೀಲ್ದಾರರು ತಿಳಿಸಿದರು. ಬಂಟ್ವಾಳ ತಾಲೂಕಿನಲ್ಲಿ 19

ಪ್ರಕರಣಗಳು ಬಾಕಿಯಿದ್ದು, 3 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಎಂದು ತಹಶೀಲ್ದಾರ್, ಬಂಟ್ವಾಳ ಇವರು ತಿಳಿಸಿದರು.

ಸ್ಮಶಾನಕ್ಕೆ ಸಂಬಂಧಿಸಿದಂತೆ ಬಾಕಿಯಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಂಟ್ವಾಳ ತಾಲೂಕಿನಲ್ಲಿ 25 ಪ್ರಕರಣಗಳು ಬಾಕಿ ಇರುವ ಬಗ್ಗೆ ವಿಚಾರಿಸಿದಾಗ, ಈಗಾಗಲೇ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಸ್ಮಶಾನ ಇರುತ್ತದೆ. ಹೆಚ್ಚುವರಿ ಬೇಡಿಕೆಗಳು ಬಂದಿರುತ್ತದೆ ಎಂದು ಬಂಟ್ವಾಳ ತಹಶೀಲ್ದಾರ್ ರವರು ತಿಳಿಸಿದಾಗ, ಎಲ್ಲಾ ಪಂಚಾಯತ್‌ಗಳಲ್ಲಿ ಸ್ಮಶಾನ ಇದ್ದು ಸ್ಮಶಾನದ ಅಗತ್ಯತೆ ಇಲ್ಲದೇ ಇದ್ದಲ್ಲಿ ಹಿಂಬರಹ ನೀಡಿ ಅರ್ಜಿಯನ್ನು ವಿಲೇಗೊಳಿಸುವಂತೆ ಸೂಚಿಸಿದರು.

ಸಮಾಜ ಕಲ್ಯಾಣ ಇಲಾಖೆಯಡಿ 2 ಪ್ರಕರಣಗಳು ಮಂಗಳೂರು ಮತ್ತು ಪುತ್ತೂರು ತಾಲೂಕಿನಲ್ಲಿ ಬಾಕಿಯಿರುವ ಬಗ್ಗೆ ಪ್ರಸ್ತಾಪಿಸಿದಾಗ, ಪುತ್ತೂರು ತಾಲೂಕಿನಲ್ಲಿ ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ಇಲಾಖೆಗೆ ಹಸ್ತಾಂತರವಾಗಲು ಬಾಕಿ ಇರುತ್ತದೆ. ಮಂಗಳೂರು ತಾಲೂಕಿನಲ್ಲಿ ಮೊರಾರ್ಜಿ ಶಾಲೆಗೆ 8 ಎಕರೆ ಜಾಗವನ್ನು ಕೇಳಲಾಗಿದ್ದು, ಒಂದೇ ಕಡೆ 8 ಎಕರೆ ಜಾಗವನ್ನು ಒದಗಿಸಲು ಕಷ್ಟವಾಗಿರುತ್ತದೆ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

**ಡೀಮ್ಡ್ ಫಾರೆಸ್ಟ್:**

ಜಿಲ್ಲೆಯ 34850.48 ಹೆಕ್ಟೇರ್ ಡೀಮ್ಡ್ ಫಾರೆಸ್ಟ್ ಪಟ್ಟಿಯಿಂದ ಕೈಬಿಡಲು ಯೋಗ್ಯವಿರುವ ಪ್ರದೇಶಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಿಂದ ಅಂತಿಮ ನಿರ್ಧಾರ ಬಂದ ನಂತರ ಮುಂದಿನ ಕ್ರಮ ವಹಿಸಲಾಗುವುದೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ತಿಳಿಸಿದರು. 94ಸಿಯಡಿ ನೀಡಿರುವ ತುಂಬಾ ಅರ್ಜಿಗಳು ಡೀಮ್ಡ್ ಫಾರೆಸ್ಟ್ ನಲ್ಲಿ ಬರುತ್ತದೆ. ಫಲಾನುಭವಿಗಳು 5-6 ವರ್ಷದಿಂದ ಮನೆ ಕಟ್ಟಿಕೊಂಡು ವಾಸವಿರುತ್ತಾರೆ. ಅಂತವರಿಗೆ ಹಕ್ಕುಪತ್ರವನ್ನು ನೀಡಲು ಅಸಾಧ್ಯವಾಗಿರುತ್ತದೆ ಎಂದು ಸಹಾಯಕ ಆಯುಕ್ತರು ತಿಳಿಸಿದಾಗ, ಡೀಮ್ಡ್ ಫಾರೆಸ್ಟ್‌ನ ಬಗ್ಗೆ ರಾಜ್ಯ ಸರ್ಕಾರದ ಮಟ್ಟದಲ್ಲಿ ಕ್ರಮ ವಹಿಸಬೇಕಾಗುತ್ತದೆ ಎಂದು ತಿಳಿಸಲಾಯಿತು.

**ಸರ್ಕಾರಿ ಭೂಮಾಪಕರಿಂದ ಪ್ರಕರಣಗಳ ಭೂ ವಿಲೇವಾರಿ:**

ಸದರಿ ಇಲಾಖೆಯಡಿ ಸರ್ವೆಯಲ್ಲಿ 2503, ಕಂದಾಯ ಇಲಾಖೆಯಲ್ಲಿ 9042 ಒಟ್ಟು 11545 ಪ್ರಕರಣಗಳು ಬಾಕಿಯಿರುತ್ತದೆ. ಡಿಸೆಂಬರ್ ತಿಂಗಳಲ್ಲಿ 3111 ಅರ್ಜಿಗಳನ್ನು ವಿಲೇವಾರಿ ಮಾಡಲಾಗಿರುತ್ತದೆ ಎಂದು ಇಲಾಖಾಧಿಕಾರಿಯವರು ತಿಳಿಸಿದಾಗ, 2115 conversion caseಗೆ ಸಂಬಂಧಿಸಿದಂತೆ ತಂತ್ರಾಂಶದಿಂದ ಗ್ರಾಮವಾರು ಮಾಹಿತಿಯನ್ನು ಪಡೆಯುವಂತೆ ಇಲಾಖಾಧಿಕಾರಿಯವರಿಗೆ ಸೂಚಿಸಿದರು. 11ಇ ಕರೆಕ್ಷನ್‌ಗೆ 9042 ಅರ್ಜಿಗಳನ್ನು ವಿಲೇ ಮಾಡಲು ವರ್ಷಗಟ್ಟಲೆ ಸಮಯ ತೆಗೆದುಕೊಳ್ಳುತ್ತದೆ ಎಂದು ತಿಳಿಸಿದಾಗ, ಈ ಕೆಲಸಗಳಿಗೆ ನಿವೃತ್ತ ಭೂಮಾಪಕರನ್ನು ಗುತ್ತಿಗೆ ಆಧಾರದಲ್ಲಿ ಪಡೆಯುವ ಕುರಿತು ಸರ್ಕಾರದಿಂದ ಮಂಜೂರಾತಿ ಪಡೆಯುವ ಬಗ್ಗೆ ತಿಳಿಸಲಾಗಿ, ಈ ಬಗ್ಗೆ ಜಿಲ್ಲಾಧಿಕಾರಿಗಳಿಂದ ಸಭೆಯ ನಿರ್ಣಯವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**(ಕ್ರಮ: ಜಿಲ್ಲಾಧಿಕಾರಿಗಳು, ದ.ಕ.ಜಿಲ್ಲೆ, ಮಂಗಳೂರು)**

**ಪ್ರಗತಿ ಕಾಲನಿ ಯೋಜನೆ:**

ಸದರಿ ಯೋಜನೆಯಡಿ 2019-20ನೇ ಸಾಲಿಗೆ ರೂ.245.00ಲಕ್ಷ ಅನುದಾನದಲ್ಲಿ ರೂ.3.00ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಶೇ.50ರಷ್ಟು ಪ್ರಗತಿ ಸಾಧನೆಯಾಗಿರುತ್ತದೆ. 2018-19ನೇ ಸಾಲಿಗೆ ಸಂಬಂಧಿಸಿದಂತೆ ರೂ.450.00ಲಕ್ಷ ಅನುದಾನದಲ್ಲಿ ರೂ.339.00ಲಕ್ಷ ಅನುದಾನ ಬಿಡುಗಡೆಯಾಗಿದ್ದು, ರೂ.160.00ಲಕ್ಷ ಅನುದಾನ ವೆಚ್ಚ ಮಾಡಲಾಗಿರುತ್ತದೆ. ಸದರಿ ಯೋಜನೆಯಡಿ ಸಿಸಿ ರಸ್ತೆಗಳನ್ನು ನಿರ್ಮಾಣ ಮಾಡಲಾಗುತ್ತದೆ ಎಂದು ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಇವರು ತಿಳಿಸಿದರು. 62 ಕಾಮಗಾರಿಗಳ ಪೈಕಿ 19 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಉಳಿದ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ ಎಂದು ಕೆಆರ್‌ಐಡಿಎಲ್‌ನಿಂದ ಕಾರ್ಯಕಾರಿ ಅಭಿಯಂತರರು ಇವರು ತಿಳಿಸಿದಾಗ, 2018-19ನೇ ಸಾಲಿನಿಂದ ಕಾಮಗಾರಿಗಳನ್ನು ಇನ್ನೂ ಪೂರ್ತಿ ಮಾಡದಿರುವ ಬಗ್ಗೆ ವಿವರಣೆ ನೀಡುವಂತೆ ಸಂಬಂಧಪಟ್ಟ ಅಧಿಕಾರಿಯವರಿಗೆ ಸೂಚಿಸಿದರು.

**(ಕ್ರಮ: ಕಾರ್ಯಕಾರಿ ಅಭಿಯಂತರರು, ಕೆಆರ್‌ಐಡಿಎಲ್, ಮಂಗಳೂರು)**

**ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ:**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಅನಾಥಾಶ್ರಮ/ವೃದ್ಧಾಶ್ರಮಗಳಿಗೆ ಸಹಾಯಧನ ಯೋಜನೆಯಡಿ ರೂ.309.78ಲಕ್ಷ ಅನುದಾನ ನಿಗದಿಯಾಗಿದ್ದು, ರೂ.309.78ಲಕ್ಷ ಅನುದಾನ ಉಳಿಕೆಯಾಗಿರುವ ಕುರಿತು ವಿಚಾರಿಸಲಾಗಿ, ಜಿಲ್ಲಾಧಿಕಾರಿ ಖಾತೆಯಿಂದ ಅನುದಾನ ಬಿಡುಗಡೆಯಾಗಿದ್ದು, ಪ್ರಸ್ತುತ ಖರ್ಚು ಮಾಡಲಾಗುವುದೆಂದು ಜಿಲ್ಲಾ ಅಧಿಕಾರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಇವರು ತಿಳಿಸಿದರು.

**ವಕ್ಫ್ ಸ್ವತ್ತುಗಳ ಪ್ರಗತಿ ವಿವರ:**

ವಕ್ಫ್ ಸ್ವತ್ತಿನ 2ನೇ ಹಂತದ ಸರ್ವೆ ಕಾರ್ಯ ಪೂರ್ಣಗೊಂಡಿದ್ದು, 685 ಆಸ್ತಿಗಳಿಗೆ ಗಜೆಟ್ ನೊಟಿಫಿಕೇಶನ್ ಆಗಿರುತ್ತದೆ. 4 ಪ್ರಕರಣಗಳಿಗೆ ನ್ಯಾಯಾಲಯದಲ್ಲಿ ವ್ಯಾಜ್ಯ ನಡೆಯುತ್ತಿದೆ ಎಂದು ಇಲಾಖಾಧಿಕಾರಿಯವರು ತಿಳಿಸಿದರು.

**ಬೆಳೆ ಸಮೀಕ್ಷೆ:**

ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಮುಕ್ತಾಯಗೊಂಡಿರುತ್ತದೆ. ಹಿಂಗಾರು ಹಂಗಾಮಿಗೆ ಸಂಬಂಧಿಸಿದಂತೆ ರಬಿ ಬೆಳೆ ಸಮೀಕ್ಷೆ ಮಾಡಲು ಬಾಕಿಯಿರುತ್ತದೆ. ರೂ.72.00ಲಕ್ಷ ಪಿ.ಆರ್. ಪಾವತಿಯಾಗಿದ್ದು 88% ಪ್ರಗತಿಯಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ ಇವರು ತಿಳಿಸಿದರು.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**

ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆಗೆ ಸಂಬಂಧಿಸಿದಂತೆ ಬೆಳ್ತಂಗಡಿ ತಾಲೂಕಿನಲ್ಲಿ ಪ್ರಗತಿ ಕಡಿಮೆಯಾಗಿದ್ದು, ಉಳಿದ ತಾಲೂಕಿನಲ್ಲಿ ಪ್ರಗತಿಯಾಗಿರುತ್ತದೆ. ಸದರಿ ಯೋಜನೆಯಡಿ ಮೊದಲ ಹೆರಿಗೆಗೆ ಕೇಂದ್ರ ಸರ್ಕಾರದಿಂದ ರೂ.5000/- ಅನುದಾನ ನೀಡಲಾಗುವುದು. ಮುಖ್ಯಮಂತ್ರಿಗಳ ಮಾತೃಶ್ರೀ ಯೋಜನೆಯಡಿ ಬಿಪಿಎಲ್ ಕಾರ್ಡ್ ಹೊಂದಿರುವ ಫಲಾನುಭವಿಗಳಿಗೆ ಒಂದು ಕುಟುಂಬದ 2 ಮಕ್ಕಳಿಗೆ ರೂ.6000/- ಅನುದಾನವನ್ನು ನೀಡಲಾಗುವುದು. ಪ್ರಗತಿ ಸಾಧಿಸಲಾಗುವುದೆಂದು ಉಪನಿರ್ದೇಶಕರು ತಿಳಿಸಿದರು.

ಪಲ್ಸ್ ಪೋಲೀಯೋ ಕಾರ್ಯಕ್ರಮ:

ದಿನಾಂಕ: 19-01-2020ರಂದು ಪಲ್ಸ್ ಪೋಲೀಯೋ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, 0-5 ವರ್ಷದ 1,48,817 ಮಕ್ಕಳ ಪೈಕಿ 1,22,856 ಮಕ್ಕಳಿಗೆ ಲಸಿಕೆಯನ್ನು ಹಾಕಲಾಗಿರುತ್ತದೆ. 2-3 ದಿನ ಮನೆ ಮನೆಗೆ ಹೋಗಿ ಮಕ್ಕಳಿಗೆ ಲಸಿಕೆ ಹಾಕದೇ ಇದ್ದರೆ ಅವರಿಗೆ ಮನೆಯಲ್ಲಿ ಲಸಿಕೆಯನ್ನು ಹಾಕುವ ಮೂಲಕ 100% ಗುರಿ ಸಾಧಿಸಲು ಕ್ರಮವಹಿಸಲಾಗಿದೆಯೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ತಿಳಿಸಿದರು.

ಸಕಾಲ:

ಕಂದಾಯ ಇಲಾಖೆಯಿಂದ ಸಕಾಲದಡಿ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲ ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು. 230 ಗ್ರಾಮ ಪಂಚಾಯತ್‌ಗಳ ಪೈಕಿ 34 ಗ್ರಾಮ ಪಂಚಾಯತ್‌ಗಳು ಡಿಸೆಂಬರ್ ತಿಂಗಳಲ್ಲಿ ಸಕಾಲದಡಿ ಯಾವುದೇ ಅರ್ಜಿಗಳನ್ನು ಸ್ವೀಕರಿಸದೇ ಇರುವುದರಿಂದ ಸದರಿ ಗ್ರಾಮ ಪಂಚಾಯತ್‌ಗಳಿಗೆ ಕಾರಣ ಕೇಳುವ ನೋಟೀಸನ್ನು ನೀಡಿ ಕ್ರಮವಹಿಸಲಾಗಿದೆ ಹಾಗೂ ಅಧೀನ ಇಲಾಖೆಗಳು ಸಕಾಲದಡಿ ಬಾಕಿ ಇರುವ ಅರ್ಜಿಗಳನ್ನು ಶೀಘ್ರ ವಿಲೇ ಮಾಡಲು ಕಂದಾಯ ಇಲಾಖಾ ಸಚಿವರ ಸಭೆಯಲ್ಲಿ ಸೂಚಿಸಿದ್ದು, ಅದರಂತೆ ಗ್ರಾಮ ಪಂಚಾಯತ್ ಹಾಗೂ ಅಧೀನ ಇಲಾಖೆಗಳಲ್ಲಿ ಸಕಾಲದಡಿ ಬಾಕಿ ಇರುವ ಅರ್ಜಿಗಳನ್ನು ಪೂರ್ಣ ವಿಲೇ ಮಾಡುವ ಬಗ್ಗೆ ಸುತ್ತೋಲೆ ಹೊರಡಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ತಿಳಿಸಿದರು.

ಕೊನೆಯದಾಗಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವ್ಯವಸ್ಥಾಪಕ ನಿರ್ದೇಶಕರು,ಕೆಪಿಸಿಎಲ್
ಹಾಗೂ ಜಿಲ್ಲಾ ಉಸ್ತುವಾರಿ ಕಾರ್‍ಯದರ್ಶಿ
**ದಕ್ಷಿಣ ಕನ್ನಡ ಜಿಲ್ಲೆ**

**-ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ**

# ನಮೂನೆ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರ.ಸಂ | ಅಂಶಗಳು | |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ದಾವಣಗೆರೆ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಎಸ್.ಆರ್.ಉಮಾಶಂಕರ್, ಭಾ.ಆ.ಸೇ |
| 3 | ಪ್ರವಾಸ ಕೈಗೊಂಡ ದಿನಾಂಕ | 23.01.2020 |
| A | **ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ** | ಸಭಾ ನಡವಳಿ ಲಗತ್ತಿಸಿದೆ. |
| a) | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | |
| b) | ನಿರ್ದೇಶನ ನೀಡಿದ ಬಗ್ಗೆ ಸಾರಂಶ | |
| B) | **ಕ್ಷೇತ್ರ ವೀಕ್ಷಣೆ** | |

| ಕ್ರ.ಸಂ | ಭೇಟಿ ನೀಡಿದ ತಾಲ್ಲೂಕು/ ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|
| | - | - | - |

| | | |
|---|---|---|
| C | ಇತರೆ ವಿಷಯಗಳು | ಸಭಾ ನಡವಳಿ ಲಗತ್ತಿಸಿದೆ. |

(ಎಸ್.ಆರ್. ಉಮಾಶಂಕರ್, ಭಾ.ಆ.ಸೇ.,)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)
ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ದಿನಾಂಕ:23–01–2020ರಂದು ಮಾನ್ಯ ಶ್ರೀ ಎಸ್.ಆರ್.ಉಮಾಶಂಕರ್, ಭಾ.ಆ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆ.**

–0–

ಜಿಲ್ಲಾಧಿಕಾರಿಗಳು, ಉಸ್ತುವಾರಿ ಕಾರ್ಯದರ್ಶಿಯವರನ್ನು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಹಾಗೂ ಜಿಲ್ಲಾ ಮಟ್ಟದ ಹಾಗೂ ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳನ್ನು ಮತ್ತು ಮಾಧ್ಯಮದ ಪ್ರತಿನಿಧಿಗಳನ್ನು ಸಭೆಗೆ ಸ್ವಾಗತಿಸಿ ಉಸ್ತುವಾರಿ ಕಾರ್ಯದರ್ಶಿಯವರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸಿಕೊಡಬೇಕೆಂದು ಕೋರಿದರು.

ಸಭೆಯ ಪ್ರಾರಂಭದಲ್ಲಿ ಶಿಕ್ಷಣ ಇಲಾಖೆಯಿಂದ ತಯಾರಿಸಲಾದ ಎಸ್.ಎಸ್.ಎಲ್.ಸಿ ಮಾದರಿ ಪ್ರಶ್ನೆಪತ್ರಿಕೆಯನ್ನು ಸಭಾಧ್ಯಕ್ಷರು ಬಿಡುಗಡೆ ಮಾಡಿದರು.

**1. ಶಿಕ್ಷಣ ಇಲಾಖೆ:–** ಇಲಾಖೆಯ ಪ್ರಗತಿಯನ್ನು ಪರಿಶೀಲಿಸಲಾಯಿತು. ಜಿಲ್ಲೆಯಲ್ಲಿ ಉತ್ತಮ ಅಭಿವೃದ್ಧಿಯನ್ನು ಪಡೆಯಬೇಕಾದರೆ ಅಲ್ಲಿಯ ಶಿಕ್ಷಣದ ವ್ಯವಸ್ಥೆ ಬಹಳ ಮುಖ್ಯವಾದದ್ದು. ಈ ನಿಟ್ಟಿನಲ್ಲಿ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಬೇಕಾಗಿರುವುದು ಅತೀ ಅವಶ್ಯವಾಗಿರುತ್ತದೆ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿ ಸುಮಾರು 86% ವಿದ್ಯಾರ್ಥಿಗಳು ಪಾಸಗಿದ್ದರೂ ಉನ್ನತ ಶಿಕ್ಷಣಕ್ಕೆ ಹೋಗುವವರು ಕೇವಲ 27% ಮಾತ್ರ, ಆದ್ದರಿಂದ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಬೇಕಾಗಿರುತ್ತದೆ. ಕೋಲಾರ, ಹಾವೇರಿ, ಮುಧೋಳ ತಾಲ್ಲೂಕು ಯಡಿಹಳ್ಳಿ ಗ್ರಾಮದಲ್ಲಿ, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಶಾಸಕರೇ ಸರ್ಕಾರಿ ಶಾಲೆಗಳನ್ನು ದತ್ತು ಪಡೆದು ಅಗತ್ಯ ಸೌಲಭ್ಯಗಳನ್ನು ಕಲ್ಪಿಸಿ ಗುಣಮಟ್ಟದ ಶಿಕ್ಷಣ ಕೊಡಿಸಲು ಶ್ರಮಿಸುತ್ತಿದ್ದಾರೆ. ಹಾಗಾಗಿ ಆ ಜಿಲ್ಲೆಗಳ ಪರೀಕ್ಷಾ ಗುಣಮಟ್ಟವು ಉತ್ತಮವಾಗಿರಲು ಸಾಧ್ಯವಾಗಿರುತ್ತದೆ. ಅದರಂತೆ ದಾವಣಗೆರೆ ಜಿಲ್ಲೆಯಲ್ಲಿಯೂ ಸಹ ಇರುವ ಶಾಲೆಗಳನ್ನು ಶಾಸಕರು, ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಅಧಿಕಾರಿಗಳು ದತ್ತು ಪಡೆದು, ಆಗಾಗ ಭೇಟಿ ನೀಡಿ ಅಲ್ಲಿಯ ಆಗುಹೋಗುಗಳನ್ನು ಪರಿಶೀಲಿಸುತ್ತಿರುವುದರಿಂದ ಆ ಶಾಲೆಯ ಮಕ್ಕಳ ಅಭಿವೃದ್ಧಿ ಹಾಗೂ ಉನ್ನತೀಕರಣದ ಶಿಕ್ಷಣ ನೀಡಲು ವಿಶೇಷ ಕಾಳಜಿ ವಹಿಸಿದ್ದಲ್ಲಿ ಉತ್ತಮ ಪ್ರಜೆಗಳನ್ನು ಪಡೆಯಬಹುದೆಂದು, ಅವರೇ ಮುಂದಿನ ಸಮಾಜದ ಆಸ್ತಿಗಳಾಗುತ್ತಾರೆ. ಇದರಿಂದ ಸರ್ಕಾರಿ ಶಾಲೆಗಳನ್ನು ಉಳಿಸಿದಂತಾಗುತ್ತದೆ ಎಂದು ಸಭಾಧ್ಯಕ್ಷರು ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದರು. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿ ಉತ್ತಮ ಗುಣ ಮಟ್ಟ ಹಾಗೂ ತಿಳುವಳಿಕೆಯನ್ನು ನೀಡಿದ್ದೆ ಆದರೆ ಮುಂದೆ ಉತ್ತಮ ಫಲ ಸಿಗುತ್ತದೆ. ತಮ್ಮ ಜೀವನ ನಿರ್ವಹಣೆಗೆ ಯಾವುದಾದರೂ ಉತ್ತಮ ಕೆಲಸದ ಆಯ್ಕೆಯನ್ನು ಅವರೇ ಮಾಡಿಕೊಳ್ಳುತ್ತಾರೆ. ದೈವದತ್ತವಾದ ವಿದ್ಯೆಯನ್ನು ಪಡೆದ ಮಕ್ಕಳಿಗೆ ಶಿಕ್ಷಣ ನೀಡುವುದರ ಜೊತೆಗೆ ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಆದಷ್ಟು ಪ್ರಯತ್ನ ಪೂರ್ವಕ ಮುಂಚೂಣಿಯಲ್ಲಿ ತರಲು ವಿಶೇಷ ಪ್ರಯತ್ನ ಮಾಡಬೇಕೆಂದು ಎಲ್ಲಾ ಶಿಕ್ಷಕರಿಗೆ ತಿಳಿಸುವಂತೆ ಸಭಾಧ್ಯಕ್ಷರು, ಇಲಾಖಾಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರು ಇರುತ್ತಾರೆ. ಅವರಿಗೆ ಉತ್ತಮ ವೇತನವನ್ನು ಸಹ ನೀಡಲಾಗುತ್ತಿದೆ, ಪ್ರತಿ ಮಗುವಿಗೆ ಗಮನಕೊಟ್ಟು ಉತ್ತಮ ಶಿಕ್ಷಣವನ್ನು ನೀಡಬೇಕಾಗಿರುವುದು ಅವರ ಕರ್ತವ್ಯವಾಗಿರುತ್ತದೆ. ಇದಕ್ಕೆ ಮೇಲ್ವಿಚಾರಣೆ ಇಲ್ಲದೇ ಇರುವುದರಿಂದ ತೊಂದರೆಯಾಗಿರುತ್ತದೆ ಹಾಗಾಗಿ

ಮೇಲ್ವಿಚಾರಣೆ ಬೇಕಾಗಿದೆ, ಎಲ್ಲಾ ಇಲಾಖಾಧಿಕಾರಿಗಳು ತಮ್ಮ ತಮ್ಮ ಇಲಾಖೆಯ ಕರ್ತವ್ಯದ ಜೊತೆಗೆ ಒಂದೊಂದು ಶಾಲೆಯನ್ನು ದತ್ತು ತೆಗೆದುಕೊಂಡು ಉತ್ತಮ ಶಿಕ್ಷಣ ನೀಡುವ ನಿಟ್ಟಿನಲ್ಲಿ ಕ್ರಮ ಜರುಗಿಸುವುದು ಅವಶ್ಯವಾಗಿರುತ್ತದೆ ಎಂದು ಸಭಾಧ್ಯಕ್ಷರು ಇಲಾಖಾಧಿಕಾರಿಗಳಿಗೆ ತಿಳಿಸಿದರು.

ಈ ಬಾರಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ 1.20ಲಕ್ಷ ವಿದ್ಯಾರ್ಥಿಗಳಿದ್ದು, ಶಾಲೆಗಳನ್ನು ದತ್ತು ಪಡೆಯುವುದರಿಂದ ಪ್ರೌಢ ಶಿಕ್ಷಣದ ಸಂಖ್ಯೆಯನ್ನು ಇನ್ನೂ ಹೆಚ್ಚಿಸಬಹುದಾಗಿರುತ್ತದೆ. ಆ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ರೂಪಿಸಿದ ಹಾಗೆಯೂ ಆಗುತ್ತದೆ. ಕಳೆದ ಬಾರಿ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶ ಶೇ. 86.28 ಪಡೆದಿದ್ದು, ಈ ಬಾರಿ ಇನ್ನೂ ಉತ್ತಮ ಸಾಧನೆ ಮಾಡಬೇಕು. 7ನೇ ತರಗತಿಗೆ ಸದರಿ ಸಾಲಿನಲ್ಲಿ ಪಬ್ಲಿಕ್ ಪರೀಕ್ಷೆಯ ಬದಲು ಸಾಮಾನ್ಯ ಪರೀಕ್ಷೆಯನ್ನು ನಡೆಸಲಾಗುತ್ತದೆ. ಸರ್ಕಾರಿ ಶಾಲೆಗಳಿಗೆ ಸಂಬಂಧಿಸಿದಂತೆ ಸ್ಥಳಗಳ ಮಾಹಿತಿಯನ್ನು ಆನ್‌ಲೈನ್ ಅಪ್‌ಡೇಟ್‌ಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ದಾಖಲೆ ಇಲ್ಲದ ಶಾಲೆಗಳಿಗೆ ಜಿಲ್ಲಾಧಿಕಾರಿಗಳ ಮೂಲಕ ನಿಯಮಾನುಸಾರ ಖಾತೆ ಮಾಡಿಸಿಕೊಂಡು ಅಪ್‌ಡೇಟ್ ಮಾಡಲು ಸಭಾಧ್ಯಕ್ಷರು ಇಲಾಖಾಧಿಕಾರಿಗಳಿಗೆ ಸೂಚಿಸಿದರು.

ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗಾಗಿ ರಾಜ್ಯಕ್ಕೆ ರೂ.240 ಕೋಟಿ ಮಂಜೂರಾಗಿದ್ದರೂ ಸಹ ಜಿಲ್ಲೆಗಳಿಂದ ಸಮರ್ಪಕ ಪ್ರಸ್ತಾವನೆಗಳು ಬರದೇ ಇದ್ದುದರಿಂದ ಸದರಿ ಅನುದಾನವನ್ನು ಬಳಕೆಯಾಗಿರುವುದಿಲ್ಲ, ನಮ್ಮ ಜಿಲ್ಲೆಯಿಂದ ಶಾಸಕರಿಗೆ ಹಾಗೂ ಲೋಕಸಭಾ ಸದಸ್ಯರಿಗೆ ಒತ್ತಾಯ ಮಾಡಿ ಶಾಸಕರ ನಿಧಿಯಿಂದ ಶಿಕ್ಷಣ ಇಲಾಖೆಗೆ ಅನುದಾನವನ್ನು ಪಡೆದುಕೊಂಡು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಭೆಗೆ ಸಭಾಧ್ಯಕ್ಷರು ವಿವರಿಸಿದರು.

ದಾವಣಗೆರೆ ಜಿಲ್ಲೆಯ ಅತೀ ಹಿಂದುಳಿದ ಜಗಳೂರು ತಾಲ್ಲೂಕಿನ ತುಟ್ಟ ತುದಿಗಿರುವ ಶಾಲೆಯೊಂದಕ್ಕೆ ಜಿಲ್ಲೆಯ ಅಧಿಕಾರಿಗಳೊಂದಿಗೆ ಸರ್ಕಾರಿ ಬಸ್ಸಿನಲ್ಲಿ ಪ್ರಯಾಣಿಸಿ ಭೇಟಿ ನೀಡಿ, "ಕನಸು ಬಿತ್ತುವ ಕೆಲಸ, ರಾಷ್ಟ್ರ ಕಟ್ಟುವ ಕೆಲಸ" ಇದರಡಿ ಬೆಳಗಿನಿಂದ ಸಾಯಂಕಾಲದವರೆಗೂ ಅಲ್ಲಿಯ ಮಕ್ಕಳೊಂದಿಗೆ ಸಂವಾದದ ರೂಪದಲ್ಲಿ ಅವರಿಗೆ ಧೈರ್ಯ ತುಂಬಿ ಗುಣಮಟ್ಟದ ಪರೀಕ್ಷೆಯನ್ನು ಬರೆಯುವಂತೆ ಎಲ್ಲಾ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಈಗಾಗಲೇ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ. ತಮ್ಮ ಆದೇಶದಂತೆ ಗ್ರಾಮೀಣ ಭಾಗದ ಅಂತಹ ಶಾಲೆಗಳನ್ನು ದತ್ತು ತೆಗೆದುಕೊಳ್ಳುವ ನಿಟ್ಟಿನಲ್ಲಿ ಕ್ರಮ ಜರುಗಿಸಲಾಗುವುದೆಂದು ಜಿಲ್ಲಾಧಿಕಾರಿಗಳು ಸಭೆಗೆ ವಿವರಿಸಿದರು.

ಇಲಾಖೆಯಿಂದ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ಎಸ್.ಡಿ.ಎಂ.ಸಿಯವರಿಂದ ಅನುಷ್ಠಾನಗೊಳಿಸಬೇಕೆಂದು ಬಂದಿರುವ ಆದೇಶದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

**(ಕ್ರಮ: ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ದಾವಣಗೆರೆ.)**

**2. ಕಂದಾಯ ಇಲಾಖೆ:-**

**<u>ವಿಪತ್ತು ನಿರ್ವಹಣೆ :</u>**

ಇಲಾಖೆಯ ಪ್ರಗತಿಯನ್ನು ಪರಿಶೀಲಿಸಲಾಯಿತು. 2019 ಆಗಸ್ಟ್ ಮಾಹೆಯಲ್ಲಿ ಅತೀ ವೃಷ್ಠಿಯಿಂದ ಬಿ ವರ್ಗದ 15 ಮನೆಗಳು ಹಾಗೂ ಸಿ ವರ್ಗದ 297 ಮನೆಗಳು ಹಾನಿಯಾಗಿದ್ದು, ಬಿ ವರ್ಗದ 15 ಮನೆಗಳಿಗೆ ತಲಾ ರೂ.1.00 ಲಕ್ಷದಂತೆ ಮೊದಲನೇ ಕಂತು ರಾಜೀವಗಾಂಧಿ ವಸತಿ ನಿಗಮದಿಂದ ಫಲಾನುಭವಿಗಳ ಖಾತೆಗೆ ಜಮೆ

ಆಗಿರುತ್ತದೆ ಹಾಗೂ ಸಿ ವರ್ಗದ 297 ಮನೆಗಳಿಗೆ ತಲಾ ರೂ.50,000 ರಂತೆ ಈಗಾಗಲೇ ಪಾವತಿಸಲಾಗಿರುತ್ತದೆ. ಅದರಂತೆ ಸೆಪ್ಟೆಂಬರ್ ಮತ್ತು ಅಕ್ಟೋಬರ್ 2019ರ ಮಾಹೆಯಲ್ಲಿ ಎ ವರ್ಗದ 8, ಬಿ ವರ್ಗದ 9 ಮತ್ತು ಸಿ ವರ್ಗದ 1216 ಮನೆಗಳು ಹಾನಿಯಾಗಿದ್ದು, ಎ ಮತ್ತು ಬಿ ವರ್ಗದ ಮನೆಗಳಿಗೆ ತಲಾ ರೂ.1.00 ಲಕ್ಷದಂತೆ ಮೊದಲನೇ ಕಂತು ರಾಜೀವಗಾಂಧಿ ವಸತಿ ನಿಗಮದಿಂದ ಫಲಾನುಭವಿಗಳ ಖಾತೆಗೆ ಜಮೆ ಆಗಿರುತ್ತದೆ ಹಾಗೂ ಸಿ ವರ್ಗದ 1216 ಮನೆಗಳಿಗೆ ತಲಾ ರೂ.50,000 ರಂತೆ ಈಗಾಗಲೇ ಪಾವತಿಸಲಾಗಿರುತ್ತದೆ ಹಾಗೂ ಎ ಮತ್ತು ಬಿ ವರ್ಗದ 18 ಮನೆಗಳು ತಳಪಾಯ ಹಂತ ಮುಕ್ತಾಯವಾಗಿದ್ದು ಜಿಪಿಎಸ್ ಸಹಾ ಮಾಡಲಾಗಿರುತ್ತದೆ ಉಳಿದ 14 ಮನೆಗಳಿಗೆ ಶೀಘ್ರ ತಳಪಾಯ ಹಂತ ಪೂರ್ಣಗೊಳಿಸಲು ತಿಳಿಸಲಾಗಿರುತ್ತದೆ.

2019-20 ಮುಂಗಾರು ಹಂಗಾಮಿನಲ್ಲಿ ಅತೀವೃಷ್ಟಿಯಿಂದ ಹಾನಿಗೊಳಗಾದ ಬೆಳೆಗಳ ವಿವರಗಳನ್ನು ಪರಿಹಾರ ತಂತ್ರಾಂಶದಲ್ಲಿ ದಾಖಲಿಸಲಾಗಿದ್ದು, ಈಗಾಗಲೇ ಪರಿಹಾರದ ಮೊತ್ತ ಸರ್ಕಾರದಿಂದ ಫಲಾನುಭವಿಗಳ ಖಾತೆಗಳಿಗೆ ಜಮೆ ಆಗಿರುತ್ತದೆ. ಮೂಲಸೌಕರ್ಯ ದುರಸ್ತಿಗೆ ಜಿಲ್ಲೆಗೆ ಯಾವುದೇ ಅನುದಾನ ಬಿಡುಗಡೆಯಾಗಿರುವುದಿಲ್ಲ, ತೀವ್ರ ಹಾನಿಗೊಳಗಾದ ಕಾಲುವೆ, ಸೇತುವೆ ದುರಸ್ತಿಗಾಗಿ ರೂ.46.00 ಲಕ್ಷದ ಅಂದಾಜು ಮೊತ್ತದ 31 ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ನೀರಾವರಿ ನಿಗಮಕ್ಕೆ ಮಂಜೂರಾತಿ ನೀಡಲಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

**ಸಾಮಾಜಿಕ ಭದ್ರತಾ ಯೋಜನೆ:** ಸಾಮಾಜಿಕ ಭದ್ರತಾ ಯೋಜನೆಯಡಿ ಜಿಲ್ಲೆಯಲ್ಲಿ ಪಿಂಚಣಿ ಅದಾಲತ್ ಮಾಡುವ ಮೂಲಕ ಸರ್ಕಾರವೇ ಫಲಾನುಭವಿಗಳ ಮನೆ ಬಾಗಿಲಿಗೆ ಹೋಗಿ ಸುಮಾರು 25000 ಫಲಾನುಭವಿಗಳನ್ನು ಗುರುತಿಸಿ ಅವರಿಗೆ ಸೌಲಭ್ಯ ನೀಡಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

**ವಸತಿ ಶಾಲೆಗಳಿಗೆ ಜಮೀನು ಮಂಜೂರಾತಿ:** ವಸತಿ ಶಾಲೆಗಳಿಗೆ ಬೇಕಾಗಿರುವ ಜಮೀನನ್ನು ಈಗಾಗಲೇ ಮಂಜೂರು ಮಾಡಲಾಗಿದ್ದರೂ ಅವುಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡು ಕಟ್ಟಡಗಳನ್ನು ಇಲಾಖೆಗಳಿಂದ ಪ್ರಾರಂಭ ಮಾಡಿರುವುದಿಲ್ಲ ಎಂದು ಜಿಲ್ಲಾಧಿಕಾರಿಗಳು ಸಭೆಗೆ ವಿವರಿಸಿದರು. ಇಲಾಖೆಯ ವಶಕ್ಕೆ ಜಮೀನುಗಳನ್ನು ಕೂಡಲೇ ಪಡೆದುಕೊಂಡು ಖಾತೆ ಮಾಡಿಸಿಕೊಳ್ಳುವಂತೆ ಸುಮಾರು 30-40 ವರ್ಷಗಳ ಹಿಂದೆ ಅನೇಕ ಶಾಲೆಗಳಿಗೆ ಜಮೀನುಗಳನ್ನು ದಾನ ರೂಪವಾಗಿ ನೀಡಲಾಗಿದ್ದು, ಅವುಗಳನ್ನು ಇದುವರೆಗೂ ಹದ್ದುಬಸ್ತು ಮಾಡಿಕೊಳ್ಳದೇ ಇಲಾಖೆಯ ಹೆಸರಿಗೆ ಖಾತೆ ಮಾಡಿಕೊಳ್ಳದೇ ಇರುವುದರಿಂದ ದಾನ ನೀಡಿದ ತಲೆಮಾರಿನ ಮಕ್ಕಳು ಮೊಮ್ಮಕ್ಕಳು ಮಾಡುತ್ತಿರುವ ತಗಾದೆಯಿಂದ ಅನೇಕ ಪ್ರಕರಣಗಳು ನ್ಯಾಯಾಲಯದಲ್ಲಿರುತ್ತವೆ. ಆದ್ದರಿಂದ ಇನ್ನು ಮುಂದಾದರೂ ಎಲ್ಲಾ ಇಲಾಖೆಗಳು ತಮ್ಮ ತಮ್ಮ ಜಮೀನನ್ನು ಹದ್ದುಬಸ್ತು ಮಾಡಿಕೊಂಡು ಖಾತೆ ಮಾಡಿಸಿಕೊಳ್ಳಲು, ಒಂದು ವೇಳೆ ತೊಂದರೆ ಇರುವ ಕೆಲವು ಭಾಗಗಳಲ್ಲಿ ಫಾರಂ ನಂ.11, 12ರಲ್ಲಿ ಜಿಲ್ಲಾಧಿಕಾರಿಗಳಿಂದ ಖಾತೆ ಮಾಡಿಸಿಕೊಳ್ಳಲು ತಕ್ಷಣ ಕೂಡಲೇ ಕ್ರಮ ಕೈಗೊಳ್ಳುವಂತೆ ಸಭಾಧ್ಯಕ್ಷರು ಇಲಾಖಾಧಿಕಾರಿಗಳಿಗೆ ಸೂಚಿಸಿದರು.

ಕಳೆದ ಸಾಲಿನಲ್ಲಿ ಜಿಲ್ಲೆಯ ಎಲ್ಲಾ ಅಧಿಕಾರಿಗಳ ಗುಣಮಟ್ಟದ ಕೆಲಸ ನಿರ್ವಹಣೆಯಿಂದ ಉತ್ತಮ ರ್‍ಯಾಂಕಿಂಗ್ ಪಡೆದುಕೊಂಡಿದ್ದು, ಈ ಬಾರಿ ರ್‍ಯಾಂಕಿಂಗ್ ಕಡಿಮೆಯಾಗಿರುವುದರಿಂದ ಎಲ್ಲಾ ಅಧಿಕಾರಿಗಳು ಹೆಚ್ಚಿನ ನಿಗಾವಹಿಸಿ ಕೆಲಸ ಕಾರ್ಯಗಳನ್ನು ನಿರ್ವಹಿಸುವಂತೆ ಸಭಾಧ್ಯಕ್ಷರು ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಎಲ್ಲಾ ಇಲಾಖಾ ಮುಖ್ಯಾಧಿಕಾರಿಗಳು, ದಾವಣಗೆರೆ.)**

**3. ಅನುದಾನ ಬಿಡುಗಡೆ ಬಗ್ಗೆ**

1. ದಾವಣಗೆರೆ ಜಿಲ್ಲೆಯ ನ್ಯಾಮತಿ ಹೊಸ ತಾಲ್ಲೂಕು ಆಗಿದ್ದು, ಆಡಳಿತ ಭವನ ಕಟ್ಟಡ ನಿರ್ಮಾಣಕ್ಕೆ ಸುಮಾರು ಅಂದಾಜು ರೂ.10.00 ಕೋಟಿಗೆ ಕ್ರಿಯಾ ಯೋಜನೆ ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದುವರೆಗೂ ಅನುದಾನ ಬಿಡುಗಡೆಯಾಗಿರುವುದಿಲ್ಲ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳು ಸಭಾಧ್ಯಕ್ಷರನ್ನು ಕೋರಿದರು.
2. ದಾವಣಗೆರೆ ಜಿಲ್ಲೆಯ ಹೊನ್ನಾಳಿಯಲ್ಲಿ ಸಬ್‌ಡಿವಿಜನ್ ಎ.ಸಿ. ಆಫೀಸ್ ಕಛೇರಿ ಕಟ್ಟಡಕ್ಕೆ ರೂ.1.00 ಕೋಟಿಗೆ ಕ್ರಿಯಾ ಯೋಜನೆ ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದುವರೆಗೂ ಅನುದಾನ ಬಿಡುಗಡೆಯಾಗಿರುವುದಿಲ್ಲ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳು ಸಭಾಧ್ಯಕ್ಷರನ್ನು ಕೋರಿದರು.
3. ದಾವಣಗೆರೆ ಜಿಲ್ಲೆಯ ತ್ಯಾವಣಿಗೆ ಗ್ರಾಮದಲ್ಲಿ ಪಶುಪಾಲನಾ ಆಸ್ಪತ್ರೆ ನಿರ್ಮಾಣಕ್ಕೆ ಸರ್ಕಾರಿ ಜಾಗ ಮಂಜೂರು ಮಾಡಬೇಕಾಗಿದ್ದು, ನೀರಾವರಿ ಇಲಾಖೆಗೆ ಸಂಬಂಧಪಟ್ಟ ಜಮೀನು ಬಹಳ ಇದ್ದು, ಅದರಲ್ಲಿ 100*100 ಜಮೀನನ್ನು ಪಶುಪಾಲನಾ ಇಲಾಖೆಗೆ ಹಸ್ತಾಂತರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದ್ದರೂ ಇದುವರೆಗೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳು ಸಭಾಧ್ಯಕ್ಷರನ್ನು ಕೋರಿದರು.
4. ದಾವಣಗೆರೆ ನಗರದಲ್ಲಿ ರಂಗಮಂದಿರ ನಿರ್ಮಾಣಕ್ಕೆ (ಸೌಂಡ್‌ಪ್ರೂಫ್ ಮಾಡಲು) ರೂ.5.00 ಕೋಟಿಗೆ ಕ್ರಿಯಾ ಯೋಜನೆ ತಯಾರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಇದುವರೆಗೂ ಅನುದಾನ ಬಿಡುಗಡೆಯಾಗಿರುವುದಿಲ್ಲ, ಈ ಬಗ್ಗೆ ಸೂಕ್ತ ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳು ಸಭಾಧ್ಯಕ್ಷರನ್ನು ಕೋರಿದರು. ಸಭಾಧ್ಯಕ್ಷರು ಅಂದಾಜು ಪಟ್ಟಿಯನ್ನು ಮರುಪರಿಶೀಲಿಸಿ, ಪರಿಷ್ಕೃತ ಪ್ರಸ್ತಾವನೆ ಸಿದ್ಧಪಡಿಸಿ ಸಲ್ಲಿಸಲು ಸೂಚಿಸಿದರು.

**(ಕ್ರಮ: ಸಂಬಂಧಪಟ್ಟ ಅಧಿಕಾರಿಗಳು)**

**4. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ:–** ದಾವಣಗೆರೆ ಜಿಲ್ಲೆಯ ಜಗಳೂರು ತಾಲ್ಲೂಕಿನಲ್ಲಿ ಸದರಿ ಯೋಜನೆಯಡಿ ಲೇಬರ್ ಓರಿಯೆಂಟೆಡ್ ಕಾಮಗಾರಿಗಳನ್ನೇ ಹೆಚ್ಚಾಗಿ ತೆಗೆದುಕೊಳ್ಳಲು, ಪ್ರತಿ ದಿನ ಕೈಗೊಳ್ಳಲಾದ ಕಾಮಗಾರಿಗಳ ಛಾಯಾ ಚಿತ್ರವನ್ನು ಅಪ್‌ಲೋಡ್ ಮಾಡುವಂತೆ, 60:40ನ್ನು 90:10 ಮಾಡಲು ಪ್ರಯತ್ನಿಸಲಾಗುತ್ತಿದೆ. ಈ ಯೋಜನೆಯಡಿ ಹಣ ದುರುಪಯೋಗ ಮತ್ತು ಕಳಪೆ ಕಾಮಗಾರಿ ಕೈಗೊಂಡ 5 ಜನರನ್ನು ಅಮಾನತ್ತು ಮಾಡಲಾಗಿದೆ. ಇತ್ತೀಚೆಗೆ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಗ್ರಾಮ ಪಂಚಾಯಿತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗಿದೆ, ಇದರಲ್ಲಿ ಭಾಗಿಯಾದ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಗಳ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್ ಇವರು ಸಭಾಧ್ಯಕ್ಷರ ಗಮನಕ್ಕೆ ತಂದರು. ಹಣ ದುರುಪಯೋಗ ಮತ್ತು ಕಳಪೆ ಕಾಮಗಾರಿ ಕೈಗೊಂಡಂತಹ ಹೊರಗುತ್ತಿಗೆ ಆಧಾರದ ಸಿಬ್ಬಂದಿಯ ಮೇಲೂ ಸಹ ಕ್ರಿಮಿನಲ್ ಮೊಕದ್ದಮೆಯನ್ನು ಹೂಡುವಂತೆ, ಸದರಿ ಯೋಜನೆಯಡಿ ಶಾಲಾ ಕಾಂಪೌಡು ಹಾಗೂ ಶಾಲಾ ಶೌಚಾಲಯಗಳ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತೆ ಸಭಾಧ್ಯಕ್ಷರು ಇಲಾಖಾಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ: ಉಪಕಾರ್ಯದರ್ಶಿ, ಜಿ.ಪಂ., ದಾವಣಗೆರೆ.)**

**5. ಸ್ವಚ್ಛ ಭಾರತ್ ಮಿಷನ್:-** ಇಲಾಖೆಯ ಪ್ರಗತಿಯನ್ನು ಪರಿಶೀಲಿಸಲಾಯಿತು. ಘನ ತ್ಯಾಜ್ಯ ನಿರ್ವಹಣಾ ಘಟಕ 72 ಗುರಿ ಇದ್ದು, ಅದರಲ್ಲಿ 17 ಘಟಕಗಳಿಗೆ ಸರ್ಕಾರದಿಂದ ಡಿ.ಪಿ.ಆರ್. ಅನುಮೋದನೆ ನೀಡಲಾಗಿರುತ್ತದೆ, ಎಲ್ಲಾ ಗ್ರಾಮ ಪಂಚಾಯತಿಯಲ್ಲಿಯೂ ಘನ ತ್ಯಾಜ್ಯ ನಿರ್ವಹಣಾ ಘಟಕವನ್ನು ಮಾಡಬೇಕೆಂದು ಸರ್ಕಾರದ ಆದೇಶ ಬಂದಿರುವುದಾಗಿ, ಕೆಲವು ಗ್ರಾಮ ಪಂಚಾಯತಿಗಳಲ್ಲಿ ಜಾಗದ ಸಮಸ್ಯೆ ಇರುವುದಾಗಿ ಸಭೆಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಭೆಗೆ ತಿಳಿಸಿದರು. ಮುಂದಿನ ದಿನಗಳಲ್ಲಿ ಘನ ತ್ಯಾಜ್ಯ ನಿರ್ವಹಣೆ ಕೆಲಸ ತುಂಬಾ ಕಷ್ಟಕರವಾಗಲಿರುವುದರಿಂದ, ಸಾಧ್ಯವಾದಷ್ಟು ಹೆಚ್ಚಿನ ಗಮನಹರಿಸಿ, ವಿಶೇಷ ಕಾಳಜಿ ವಹಿಸಿ, ಘಟಕಗಳನ್ನು ನಿರ್ವಹಿಸುವಂತೆ, ಜಾಗದ ಸಮಸ್ಯೆ ಇರುವ ಕಡೆ ಜಿಲ್ಲಾಧಿಕಾರಿಗಳಿಂದ ಜಾಗವನ್ನು ಪಡೆದು ಕ್ರಮ ಜರುಗಿಸುವಂತೆ ಸಭಾಧ್ಯಕ್ಷರು ಸೂಚಿಸಿದರು.

(**ಕ್ರಮ: ಯೋಜನಾ ನಿರ್ದೇಶಕರು, ಜಿ.ಪಂ., ದಾವಣಗೆರೆ.**)

**6. ಕೃಷಿ ಇಲಾಖೆ:** ಇಲಾಖೆಯ ಪ್ರಗತಿಯನ್ನು ಪರಿಶೀಲಿಸಲಾಯಿತು. ಸಾವಯವ ಕೃಷಿಗೆ ಉತ್ತೇಜನ ನೀಡಿ ರೈತರಿಗೆ ಈ ಬಗ್ಗೆ ಹೆಚ್ಚಿನ ಅರಿವು ಮೂಡಿಸಬೇಕು. ಇದಕ್ಕೆ ಹಾಕುವ ಬಂಡವಾಳ ಕಡಿಮೆ ಇದ್ದು, ಲಾಭವನ್ನು ಗಳಿಸಬಹುದಾದ ಯೋಜನೆ ಇದಾಗಿದ್ದು, ಸಾವಯವ ಬೀಜ ಅಂದರೆ ಗೋಧಿ, ಜೋಳ, ನವಧಾನ್ಯಗಳು, ಹಣ್ಣು, ತರಕಾರಿ ಇವುಗಳಿಗೆ ಉತ್ತಮ ಬೇಡಿಕೆ ಇದ್ದು, ಇವುಗಳನ್ನು ಬೆಳೆಯಲು ರೈತರಿಗೆ ತಿಳಿಸಬೇಕೆಂದು ಸಭಾಧ್ಯಕ್ಷರು ಇಲಾಖಾಧಿಕಾರಿಗಳಿಗೆ ಸೂಚಿಸಿದರು. ಸಾವಯವ ಕೃಷಿಯನ್ನು ಮಾಡಲು ರೈತರು ಮುಂದೆ ಬರುತ್ತಿಲ್ಲ ಎಂದು ಇಲಾಖಾಧಿಕಾರಿಗಳು ಸಭೆಯ ಗಮನಕ್ಕೆ ತಂದರು. ರೈತ ಉತ್ತಮ ಬೆಳೆಯನ್ನು ಬೆಳೆಯಬೇಕು ಎಂದು ಸಾಲ ಮಾಡಿ ಬೀಜ ಮತ್ತು ಗೊಬ್ಬರವನ್ನು ಹಾಕಿ ಬೆಳೆಯುತ್ತಾನೆ. ಉತ್ತಮ ಬೆಳೆಯು ಬಂದಾಗ ದರ ಕಡಿಮೆಯಾಗಿ, ಮಾಡಿದ ಸಾಲವನ್ನು ಸಹ ತೀರಿಸಲಾಗದೇ ಕಂಗಾಲಾದ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಇದನ್ನು ತಪ್ಪಿಸಲು ಹೆಚ್ಚು ಸಾವಯವ ಕೃಷಿಯನ್ನು ಬೆಳೆಯಲು ರೈತರಿಗೆ ಉತ್ತೇಜನ ನೀಡಬೇಕೆಂದು ಹಾಗೂ ಇಲಾಖೆಯಿಂದ ಸಹಾಯಧನ ರೂಪದಲ್ಲಿ ನಿರ್ಮಿಸಲಾಗುತ್ತಿರುವ ಕೃಷಿ ಹೊಂಡದಲ್ಲಿ ಬಿದ್ದು ಸತ್ತವರ ಸಂಖ್ಯೆ ಜಾಸ್ತಿಯಾಗಿರುತ್ತದೆ. ಅದಕ್ಕೆ ಉಪಯೋಗಿಸುತ್ತಿರುವ ಪ್ಲಾಸ್ಟಿಕ್ ಕವರು ಜಾರುತ್ತಿರುವುದರಿಂದ ಬಿದ್ದ ವ್ಯಕ್ತಿ ಮೇಲೆ ಬರಲು ಸಾಧ್ಯವೇ ಇಲ್ಲ, ಒಂದು ವೇಳೆ ಈಜಲು ಬರುತ್ತಿದ್ದರೂ ಎಷ್ಟು ಹೊತ್ತು ಈಜಲು ಸಾಧ್ಯ, ಆದ್ದರಿಂದ ಈಗ ನಿರ್ಮಿಸಲಾಗುತ್ತಿರುವ ಕೃಷಿ ಹೊಂಡದ design change ಮಾಡಲು ಸಭಾಧ್ಯಕ್ಷರು ಇಲಾಖಾಧಿಕಾರಿಗಳಿಗೆ ಸೂಚಿಸಿದರು.

(**ಕ್ರಮ: ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ದಾವಣಗೆರೆ.**)

**7. ಸಾಮಾಜಿಕ ಅರಣ್ಯ:** ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸುಮಾರು 25 ಜನರಿಗೆ 8-9 ತಿಂಗಳಿಂದ ಗೌರವ ಧನದ ತೊಂದರೆಯಾಗಿರುತ್ತದೆ ಎಂದು ಉಪ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಂದರು. ಸಂಬಂಧಪಟ್ಟ ಇಲಾಖಾ ಮುಖ್ಯಾಧಿಕಾರಿಗಳಿಗೆ ತಮ್ಮನ್ನು ಸಂಪರ್ಕ ಮಾಡಲು ತಿಳಿಸಬೇಕೆಂದು ಸಭಾಧ್ಯಕ್ಷರು ಸೂಚಿಸಿದರು.

(**ಕ್ರಮ: ಸಾಮಾಜಿಕ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ, ದಾವಣಗೆರೆ.**)

**8. ಅಭಿವೃದ್ಧಿ ನಿಗಮಗಳು:** ಎಲ್ಲಾ ನಿಗಮಗಳ ವಿವಿಧ ಯೋಜನೆಗಳಾದ ಗಂಗಾ ಕಲ್ಯಾಣ ಮುಂತಾದವುಗಳಲ್ಲಿ ಇದುವರೆಗೆ ಫಲಾನುಭವಿಗಳ ಆಯ್ಕೆ ಆಗದೇ ಇರುವ ನಿಗಮಗಳು ಸಂಬಂಧಪಟ್ಟ ಶಾಸಕರುಗಳಿಂದ ಕೂಡಲೇ ಆಯ್ಕೆ ಪಟ್ಟಿಯನ್ನು ಪಡೆಯುವಂತೆ, ಅದು ಸಾಧ್ಯವಾಗದೇ ಇದ್ದಲ್ಲಿ, ಜಿಲ್ಲಾಧಿಕಾರಿಗಳು

ಸಹ ಆಯ್ಕೆ ಪಟ್ಟಿಯನ್ನು ಪ್ರಕಟಿಸಬಹುದಾಗಿದ್ದು, ಯಾವುದಕ್ಕೂ ಕೂಡಲೇ ಕ್ರಮ ಜರುಗಿಸಲು ಇಲಾಖಾಧಿಕಾರಿಗಳಿಗೆ ಸಭಾಧ್ಯಕ್ಷರು ಸೂಚಿಸಿದರು.

**(ಕ್ರಮ: ಜಿಲ್ಲಾ ಅಧಿಕಾರಿಗಳು, 1. ಡಿ.ದೇವರಾಜ್ ಅರಸ್ ಅಭಿವೃದ್ಧಿ ನಿಗಮ, 2. ಕರ್ನಾಟಕ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ, 3. ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, 4. ನಿಜ ಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ)**

**9. ಕೌಶಲ್ಯಾಭಿವೃದ್ಧಿ:-** ಕೇಂದ್ರ ಸರ್ಕಾರದಿಂದ ನಡೆಸಲಾಗುತ್ತಿರುವ ಕೌಶಲ್ಯಾಭಿವೃದ್ಧಿ ತರಬೇತಿಗಳಲ್ಲಿ ಹಳೆಯ ಕಾಲದ ತರಬೇತಿಗಳನ್ನೇ ಮುಂದುವರೆಸದೆ ಹೊಸದಾಗಿ ಸೋಲಾರ್ ಲ್ಯಾಂಪ್, ಸೋಲಾರ್ ಬ್ಯಾಟರಿ, ಸೋಲಾರ್ ಮಿಷನ್, ಮುಂತಾದವುಗಳನ್ನು ದುರಸ್ಥಿಪಡಿಸುವ ಹೊಸ ಹೊಸ ಸಮಾಜಕ್ಕೆ ಉಪಯುಕ್ತವಾಗುವ ರೀತಿಯಲ್ಲಿ ತರಬೇತಿಯನ್ನು ನಡೆಸಿದ್ದಲ್ಲಿ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಕ್ರಮ ಜರುಗಿಸಲು ಸಭಾಧ್ಯಕ್ಷರು ಇಲಾಖಾಧಿಕಾರಿಗಳಿಗೆ ಸೂಚಿಸಿದರು.

**(ಕ್ರಮ:ಕೌಶಲ್ಯಾಭಿವೃದ್ಧಿ ಅಧಿಕಾರಿಗಳು, ದಾವಣಗೆರೆ)**

**10. ಕರ ವಸೂಲಾತಿ:-** ತೆರಿಗೆ ಸಂಗ್ರಹಣ ಕಾರ್ಯಕ್ರಮವು ಮಂದಗತಿಯಲ್ಲಿ ಸಾಗುತ್ತಿದ್ದು, ಬಾಕಿ ವಸೂಲಾತಿಯೂ ಬಹಳ ಇರುತ್ತದೆ. ಗ್ರಾಮೀಣಾಭಿವೃದ್ಧಿ ಹಾಗೂ ಜಿಲ್ಲಾ ಅಭಿವೃದ್ಧಿಯೂ ತೆರಿಗೆ ಸಂಗ್ರಹವನ್ನೇ ಆಧರಿಸಿರುವುದರಿಂದ ಈ ಬಗ್ಗೆ ಹೆಚ್ಚಿನ ನಿಗಾ ವಹಿಸುವಂತೆ ಹಾಗೂ ತೆರಿಗೆ ಸಂಗ್ರಹಣೆಯನ್ನು ಚೆನ್ನಾಗಿ ಮಾಡುತ್ತಿರುವ ಬಿಲ್ ಕಲೆಕ್ಟರ್‌ಗಳಿಗೆ ಪ್ರಶಸ್ತಿ, ಪ್ರೋತ್ಸಾಹ ನೀಡಿ, ಗೌರವಿಸಿದ್ದಲ್ಲಿ ಅದು ಮಾದರಿಯಾಗಿ ಆ ನಿಟ್ಟಿನಲ್ಲಿ ಬಿಲ್ ಕಲೆಕ್ಟರ್‌ಗಳು ತೆರಿಗೆ ಸಂಗ್ರಹಣೆಗೆ ಆಸಕ್ತಿವಹಿಸಿ ಮಾಡುತ್ತಾರೆ ಎಂದು ಸಭಾಧ್ಯಕ್ಷರು ಸಲಹೆ ನೀಡಿದರು.

**(ಕ್ರಮ: ಉಪ ಕಾರ್ಯದರ್ಶಿ, ಜಿ.ಪಂ.ದಾವಣಗೆರೆ)**

ಅಪರ ಜಿಲ್ಲಾಧಿಕಾರಿಯವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

(ಎಸ್.ಆರ್. ಉಮಾಶಂಕರ್, ಭಾ.ಆ.ಸೇ.,)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ)
ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 30.01.2020 ರಂದು ಜರುಗಿದ ಉಡುಪಿ ಜಿಲ್ಲಾ ಮಟ್ಟದ ಅಧಿಕಾರಿಗಳೊಡನೆ ಜಿಲ್ಲಾಭಿವೃದ್ಧಿ, ಮರಳು ಸಮಸ್ಯೆ ಹಾಗೂ ನೆರೆ ಪರಿಹಾರ ಬಗ್ಗೆ ಪರಿಶೀಲನಾ ಸಭೆಯ ನಡವಳಿ:**

**ಸಮಯ: ಅಪರಾಹ್ನ 2.00 ಗಂಟೆ** **ಸ್ಥಳ: ಜಿಲ್ಲಾಧಿಕಾರಿ ಕಛೇರಿ ಸಭಾಂಗಣ**

**ಉಪಸ್ಥಿತರು:**

1) ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು
2) ಶ್ರೀ ಜಿ.ಜಗದೀಶ, ಭಾ.ಆ.ಸೇ. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
3) ಶ್ರೀ ಬಿ.ಸದಾಶಿವ ಪ್ರಭು. ಕ.ಆ.ಸೇ. ಅಪರ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
4) ಶ್ರೀ ಕೆ.ರಾಜು, ಕ.ಆ.ಸೇ, ಸಹಾಯಕ ಕಮೀಷನರು, ಕುಂದಾಪುರ
ಹಾಗೂ ಹಾಜರಿಯಲ್ಲಿ ಸಹಿ ಮಾಡಿದವರು

**********

ಸಭೆಯ ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿಯವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು, ಜಿಲ್ಲಾಧಿಕಾರಿಯವರನ್ನು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಯವರನ್ನು ಸ್ವಾಗತಿಸಿ ಪರಿಶೀಲನಾ ಸಭೆಯನ್ನು ನಡೆಸಿಕೊಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು.

ಮೊದಲಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ದಿನಾಂಕ 26.12.2019 ರಂದು ಮಾನ್ಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸೂಚಿಸಿದ ಅಂಶಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಬಗ್ಗೆ ಪರಿಶೀಲನೆಯನ್ನು ನಡೆಸಿದರು.

**ಸಭೆಯಲ್ಲಿ ಚರ್ಚಿಸಲಾದ ಪ್ರಮುಖ ವಿಷಯಗಳು:**

- ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಸಂಭವಿಸಿದ ನೆರೆಯಿಂದಾಗಿ ಹಾನಿಯಾಗಿರುವ A Category 45 ಮತ್ತು B Category 144 ಒಟ್ಟು 189 ಸಂತ್ರಸ್ಥರಿಗೆ ಮನೆಗಳ ಪುನರ್ ನಿರ್ಮಾಣದ ಬಗ್ಗೆ ಅವಕಾಶವಿದ್ದು, ಈ ಪೈಕಿ ಒಟ್ಟು 87 ಜನರು ಮನೆ ಪುನರ್ ನಿರ್ಮಾಣಕ್ಕೆ ಆಸಕ್ತಿ ಹೊಂದಿದ್ದಾರೆ. ಅದರಲ್ಲಿ 17 ಮನೆಗಳ ಪುನರ್ ನಿರ್ಮಾಣ ಕಾಮಗಾರಿ ಪ್ರಾರಂಭವಾಗಿದೆ. ಬಾಕಿ ಇರುವ 70 ಮನೆಗಳ ಪುನರ್ ನಿರ್ಮಾಣ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲು ಎಲ್ಲಾ ತಹಶೀಲ್ದಾರರಿಗೆ ಸೂಚಿಸಿದರು. ಸಂತ್ರಸ್ತರಿಗೆ ಈ ಬಗ್ಗೆ ಮನೆಗಳ ಪುನರ್ ನಿರ್ಮಾಣ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲು ಅಂತಿಮ ನೋಟೀಸನ್ನು ನೀಡುವಂತೆ ಸೂಚಿಸಿದರು, ಒಂದು ವೇಳೆ ಸಂತ್ರಸ್ತರಿಗೆ ಮನೆ ಪುನರ್ ನಿರ್ಮಾಣ ಕಾರ್ಯದಲ್ಲಿ ಆಸಕ್ತಿ ಇಲ್ಲದಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಸಂತ್ರಸ್ತರಿಂದ ಮನೆ ಪುನರ್ ನಿರ್ಮಾಣ ಮಾಡದಿರುವ ಬಗ್ಗೆ ದೃಢೀಕರಣವನ್ನು ಪಡೆಯುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು. ನೆರೆ ಬಾಧಿತ ಮನೆಗಳ ರಿಪೇರಿ ಸಂಬಂಧವಾಗಿ ಸರಕಾರದಿಂದ ಹೊಸ ಆದೇಶವಾಗಿದ್ದು, ಅದರಂತೆ ಪುನರ್ ನಿರ್ಮಾಣ ಮಾಡದೇ , ದುರಸ್ತಿ ಪಡಿಸಿರುವ / ದುರಸ್ತಿಪಡಿಸುವ ಮನೆಗಳಿಗೆ ರೂ. 3.00 ಲಕ್ಷ ಅನುದಾನ ಸರಕಾರದಿಂದ ನಿಗದಿಪಡಿಸಿದೆ. ಅದರಂತೆ ರಾಜೀವ್ ಗಾಂಧಿ ವಸತಿ ಯೋಜನೆ (RGHCL) ತಂತ್ರಾಂಶದಲ್ಲಿ ಪುನರ್ ನಿರ್ಮಾಣ

* ಮತ್ತು ರಿಪೇರಿ ಎಂಬ ಆಯ್ಕೆ ಇದ್ದು, ಅದನ್ನು ಆಯ್ಕೆ ಮಾಡಬೇಕಾಗಿರುತ್ತದೆ. ರಿಪೇರಿ ಎಂದು ಆಯ್ಕೆ ಮಾಡಿದಲ್ಲಿ ಫಲಾನುಭವಿಗಳಿಗೆ ರೂ. 2.00 ಲಕ್ಷ (ಒಟ್ಟು ರೂ. 3.00 ಲಕ್ಷ) ಪಾವತಿಸಲು ಆದೇಶವಾಗುತ್ತದೆ. ಆದರೆ ವಾಸ್ತವಿಕವಾಗಿ ಹೆಚ್ಚಿನವರು, ನಾವು ನೀಡಿರುವ ರೂ. 1.00 ಲಕ್ಷ ಅನುದಾನದಲ್ಲಿಯೇ ಮನೆಗಳನ್ನು ರಿಪೇರಿ ಮಾಡಿಸಿ ವಾಸ್ತವ್ಯವಿದ್ದಾರೆ. ಅವರಿಗೆ ಪುನ: ರೂ. 2.00 ಲಕ್ಷ ಪಾವತಿಸುವುದು ಸರಿಯಲ್ಲವೆಂದು ಜಿಲ್ಲೆಯ ತಹಶೀಲ್ದಾರರುಗಳು ಗಮನಕ್ಕೆ ತಂದಾಗ ಮನೆ ರಿಪೇರಿಗೆ ಎಷ್ಟು ಹಣ ಖರ್ಚಾಗಿದೆ ಎಂಬ ವಾಸ್ತವಿಕ ಚಿತ್ರಣ 3 ದಿನದೊಳಗೆ ಮಂಡಿಸಲು ತಿಳಿಸಿದರು.

**(ಕ್ರಮ : ತಹಶೀಲ್ದಾರರು ಉಡುಪಿ, ಕುಂದಾಪುರ, ಕಾರ್ಕಳ, ಬ್ರಹ್ಮಾವರ, ಬೈಂದೂರು, ಕಾಪು ಹೆಬ್ರಿ)**

* ಕಳೆದ ಬೇಸಿಗೆಯಲ್ಲಿ ಟ್ಯಾಂಕರ್ ಮುಖಾಂತರ ಕುಡಿಯುವ ನೀರು ಸರಬರಾಜು ಮಾಡಿದ ಪ್ರದೇಶಗಳಲ್ಲಿ ಶಾಶ್ವತವಾದ ನೀರಿನ ವ್ಯವಸ್ಥೆಯನ್ನು ಮಾರ್ಚ್ ಅಂತ್ಯದೊಳಗೆ ಕಲ್ಪಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ/ ಕಾರ್ಯನಿರ್ವಾಹಕ ಇಂಜಿನಿಯರ್ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ )**

* ಪ್ರಾಕೃತಿಕ ವಿಕೋಪದಡಿ ವಿವಿಧ ಕಾಮಗಾರಿಗಳಿಗೆ ನೀಡಲಾಗಿರುವ ಅನುದಾನಗಳ ಸಮರ್ಪಕವಾದ ಬಳಕೆಯ ಬಗ್ಗೆ ಚರ್ಚಿಸಲಾಯಿತು. ಆದರಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಗಿ, ಪ್ರಾಕೃತಿಕ ವಿಕೋಪದಡಿ ಸದ್ರಿ ಇಲಾಖೆಗೆ ಒಟ್ಟು 2018-19 ನೇ ಸಾಲಿಗೆ ಅಂದಾಜು ಮೊತ್ತ ರೂ.606.47 ಲಕ್ಷದ 259 ಕಾಮಗಾರಿಗಳು ಮಂಜೂರಾಗಿದ್ದು, ಅವುಗಳಲ್ಲಿ 91 ಕಾಮಗಾರಿಗಳು ಪ್ರಗತಿಯಲ್ಲಿದ್ದು, 38 ಕಾಮಗಾರಿಗಳು ಪೂರ್ಣಗೊಂಡಿರುವುದಾಗಿ ಹಾಗೂ 2019-20 ರಲ್ಲಿ 494 ಕಾಮಗಾರಿಗಳು ಮಂಜೂರಾಗಿದ್ದು, 105 ಕಾಮಗಾರಿಗಳು ಪೂರ್ಣಗೊಂಡಿದ್ದು, 228 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ 161 ಬಾಕಿ ಉಳಿದಿರುವ ಎಲ್ಲಾ ಕಾಮಗಾರಿಗಳನ್ನು ತ್ವರಿತವಾಗಿ ಪ್ರಾರಂಭಿಸಿ ಫೆಬ್ರವರಿಯೊಳಗೆ ಮುಕ್ತಾಯಗೊಳಿಸುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ ಇವರು ತಿಳಿಸಿದ್ದು, ಸದ್ರಿ ಎಲ್ಲಾ ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಹಾಗೂ ಪೂರ್ಣಗೊಂಡ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಗಾಗಿ ಸಲ್ಲಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ )**

- ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಗಿ, ಪ್ರಾಕೃತಿಕ ವಿಕೋಪದಡಿ ಲೋಕೋಪಯೋಗಿ ಇಲಾಖೆಗೆ ಒಟ್ಟು ರೂ.15.77 ಕೋಟಿಯ 34 ಕಾಮಗಾರಿಗಳು ಮಂಜೂರಾಗಿದ್ದು, ಅದರಲ್ಲಿ 22 ಕಾಮಗಾರಿಗಳು ಮುಗಿದಿದ್ದು, 7 ಕಾಮಗಾರಿಗಳು ಪ್ರಗತಿಯಲ್ಲಿದೆ. 5 ಕಾಮಗಾರಿಗಳು ಟೆಂಡರ್ ಹಂತದಲ್ಲಿರುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಡುಪಿ ಇವರು ತಿಳಿಸಿದ್ದು, ಈ ಬಗ್ಗೆ ಎಲ್ಲಾ ಕಾಮಗಾರಿಗಳನ್ನು ಪೆಬ್ರವರಿ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು. ಹಾಗೂ ಪೆರ್ಡೂರು ಬೈರಂಪಳ್ಳಿ ಸೇತುವೆ ಕಾಮಗಾರಿಯ ಬಗ್ಗೆ ಚರ್ಚಿಸಲಾಗಿ, ಟೆಂಡರ್ ಪ್ರಗತಿಯಲ್ಲಿದ್ದು ಫೆಬ್ರವರಿ 3ನೇ ತಾರೀಕಿಗೆ ಟೆಂಡರ್ ಕಾರ್ಯ ಮುಗಿಯುವುದಾಗಿ, ನಂತರ ಕಾಮಗಾರಿ ಪ್ರಾರಂಭಿಸುವುದಾಗಿ ತಿಳಿಸಿದರು. ಈವರೆಗೆ ರೂ. 2.50 ಕೋಟಿ ಅನುದಾನ ಪಾವತಿಯಾಗಿದ್ದು, ಇನ್ನೂ ರೂ. 8.00 ಕೋಟಿ ಅನುದಾನ ಬಿಡುಗಡೆಗೆ ಬಾಕಿ ಇರುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಡುಪಿ ಇವರು ತಿಳಿಸಿದರು. ಈ ಬಗ್ಗೆ ಶೀಘ್ರ ಕ್ರಮವಹಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಡುಪಿ )**

- ನಿರ್ಮಿತಿ ಕೇಂದ್ರ ಉಡುಪಿ ಇಲ್ಲಿನ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಗಿ, ಪ್ರಾಕೃತಿಕ ವಿಕೋಪ ಯೋಜನೆಯಡಿಯಲ್ಲಿ 2018-19 ನೇ ಸಾಲಿನ ಮಂಜೂರಾದ ಒಟ್ಟು 273 ಕಾಮಗಾರಿಗಳಲ್ಲಿ 101 ಕಾಮಗಾರಿಗಳು ಮುಕ್ತಾಯವಾಗಿದ್ದು,120 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ, 52 ಕಾಮಗಾರಿಗಳು ಪ್ರಾರಂಭವಾಗಬೇಕಾಗಿರುವುದಾಗಿ, 2019-20 ನೇ ಸಾಲಿನಲ್ಲಿ ಮಂಜೂರಾದ ಒಟ್ಟು 201 ಕಾಮಗಾರಿಗಳಲ್ಲಿ 13 ಕಾಮಗಾರಿಗಳು ಮುಕ್ತಾಯವಾಗಿದ್ದು, 71 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಯೋಜನಾ ಅಭಿಯಂತರರು ನಿರ್ಮಿತಿ ಕೇಂದ್ರ ಇವರು ತಿಳಿಸಿದರು. ಈ ಬಗ್ಗೆ ಎಲ್ಲಾ ಕಾಮಗಾರಿಗಳನ್ನು ಪೆಬ್ರವರಿ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ ಉಡುಪಿ)**

- ಕೆ.ಆರ್.ಐ.ಡಿ.ಎಲ್ ಗೆ ಸಂಬಂಧಿಸಿದ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಗಿ, ಲೆಕ್ಕಶೀರ್ಷಿಕೆ 50-54 ರಡಿ ಒಟ್ಟು 127 ಕಾಮಗಾರಿಗಳು ಜನವರಿ ಮಾಹೆಯಲ್ಲಿ ಮಂಜೂರಾಗಿರುವುದಾಗಿ, ಕಾರ್ಯನಿರ್ವಾಹಕ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್ ಇವರು ತಿಳಿಸಿದ್ದು, ಈ ಬಗ್ಗೆ ಶೀಘ್ರವಾಗಿ ಕಾಮಗಾರಿಗಳನ್ನು ಪ್ರಾರಂಭಿಸಿ ಮುಕ್ತಾಯಗೊಳಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಕಾರ್ಯನಿರ್ವಾಹಕ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್, ಉಡುಪಿ)**

* ಜಿಲ್ಲೆಯಲ್ಲಿ ಜನವರಿ ಮಾಹೆಯಲ್ಲಿ 5 ಮಲೇರಿಯಾ ಪ್ರಕರಣಗಳು, 21 ಡೆಂಗ್ಯೂ ಪ್ರಕರಣಗಳು, ಹೆಚ್1 ಎನ್ 1 ನ 20 ಪ್ರಕರಣಗಳು , ಚಿಕನ್ ಗುನ್ಯ 1 ಪ್ರಕರಣಗಳು ಪತ್ತೆಯಾಗಿರುವುದಾಗಿ ಹಾಗೂ ಮಂಗ ಸತ್ತಿರುವ 1 ಪ್ರಕರಣ ಪತ್ತೆಯಾಗಿರುವುದಾಗಿ, ಸದರಿ ಪ್ರಕರಣದ sample ಅನ್ನು test ಗೆ ಕಳುಹಿಸಿರುವುದಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಶೀಘ್ರವಾಗಿ ಅದರ ವರದಿಯನ್ನು ಪಡೆದು analyze ಮಾಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು. ಸಾಂಕ್ರಾಮಿಕ ರೋಗಗಳ ತೀವ್ರ ನಿಗಾವಹಿಸಲು ಹಾಗೂ ಯಾವುದೇ ಪ್ರಕರಣಗಳು ಬಾರದಂತೆ ಕ್ರಮವಹಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಉಡುಪಿ)**

* ಜಿಲ್ಲಾ ಆಸ್ಪತ್ರೆ ಉಡುಪಿ ಇಲ್ಲಿ 299 ಉಪಕರಣಗಳು ಕಾರ್ಯನಿರ್ವಹಿಸುತ್ತಿದ್ದು, 40 ಉಪಕರಣಗಳು ದುರಸ್ಥಿಯಾಗಬೇಕಾಗಿರುತ್ತದೆ. ಮಾನ್ಯ ಆಯುಕ್ತರ ಆದೇಶದಂತೆ ಸರಕಾರಿ ಆಸ್ಪತ್ರೆಗಳಲ್ಲಿರುವ ವೈದ್ಯಕೀಯ ಉಪಕರಣಗಳ ಎ.ಎಂ.ಸಿ/ಸಿ.ಎಂ.ಸಿಯ ನಿರ್ವಹಣೆಯನ್ನು ಮೆ:ಟಿ.ಪಿ.ಎಸ್. ಲಾಜಿಸ್ಟಿಕ್ಸ್ ಸರ್ವಿಸಸ್ ಸಂಸ್ಥೆಗೆ ವಹಿಸಿರುವುದರಿಂದ ಈ ಸಂಸ್ಥೆಯ ಮುಖಾಂತರ ಉಪಕರಣಗಳನ್ನು ದುರಸ್ಥಿ ಮಾಡಿಸಲಾಗುವುದಾಗಿ ಜಿಲ್ಲಾ ಶಸ್ತ್ರಚಿಕಿತ್ಸಕರು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಮೂರನೇ ಸಂಸ್ಥೆಯಿಂದ ತಪಾಸಣೆಯನ್ನು ಸಹ ನಡೆಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಜಿಲ್ಲಾ ಶಸ್ತ್ರ ಚಿಕಿತ್ಸಕರು ಉಡುಪಿ ಇವರಿಗೆ ಸೂಚಿಸಿದರು.

**(ಕ್ರಮ: ಜಿಲ್ಲಾ ಶಸ್ತ್ರ ಚಿಕಿತ್ಸಕರು, ಉಡುಪಿ/ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಉಡುಪಿ ಜಿಲ್ಲೆ)**

* ರಾಷ್ಟ್ರೀಯ ಹೆದ್ದಾರಿ ಸಮಸ್ಯೆಯ ಕುರಿತಂತೆ ಚರ್ಚಿಸಲಾಗಿ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇವರು ಸತತವಾಗಿ ಸಭೆಗೆ ಗೈರುಹಾಜರಾಗುತ್ತಿರುವ ಬಗ್ಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತೀವ್ರ ಅಸಮಧಾನವನ್ನು ವ್ಯಕ್ತಪಡಿಸಿ, ಜಿಲ್ಲಾಧಿಕಾರಿಯವರನ್ನು ಯೋಜನಾ ನಿರ್ದೇಶಕರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮಂಗಳೂರು ಇವರು ಭೇಟಿ ಮಾಡಿ ರಾಷ್ಟ್ರೀಯ ಹೆದ್ದಾರಿ ಸಮಸ್ಯೆಯ ಕುರಿತು ವಿವರಣೆಯನ್ನು ನೀಡುವಂತೆ ಹಾಗೂ ಪ್ರಗತಿಯ ಬಗ್ಗೆ ಚರ್ಚೆ ಮಾಡುವಂತೆ ಸಭೆಯಲ್ಲಿ ಹಾಜರಿದ್ದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮಂಗಳೂರು)**

- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ 2019-20 ನೇ ಸಾಲಿನ ಕ್ರಿಯಾಯೋಜನೆ ತಯಾರಿಸಿದ್ದು, ಗೇರು ಪ್ರದೇಶ ವಿಸ್ತರಣೆಗೆ ಜಿಲ್ಲೆಯಲ್ಲಿ ಒಟ್ಟು 54 ಜನ ರೈತರನ್ನು ಆಯ್ಕೆ ಮಾಡಲಾಗಿದ್ದು, 54 ಕಾಮಗಾರಿಗಳಿಗೆ ಒಟ್ಟು 27.56 ಹೆ.ಪ್ರದೇಶದಲ್ಲಿ ಗೇರು ಪ್ರದೇಶ ವಿಸ್ತರಣೆ ಕೈಗೊಳ್ಳಲು ಕ್ರಿಯಾಯೋಜನೆ ರೂಪಿಸಲಾಗಿರುವುದಾಗಿ ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ ಇವರು ಸಭೆಯಲ್ಲಿ ತಿಳಿಸಿದರು. NREGA (ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ) ಅನುದಾನದಿಂದ ಸದರಿ ಯೋಜನೆಗೆ ಅನುದಾನವನ್ನು ಪಾವತಿಸುವಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್/ ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ ಉಡುಪಿ)**

- ಶಿಕ್ಷಣಾ ಇಲಾಖೆಗೆ ಸಂಬಂಧಿಸಿದಂತೆ ಉಡುಪಿ ಜಿಲ್ಲೆಯಲ್ಲಿ 8 [KPS ]ಕರ್ನಾಟಕ ಪಬ್ಲಿಕ್ ಸ್ಕೂಲ್ ಇದ್ದು, ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು ಕರ್ನಾಟಕ ಪಬ್ಲಿಕ್ ಸ್ಕೂಲ್ ನ ಹೈಸ್ಕೂಲ್ ವಿಭಾಗದ ವಿದ್ಯಾರ್ಥಿಗಳಿಗೆ ಬೋಧನೆ ಮಾಡಬೇಕಾಗಿದ್ದು, ಸದ್ರಿಯವರು ತರಗತಿಗಳನ್ನು ತೆಗೆದುಕೊಳ್ಳದೇ ಇರುವುದರ ಬಗ್ಗೆ ಚರ್ಚಿಸಲಾಗಿ, ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರನ್ನು ಕರ್ನಾಟಕ ಪಬ್ಲಿಕ್ ಸ್ಕೂಲ್ ನ ಹೈಸ್ಕೂಲ್ ವಿಭಾಗದ ವಿದ್ಯಾರ್ಥಿಗಳಿಗೆ ಬೋಧನೆ ಮಾಡಲು ನಿಯೋಜಿಸುವ ಕುರಿತು ತಮ್ಮ ಇಲಾಖೆಯಲ್ಲಿ ಯಾವುದೇ ಮಾರ್ಗಸೂಚಿ ಇರುವುದಿಲ್ಲವಾಗಿ, ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ ಇವರು ತಿಳಿಸಿದ್ದು, ಈ ಬಗ್ಗೆ ಖುದ್ದು ಉಸ್ತುವಾರಿ ಕಾರ್ಯದರ್ಶಿಯವರು ಸರಕಾರದ ಹಂತದಲ್ಲಿ ಮಾರ್ಗಸೂಚಿ ಕಳುಹಿಸುವ ಬಗ್ಗೆ ಫೋನ್ ಮುಖಾಂತರ ಪದವಿ ಪೂರ್ವ ಇಲಾಖೆಯ ಮೇಲಾಧಿಕಾರಿಯವರೊಂದಿಗೆ ಚರ್ಚಿಸಿದ್ದು, ಸದರಿಯವರು ಸರಕಾರದಿಂದ ಈ ಬಗ್ಗೆ ಮಾರ್ಗಸೂಚಿಯನ್ನು ಹೊರಡಿಸುವುದಾಗಿ ತಿಳಿಸಿದರು.

**(ಕ್ರಮ : ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ)**

- ಹಿಂದಿನ ಸಭೆಯಲ್ಲಿ ಜಿಲ್ಲೆಯ ಎಲ್ಲಾ ಅಂಗನವಾಡಿಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳು ಇರುವ ಬಗ್ಗೆ ಹಾಗೂ ಅವುಗಳ ಸಮರ್ಪಕ ಕಾರ್ಯನಿರ್ವಹಣೆ ಮತ್ತು ಸರಕಾರದ ಎಲ್ಲಾ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ತಲುಪುತ್ತಿರುವ ಬಗ್ಗೆ ಹಾಗೂ ಅಲ್ಲಿನ ಸ್ವಚ್ಛತೆ, ಮಕ್ಕಳ ಆರೋಗ್ಯ, ಹಾಗೂ ಪೌಷ್ಟಿಕ ಆಹಾರಗಳು ಮಕ್ಕಳಿಗೆ ಸಮರ್ಪಕವಾಗಿ ಪೂರೈಕೆಯಾಗುತ್ತಿರುವ ಬಗ್ಗೆ ಮತ್ತು ಮಕ್ಕಳಿಗೆ ನೀಡುತ್ತಿರುವ ಆಹಾರದ ಗುಣಮಟ್ಟದ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಪ್ರತೀ ವಾರ ತಪಾಸಣೆಯನ್ನು ನಡೆಸಲು ನಿರ್ದೇಶಿಸಿರುವ ಬಗ್ಗೆ ಚರ್ಚಿಸಲಾಗಿ, 39 ಅಧಿಕಾರಿಗಳನ್ನು ನಿಯೋಜಿಸಿದ್ದು, ಈ ಬಗ್ಗೆ 22 ಅಧಿಕಾರಿಗಳು ಅಂಗನವಾಡಿಗಳ ಪರಿಶೀಲನೆ ನಡೆಸಿ ವರದಿಯನ್ನು ಸಲ್ಲಿಸಿರುವುದಾಗಿ, 17 ಅಧಿಕಾರಿಗಳು ವರದಿಗಳನ್ನು ನೀಡಿರುವುದಿಲ್ಲವಾಗಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವರು ಸಭೆಯಲ್ಲಿ

ತಿಳಿಸಿದ್ದು, ಅಂತಹ ಅಧಿಕಾರಿಗಳಿಂದ ಕೂಡಲೇ ವರದಿ ಪಡೆಯುವಂತೆ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು. ಹಾಗೂ ಈ ಬಗ್ಗೆ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಮಹಿಳಾ ಮತ್ತು ಮಕ್ಕಳ ಇಲಾಖೆಯ ಸಭೆಯನ್ನು ಕರೆದು ಪರಿಶೀಲನೆ ನಡೆಸುವಲ್ಲಿ ಕ್ರಮವಹಿಸಲು ಸೂಚಿಸಿದರು.

ಮುಂದಿನ ಸಭೆಯಲ್ಲಿ ಎಲ್ಲಾ ಅಧಿಕಾರಿಗಳು ಅಂಗನವಾಡಿಗಳ ತಪಾಸಣೆ ನಡೆಸಿದ ಬಗ್ಗೆ PPT ಯನ್ನು ತಯಾರಿಸಿ , ಸಭೆಯಲ್ಲಿ PPT Presentation ಮೂಲಕ ವಿವರಣೆಯನ್ನು ನೀಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ)**

- ಉಡುಪಿ ಜಿಲ್ಲೆಯಲ್ಲಿ ಪ್ರಸ್ತುತ 13 ಸಹಕಾರ ಸಂಘಗಳು ಸಮಾಪನೆಯಲ್ಲಿದ್ದು, ಈ ಪೈಕಿ 2 ಸಹಕಾರ ಸಂಘಗಳಲ್ಲಿ ಸ್ಥಿರಾಸ್ತಿ ಇರುತ್ತದೆ. ಹಾಗೂ 5 ಸಹಕಾರ ಸಂಘಗಳಲ್ಲಿ ಸರ್ಕಾರಿ ಷೇರು/ಸರ್ಕಾರಿ ಸಾಲ ಇರುತ್ತದೆ. ಸರ್ಕಾರಿ ಷೇರು/ಸಾಲ ಮನ್ನಾಕ್ಕೆ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾಪನೆ ಸಲ್ಲಿಸಿದ್ದು, ಎಲ್ಲಾ ಸಮಾಪನಾ ಸಹಕಾರ ಸಂಘಗಳ ಆಸ್ತಿ-ಜವಾಬ್ದಾರಿಯನ್ನು ಶೂನ್ಯಗೊಳಿಸಿ ನೊಂದಣಿ ರದ್ಧತಿಗಾಗಿ ಶೀಘ್ರ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮಕೈಗೊಳ್ಳುವಂತೆ ಎಲ್ಲಾ ಸಮಾಪನಾಧಿಕಾರಿಗಳಿಗೆ ಸೂಚಿಸಿರುವುದಾಗಿ ಸಹಕಾರ ಸಂಘಗಳ ಉಪನಿಬಂಧಕರು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಶೀಘ್ರ ಕ್ರಮ ವಹಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಸಹಕಾರಿ ಸಂಘಗಳ ಉಪನಿಂಬಂಧಕರು, ಉಡುಪಿ )**

- ನಗರಾಭಿವೃದ್ಧಿ ಇಲಾಖೆಯ ನಗರೋತ್ಥಾನ ಯೋಜನೆಯಲ್ಲಿ ಯಾವುದಾದರೂ ಉತ್ಕೃಷ್ಟವಾದ ಹಾಗೂ ಮಾದರಿ ಕೆಲಸವನ್ನು (Sea Walk or Tender Sure Road ಮಾದರಿಯಲ್ಲಿ) ಕೆಲಸವನ್ನು ಅನುಷ್ಠಾನಗೊಳಿಸುವುದರ ಮುಖಾಂತರ ಉಡುಪಿ ಜಿಲ್ಲೆಯು ಇತರ ಜಿಲ್ಲೆಗಳಿಗೆ ಮೇಲ್ಪಂಕ್ತಿ ಹಾಕಬೇಕೆಂದು ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಉಡುಪಿ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಉಡುಪಿ)**

- ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯ ಕಲ್ಲುಪುಡಿ ಘಟಕಗಳ ಲೈಸೆನ್ಸ್ ಪ್ರಾಧಿಕಾರದಿಂದ ಸುರಕ್ಷಿತ ವಲಯ(Safe Zone) ಘೋಷಿತ ಪ್ರದೇಶದ 500 ಮೀಟರ್ ಪರಿಮಿತಿ ಒಳಗೆ ಯಾವುದೇ ನಿವೇಶನ ಹಂಚಿಕೆ ಮಾಡಲು ಜಮೀನನ್ನು ಮಂಜೂರು ಮಾಡಬಾರದಾಗಿ, ಅಲ್ಲದೇ ನಿವೇಶನಗಳನ್ನು ಹಂಚಬಾರದೆಂದು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ನಿರ್ದೇಶನವನ್ನು ನೀಡಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತ್ ಉಡುಪಿ/ ಸಹಾಯಕ ಕಮೀಷನರ್ ಕುಂದಾಪುರ/ ತಹಶೀಲ್ದಾರರು ಉಡುಪಿ, ಕುಂದಾಪುರ, ಕಾರ್ಕಳ, ಬ್ರಹ್ಮಾವರ, ಬೈಂದೂರು, ಕಾಪು ಹೆಬ್ರಿ)**

- ಜಿಲ್ಲೆಯಲ್ಲಿ ಹರಿಯುವ ನದಿಗಳ ತೀರದಲ್ಲಿ ಕೃಷಿ ಮಾಡುತ್ತಿರುವವರಿಗೆ ಕಳೆದ ವರ್ಷದಲ್ಲಿ ಉಂಟಾದ ಬರಗಾಲದಿಂದಾಗಿ ಅತೀವ ತೊಂದರೆಯಾಗಿದ್ದು, ಸದರಿ ರೈತರಿಗೆ ಅನುಕೂಲವಾಗುವಂತೆ ಪರಿಣಾಮಕಾರಿಯಾದ ಬದಲಿ ವ್ಯವಸ್ಥೆ ಅವಶ್ಯಕತೆಯಿದ್ದು, Alternate Micro Irrigation ಯೋಜನೆಗಳ ಪ್ರಯೋಜನವನ್ನು ಪಡೆಯುವಂತೆ ಹಾಗೂ Alternate Micro Irrigation ಅನ್ನು ಅನುಷ್ಠಾನಗೊಳಿಸುವಂತೆ ರೈತರಿಗೆ ಉತ್ತೇಜನ ನೀಡಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು , ಉಡುಪಿ )**

- ಮೀನುಗಾರಿಕಾ ಇಲಾಖೆಯ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಮೀನುಗಾರಿಕಾ ವಿಷಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ PPT Presentation ಮೂಲಕ ವಿವರಣೆಯನ್ನು ನೀಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಮೀನುಗಾರಿಕಾ ಬಂದರು , ಉಡುಪಿ )**

- ಡೀಮ್ಡ್ ಫಾರೆಸ್ಟ್ ನ ಸರ್ವೆಗೆ ಸಂಬಂಧಿಸಿದಂತೆ ಚರ್ಚಿಸಲಾಗಿ, ಭೂದಾಖಲೆಗಳ ಉಪನಿರ್ದೇಶಕರೊಂದಿಗೆ ಅರಣ್ಯ ಇಲಾಖೆಯ ಸರ್ವೆ ಸಿಬ್ಬಂದಿಗಳು ಸೇರಿಕೊಂಡು ಜಂಟಿಯಾಗಿ ಅರಣ್ಯ ಇಲಾಖೆ, ಭೂದಾಖಲೆಗಳ ಇಲಾಖೆ ಹಾಗೂ ಗಣಿ ಇಲಾಖೆಯವರು ಡೀಮ್ಡ್ ಫಾರೆಸ್ಟ್ ನ ಸರ್ವೆ ಕಾರ್ಯ ನಡೆಸುವಂತೆ ತಿಳಿಸಿದರು. ಕಾರ್ಕಳ ತಾಲೂಕಿನ ಭಾಗಶ ಡೀಮ್ಡ್ ಫಾರೆಸ್ಟ್ ಇರುವ ಸಣ್ಣ ಸರ್ವೆ ನಂಬರ್‌ಗಳ ಸರ್ವೆ ಕಾರ್ಯ ಮುಗಿಸುವಂತೆ ಹಾಗೂ ನಿಟ್ಟೆ ಗ್ರಾಮದ ಸರ್ವೆ ಕಾರ್ಯವನ್ನು ಮೊದಲಿಗೆ ಪ್ರಾಂಭಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು. ಸದ್ರಿ ಸರ್ವೆ ಕಾರ್ಯಕ್ಕೆ ಅರಣ್ಯ ಇಲಾಖೆಯಿಂದ 8 ಸರ್ವೆಯರ್‌ಗಳನ್ನು ಕಳುಹಿಸುವುದಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ಇವರು ಸಭೆಯಲ್ಲಿ ತಿಳಿಸಿದ್ದು, ಸದ್ರಿ ಸರ್ವೆಯರ್ಸ್ ತಕ್ಷಣ ಭೂದಾಖಲೆಗಳ ಉಪನಿರ್ದೇಶಕರಿಗೆ ವರದಿ ಮಾಡುವಲ್ಲಿ ಕ್ರಮವಹಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ನಿರ್ದೇಶಿಸಿದರು. ಅಲ್ಲದೇ , ಕೂಡಲೇ ಸರ್ವೆ ಕಾರ್ಯ ನಡೆಸುವಂತೆ ಭೂದಾಖಲೆಗಳ ಉಪನಿರ್ದೇಶಕರಿಗೆ ಸೂಚಿಸಿದರು.

**(ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ/ ಭೂದಾಖಲೆಗಳ ಉಪನಿರ್ದೇಶಕರು, ಉಡುಪಿ/ ಹಿರಿಯ ಭೂವಿಜ್ಞಾನಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಡುಪಿ )**

- ಜಿಲ್ಲೆಯಲ್ಲಿ ಒಟ್ಟು 580 ಸರಕಾರಿ ಶಾಲೆಗಳಿದ್ದು, ಅದರಲ್ಲಿ ಮೊದಲನೇ ಹಂತದಲ್ಲಿ ಕನಿಷ್ಟ 100 ಶಾಲೆಗಳ ಗುರಿ ನಿಗಧಿ ಮಾಡಿಕೊಂಡು ಶಾಲಾ ಮಕ್ಕಳ ಆಟ ಪಾಠಕ್ಕೆ ಉಪಯೋಗವಾಗುವಂತಹ ವಿಶಾಲವಾದ ಆಟದ ಮೈದಾನಗಳನ್ನು ನಿರ್ಮಿಸಬೇಕಾಗಿ ಸೂಚಿಸಿದರು. ಎಲ್ಲಾ ಶಾಲೆಗಳ ದೈಹಿಕ ಶಿಕ್ಷಕರ ಸಭೆಯನ್ನು ಕರೆದು ಸಮಾಲೋಚನೆ ನಡೆಸಿ ಈ ಕೆಲಸವನ್ನು ಅನುಷ್ಠಾನಗೊಳಿಸಿ ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯ (NREGA) ಸಂಪನ್ಮೂಲ ಬಳಸಿ ಮುಂದಿನ ಸಭೆಯಲ್ಲಿ ಕಾರ್ಯಗತಗೊಳಿಸಿದ ವರದಿಯ ಜೊತೆ ಹಾಜರಾಗಬೇಕಾಗಿ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಸಹಾಯಕ ನಿರ್ದೇಶಕರು, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಡುಪಿ )**

ಕೊನೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಂ.ಮಹೇಶ್ವರ್ ರಾವ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್‌ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ತುಮಕೂರು ಸ್ಮಾರ್ಟ್ ಸಿಟಿ 21ನೇ ಮಂಡಳಿ ನಿರ್ದೇಶಕರು ಸಭೆಯನ್ನು ನಡೆಸಿ ಯೋಜನೆಗಳ ಪ್ರಗತಿಯ ಬಗ್ಗೆ ಎಲ್ಲಾ ನಿರ್ದೇಶಕರೊಂದಿಗೆ ಚರ್ಚಿಸಿ ರಸ್ತೆ ಕಾಮಗಾರಿಗಳಿಂದಾಗಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ತುರ್ತಾಗಿ ರಸ್ತೆ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿರುತ್ತೇನೆ.

ಸ್ಮಾರ್ಟ್ ಸಿಟಿ ಯೋಜನೆಯಡಿ ಅನುಷ್ಠಾನಗೊಳ್ಳುತ್ತಿರುವ ಕಾಮಗಾರಿಗಳನ್ನು ಜಿಲ್ಲಾಧಿಕಾರಿಗಳು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕಾರ್ಯಪಾಲಕ ಅಭಿಯಂತರರುಗಳು ಹಾಗೂ ಇತರೆ ಅಭಿಯಂತರರೊಂದಿಗೆ ರಸ್ತೆ ಕಾಮಗಾರಿ, ಸ್ಮಾರ್ಟ್ ಲಾಂಜ್ ಕಟ್ಟಡ ಹಾಗೂ ಅಮಾನಿಕೆರೆ ಕಾಮಗಾರಿಗಳ ಸ್ಥಳ ಪರಿಶೀಲನೆಗೆ ತೆರಳಲಾಯಿತು. ರಸ್ತೆ ಕಾಮಗಾರಿಗಳನ್ನು ವೀಕ್ಷಿಸಿದಾಗಿ ವಾಸ್ತುಸ್ಥಿತಿಯನ್ನು ಅರ್ಥ ಮಾಡಿಕೊಂಡು ಪ್ರಾಮುಖ್ಯತೆಯಿಂದ ಪೂರ್ಣಗೊಳಿಸದೆ ಮಂದಗತಿಯಲ್ಲಿ ಕಾಮಗಾರಿಯನ್ನು ನಡೆಸುತಿರುತ್ತಾರೆ. ಅಲ್ಲಲ್ಲಿ ಛೇಬಂರ್‌ಗಾಗಿ ಅಗೆದ ಮಣ್ಣು, ಜೆಲ್ಲಿಕಲ್ಲು ಹಾಗೂ ಅನುಪಯೋಗಿ ಕಸದ ರಾಶಿಯನ್ನು ಸರಿಯಾದ ರೀತಿಯಲ್ಲಿ ತೆಗೆಯದೆ ಹಾಗೂ ಛೇಬಂರ್ ಸ್ಲಾಬ್ಸ್ ಮುಚ್ಚದೆ ಸಾರ್ವಜನಿಕ ಸ್ಮಂಚಾರ ದಟ್ಟಣೆಗೆ ಅಡಚಣೆಯಾಗುತ್ತಿರುತ್ತದೆ. ಈ ಮೇಲ್ಕಂಡ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಸ್ತೆ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ತಿಳಿಸಿರುತ್ತೇನೆ. ತಪ್ಪಿದಲ್ಲಿ ಅಂತಹವರ ಮೇಲೆ ನಿಯಮಾನುಸಾರ ಕ್ರಮಕೈಗೊಳ್ಳತಕ್ಕದ್ದು ಎಂದು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಲಾಯಿತು. ಆಮಾನಿಕೆರೆ ಕಾಮಗಾರಿಯು ಸಹ ವಿಳಂಬಗೊಂಡಿದ್ದು, ಮುಂಬರುವ ಬೇಸಿಗೆ ಕಾಲದೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಲಾಯಿತು.

ಇನ್ನುಳಿದ ಇತರೆ ಯೋಜನೆಗಳ ಬಗ್ಗೆ ಪೂರಕ ವಿವರಗಳನ್ನು ಪಡೆದು ತುರ್ತುಗತಿಯಲ್ಲಿ ಅನುಷ್ಠಾನಗೊಳಿಸಲು ಸೂಚಿಸಿರುತ್ತೇನೆ.

(ರಾಕೇಶ್ ಸಿಂಗ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ

# ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರ. ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ವಿಜಯಪುರ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ॥ ಜೆ. ರವಿಶಂಕರ್, ಭಾ.ಆ.ಸೇ., |
| 3 | ಪ್ರವಾಸ ಕೈಗೊಂಡ ದಿನಾಂಕ | 30.01.2020 |

| | ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ | |
|---|---|---|
| | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು ಮತ್ತು ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | **1)ಕಾರ್ಯನಿರ್ವಾಹಕ ಅಭಿಯಂತರರು, ಕೆ.ಬಿ.ಜೆ.ಎನ್.ಎಲ್ ಆಲಮಟ್ಟಿ ಮತ್ತು ರಾಂಪೂರ**<br>ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ವಿಜಯಪುರ, ಇವರು ದಿನಾಂಕ 13-11-2019 ರಂದು ನಡೆದ ಸಚಿವರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಸಭೆಯಲ್ಲಿ ಇನ್ನು ಮುಂದೆ ಕಾಲುವೆಗಳ ದುರಸ್ತಿ, ನಿರ್ವಹಣೆ ಕಾಮಗಾರಿಯನ್ನು ನೀರು ಹರಿಸುವ ವೇಳೆಗೆ ಕೈಗೊಳ್ಳುವ ಬದಲು ಡಿಸೆಂಬರ್‌ನಲ್ಲಿ ಟೆಂಡರ್ ಕರೆದು ಫೆಬ್ರವರಿ ತಿಂಗಳೊಳಗೆ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ಎಪ್ರೀಲ್ ತಿಂಗಳ ಅಂತ್ಯದೊಳಗಾಗಿ ರಿಪೇರಿ ಕಾಮಗಾರಿ ಮುಗಿಸಬೇಕೆಂದು ಕೆ.ಬಿ.ಜೆ.ಎನ್.ಎಲ್. ಅಧಿಕಾರಿಗಳಿಗೆ ಸೂಚಿಸಿದರು. ಅದರ ಮೇಲೆ ಯಾವ ಕ್ರಮ ತೆಗೆದುಕೊಂಡಿರುವಿರಿ ಅನ್ನುವ ಕುರಿತು ಅಧ್ಯಕ್ಷರು ಕೇಳಲಾಗಿ ಕ್ಲೋಜರ ಅವಧಿಯಲ್ಲಿ ಕೈಗೆತ್ತಿಕೊಳ್ಳಬೇಕಾದ ಕಾಲುವೆ ದುರಸ್ತಿ ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು ಕಾಲುವೆ ಜಾಗದಲ್ಲಿ ನೀರು ಹರಿಸುವದನ್ನು ಬಂದು ಮಾಡಿದ ನಂತರವೇ ಹಾನಿಗೊಳಗಾದ ಭಾಗಗಳನ್ನು ಹಾಗೂ ಹೂಳು ತುಂಬಿರುವ ಕಾಲುವೆಗಳಲ್ಲಿನ ಪರಿಣಾಮಗಳನ್ನು ಪರಿಶೀಲಿಸಿ ಅಂದಾಜು ಪತ್ರಿಕೆ ತಯಾರಿಸ ಬೇಕಾಗುತ್ತದೆ. ಸಾಮಾನ್ಯವಾಗಿ ಕಾಲುವೆ ಜಾಗದಲ್ಲಿ ಮಾರ್ಚ ತಿಂಗಳಿನ ಕೊನೆಯ ವಾರದಲ್ಲಿ ನೀರು ಹರಿಸುವದನ್ನು ನಿಲ್ಲಿಸಲಾಗುತ್ತದೆ. ಆ ನಂತರವೇ ಕಾಲುವೆ ದುರಸ್ತಿ ಕಾಮಗಾರಿಗಳ ಪರಿಣಾಮಗಳನ್ನು ಲೆಕ್ಕ ಹಾಕಿ ಅಂದಾಜು ಪತ್ರಿಕೆಗಳನ್ನು ತಯಾರಿಸಿ ವ್ಯವಸ್ಥಾಪಕ ನಿರ್ದೇಶಕರವರಿಂದ ಟೆಂಡರ ಕರೆದು ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವದು. ಇದಲ್ಲದೇ, ಕಳೆದ ವರ್ಷ ಲೋಕ ಸಭಾ ಚುನಾವಣೆ ಘೋಷಣೆಯಾಗಿ ನೀತಿ ಸಂಹಿತೆ ಜಾರಿಯಾಗಿರುವದರಿಂದ ಟೆಂಡರ್ ಪ್ರಕ್ರಿಯೆಯಲ್ಲಿ ವಿಳಂಬವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ತಡವಾಗಿರುತ್ತದೆ.<br>ಕೆ.ಬಿ.ಜೆ.ಎನ್.ಎಲ್. ಅಧಿಕಾರಿಗಳಿಗೆ ಕ್ಲೋಸರ್ ಕಾಮಗಾರಿಗಳನ್ನು ಶ್ರೀ ಗೋವಿಂದ ಕಾರಜೋಳ, ಮಾನ್ಯ ಉಪಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ ಅವರು ಫೆಬ್ರುವರಿ ಅಂತ್ಯದವರೆಗೆ ಮುಗಿಸಲು ಸೂಚನೆ ನೀಡಿದ್ದರು. ಜನೇವರಿ ಅಂತ್ಯದವರೆಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕಾಗಿತ್ತು ಆದರೆ, ಇಲ್ಲಿಯವರೆಗೂ ಆಗಿರುವದಿಲ್ಲ ಅನ್ನುವ ಬಗ್ಗೆ ಸಭೆಯ ಅಧ್ಯಕ್ಷರು ಸಂಬಂಧಪಟ್ಟ ಕೆ.ಬಿ.ಜೆ.ಎನ್.ಎಲ್ ಅಧಿಕಾರಿಗಳಿಗೆ ಕಾರಣವನ್ನು ಕೇಳಿದರು. ಅದರಂತೆ ಕೆ.ಬಿ.ಜೆ.ಎನ್.ಎಲ್ ಅಧಿಕಾರಿಗಳು ಫೆಬ್ರುವರಿ ಅಂತ್ಯದವರೆಗೆ ಮುಗಿಸುವುದಾಗಿ ಸಭೆಯಲ್ಲಿ ತಿಳಿಸಿದರು.<br>ಈ ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ ಇಂಡಿ ಲಿಫ್ಟ ಕೆನಾಲ್‌ದಲ್ಲಿ 08 ಮೋಟರ್ಸಗಳು ಇದ್ದು, ಅದರ ಪೈಕಿ ಈಗ ಸಧ್ಯ 05 ಮೋಟರಗಳು ಪ್ರಾರಂಭದಲ್ಲಿದ್ದು, ಬಾಕಿ 03 ಮೋಟರ್‌ಗಳು ರಿಪೇರಿ ಹಂತದಲ್ಲಿರುತ್ತದೆ ಎಂದು ಸಭೆಗೆ ಕೆ.ಬಿ.ಜೆ.ಎನ್.ಎಲ್ ಅಧಿಕಾರಿಗಳು ತಿಳಿಸಿದರು. ಈ ಹಿಂದೆ ನಡೆದ ಕೆ.ಡಿ.ಪಿ |

| | | |
|---|---|---|
| | | ಸಭೆಯಲ್ಲಿ ಜರುಗಿದ ನಡುವಳಿಗಳ ಪ್ರಕಾರ ಕ್ರಮ ಹಾಗೂ ಈ ಸಭೆಯ ಚರ್ಚಿಸಿದ ವಿಷಯಗಳ ಬಗ್ಗೆ ಲಿಖಿತ ರೂಪದಲ್ಲಿ ವರದಿ ಸಲ್ಲಿಸಲು ತಿಳಿಸಿ ಮುಂಬರುವ ಬೇಸಿಗೆ ದಿನಗಳಲ್ಲಿ ಯಾವುದೇ ರೀತಿಯ ಕುಡಿಯುವ ನೀರಿನ ತೊಂದರೆ ಆಗದಂತೆ ಕ್ರಮ ಜರುಗಿಸಲು ತಿಳಿಸಲಾಯಿತು.<br><br>ದಿನಾಂಕ 12-01-2020 ರಂದು ನಡೆದ ಶ್ರೀ ಸಿ.ಸಿ.ಪಾಟೀಲ, ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ವಿಜಯಪುರ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ನಿರ್ದೇಶಿಸಿದ ಮೇರೆಗೆ ರೇಲ್ವೆ ಪುಷ್ ವರ್ಕ ಕಾರ್ಯವು ದಿನಾಂಕ 10-02-2020 ರೊಳಗಾಗಿ ಮುಗಿಸುವುದಾಗಿ ಸಂಬಂಧಪಟ್ಟ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದ್ದರು. ಆದರೆ ಇನ್ನೂವರೆಗೆ ಕಾಮಗಾರಿಯು ಪೂರ್ಣವಾಗಿರದ ಕಾರಣ ಈ ಕಾಮಗಾರಿಯನ್ನು ಆದಷ್ಟು ಬೇಗನೆ ಪೂರ್ಣಗೊಳಿಸಲು ಹಾಗೂ ಐ.ಸಿ.ಸಿ ಕಮೀಟಿಯಲ್ಲಿ ತೀರ್ಮಾನ ತೆಗೆದುಕೊಂಡಂತೆ ಕ್ರಮ ಜರುಗಿಸಲು ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು. ಇನ್ನು ಮುಂದೆ ಸಾಧ್ಯವಾದಷ್ಟು ನೀರು ಬಿಡುವ ಪೂರ್ವದಲ್ಲಿಯೇ ಕಾಲುವೆ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅಗತ್ಯ ಕ್ರಮ ಜರುಗಿಸಲಾಗುವುದು ಅಂತಾ ಸಭೆಯಲ್ಲಿ ತಿಳಿಸಿದರು.<br><br>**2)ಕುಡಿಯುವ ನೀರಿನ ಪರಿಸ್ಥಿತಿ:**<br>ಸಧ್ಯಕ್ಕೆ ಐ.ಸಿ.ಸಿ. ತೀರ್ಮಾನದಂತೆ ಕೆನಾಲಗಳಿಗೆ ನೀರು ಹರಿಸಲಾಗುತ್ತಿದೆ. ಈ ಸಮಯದಲ್ಲಿ ಕುಡಿಯುವ ನೀರಿನ ತೊಂದರೆ ಆಗದೇ ಇರುವ ನಿಟ್ಟಿನಲ್ಲಿ ಬಹುಹಳ್ಳಿ ಕುಡಿಯುವ ನೀರಿನ ಯೋಜನೆಗಳಿಗೆ ಸಂಬಂಧಿಸಿದ ಕೆರೆಗಳನ್ನು ಸಂಬಂಧಪಟ್ಟ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಸರಬರಾಜು ವಿಜಯಪುರ ಹಾಗೂ ಕೆ.ಬಿ.ಜೆ.ಎನ್.ಎಲ್ ಅಧಿಕಾರಿಗಳು, ಪಟ್ಟಣ ಪಂಚಾಯತ ಅಧಿಕಾರಿಗಳು, ನೀರು ತುಂಬಿಸುವ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಕೊಳ್ಳಬೇಕೆಂದು ಅಧ್ಯಕ್ಷರು ಸಭೆಗೆ ಸೂಚಿಸಿದರು.<br><br>**<u>ಅಧೀಕ್ಷಕ ಅಭಿಯಂತರರು, ಹೆಸ್ಕಾಂ, ವಿಜಯಪುರ</u>** ಇವರಿಗೆ ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 13-11-2019 ರಂದು ಜರುಗಿದ ತ್ರೈಮಾಸಿಕ ಸಭೆಯಲ್ಲಿ, ಮುಂದಿನ ಸಭೆಯ ವೇಳೆಗೆ ಬಾಕಿ ಉಳಿದಿರುವ ಎಲ್ಲ ಬೋರ್‌ವೆಲ್‌ಗಳಿಗೆ ವಿದ್ಯುತ್ ಸಂಪರ್ಕವನ್ನು ಒದಗಿಸಿರಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಅದರ ಮೇಲೆ ಯಾವ ಕ್ರಮ ತೆಗೆದುಕೊಂಡಿರುವಿರಿ ಅನ್ನುವ ಕುರಿತು ಅಧ್ಯಕ್ಷರು ಕೇಳಲಾಗಿ 2014-15ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು 5710 ನೀರಾವರಿ ಪಂಪುಸೆಟ್‌ಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ ಮತ್ತು ಬಾಕಿ ಇರುವ 278 ನೀರಾವರಿ ಪಂಪ್‌ಸೆಟ್‌ಗಳಿಗೆ ದಿನಾಂಕ:31-03-2020 ರೊಳಗಾಗಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು ಸಭೆಯಲ್ಲಿ ತಿಳಿಸಿದರು. ಅದರಂತೆ, ಅಧ್ಯಕ್ಷರು ಮಾರ್ಚ ಅಂತ್ಯದೊಳಗೆ ಕಾಮಗಾರಿಯನ್ನು ಮುಗಿಸಲು ಸೂಚಿಸಿದರು.<br><br>**<u>ಆಯುಕ್ತರು, ಮಹಾನಗರ ಪಾಲಿಕೆ ವಿಜಯಪುರ</u>** ಇವರಿಗೆ ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 13-11-2019 ರಂದು ಜರುಗಿದ ತ್ರೈಮಾಸಿಕ ಸಭೆಯಲ್ಲಿ ವಿಜಯಪುರದ ಮನಗೂಳಿ ಅಗಸಿಯಲ್ಲಿ ದಿನನಿತ್ಯ ನೂರಾರು ವಾಹನಗಳ ಸುಗಮ ಸಂಚಾರಕ್ಕಾಗಿ ಕೋಟೆಗೋಡೆಯನ್ನು ಕೆಡವಲು ಪುರಾತತ್ವ ಹಾಗೂ ಪ್ರಾಚ್ಯ ವಸ್ತು ಇಲಾಖೆಗೆ ಇನ್ನೊಮ್ಮೆ ಪ್ರಸ್ತಾವನೆ ಸಲ್ಲಿಸಿ, ಸಲ್ಲಿಸಿದ ಒಂದು ಪ್ರತಿಯನ್ನು ಮಾನ್ಯ ಸಭಾಧ್ಯಕ್ಷರಿಗೆ ಸಲ್ಲಿಸಲು ಸೂಚಿಸಿದರು. ಅದರ ಮೇಲೆ ಯಾವ ಕ್ರಮ ತೆಗೆದುಕೊಂಡಿರುವಿರಿ ಅನ್ನುವ ಕುರಿತು ಅಧ್ಯಕ್ಷರು ಕೇಳಲಾಗಿ, ಡೈರೆಕ್ಟರ್ ಜನರಲ್ ಎ.ಎಸ್.ಐ. ರವರಿಗೆ ಹಿಂದಿನ ಜಿಲ್ಲಾಧಿಕಾರಿಗಳು ಇ-ಮೇಲ್ ಮುಖಾಂತರ ಪತ್ರ ಬರೆದದ್ದು ಇರುತ್ತದೆ. ಆದರೆ, ಈಗ ವಾಹನಗಳ ಸುಗಮ ಸಂಚಾರಕ್ಕಾಗಿ ಜಿಲ್ಲಾಧಿಕಾರಿಗಳು ವಿಜಯಪುರ, ಪೋಲಿಸ್ ವರಿಷ್ಠಾಧಿಕಾರಿಗಳು, ವಿಜಯಪುರ ಇವರೊಂದಿಗೆ ಸದರ ವಿಷಯದ ಕುರಿತು ಸುಧೀರ್ಘವಾಗಿ ಚರ್ಚಿಸಲಾಗಿ ಮನಗೂಳಿ ಅಗಸಿಯಲ್ಲಿ ಪೋಲಿಸ್ ಪಾಯಿಂಟ್ ಗುರುತಿಸಿ, ಟ್ರಾಫಿಕ್ ಪೋಲಿಸರನ್ನು ನಿಲ್ಲಿಸಲಾಗಿರುತ್ತದೆ. ಅಲ್ಲದೇ ಈಗ ಅಲ್ಲಿ ಎರಡು ಬದಿ ಟ್ರಾಫಿಕ್ |

ಸಿಗ್ನಲ್ ಅಳವಡಿಸಲಾಗಿರುತ್ತದೆ. ಪ್ರಯುಕ್ತ, ಈಗ ಮನಗೂಳಿ ಅಗಸಿಯಲ್ಲಿ ದಿನನಿತ್ಯ ನೂರಾರು ವಾಹನಗಳ ಸಂಚಾರ ಯಾವುದೇ ಅಡೆ-ತಡೆ ಇಲ್ಲದೆ ಸುಗಮವಾಗಿ ಸಾಗುತ್ತಿದೆ ಅಂತಾ ಮಹಾನಗರ ಪಾಲಿಕೆ ಆಯುಕ್ತರು ಸಭೆಯಲ್ಲಿ ತಿಳಿಸಿದರು. ಮುಂದುವರೆದು, ಆಯುಕ್ತರು ಮಹಾನಗರ ಪಾಲಿಕೆ ವಿಜಯಪುರ ಇವರು ಅಧ್ಯಕ್ಷರಿಗೆ ಮಹಾತ್ಮಾಗಾಂದಿ ನಗರ ವಿಕಾಸ ಯೋಜನೆಯ ಕ್ರಿಯಾ ಯೋಜನೆಯು ಸರ್ಕಾರದ ಹಂತದಲ್ಲಿದ್ದು, ಅದನ್ನು ಶೀಘ್ರದಲ್ಲಿಯೇ ಅನುಮೋದನೆ ದೊರಕಿಸಿಕೊಡುವಂತೆ ಕೋರಿದರು. ವಿಜಯಪುರ ನಗರದಲ್ಲಿ ಸುಮಾರು 366 ದೀರ್ಘಾವಧಿ ಲೀಸ್ ಆಸ್ತಿಗಳು ಇದ್ದು, ಲೀಜ್ ಅವಧಿ ಮುಗಿದು ಹೋಗಿದ್ದು, ಸದರಿಯವರಿಗೆ ಮಾರಾಟ ಮಾಡಲು ಸರ್ಕಾರದಿಂದ 2010 ರಲ್ಲಿ ಆದೇಶಿಸಲಾಗಿದ್ದು, ಈಗ ಸಧ್ಯ ಸದರಿ ಆಸ್ತಿಗೆ ಒಂದು ಮಾರುಕಟ್ಟೆ ಬೆಲೆ ನಿಗದಿ ಮಾಡಲು ಸರಕಾರಕ್ಕೆ ಪತ್ರ ಬರೆಯಲಾಗಿದ್ದು, ಅನುಮೋದನೆ ದೊರಕಿಸಿಕೊಡುವಂತೆ ಕೋರಿಕೊಂಡರು. ಮೇಲ್ಕಂಡ ಎರಡು ವಿಷಯಗಳನ್ನು ಪ್ರಧಾನ ಕಾರ್ಯದರ್ಶಿಗಳು, ನರರಾಭಿವೃದ್ಧಿ ಇಲಾಖೆರವರ ಅವಗಾಹನೆಗೆ ತಂದು ಶೀಘ್ರದಲ್ಲಿ ಅನುಮೋದನೆ ಕೊಡಿಸಲು ಪ್ರಯತ್ನಿಸುವುದಾಗಿ ಅಧ್ಯಕ್ಷರು ತಿಳಿಸಿದರು.

**<u>ಕಂದಾಯ ಇಲಾಖೆ:-</u>** ಸಭಾಧ್ಯಕ್ಷರು, ಜಿಲ್ಲಾಧಿಕಾರಿಗಳಿಗೆ ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 13-11-2019 ರಂದು ಜರುಗಿದ ತ್ರೈಮಾಸಿಕ ಸಭೆಯಲ್ಲಿ ಜೋಳ ಬೆಳೆಗಾರರಿಗೆ ಪ್ರೋತ್ಸಾಹ ಧನವನ್ನು ಹೆಚ್ಚಿಗೆ ಮಾಡಲು ಹಾಗೂ ಜೋಳವನ್ನು ಪಡಿತರದಲ್ಲಿ ಸೇರಿಸಲು ಶೀಘ್ರದಲ್ಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಜಿಲ್ಲಾಧಿಕಾರಿಗಳಗೆ ಸೂಚಿಸಿದ್ದರ ಪ್ರಕಾರ ಜಿಲ್ಲಾಧಿಕಾರಿಗಳು ಈಗಾಗಲೇ ಬೆಂಬಲ ಬೆಲೆ ಯೋಜನೆಯಡಿ ಪ್ರತಿ ಕ್ವಿಂಟಲ್‌ಗೆ ರೂ.2570 ಬೆಲೆ ನಿಗದಿಪಡಿಸಲಾಗಿದ್ದು, ಈ ಸಂಬಂಧ ಜೋಳ ಸಂಗ್ರಹಿಸಲು ಜಿಲ್ಲಾ ಟಾಸ್ಕಫೋರ್ಸ ಸಮಿತಿ ಸಭೆಯನ್ನು ಆಯೋಜಿಸಲಾಗಿದ್ದು, ಸದರಿ ಸಭೆಯಲ್ಲಿ ಪ್ರತಿ ಕ್ವಿಂಟಲ್‌ಗೆ ರೂ.3500 ರಿಂದ 3800ರ ವರೆಗೆ ಮಾಳದಂಡಿ ಜೋಳ ಇರುವುದಾಗಿ ಎ.ಪಿ.ಎಂ.ಸಿ. ಸಹಾಯಕ ನಿರ್ದೇಶಕರು ತಿಳಿಸಿದ್ದು ಇರುತ್ತದೆ. ಅದರಂತೆ ಪ್ರಧಾನ ಕಾರ್ಯದರ್ಶಿಗಳು ಸಹಕಾರ ಇಲಾಖೆ ಬೆಂಗಳೂರು ಇವರಿಗೆ ಬಿಳಿ ಜೋಳ ಬೆಂಬಲ ದರವನ್ನು ಪ್ರತಿ ಕ್ವಿಂಟಲ್‌ಗೆ 4000 ರೂ. ರಂತೆ ನಿಗದಿಪಡಿಸಲು ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು ಇದ್ದು, ಈಗ ಅಧ್ಯಕ್ಷರು ಇನ್ನೊಂದು ಸಲ ನೆನಪೋಲೆ ಬರೆಯಲು ಸಭಾಧ್ಯಕ್ಷರು ತಿಳಿಸಿದರು.

ಜಂಟಿ ಕೃಷಿ ನಿರ್ದೇಶಕರು ವಿಜಯಪುರ ಇವರಿಗೆ ದಿನಾಂಕ 13-11-2019 ರಂದು ನಡೆದ ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ತ್ರೈಮಾಸಿಕ ಸಭೆಯಲ್ಲಿ

1) ಕೃಷಿ ಉಪಕರಣ ಹಾಗೂ ಇತರೆ ಕೆಲಸದ ಸಲುವಾಗಿ ರೈತರು ಅರ್ಜಿಸಲ್ಲಿಸಲು ಬಂದಂತಹ ರೈತರಿಗೆ ಸಮಸ್ಯೆಯಾಗದಂತೆ ನೋಡಿಕೊಳ್ಳಿ, ಉಪಕರಣಗಳನ್ನು ತೆಗೆದುಕೊಳ್ಳಲು ರೈತರನ್ನು ಸಂಬಂಧಿಸಿದ ರೈತ ಸಂಪರ್ಕ ಕೇಂದ್ರಕ್ಕೆ ಕಳುಹಿಸಿಕೊಡಿ ಎಂದು ಸೂಚಿಸಿದ್ದರ ಮೇರೆಗೆ ಕೃಷಿ ಉಪಕರಣ ಹಾಗೂ ಇತರೆ ಕೆಲಸದ ಸಲುವಾಗಿ ಅರ್ಜಿ ಸಲ್ಲಿಸಲು ಬಂದಂತಹ ರೈತರಿಗೆ ಯೋಜನೆಗಳ ಮಾಹಿತಿ ಹೇಳಿ, ಕೃಷಿ ಉಪಕರಣಗಳನ್ನು ಪಡೆಯಲು ಬೇಕಾದಂತಹ ದಾಖಲಾತಿಗಳ ಕುರಿತು ಮಾಹಿತಿ ನೀಡಿ, ರೈತ ಸಂಪರ್ಕ ಕೇಂದ್ರಗಳ ಮೂಲಕ ಉಪಕರಣಗಳನ್ನು ಹಾಗೂ ಇತರೆ ಯೋಜನೆಗಳ ಲಾಭ ಪಡೆಯಲು ಪ್ರೋತ್ಸಾಹಿಸಿ, ರೈತ ಸಂಪರ್ಕ ಕೇಂದ್ರಗಳಿಗೆ ಕಳುಹಿಸಲಾಗಿದೆ ಅಂತಾ ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ತಿಳಿಸಿದರು.
2) ರೈತರಿಗೆ ಬೆಳೆವಿಮೆ ಬಗ್ಗೆ ಚರ್ಚಿಸುವ ಸಲುವಾಗಿ ಮುಂದಿನ ಕೆ.ಡಿ.ಪಿ. ಸಭೆಗೆ ಫಸಲ್ ಭೀಮಾ ನೋಡಲ್ ಅಧಿಕಾರಿಯನ್ನು ಕರೆಯಿಸಬೇಕೆಂದು. ಸೂಚಿಸಿದರು ಅದರಂತೆ ಕ್ರಮ ಜರುಗಿಸಲಾಗುವುದು ಅಂತಾ ಸಂಬಂಧಪಟ್ಟ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು. ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ರೈತರಿಗೆ ಹೆಚ್ಚಿನ ಲಾಭ ಪಡೆದುಕೊಳ್ಳಲು ಜಿಲ್ಲೆಯ ಹೆಚ್ಚಿನ ರೈತರಿಗೆ ಸಿಗುವಂತೆ ಜಾಗೃತಿವಹಿಸಿ, ನೋಂದಣಿ

ಹೆಚ್ಚಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

3) ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ರೈತರಿಗೆ ಹೆಚ್ಚಿನ ಲಾಭ ಪಡೆದುಕೊಳ್ಳಲು ಜಿಲ್ಲೆಯ ಹೆಚ್ಚಿನ ರೈತರಿಗೆ ಸಿಗುವಂತೆ ಜಾಗೃತಿವಹಿಸಿ, ನೋಂದಣಿ ಹೆಚ್ಚಿಸಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಅದರಂತೆ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ ರೈತರು ಹೆಚ್ಚು ಲಾಭ ಪಡೆಯಲು, ಸಾಮಾನ್ಯ ಸೇವಾ ಕೇಂದ್ರಗಳು ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ನೋಂದಣಿ ಮಾಡಿಕೊಳ್ಳಲು, ರೈತ ಸಂಪರ್ಕ ಕೇಂದ್ರ/ ತಾಲ್ಲೂಕ ಮಟ್ಟದ ಅಧಿಕಾರಿಗಳ ಮೂಲಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಅಂತಾ ಸಭೆಗೆ ತಿಳಿಸಿದರು ಹಾಗೂ ಅಧ್ಯಕ್ಷರು ಸದರಿ ಯೋಜನೆಯು ರೈತರಿಗೆ ಮನವರಿಕೆ ಆಗಲು ಜಾಹಿರಾತುಗಳ ಮುಖಾಂತರ ಪ್ರಚುರ ಪಡಿಸಲು ಸಭೆಯ ಅಧ್ಯಕ್ಷರು ತಿಳಿಸಿದರು.

4) ವರ್ಕ ಆರ್ಡರ ಕೊಡದೇ ಯಾರಾದರು ಕೃಷಿ ಹೊಂಡ ಮಾಡಿಕೊಂಡರೆ ಸರ್ಕಾರ ಜವಾಬ್ದಾರಿಯಲ್ಲ ಈ ಕುರಿತು ರೈತರಿಗೆ ಸರಿಯಾಗಿ ಮನವರಿಕೆ ಮಾಡಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು. ಅದರಂತೆ ಈ ಕುರಿತು ರೈತರಿಗೆ ವರ್ಕ ಆರ್ಡರ್ ನೀಡದೇ ಕೃಷಿ ಹೊಂಡ ಮಾಡಿಕೊಂಡರೆ ಸರ್ಕಾರ ಜವಾಬ್ದಾರಿಯಲ್ಲ ಎಂದು ರೈತ ಸಂಪರ್ಕ ಕೇಂದ್ರಗಳ ಮುಖಾಂತರ ರೈತರಿಗೆ ಮನವರಿಕೆ ಮಾಡಲಾಗಿದೆ ಅಂತಾ ಸಂಬಂಧಪಟ್ಟ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.

<u>**ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ವಿಜಯಪುರ**</u> ಇವರಿಗೆ ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 13-11-2019 ರಂದು ಜರುಗಿದ ತ್ರೈಮಾಸಿಕ ಸಭೆಯಲ್ಲಿ, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ(ಸಿ.ಹೆಚ್.ಡಿ.)ಯಡಿ ವಿಜಯಪುರ ಜಿಲ್ಲೆಗೆ ಹೆಚ್ಚಿನ ಗುರಿಯನ್ನು ಹಾಗೂ ಹೆಚ್ಚಿನ ಅನುದಾನವನ್ನು ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದರು. ಅದರಂತೆ ದಿನಾಂಕ: 18-11-2019 ರಂದು ಜಿಲ್ಲಾಧಿಕಾರಿಗಳು, ವಿಜಯಪುರ ರವರ ಮುಖಾಂತರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಹಾಗೂ ವಿಜಯಪುರ ಜಿಲ್ಲೆಯಲ್ಲಿ ದ್ರಾಕ್ಷಿ ಬೆಳೆಗೆ ಮೊದಲ ಆದ್ಯತೆ ನೀಡಿದ್ದು ಅದರಂತೆ ಪ್ರತಿ ಒಂದು ಎಕರೆಗೆ ಮೊದಲನೆ ವರ್ಷದಲ್ಲಿ ರೂ. 18000-00 ಹಾಗೂ ಎರಡನೇ ವರ್ಷದಲ್ಲಿ ರೂ. 95000-00 ಇಲಾಖೆಯಿಂದ ಸಹಾಯಧನ ನೀಡಲಾಗುತ್ತಿದೆ ಅಂತಾ ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ತಿಳಿಸಿದರು.

<u>**ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ವಿಜಯಪುರ**</u> ಶುದ್ಧ ಕುಡಿಯುವ ನೀರಿನ ಘಟಕಗಳು ಬಹಳ ಕಡೆ ರಿಪೇರಿ ಇರುತ್ತವೆ. ಅವುಗಳನ್ನು ರಿಪೇರಿ ಮಾಡಲು ಸೂಕ್ತ ಕ್ರಮಕೈಕೊಳ್ಳಬೇಕೆಂದು ಅಧ್ಯಕ್ಷರು ಸೂಚಿಸಿದರು. ಅದರಂತೆ ಸಂಬಂಧಪಟ್ಟ ಅಧಿಕಾರಿಗಳು ಸಭೆಯಲ್ಲಿ ವಿವರಿಸುತ್ತಾ ವಿಜಯಪುರ ಜಿಲ್ಲೆಯಲ್ಲಿ 878 ಶುದ್ಧ ಕುಡಿಯುವ ನೀರಿನ ಘಟಕಗಳು ಹೊಂದಿದ್ದು, ಇವುಗಳ ಪೈಕಿ 380 ಘಟಕಗಳು ದುರಸ್ತಿಯಲ್ಲಿದ್ದು, ಸದರಿ ದುರಸ್ತಿಯಲ್ಲಿರುವ ಎಲ್ಲ ಶುದ್ಧ ಕುಡಿಯುವ ನೀರಿನ ಘಟಕಗಳನ್ನು 10/02/2020 ರ ಒಳಗಾಗಿ ಏಜೆನ್ಸಿಯವರ ಮುಖಾಂತರ ದುರಸ್ಥಿ ಮಾಡಿಕೊಳ್ಳಲು ಸೂಕ್ತ ಕ್ರಮ ತೆಗೆದುಕೊಂಡು ಕಟ್ಟುನಿಟ್ಟಾಗಿ ಪಾಲಿಸಲು ಸಭಾಧ್ಯಕ್ಷರು ಸೂಚಿಸಿದರು. ಅದರಂತೆ ದುರಸ್ಥಿ ಆಗಿರುವ ಬಗ್ಗೆ ಸಂಬಂದಪಟ್ಟ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಿಂದ ಪರಿಶೀಲಿಸಿ ಪ್ರಮಾಣ ಪತ್ರ ನೀಡುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

<u>**ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವಿಜಯಪುರ**</u> ಇವರಿಗೆ ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ 13-11-2019 ರಂದು ಜರುಗಿದ ತ್ರೈಮಾಸಿಕ ಸಭೆಯಲ್ಲಿ ಅನಂತಕುಮಾರ ಪೌಂಡೇಶನ್ ನವರು ಅಪೌಷ್ಠಿಕ ಮಕ್ಕಳಿಗೋಸ್ಕರ ಹಾಲಲ್ಲಿ ಹಾಕುವ ಒಂದು ಪೌಷ್ಠಿಕ ಆಹಾರದ ಪೌಡರ್

ತಯಾರಿಸುತ್ತಾರೆ. ಅದನ್ನು ಉಚಿತವಾಗಿ ಕೂಡ ಕೊಡುತ್ತಾರೆ. ಇದು ಅತೀ ಕಡಿಮೆ ತೂಕ ಇರುವ ಮಕ್ಕಳಿಗೆ ತುಂಬಾ ಅನುಕೂಲ. ಆದಕಾರಣ ಸದರಿ ಪೌಂಡೇಶನ್‌ನವರನ್ನು ಸಂಪರ್ಕಿಸಿ, ಅವರ ಸಹಾಯಪಡೆದು ಮುಂದಿನ ಸೂಕ್ತ ಕ್ರಮ ಜರುಗಿಸಲು ಸೂಚಿಸಿದರು. ಅದರಂತೆ ಸದರಿ ವಿಷಯದನ್ವಯ ಅಪೌಷ್ಠಿಕ ಮಕ್ಕಳಿಗೋಸ್ಕರ ಹಾಲಲ್ಲಿ ಹಾಕುವ ಒಂದು ಪೌಷ್ಠಿಕ ಆಹಾರದ ಪೌಡರ್ ಉಚಿತವಾಗಿ ಪಡೆಯುವ ಸಲುವಾಗಿ ಸಂಬಂಧಿಸಿದ ಸಂಸ್ಥೆಯವರೊಂದಿಗೆ ದಿನಾಂಕ:31-12-2019 ರಂದು ಪತ್ರ ಬರೆಯಲಾಗಿದೆ ಅಂತಾ ಸಭೆಯಲ್ಲಿ ತಿಳಿಸಿದರು. ಅಧ್ಯಕ್ಷರು ಸರಕಾರಕ್ಕೆ ಮಾಹಿತಿ ಸಲ್ಲಿಸುವಲ್ಲಿ ಒಂದೂವರೆ ತಿಂಗಳು ತಡವಾಗಿದ್ದಕ್ಕೆ ವಿಷಾದ ವ್ಯಕ್ತಪಡಿಸಿದರು. ಹಾಗೂ ಇನ್ನೊಂದು ವಿನಂತಿ ಪತ್ರವನ್ನು ಇಂದೇ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿದರು.

**<u>ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಿಜಯಪುರ</u>** ದಿನಾಂಕ 13-11-2019 ರಂದು ನಡೆದ ತ್ರೈಮಾಸಿಕ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ವಿಜಯಪುರ ನಗರದ ಟಕ್ಕೆದಲ್ಲಿ ಹೊಸ ಹಾಸ್ಟೇಲ್ ಕಟ್ಟಡ ಹಸ್ತಾಂತರ ಮಾಡಿಕೊಳ್ಳುವ ಕುರಿತು ಸೂಚಿಸಿದ್ದರ ಕುರಿತು ಯಾವ ಕ್ರಮ ತೆಗೆದುಕೊಂಡಿರುತ್ತೀರಿ ಅಂತಾ ಸಂಬಂಧಪಟ್ಟ ಅಧಿಕಾರಿಗಳಿಗೆ ಕೇಳಲಾಗಿ, ಸಂಬಂಧಪಟ್ಟ ಅಧಿಕಾರಿಗಳು ಮಾನ್ಯ ಸಚಿವರು ನೀಡಿದ ನಿರ್ದೇಶನದ ಮೇರೆಗೆ ಹಾಸ್ಟೇಲ್ ಕಟ್ಟಡ ಹಸ್ತಾಂತರ ಮಾಡಿಕೊಳ್ಳಲಾಗಿದೆ ಅಂತಾ ಸಭೆಯಲ್ಲಿ ತಿಳಿಸಿದರು.

**<u>ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ವಿಜಯಪುರ</u>** ಇವರಿಗೆ ದಿನಾಂಕ: 13-11-2019 ರಂದು ನಡೆದ ತ್ರೈಮಾಸಿಕ ಸಭೆಯಲ್ಲಿ ಸಿಂದಗಿ ತಾಲೂಕಿನ ಬಳಗಾನೂರ ಪ್ರಾಥಮಿಕ ಆರೋಗ್ಯ ಕೇಂದ್ರದ ಹೆರಿಗೆ ಪ್ರಕರಣದಲ್ಲಿ ವೈದ್ಯರು ಸೌಜನ್ಯದಿಂದ ವರ್ತಿಸದೆ ಇರುವ ಅಧಿಕಾರಿಗಳಿಗೆ ಯಾವ ಕ್ರಮ ತೆಗೆದುಕೊಂಡಿದ್ದ ಬಗ್ಗೆ ಸಭೆಯಲ್ಲಿ ವಿಚಾರಿಸಿದರು ಅದರಂತೆ ಸಂಬಂಧಪಟ್ಟ ಅಧಿಕಾರಿಗಳು ಬಳಗಾನೂರ ಪ್ರಾಥಮಿಕ ಆರೋಗ್ಯ ಕೇಂದ್ರದ ಹೆರಿಗೆ ಪ್ರಕರಣದಲ್ಲಿ ಜವಾಬ್ದಾರಿ ಹೊಂದಿರುವ ಆಡಳಿತ ವೈದ್ಯಾಧಿಕಾರಿಗಳಾದ ಡಾ: ಶಂಕರ ಜಾಧವ ಇವರಿಗೆ ಈ ಕಚೇರಿಯಿಂದ ದಿ: 18-10-2019 ರಂದು ಕಾರಣ ಕೇಳುವ ನೋಟಿಸು ನೀಡಲಾಗಿದ್ದು, ಅದರಂತೆ, ಸದರಿ ವೈದ್ಯರು ದಿ: 23-10-2019 ರಂದು ತಮ್ಮ ವಿವರಣೆಯನ್ನು ಸಲ್ಲಿಸಿದ್ದು, ಇದರಲ್ಲಿ ಇನ್ನು ಮುಂದೆ ಈ ತರಹದ ಘಟನೆಗಳು ಸಂಭವಿಸದ ಹಾಗೆ ನೋಡಿಕೊಂಡು ಹೋಗುತ್ತೇನೆಂದು ವಿನಂತಿಸಿಕೊಂಡಿರುತ್ತಾರೆ ಎಂದು ಸಭೆಯಲ್ಲಿ ತಿಳಿಸಿದರು. ಮುಂದುವರೆದು, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ವಿಜಯಪುರರವರು ಜಿಲ್ಲೆಯ ಎಲ್ಲ ವೈದ್ಯಾಧಿಕಾರಿಗಳು ಸೌಜನ್ಯ ರೀತಿಯಲ್ಲಿ ವರ್ತಿಸುವ ಬಗ್ಗೆ ಸುತ್ತೋಲೆಯನ್ನು ಹೊರಡಿಸಲಾಗಿದೆ ಎಂದು ತಿಳಿಸಿದರು.

**<u>ಉಪ ನಿರ್ದೇಶಕರು, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವಿಜಯಪುರ</u>** ಮುದ್ದೇಬಿಹಾಳದಲ್ಲಿರುವ ಪಶು ಆಸ್ಪತ್ರೆಯ ಸಲುವಾಗಿ ದಾನಿಗಳು ಜಾಗವನ್ನು ದಾನವಾಗಿ ದಾನ ಪತ್ರವನ್ನು ಮಾಡಿಸಿಕೊಳ್ಳದೆ ಹಾಗೆಯೇ ಕಟ್ಟಡವನ್ನು ನಿರ್ಮಿಸಿರುವ ಬಗ್ಗೆ ಈ ಪ್ರಕರಣವನ್ನು ಗಂಭೀರ ಪ್ರಕರಣವೆಂದು ಪರಿಗಣಿಸಿ ಯಾರು ತಪ್ಪಿತಸ್ಥರಿದ್ದಾರೆ, ಇದಕ್ಕೆ ಯಾರು ಹೊಣೆಗಾರರಿದ್ದಾರೆ ಅವರ ಮೇಲೆ ಸೂಕ್ತ ಕ್ರಮಕೈಕೊಳ್ಳಬೇಕೆಂದು ಸೂಚಿಸಿದ್ದರ ಮೇರೆಗೆ ಯಾವ ಕ್ರಮ ತೆಗೆದುಕೊಂಡಿರುತ್ತೀರಿ ಅನ್ನುವ ಕುರಿತು ಸಭೆಯಲ್ಲಿ ಕೇಳಲಾಗಿ ಮುದ್ದೇಬಿಹಾಳ ತಾಲ್ಲೂಕಿನ ಪಶು ವೈದ್ಯಕೀಯ ಸಂಸ್ಥೆಗಳ ಕಟ್ಟಡಕ್ಕಾಗಿ ದಾನಿಗಳು ಕೊಡಮಾಡಿದ ಎಲ್ಲ ಜಾಗೆಗಳನ್ನು ದಾನ ಪತ್ರದ ಮೂಲಕ ಉಪ ನೋಂದಣಾಧಿಕಾರಿಗಳು ಮುದ್ದೇಬಿಹಾಳ ಇವರ ಕಛೇರಿಯಲ್ಲಿ ನೋಂದಾಯಿಸಿ ಸಂಬಂಧಪಟ್ಟ ಗ್ರಾಮ ಪಂಚಾಯಿತಿಗಳಿಂದ ಉತಾರೆಗಳನ್ನು ಪಡೆದುಕೊಂಡು ಕಟ್ಟಡಗಳನ್ನು ಕಟ್ಟಲಾಗಿದ್ದು, ಹಾಗೂ ಪಶು ಆಸ್ಪತ್ರೆಯ ಸಲುವಾಗಿ ದಾನಿಗಳು ಜಾಗವನ್ನು

ದಾನವಾಗಿ ಕೊಟ್ಟಿರುವುದನ್ನು ಮಾನ್ಯ ರಾಜ್ಯಪಾಲರು ಕರ್ನಾಟಕ ಸರ್ಕಾರ ಇವ ಹೆಸರಿಗೆ ನೋಂದಾಯಿಸಿಕೊಂಡು ಕಟ್ಟಡಗಳನ್ನು ಕಟ್ಟಲಾಗಿದೆ ಅಂತ ಸಭೆಯಲ್ಲಿ ತಿಳಿಸಿದರು.

**<u>ಹಿರಿಯ ಭೂ ವಿಜ್ಞಾನಿ (ಖನಿಜ ವಿಭಾಗ) ಗಣಿ ಮತ್ತು ಭೂ ವಿಜ್ಞಾನಿ ಇಲಾಖೆ, ವಿಜಯಪುರ</u>**- ಯಾರೇ ಇರಲಿ ಎಷ್ಟೇ ಪ್ರಭಾವಿ ಇರಲಿ ಈ ಕೂಡಲೇ ಎಲ್ಲ ಅಕ್ರಮ ಮರಳು ಸಾಗಾಣಿಕೆ ತಡೆಗಟ್ಟಲು ಅರಣ್ಯ ಇಲಾಖೆ, ಪೋಲೀಸ್ ಇಲಾಖೆ ಸಹಾಯ ಪಡೆದು ಅಕ್ರಮ ತಡೆಯಲು ಜಂಟಿ ಕಾರ್ಯಾಚರಣೆ ನಡೆಸಿ ಕಡಿವಾಣ ಹಾಕಬೇಕೆಂದು ಕಟ್ಟುನಿಟ್ಟಿನ ಸೂಚನೆ ನೀಡಿದರು. ಸಭಾಧ್ಯಕ್ಷರು ಮಾತನಾಡುತ್ತಾ, ಮರಳು ಬ್ಲಾಕ್‌ಗಳನ್ನು ಗುರುತಿಸಿ ಶೀಘ್ರದಲ್ಲೇ ಟೆಂಡರ್ ಕರೆಯುವ ವ್ಯವಸ್ಥೆ ಮಾಡಲು ಹಾಗೂ ವಿಜಯಪುರ ನದಿ ಪಾತ್ರದ ವ್ಯಾಪ್ತಿಯಲ್ಲಿಯೂ ಮರಳು ಗಣಿಗಾರಿಕೆಗೆ ಅವಕಾಶ ದೊರೆಯಲು ಅನುಕೂಲವಾಗುವಂತೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು ನ್ಯಾಯಾಲಯದ ಆದೇಶ ಪ್ರತಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವಂತೆ ಸೂಚಿಸಿದ್ದರ ಮೇರೆಗೆ ಯಾವ ಕ್ರಮ ಕೈಕೊಂಡಿರುವಿರಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಕೇಳಲಾಗಿ ಮಾನ್ಯ ಸಚಿವರ ಸೂಚನೆಯಂತೆ ಇತರೆ ಇಲಾಖೆಯೊಂದಿಗೆ ಚರ್ಚಿಸಲಾಗಿದ್ದು, ಕಾರ್ಯವು ಪ್ರಗತಿಯಲ್ಲಿದೆ ಮಾನ್ಯ ಸಭಾಧ್ಯಕ್ಷರ ಸೂಚನೆಯಂತೆ ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದ ನ್ಯಾಯಾಲಯದ ಆದೇಶದ ಪ್ರತಿಯನ್ನು ಜಿಲ್ಲಾಧಿಕಾರಿಗಳರವರಿಗೆ ಸಲ್ಲಿಸಲಾಗಿದೆ ಅಂತಾ ಸಭೆಯಲ್ಲಿ ತಿಳಿಸಿದರು.

**<u>ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ವಿಜಯಪುರ</u>** – ಕಳೆದ ಕೆ.ಡಿ.ಪಿ ಸಭೆಯಲ್ಲಿ ಮಾನ್ಯ ಸಭಾಧ್ಯಕ್ಷರು ಖಡಿ ಮಶೀನ್ ಸುತ್ತ-ಮುತ್ತ ಇರುವ ರಸ್ತೆಗಳಲ್ಲಿ 30-35 ಟನ್ ಭಾರವನ್ನು ಹಾಕಿಕೊಂಡು ವಾಹನಗಳು ತಿರುಗಾಡುತ್ತಿರುವ ಸ್ಥಳಕ್ಕೆ ಭೇಟಿ ನೀಡಿ ಓವರ ಲೋಡ ಹಾಕಿಕೊಂಡು ತಿರುಗಾಡುವವರ ಮೇಲೆ ಕೇಸ್ ಬುಕ್ ಮಾಡುವಂತೆ ಸೂಚಿಸಿದ್ದರ ಮೇರೆಗೆ ಯಾವ ಕ್ರಮ ತೆಗೆದುಕೊಂಡಿರುತ್ತೀರಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಕೇಳಲಾಗಿ ಓವರ ಲೋಡ ಹಾಕಿಕೊಂಡು ತಿರುಗಾಡುವ ವಾಹನಗಳನ್ನು ಇಲ್ಲಿಯವರೆಗೆ 05 ಪ್ರಕರಣ ದಾಖಲಿಸಿ ರೂ. 1,86,300-00 ದಂಡ ವಸೂಲಾತಿ ಮಾಡಲಾಗಿದೆ ಅಂತಾ ತಿಳಿಸಿದರು ಮತ್ತು ತಮ್ಮ ಇಲಾಖೆಗೆ ಸಂಬಂಧಪಟ್ಟಂತೆ ಸಕಾಲದಲ್ಲಿ 07 ಪ್ರಕರಣ ಬಾಕಿ ಇರುವುದಾಗಿ ಸಭೆಯಲ್ಲಿ ತಿಳಿಸಿದರು ಮತ್ತು ಅವುಗಳನ್ನು ಸಕಾಲದಲ್ಲಿ ಇತ್ಯರ್ಥಪಡಿಸಲು ಸೂಚಿಸಿದರು.

**<u>ಅಬಕಾರಿ ಉಪ ಆಯುಕ್ತರು ಅಬಕಾರಿ ಇಲಾಖೆ ವಿಜಯಪುರ</u>** - ಕಳೆದ ಕೆ.ಡಿ.ಪಿ ಸಭೆಯಲ್ಲಿ ಮಾನ್ಯ ಸಭಾಧ್ಯಕ್ಷರು ಜಿಲ್ಲೆಯಲ್ಲಿ ಕಳ್ಳಬಟ್ಟಿ ಮಧ್ಯ ಮಾರಾಟವಾಗದಂತೆ ಎಚ್ಚರಿಕೆ ವಹಿಸಲು ಸೂಚಿಸಿದ್ದರು. ಅದಕ್ಕೆ ಯಾವ ಕ್ರಮ ತೆಗೆದುಕೊಂಡಿರುತ್ತೀರಿ ಅಂತಾ ಕೇಳಲಾಗಿ ಈಗ ಸಧ್ಯ ಕಳ್ಳಬಟ್ಟಿ ಕೇಂದ್ರಗಳಲ್ಲಿ ನಿರಂತರವಾಗಿ ಅಬಕಾರಿ ದಾಳಿ, ಗಸ್ತು, ರಾತ್ರಿ ಪಹರೆ ಗ್ರಾಮಸಭೆಗಳನ್ನು ನಡೆಸಿ ರೂಲ್ 50 ರಡಿ ಕ್ರಮಗಳನ್ನು ಜರುಗಿಸಲಾಗುತ್ತಿದೆ ಅಂತಾ ಸಭೆಯಲ್ಲಿ ವಿವರಗಳನ್ನು ತಿಳಿಸಿದರು.

**<u>ಕಂದಾಯ ವಿಷಯಗಳು:</u>**

ಜಿಲ್ಲಾಧಿಕಾರಿಗಳು ವಿಜಯಪುರ ಇವರು ವಿಪತ್ತು ನಿರ್ವಹಣೆ ಕುರಿತಂತೆ ಸಭಾಧ್ಯಕ್ಷರಿಗೆ ವಿವರಿಸುತ್ತಾ, ಅಗಸ್ಟ್-2019 ರಲ್ಲಿ ಆಲಮಟ್ಟಿ ಜಲಾಶಯದಿಂದ ಹೆಚ್ಚು ನದಿಗೆ ನೀರು ಬಿಟ್ಟಿರುವ ಕಾರಣ ನೆರೆ ಹಾವಳಿಯಿಂದ ಜಿಲ್ಲೆಯ ಒಟ್ಟು 13 ಗ್ರಾಮಗಳು ಜಲಾವೃತವಾಗಿದ್ದು, ಜಿಲ್ಲೆಯ ಒಟ್ಟು 64 ಗ್ರಾಮಗಳ ಜಮೀನುಗಳಿಗೆ ನೀರು ಬಂದಿದ್ದು, ಇಂಡಿ ತಾಲೂಕಿನ ನಾದ ಬಿ.ಕೆ. ಗ್ರಾಮದ 1 ಮಾನವ ಜೀವ ಹಾನಿಯಾಗಿರುತ್ತದೆ. ಅದರಂತೆ ಜಿಲ್ಲೆಯಲ್ಲಿ ಒಟ್ಟು 13 ಕಾಳಜಿ ಕೇಂದ್ರಗಳನ್ನು

ತೆಗೆಯಲಾಗಿದ್ದು, ಮನೆಗಳಿಗೆ ನೀರು ನುಗ್ಗಿದ ಒಟ್ಟು 480 ಮನೆಗಳಿಗೆ ರೂ.10000 ಅಂತೆ ಪರಿಹಾರ ಧನ ನೀಡಲಾಗಿದ್ದು, ಈಗ ಸದ್ಯಕ್ಕೆ ಎಸ್.ಡಿ.ಆರ್.ಎಫ್. ಪಿ.ಡಿ ಖಾತೆಯಲ್ಲಿ ರೂ.1300.00 ಲಕ್ಷ ಅನುದಾನ ಶಿಲ್ಕು ಇರುತ್ತದೆ.

ಅಗಸ್ಟ್-2019 ರಲ್ಲಿ ಸಂಬಂಧಿಸಿದ ಪ್ರವಾಹದಿಂದ ಒಟ್ಟು ಮುದ್ದೇಬಿಹಾಳ ತಾಲೂಕಿನಲ್ಲಿ 05 ಹಾಗೂ ನಿಡಗುಂದಿ ತಾಲೂಕಿನಲ್ಲಿ 13 ಶೇ.25% ರಿಂದ 75% ರವರೆಗೆ ಮನೆಗಳು ಹಾನಿಗೀಡಾಗಿದ್ದು ಅದರಂತೆ ತಲಾ ಒಂದು ಮನೆಗೆ (ಬಿ-ಶ್ರೇಣಿ) ರೂ.1.00 ಲಕ್ಷ ಪರಿಹಾರ ಧನ ನೀಡಿದ್ದು, ಅದರಂತೆ ಶೆ.15% ರಿಂದ 25% ರವರೆಗೆ ಹಾನಿಗೀಡಾದ ಮನೆಗಳಿಗೆ (ಸಿ-ಶ್ರೇಣಿ)ಮುದ್ದೇಬಿಹಾಳ – 103 , ನಿಡಗುಂದಿಯಲ್ಲಿ 41 ಹೀಗೆ ಒಟ್ಟು 144 ಮನೆಗಳಿಗೆ ತಲಾ ಒಂದು ಮನೆಗೆ 50,000 ರೂ. ಅಂತೆ ಪರಿಹಾರ ಧನ ವಿತರಿಸಿದ್ದು ಇರುತದೆ.

ಮುದ್ದೇಬಿಹಾಳ ಹಾಗೂ ನಿಡಗುಂದಿ ತಾಲೂಕಿಗೆ ಸೇರಿ ಒಟ್ಟು 18 "ಬಿ" ಶ್ರೇಣಿಯ ಮನೆಗಳ ಪುನರ ನಿರ್ಮಾಣದ ಕಾರ್ಯ ಜರುಗಿಸಲಾಗುತ್ತಿದ್ದು, ಇದರಲ್ಲಿ 12 ಅಡಿಪಾಯಕ್ಕಿಂತ ಕೆಳಗೆ ಮತ್ತು 01 ಅಡಿಪಾಯದ ಹಂತ ಮತ್ತು 05 ಲಿಂಟಲ್‌ಲೇವಲದಲ್ಲಿ ಇರುತ್ತದೆ ಸಭೆಯಲ್ಲಿ ತಿಳಿಸಿದರು. ಈ ಕೆಲಸಗಳನ್ನು ಶೀಘ್ರವಾಗಿ ಮುಗಿಸುವಂತೆ ತಿಳಿಸಿದರು

2019-20 ನೇ ಸಾಲಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ ಗ್ರಾಮಗಳ ಸಂಪರ್ಕ ರಸ್ತೆಗಳು, ಶಾಲಾ ಕಟ್ಟಡಗಳ ದುರಸ್ತಿಗಾಗಿ ಎಸ್.ಡಿ.ಆರ್.ಎಫ್/ಎನ್.ಡಿ.ಆರ್.ಎಫ್ ಅಡಿ ಕಾಮಗಾರಿಗಳು ನಡೆದಿದ್ದು, ಅದರಂತೆ 82 ರಸ್ತೆ ದುರಸ್ತಿ ಕಾಮಗಾರಿಗಳು ಇದ್ದು, ಅವು ಎಲ್ಲ ಕಾಮಗಾರಿಗಳು ಮುಕ್ತಾಯವಾಗಿರುತ್ತದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ಸಭೆಗೆ ತಿಳಿಸಿದರು ಮತ್ತು 28 ಶಾಲಾ ಕಟ್ಟಡ ದುರಸ್ಥಿ ಕಾಮಗಾರಿಗಳು ಇದ್ದು ಅವುಗಳನ್ನು ಪೆಬ್ರವರಿ – 10 ರ ಒಳಗಾಗಿ ದುರಸ್ತಿ ಕಾರ್ಯ ಮುಗಿಸುವಂತೆ ಸಭೆಯ ಅಧ್ಯಕ್ಷರು ತಿಳಿಸಿದರು.

ಪ್ರವಾಹದಿಂದ ಸಣ್ಣ ನೀರಾವರಿ ಇಲಾಖೆಯ ಮೂಲ ಸೌಕರ್ಯ ಹಾನಿಯ ಪುನರ್ ನಿರ್ಮಾಣಕ್ಕಾಗಿ ಸರಕಾರದಿಂದ ನೇರವಾಗಿ ಸಂಬಂಧಪಟ್ಟ ಇಲಾಖೆಗೆ ಹಣ ಬಿಡುಗಡೆಯಾಗಿದ್ದು, ಅದರಂತೆ ಒಟ್ಟು 05 ಕಾಮಗಾರಿಗಳು ಇದ್ದು, ಅವು ಪ್ರಗತಿಯಲ್ಲಿರುವದಾಗಿ ತಿಳಿಸಿದರು, ಅವುಗಳನ್ನು ಪೆಬ್ರವರಿ ಅಂತ್ಯದವರೆಗೆ ಮುಕ್ತಾಯಗೊಳಿಸುವಂತೆ ಸೂಚಿಸಿದರು. ಅದರಂತೆ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ಒಟ್ಟು 6 ಕಾಮಗಾರಿಗಳು ಇದ್ದು, ಅದರ ಪೈಕಿ 2 ಪ್ರಗತಿಯಲ್ಲಿದ್ದು, 4 ಕಾಮಗಾರಿಗಳು ಮುಕ್ತಾಯಗೊಂಡಿರುತ್ತದೆ ಅಂತಾ ಸಭೆಯಲ್ಲಿ ತಿಳಿಸಿದರು.

**<u>ಜಿಲ್ಲಾ ಪಂಚಾಯತ ವಿಷಯಗಳು:</u>**

ಸಭಾಧ್ಯಕ್ಷರು ಜಿಲ್ಲಾ ಪಂಚಾಯತ ಇಲಾಖೆಯ ವಿಷಯಗಳ ಬಗ್ಗೆ ಪರಿಶೀಲಿಸಿದರು. ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ವಿಜಯಪುರ ಇವರು 2019-20 ನೇ ಸಾಲಿನ ಸತತ ಸುರಿದ ಭಾರಿ ಮಳೆ ಹಾಗೂ ಪ್ರವಾಹದಿಂದ ಹಾನಿಗೊಳಗಾದ ರಸ್ತೆ ಮತ್ತು ಸೇತುವೆ ಕಾಮಗಾರಿಗಳ ವಿವರಗಳನ್ನು ಸಭೆಯಲ್ಲಿ ವಿವರಿಸಿದರು. ಕೆ.ಆರ್.ಐ.ಡಿ.ಎಲ್ ವಿಜಯಪುರ ಇವರ ಕಾಮಗಾರಿಗಳ ಸಂಖ್ಯೆ 78 ರ ಪೈಕಿ 51 ಕಾಮಗಾರಿ ಪ್ರಾರಂಭ 19 ಬಾಕಿ ಇರುತ್ತವೆ ಅಂತಾ ತಿಳಿಸಿದರು. ಪಂಚಾಯತ ರಾಜ್ ಇಂ. ವಿಭಾಗದಿಂದ ಒಟ್ಟು 55 ಕಾಮಗಾರಿಗಳು ಇದ್ದು ಅದರಲ್ಲಿ 27 ಟೆಂಡರ ಕರೆಯಲಾಗಿದೆ 27 ತುಂ.ಕ.ಪ ಅನುಮೋದನೆಗಾಗಿ ಇದೆ ಅಂತಾ ತಿಳಿಸಿದರು.

2019-20 ನೇ ಸಾಲಿನಲ್ಲಿ ಪ್ರವಾಹದಿಂದ ಹಾನಿಗೊಳಗಾದ ರಸ್ತೆಗಳ ಬಗ್ಗೆ ಪರಿಶೀಲಿಸಿದಾಗ ಎನ್.ಡಿ.ಆರ್.ಎಫ್ ದಿಂದ ರೂ. 98.45 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಒಟ್ಟು 91 ಕಾಮಗಾರಿಗಳ ಪೈಕಿ 82 ಕಾಮಗಾರಿಗಳು

| | | |
|---|---|---|
| | | ಪೂರ್ಣಗೊಂಡಿರುತ್ತವೆ. ಇಲ್ಲಿಯವರೆಗೆ ಒಟ್ಟು ರೂ. 73.22 ಲಕ್ಷ ಅನುದಾನ ಖರ್ಚಾಗಿರುತ್ತವೆ ಅಂತಾ ತಿಳಿಸಿದರು. ಬಾಕಿ ಇರುವ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಅಧ್ಯಕ್ಷರು ಸಭೆಗೆ ತಿಳಿಸಿದರು.<br><br>ಮಹಾತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಹಾಗೂ ನರೇಗಾ ಯೋಜನೆ ಅಡಿಯಲ್ಲಿ ಪ್ರಗತಿಯಾದ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು. ಜಲಾಮೃತ ಯೋಜನೆಯಡಿ ಸಾಂಪ್ರದಾಯಿಕ ನೀರಿನ ಮೂಲಗಳ ಪುನರುಜ್ಜೀವನ ಕಾಮಗಾರಿಗಳು (ಕಲ್ಯಾಣಿ, ಕುಂಟೆ, ಗೋಕಟ್ಟೆ ಮತ್ತು ಕಟ್ಟೆ) ಇವುಗಳಲ್ಲಿ ಅನುಮೋದನೆಗೊಂಡ 38 ಕಾಮಗಾರಿಗಳ ಪೈಕಿ 20 ಕಾಮಗಾರಿಗಳು ಚಾಲನೆಯಲ್ಲಿವೆ. ಇನ್ನು ಯಾವ ಕಾಮಗಾರಿಗಳು ಮುಕ್ತಾಯಗೊಂಡಿರುವದಿಲ್ಲ. ಅದರಂತೆ ಸಭಾಧ್ಯಕ್ಷರು ಬಾಕಿ ಇರುವ ಕಾಮಗಾರಿಗಳನ್ನು ಶೀಘ್ರವಾಗಿ ಮುಕ್ತಾಯಗೊಳಿಸಲು ಸೂಚಿಸಿದರು. |

| | | |
|---|---|---|
| | ಇತರೆ ವಿಷಯಗಳು | |
| | | • ಹಿಂದಿನ ಸಭೆಯ ಅನುಪಾಲನಾ ವರದಿಯನ್ನು ಸಭೆಗೆ ಸಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳು ಹಾಜರಿದ್ದು ಪಾಲನಾ ವರದಿ ಸಲ್ಲಿಸಬೇಕು ಅಂತಾ ತಿಳಿಸಿದರು.<br>• ಇನ್ನು ಮುಂದೆ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಗೈರು ಹಾಜರ ಇರದೆ ಹಾಜರಿದ್ದು ತಮ್ಮ ತಮ್ಮ ಇಲಾಖೆಯ ಪ್ರಗತಿ ವರದಿಯನ್ನು ಖುದ್ದಾಗಿ ಸಲ್ಲಿಸಬೇಕು ಅಂತಾ ತಿಳಿಸಿದರು.<br>• ಜಿಲ್ಲೆಯಲ್ಲಿ ದುರಸ್ತಿಯಲ್ಲಿರುವ ಕುಡಿಯುವ ನೀರಿನ ಘಟಕಗಳನ್ನು ತಕ್ಷಣ ಸರಿಪಡಿಸಿ ಈ ಕುರಿತು ಪರಿಶೀಲನಾತ್ಮಕ ವರದಿ ಸಲ್ಲಿಸಬೇಕು ಎಂದು ತಿಳಿಸಿದರು.<br>• ಜಿಲ್ಲೆಯಲ್ಲಿರುವ 828 ಶುದ್ಧ ಕುಡಿಯುವನೀರಿನ ಘಟಕಗಳಲ್ಲಿ 380 ಘಟಕಗಳು ದುರಸ್ತಿಯಾಗಬೇಕಾಗಿದೆ. ಸಂಬಂಧಪಟ್ಟ, ಅಧಿಕಾರಿಗಳು ತಕ್ಷಣ ಕಾರ್ಯ ಪ್ರವೃತ್ತರಾಗಿ ಫೆ.10 ರೊಳಗೆ ದುರಸ್ತಿ ಪಡಿಸಿ ಕೈಗೊಂಡ ಕ್ರಮದ ಬಗ್ಗೆ ವರದಿ ಸಲ್ಲಿಸಬೇಕು ಎಂದು ತಿಳಿಸಿದರು.<br>• ಈ ಕುರಿತು ಮುಂದಿನ ದಿನಗಳಲ್ಲಿ ಖುದ್ದಾಗಿ ಭೇಟಿ ನೀಡಿ ದುರಸ್ತಿ ಪಡಿಸಿದ ಬಗ್ಗೆ ಪರಿಶೀಲಿಸಲಾಗುವುದು. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಸಂಭವ ಇರುವ ಕಡೆ ಗ್ರಾ.ಪಂ ಮತ್ತು ಸ್ತ್ರೀ ಶಕ್ತಿ ಗುಂಪುಗಳಿಗೆ ಕೆಲ ಘಟಕಗಳ ಹಸ್ತಾಂತರದ ಮೂಲಕ ನಿರ್ವಹಣೆಗೆ ಅವಕಾಶವಿದ್ದಲ್ಲಿ ಕ್ರಮಕೈಗೊಳ್ಳಬೇಕು ನಿತ್ಯ ದುರಸ್ತಿಯಲ್ಲಿರುವ ಘಟಕಗಳನ್ನು ಸರಿಪಡಿಸಿ ದಾಖಲೀಕರಣಗೊಳಿಸಬೇಕು ಎಂದರು.<br>• ಕೆ.ಬಿ.ಜೆ.ಎನ್.ಎಲ್ ವ್ಯಾಪ್ತಿಯ ಜಿಲ್ಲೆಯ ನಾನಾ ಕಾಲುವೆಗಳ ವ್ಯಾಪ್ತಿಯಲ್ಲಿ ಉಸ್ತುವಾರಿ ಬಗ್ಗೆ ಪರಿಶೀಲಿಸಿ ಈ ಕುರಿತು ವರದಿ ಸಲ್ಲಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು. ಮುಳವಾಡ ಬಳಿ ಕಾಲುವೆಗಳ ಬಾಕ್ಸ ಕಾಮಗಾರಿ ಮುಕ್ತಾಯಗೊಳಿಸಲು ವಿಶೇಷ ಗಮನ ನೀಡಬೇಕು. ನೀರಿನ ಸರಬರಾಜು ನಿರ್ವಹಣೆ ಅಚ್ಚುಕಟ್ಟಾಗಿ ಮಾಡಬೇಕು ಎಂದರು.<br>• ನಾನಾ ಕೆರೆ ಭರ್ತಿ ಮತ್ತು ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಯನ್ನು ಸಮರ್ಪಕವಾಗಿ ನಿಭಾಯಿಸಿ ಮುಂಬರುವ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ ವಹಿಸಲು ಸೂಚನೆ ನೀಡಿದರು.<br>• ಗಂಗಾ ಕಲ್ಯಾಣ ಯೋಜನೆಯಡಿ ವಿವಿಧ ಕೊಳವೆ ಬಾವಿಗಳಿಗೆ ವಿದ್ಯುತ್ |

| | | |
|---|---|---|
| | | ಸಂಪರ್ಕ ಕಾರ್ಯವನ್ನು ಮಾರ್ಚ ಅಂತ್ಯದೊಳಗೆ ಪೂರ್ಣಗೊಳಿಸಬೇಕು. ರೈತ ಸಂಪರ್ಕ ಕೇಂದ್ರಗಳ ಮೂಲಕ ಸಮರ್ಪಕ ಸೇವೆ ಕಲ್ಪಿಸಬೇಕು. ನರೇಗಾ ಯೋಜನೆಯಡಿ ತೋಟಗಾರಿಕೆ ಇಲಾಖೆ ವ್ಯಾಪ್ತಿಯಲ್ಲಿ ಗುರಿಗೆ ತಕ್ಕಂತೆ ಪ್ರಗತಿ ಸಾಧಿಸಬೇಕು.<br>• ಅಬಕಾರಿ ಇಲಾಖೆ ವ್ಯಾಪ್ತಿಯಲ್ಲಿ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ವ್ಯಾಪ್ತಿಯಲ್ಲಿ ಸಕಾಲದಲ್ಲಿ ಬಾಕಿ ಇರುವ ಪ್ರಕರಣಗಳನ್ನು ತಕ್ಷಣ ಇತ್ಯರ್ಥ ಪಡಿಸಬೇಕು.<br>• ಎಲ್ಲಾ ಇಲಾಖೆಯ ಅಧಿಕಾರಿಗಳು ಸಾರ್ವಜನಿಕರ ಜೊತೆಗೆ ಉತ್ತಮ ಸಂಪರ್ಕದಲ್ಲಿದ್ದುಕೊಂಡು ಸರ್ಕಾರದ ಕಾರ್ಯಕ್ರಮಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವಲ್ಲಿ ಅಗತ್ಯ ಕ್ರಮ ಕೈಕೊಳ್ಳಬೇಕು ಮತ್ತು ಜಿಲ್ಲೆಯ ಸಮಗ್ರ ಅಭಿವೃದ್ಧಿಯಲ್ಲಿ ಪಾಲುದಾರರಾಗಬೇಕೆಂದು ಕೋರಿಕೊಂಡರು. |

(ಡಾ॥ ಜೆ. ರವಿಶಂಕರ್, ಭಾ.ಆ.ಸೇ.)
ವ್ಯವಸ್ಥಾಪಕ ನಿರ್ದೇಶಕರು,
ಕ.ನ.ನೀ.ಸ ಮತ್ತು ಒ.ಚ ಮಂಡಳಿ, ಬೆಂಗಳೂರು
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ವಿಜಯಪುರ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಪ್ರವಾಸ ವರದಿ

| ಕ್ರ.ಸಂ | ಅಂಶಗಳು | |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಉತ್ತರ ಕನ್ನಡ ಜಿಲ್ಲೆ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಮುನೀಶ್ ಮೌದ್ಗಿಲ್, ಭಾ.ಆ.ಸೇ |
| 3 | ಪ್ರವಾಸ ಕೈಗೊಂಡ ದಿನಾಂಕ | 29-01-2020 |

ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ

| | | |
|---|---|---|
| 1. | ಜಿಲ್ಲಾಉಸ್ತುವಾರಿ ಕಾರ್ಯದರ್ಶಿಗಳು ಗಮನಿಸಿದ ಅಂಶಗಳು | 1. ಮಾನ್ಯ ಕಂದಾಯ ಸಚಿವರ ಅಧ್ಯಕ್ಷತೆಯಲ್ಲಿ ಪ್ರವಾಹ ಪರಿಹಾರ/ ಕುಡಿಯುವ ನೀರು/ ಜನಗಣತಿ ಇತರೆ ವಿಷಯಗಳ ಕುರಿತು ಜರುಗಿದ ವಿಡಿಯೋ ಸಂವಾದದಲ್ಲಿ ಭಾಗವಹಿಸಿದರು.<br>2. ಪ್ರವಾಹದಿಂದಾಗಿ ಹಾನಿಗೊಳಗಾದ ಬೆಳೆ ಹಾನಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ 17652 ರೈತರಿಗೆ ರೂ.14.73 ಕೋಟಿ ಪರಿಹಾರಧನವನ್ನು ವಿತರಿಸಲಾಗಿರುವುದನ್ನು ಹಾಗೂ ಇನ್ನೂ 172 ರೈತರಿಗೆ ಪರಿಹಾರಧನ ನೀಡುವುದು ಬಾಕಿ ಇರುವ ಬಗ್ಗೆ ಗಮನಿಸಿದರು.<br>3. ಪ್ರವಾಹದಿಂದಾಗಿ ಹಾನಿಗೊಳಗಾದ ಮೂಲಭೂತ ಸೌಕರ್ಯ ದುರಸ್ಥಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯ ಕಾಮಗಾರಿಗಳ ಪೈಕಿ 643 ಕಾಮಗಾರಿಗಳು ಮುಕ್ತಾಯವಾಗಿರುವುದನ್ನು ಹಾಗೂ 898 ಕಾಮಗಾರಿಗಳು ಪ್ರಗತಿಯಲ್ಲಿರವುದನ್ನು ಪರಿಶೀಲಿಸಿದರು.<br>4. ಪ್ರವಾಹ ಪರಿಹಾರ ಕಾರ್ಯಗಳಿಗೆ ಸಂಬಂಧಿಸಿದಂತೆ ಸಣ್ಣ ನೀರಾವರಿ ಇಲಾಖೆಯಲ್ಲಿ 12 ಕಾಮಗಾರಿಗಳು ಟೆಂಡರ್ ಹಂತದಲ್ಲಿರುವುದನ್ನು ಗಮನಿಸಿದರು.<br>5. ಪ್ರವಾಹ ಪರಿಹಾರ ಕಾರ್ಯಗಳಿಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯಲ್ಲಿ ಒಟ್ಟು 67 ಕಾಮಗಾರಿಗಳ ಪೈಕಿ 15 ಕಾಮಗಾರಿಗಳು ಮುಕ್ತಾಯಗೊಂಡಿರುವುದನ್ನು ಹಾಗೂ 52 ಕಾಮಗಾರಿಗಳು ಪ್ರಗತಿಯಲ್ಲಿರುವುದನ್ನು ಗಮನಿಸಿದರು<br>6. ಪ್ರವಾಹದಿಂದಾಗಿ ಹಾನಿಗೊಳಗಾದ ಮನೆಗಳಿಗೆ ಸಂಬಂಧಿಸಿದಂತೆ ಎ ವರ್ಗದ 123 ಮನೆಗಳ ಪೈಕಿ 22 ಮನೆಗಳು ಹಾಗೂ 589 ಬಿ ವರ್ಗದ ಮನೆಗಳ ಪೈಕಿ 32 ಮನೆಗಳು ತಳಪಾಯ ಹಂತದ ಜಿ.ಪಿ.ಎಸ್. ಆಗಿರುವುದನ್ನು ಗಮನಿಸಿದರು.<br>7. ಜಿಲ್ಲೆಯಲ್ಲಿ ಬೇಸಿಗೆಯಲ್ಲಿ ಉಂಟಾಗಬಹುದಾದ ಕುಡಿಯುವ ನೀರಿನ ಸಮಸ್ಯೆಯ ಕುರಿತು ಪರಿಶೀಲಿಸಿದರು. |

| | | |
|---|---|---|
| 2 | ನಿರ್ದೇಶನ ನೀಡಿದ ಬಗ್ಗೆ ಸಾರಾಂಶ | 1. ಬೆಳೆ ಹಾನಿ ಪರಿಹಾರ ವಿತರಣೆಗೆ ಸಂಬಂಧಿಸಿದಂತೆ ಗ್ರಾಮ ಲೆಕ್ಕಿಗ ಮತ್ತು ತಹಶೀಲ್ದಾರ್ ಲಾಗೀನ್‌ನಲ್ಲಿ ಅನುಮೋದನೆಗೆ ಬಾಕಿ ಇರುವಂತಹ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಲು ಸೂಚಿಸಿದರು.<br>2. ಮೂಲಭೂತ ಸೌಕರ್ಯ/ದುರಸ್ಥಿ ಕಾಮಗಾರಿಗಳಿಗೆ ಸಂಬಂದಿಸಿದಂತೆ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಶೀಘ್ರವಾಗಿ ಮುಕ್ತಾಯಗೊಳಿಸಲು ಹಾಗೂ ಇನ್ನು ಪ್ರಾರಂಭವಾಗದೇ ಇರುವಂತಹ ಕಾಮಗಾರಿಗಳನ್ನು ಶೀಘ್ರವಾಗಿ ಪ್ರಾರಂಭಿಸಲು ತಿಳಿಸಿದರು.<br>3. ಮನೆ ಹಾನಿಗೆ ಪರಿಹಾರ ನೀಡುವುಕ್ಕೆ ಸಂಬಂಧಿಸಿದಂತೆ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡುವುದಕ್ಕೆ, ಫಲಾನುಭವಿಗಳಿಗೆ ಶೀಘ್ರವಾಗಿ ಮನೆಯನ್ನು ಕಟ್ಟಿಕೊಳ್ಳಲು ಹಾಗೂ ತಳಪಾಯ ಹಂತದ ಕಾಮಗಾರಿ ಮುಕ್ತಾಯಗೊಂಡಂತಹ ಮನೆಗಳ ಜಿ.ಪಿ.ಎಸ್. ಮಾಡಿ ಎರಡನೇ ಕಂತಿನ ಅನುದಾನ ಬಿಡುಗಡೆ ಮಾಡಲು ತಿಳಿಸಿದರು.<br>4. ಜಿಲ್ಲೆಯಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾದಲ್ಲಿ ಕುಡಿಯುವ ನೀರಿನ ಪೂರೈಕೆಯನ್ನು ಟ್ಯಾಂಕರ್ ಮ್ಯಾನೇಜಮೆಂಟ್ ಸಿಸ್ಟಮ್ ಎಂಬ ಆನಲೈನ್ ತಂತ್ರಾಂಶದ ಮೂಲಕವೇ ನಿರ್ವಹಿಸಲು ತಿಳಿಸಿದರು. |

**ಕ್ಷೇತ್ರ ವೀಕ್ಷಣೆ**

| ಕ್ರಸಂ | ಭೇಟಿ ನೀಡಿದ ತಾಲ್ಲೂಕು/ಹಳ್ಳಿ | ಭೇಟಿ ನೀಡಿದ ಸ್ಥಳ | ಗಮನಿಸಿದ ಅಂಶಗಳು |
|---|---|---|---|
| 3 | ಕಾರವಾರ ತಾಲ್ಲೂಕಿನ, ಹಣಕೋಣ ಜೂಗ್ ಗ್ರಾಮ | ಕಾಳಿ ನದಿ ಪ್ರವಾಹದಿಂದ ಹಾನಿಗೊಳಗಾದ ಪ್ರದೇಶದ ಮನೆ ನಿರ್ಮಾಣ ಕಾಮಗಾರಿ ಸ್ಥಳ ಭೇಟಿ | 1. ಮನೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುವುದನ್ನು ಪರಿಶೀಲಿಸಿದರು.<br>2. ಮೊದಲನೇ ಕಂತಿನ ಪರಿಹಾರ ಧನ ಬಿಡುಗಡೆಯಾಗಿರುವುದನ್ನು ಗಮನಿಸಿದರು.<br>3. ಎರಡನೇ ಕಂತಿನ ಪರಿಹಾರ ಧನ ತ್ವರಿತವಾಗಿ ಬಿಡುಗಡೆ ಮಾಡಲು ಸೂಚಿಸಿದರು. |
| 4 | ಇತರೆ ವಿಷಯಗಳು | – | – |

(ಮುನೀಶ್ ಮೌದ್ಗಿಲ್)
ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಆ.ಸು.)
ಹಾಗೂ ಉಸ್ತುವಾರಿ ಕಾರ್ಯದರ್ಶಿ,
ಉತ್ತರ ಕನ್ನಡ ಜಿಲ್ಲೆ

## ನಮೂನೆ

## ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪ್ರವಾಸ ವರದಿ

| ಕ್ರ.ಸಂ: | ಅಂಶಗಳು | |
|---|---|---|
| 1 | ಉಸ್ತುವಾರಿ ಜಿಲ್ಲೆಯ ಹೆಸರು | ಬಾಗಲಕೋಟೆ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹೆಸರು | ಶ್ರೀ ಅಂಜುಂ ಪರ್ವೇಜ್, ಪ್ರಧಾನ ಕಾರ್ಯದರ್ಶಿಗಳು |
| 3 | ಪ್ರವಾಸ ಕೈಗೊಂಡ ದಿನಾಂಕ | 28-01-2020 |

**ವಿವಿಧ ಯೋಜನೆಗಳ ಪ್ರಗತಿ ಪರಿಶೀಲನಾ ವರದಿ**
**ದಿನಾಂಕ:28-01-2020 ರಂದು ಜಿಲ್ಲಾ ಮಟ್ಟದ ಸಭೆಯಲ್ಲಿ ನೀಡಿದ ಸೂಚನೆಗಳು:**

- ಬಾಗಲಕೋಟೆ ಜಿಲ್ಲೆಯ ಕಳೆದ ಅಗಷ್ಟ 2019 ನೇ ತಿಂಗಳಲ್ಲಿ ನೆರೆ ಹಾವಳಿಯ ಬಗ್ಗೆ ಹಾಗೂ ಅಕ್ಟೋಬರ್ 2019ರಲ್ಲಿ ಅತೀ ಮಳೆಯಿಂದ ಬೆಳೆಗಳ ನಾಶ ಹಾಗೂ ಮನೆಗಳ ಹಾನಿ ಜನ-ಜಾನುವಾರುಗಳ ಹಾನಿ ಹಾಗೂ ತೆಗೆದುಕೊಂಡ ಕ್ರಮಗಳ ಕುರಿತು ಮಾಹಿತಿಯನ್ನು ಜಿಲ್ಲಾಧಿಕಾರಿಗಳಿಂದ ಹಾಗೂ ಋತುಮಾನ ಪರಿಸ್ಥಿತಿ ಬಗ್ಗೆ ಜಂಟಿ ಕೃಷಿ ನಿರ್ದೇಶಕರಿಂದ ಮಾಹಿತಿ ಪಡೆಯಲಾಯಿತು.

- ಜಿಲ್ಲೆಯಲ್ಲಿ 2019-20ನೇ ಸಾಲಿಗೆ ಅಕ್ಟೋಬರ್-2019ರ ನಂತರ ಮಳೆ ಆಗಿರುವುದಿಲ್ಲ. ಜಿಲ್ಲೆಯಲ್ಲಿ ಹಿಂಗಾರು ಹಂಗಾಮಿಗೆ ವಿವಿಧ ರಸಗೊಬ್ಬರಗಳ ಬೇಡಿಕೆ 123350 ಎಂಟನ್ ಇದ್ದು ಜಿಲ್ಲೆಗೆ ಹಂಚಿಕೆ 102272 ಎಂಟನ್ ಆಗಿದ್ದು, ಹಿಂಗಾರು ಹಂಗಾಮಿಗೆ ಒಟ್ಟು ಲಭ್ಯತೆ 59604 ಎಂಟನ್ ಇದ್ದು, ವಿತರಣೆ 34426 ಎಂಟನ್ ಆಗಿರುತ್ತದೆ. ಅದೇ ರೀತಿ ಹಿಂಗಾರಿ ಹಂಗಾಮಿಗಾಗಿ ಬೀಜಗಳ ಬೇಡಿಕೆ 54615 ಎಂಟನ್ ಇದ್ದು, ಹಂಚಿಕೆ 39312 ಎಂಟನ್ ಆಗಿದ್ದು, ಈ ಪೈಕಿ ಸರಬರಾಜು 25480 ಎಂಟನ್ ಆಗಿದ್ದು, ಅದರಲ್ಲಿ ವಿತರಣೆ 24657 ಎಂಟನ್ ಆಗಿರುತ್ತದೆ.

- ಜಿಲ್ಲೆಯಲ್ಲಿ 2019-20ನೇ ಸಾಲಿನ ಹಿಂಗಾರು ಹಂಗಾಮಿನಲ್ಲಿ 3,10,000 ಹೆಕ್ಟರ್ ಪ್ರದೇಶಗಳಲ್ಲಿ ಬಿತ್ತನೆಗೆ ಗುರಿ ಹೊಂದಿದ್ದು, ಈ ಪೈಕಿ 2,75,570 ಹೆಕ್ಟರ್ ಪ್ರದೇಶದಲ್ಲಿ ಬಿತ್ತನೆ ಆಗಿದ್ದು, ಪ್ರತಿ ಶತ 88.89% ರಷ್ಟು ಗುರಿ ಸಾಧಿಸಲಾಗಿದೆ. ಅದರಂತೆ ಬೇಸಿಗೆ ಹಂಗಾಮಿಗೆ 36,000ಹೆಕ್ಟರ್ ಬಿತ್ತನೆಗೆ ಗುರಿ ಹೊಂದಿದ್ದು, ಈ ಪೈಕಿ 11,963 ಹೆಕ್ಟರ್ ಪ್ರದೇಶದಲ್ಲಿ ಬಿತ್ತನೆ ಆಗಿದೆ.

- ಜಿಲ್ಲೆಯಲ್ಲಿ 12 ಸಕ್ಕರೆ ಕಾರ್ಖಾನೆಗಳು ಇದ್ದು, ಇವುಗಳ ದಿನವಹಿ ಕಬ್ಬು ನಿರ್ವಹಿಸುವ ಸಾಮರ್ಥ್ಯ 99750 ಎಂಟನ್ ಇರುತ್ತದೆ. ಕಾರ್ಖಾನೆಗಳು 2016-17, 2017-18, 2018-19, ಸಾಲಿನಲ್ಲಿ ರೈತರು ಪೂರೈಸಿದ ಕಬ್ಬಿನ ಬಾಕಿ ಪಾವತಿಸದೇ ಇರುವುದನ್ನು ಜಿಲ್ಲಾಡಳಿತವು ಹಾಗೂ ಪೋಲಿಸ್ ವರಿಷ್ಠಾಧಿಕಾರಿಗಳು ಕಾರ್ಖಾನೆ ಮಾಲೀಕರು ಮತ್ತು ರೈತರೊಂದಿಗೆ ಸಂಧಾನ ಸಭೆ

ಏರ್ಡಿಸಿ 2016–17 ಹಾಗೂ 2017–18ರ ಬಾಕಿ ಮೊತ್ತದಲ್ಲಿ ರೂ.33645.98 ಲಕ್ಷ ಗಳನ್ನು ಹಾಗೂ 2018–2019 ನೇಸಾಲಿಗೆ 289385.12 ಲಕ್ಷ ಗಳನ್ನು ಕಾರ್ಖಾನೆ ಮಾಲಿಕರು ರೈತರ ಖಾತೆಗೆ ಪಾವತಿಸಲಾಗಿದೆ. ಅಲ್ಲದೇ 2019–2020 ನೇಸಾಲಿನಗಾಗಿ ಈವರೆಗೆಪೂರೈಯಿಸಿದ ಕಬ್ಬಿನ ಪಾವತಿ ಸಂಬಂಧಿಸಿದಂತೆ ಒಂದನೆ ಕಂತು 151097.43ಹಾಗೂ 2ನೇ ಕಂತಿಗೆ 73971.64 ಲಕ್ಷ ಗಳನ್ನು ಒಟ್ಟು ಪ್ರತಿ ಶತ 48.96% ರಷ್ಟು ಹಣ ಪಾವತಿಸುವ ಕ್ರಮವಹಿಸಲಾಗಿದೆ, ಈ ಎಲ್ಲ ಕ್ರಮಗಳನ್ನು ರೈತರ ಯಾವುದೆ ಮುಷ್ಕರ ಹಾಗೂ ಇನ್ನಿತರ ಯಾವುದೇ ಘಟನೆಗಳನ್ನು ಜರುಗದ ರೀತಿ ಶಾಂತಿಯುತವಾಗಿ ಸಂಧಾನಕಾರ್ಯ ನಡೆಸಲಾಗಿದೆ ಎಂದು ಜಿಲ್ಲಾಧಿಕಾರಿಗಳು ಅಧ್ಯಕ್ಷರ ಗಮನಕ್ಕೆ ತರಲಾಗಿ, ಅಧ್ಯಕ್ಷರು ಜಿಲ್ಲಾಧಿಕಾರಿಗಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

- ಸರ್ಕಾರದ ಆದೇಶದಂತೆ ಸಂತ್ರಸ್ಥ ಕುಟುಂಬಗಳ ಮನೆಗಳ ಸಮೀಕ್ಷೆಯ ಅನುಸಾರ 'ಎ' ಮತ್ತು 'ಬಿ' ವರ್ಗಗಳ ಫಲಾನುಭವಿಗಳಿಗೆ ಮನೆ ಕಟ್ಟಲು ರಾಜ್ಯ ಸರಕಾರದಿಂದ ರಾಜೀವ್ ಗಾಂಧಿ ವಸತಿ ನಿಗಮದಿಂದ ಮೊದಲನೇ ಕಂತಿನ ಅನುದಾನ ಈಗಾಗಲೇ ಜಮೆ ಆಗಿದ್ದು, ಪ್ರಗತಿ ಪರಿಶೀಲಿಸಲಾಗಿ ಫಲಾನುಭವಿಗಳು ಮುಂದಿನ ಹಂತದ ಕಟ್ಟಡದ ಕಾರ್ಯವನ್ನು ಪ್ರಾರಂಭಿಸದೇ ವಿಳಂಬವಾಗಿರುತ್ತಿರುವದನ್ನು ಅಧ್ಯಕ್ಷರು ಗಮನಿಸಿ ಇದು ಸರಕಾರದ ಮಹತ್ವದ ಕಾರ್ಯವಾಗಿದ್ದು, ಸಂಬಂಧಿಸಿದ ತಹಶೀಲ್ದಾರಗಳು ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ್ ಪಂಚಾಯತ್, ಇವರು ಜಂಟಿಯಾಗಿ ಬಾಧಿತ ಕುಟುಂಬಗಳಿಗೆ ಭೇಟಿ ನೀಡಿ ಕಟ್ಟಡ ಕಾಮಗಾರಿ ಮುಂದುವರಿಸಿ, ಅದನ್ನು ತಕ್ಷಣ ಜಿಪಿಎಸ್ ತಂತ್ರಾಂಶದಲ್ಲಿ ಅಳವಡಿಸಿ, ದಿನಾಂಕ:31–01–2020 ರೊಳಗಾಗಿ ಹೆಚ್ಚಿನ ಪ್ರಗತಿ ಸಾಧಿಸಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

- ಪ್ರವಾಹದಿಂದ ಕೃಷಿ, ತೋಟಗಾರಿಕೆ ಹಾಗೂ ರೇಷ್ಮೆ ಬೆಳೆಹಾನಿಯಾದ ರೈತರಿಗೆ ಇನ್‌ಪುಟ್ ಸಬ್ಸಿಡಿಯನ್ನು 40252 ರೈತರಿಗೆ ರೂ.87.84 ಕೋಟಿ ಪರಿಹಾರ ರೈತರ ಖಾತೆಗಳಿಗೆ ನೇರವಾಗಿ ಸರ್ಕಾರದಿಂದ ಜಮೆಯಾಗಿದೆ ಎಂದು ಜಂಟಿ ನಿರ್ದೇಶಕರು ತಿಳಿಸಿದಾಗ, ಇನ್ನುಳಿದ 118 ಅರ್ಹ ಫಲಾನುಭವಿಗಳಿಗೂ ಕೂಡಲೇ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳುವಂತೆ ಜಂಟಿ ಕೃಷಿ ನಿರ್ದೇಶಕರಿಗೆ ಸೂಚಿಸಲಾಯಿತು.

- ಹೆಸ್ಕಾಂ ಇಲಾಖೆಯ ವಿದ್ಯುತ್ 7783 ಕಂಬಗಳು, 3525 – ಟ್ರಾನ್ಸಫಾರ್ಮರಗಳು, 292 ಕಂಡಕ್ಟರ್‌ಗಳಲ್ಲಿ 149 ಕಂಡಕ್ಟರಗಳನ್ನು ಸರಿಪಡಿಸಲಾಗಿದೆ ಎಂದು ಹೆಸ್ಕಾಂ ಅಧಿಕಾರಿಗಳು ಎಲ್ಲಾ ಕಾಮಗಾರಿಗಳು ಮುಕ್ತಾಯಗೊಳಿಸಲಾಗಿದೆ ಎಂದು ಹೆಸ್ಕಾಂ ಇಲಾಖೆಯವರು ಸಭೆಗೆ ತಿಳಿಸಿದರು.

- ಪ್ರವಾಹದಿಂದ 254 ರಸ್ತೆಗಳು ಹಾಗೂ 19 ಸಿಡಿ ಹೀಗೇ ಒಟ್ಟು 273 ಹಾನಿಯಾದ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿ ಕೊಳ್ಳಲಾಗಿದ್ದು, ಇವುಗಳ ಪೈಕಿ ಈಗಾಗಲೇ 212 ಕಾಮಗಾರಿಗಳು ಪೂರ್ಣಗೊಳಿಸಿದ್ದು, ಇನ್ನೂ 61 ಕಾಮಗಾರಿಗಳು ಪ್ರಗತಿಯಲ್ಲಿದೆ ಎಂದು ಕಾರ್ಯ ನಿರ್ವಾಹಕ ಅಭಿಯಂತರರು, ಜಿ.ಪಂ. ಇಂ. ವಿಭಾಗ ಇವರು ತಿಳಿಸಿದರು. ಸದರಿ ಕಾಮಗಾರಿಗಳು

ಪ್ರವಾಹದಿಂದ ಹಾನಿಯಾಗಿದ್ದರಿಂದ ತೀವ್ರವಾಗಿ ಕಾಮಗಾರಿ ಮುಕ್ತಾಯಗೊಳಿಸಲು ಸೂಚಿಸಲಾಯಿತು.

- 113 ಶಾಲೆಗಳಲ್ಲಿ 316 ಕೊಠಡಿಗಳ ದುರಸ್ತಿಗೆ ರೂ.2.69 ಕೋಟಿ ಅನುದಾನವನ್ನು ಶಾಲಾ ಅಭಿವೃದ್ಧಿ ಸಮಿತಿಯವರಿಗೆ [ಎಸ್.ಡಿ.ಎಂ.ಸಿ.] ಅನುದಾನ ಬಿಡುಗಡೆಯಾಗಿದ್ದು, ಶಾಲಾ ಕೊಠಡಿಗಳ ಕಾಮಗಾರಿಗಳಲ್ಲಿ 247 ಕೊಠಡಿಗಳು ಮುಕ್ತಾಯಗೊಂಡಿದ್ದು, ಉಳಿದ 69 ಕೊಠಡಿಗಳ ದುರಸ್ತಿ ಕಾಮಗಾರಿ ಪ್ರಗತಿಯಲ್ಲಿವೆ ಎಂದು ಉಪನಿರ್ದೇಶಕರು, ಸಾ.ಶಿ.ಇ. ಬಾಗಲಕೋಟೆ ಇವರು ಸಭೆಯಲ್ಲಿ ತಿಳಿಸಿದರು. ಸದರಿ ಕಾಮಗಾರಿಗಳನ್ನು ಶಾಲಾ ಮಕ್ಕಳಿಗೆ ತೊಂದರೆಯಾಗದಂತೆ ತೀವ್ರವಾಗಿ ಮುಕ್ತಾಯಗೊಳಿಸಲು ನಿರ್ದೇಶನ ನೀಡಲಾಯಿತು.

- 102 ಅಂಗನವಾಡಿ ಕಟ್ಟಡಗಳು ಪೂರ್ಣಗೊಳಿಸಲಾಗಿದೆ ಎಂದು ಕಾರ್ಯ ನಿರ್ವಾಹಕ ಅಭಿಯಂತರರು, ಜಿ.ಪಂ. ಇಂ. ವಿಭಾಗ ಸಭೆಗೆ ತಿಳಿಸಿದರು.

ಕೊನೆಯದಾಗಿ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ತಮ್ಮ ಇಲಾಖೆಗೆ 2019 –20 ನೇಸಾಲಿಗೆ ಬಿಡುಗಡೆಯಾದ ಎಲ್ಲ ಅನುದಾನವನ್ನು ನಿಗಧಿತ ಅವಧಿಯಲ್ಲಿ ಬಳಕೆ ಮಾಡಿಕೊಳ್ಳುವಂತೆ ಕಟ್ಟು ನಿಟ್ಟಾಗಿ ನಿರ್ದೇಶನ ನೀಡಿದರು. ಬಾಕಿ ಇರುವ ಕಾಮಗಾರಿಗಳನ್ನು ತೀವ್ರಗತಿಯಲ್ಲಿ ಮುಕ್ತಾಯಗೊಳಿಸುವಂತೆ ಸೂಚನೆ ನೀಡಿ ಸಭೆ ಮುಕ್ತಾಯಗೊಳಿಸಲಾಯಿತು.

ನಂತರ ಜಿಲ್ಲೆಯ ವಿವಿಧ ಇಲಾಖೆಗಳ ಕಾಮಗಾರಿಗಳ ಪರಿಶೀಲನೆಗಾಗಿ ಮುಧೋಳ ತಾಲೂಕಿನ ರಂಜನಗಿ ಗ್ರಾಮಕ್ಕೆ ತೆರಳಿ ಹೆಸ್ಕಾಂ ಇಲಾಖೆಯ ಕಾಮಗಾರಿಗಳನ್ನು ಪರಿಶೀಲಿಸಿದರು. ನಂತರ ಉತ್ತೂರ ಗ್ರಾಮದಲ್ಲಿಯ ಪ್ರವಾಹದಿಂದ ಹಾನಿಗೊಳಗಾದ ಶಾಲಾ ದುರಸ್ತಿ ಕಾರ್ಯ ಪರಿಶೀಲಿಸಿದರು. ನಂತರ 1] ಮುಧೋಳ ಪಟ್ಟಣದಲ್ಲಿ ಲೋಕೋಪಯೋಗಿ ಇಲಾಖೆಯ ಯರಗಟ್ಟಿ–ಬಬಲೇಶ್ವರ ರಾ.ಹೆ. 49.83 ಕಿ.ಮೀ. 51–84 ಕಿ.ಮೀ. ವರೆಗೆ ರಸ್ತೆ ಸುಧಾರಣೆ ಕಾಮಗಾರಿ 2] ನಗರ ಸಭೆಯ ಮುಖ್ಯ ಹೆದ್ದಾರಿ ರಸ್ತೆಯಿಂದ ಆರ್.ಎಂ.ಜೆ. ಕಾಲೇಜ ರಸ್ತೆವರೆಗೆ ಡಾಂಬರಿಕರಣ, ಮತ್ತು ವಟ್‌ವೆಲ್ 3] ಹಿಂದುಳಿದ ವರ್ಗ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯದ ಕಟ್ಟಡ 4] ಸಮಾಜ ಕಲ್ಯಾಣ ಇಲಾಖೆಯ ಮಹರ್ಷಿ ವಾಲ್ಮೀಕಿ ಭವನ ಕಟ್ಟಡ ಹಾಗೂ ಕಾಮಗಾರಿಗಳ ಪರಿಶೀಲನೆ ಮಾಡಲಾಯಿತು.

ಆನಂತರ ಮಾರ್ಗ ಮಧ್ಯ ಮುಧೋಳ ತಾಲೂಕಿನ ಚಿಚಖಂಡಿ ಗ್ರಾಮದ ಅಂಗನವಾಡಿ ಕಟ್ಟಡ ಪರಿಶೀಲಿಸಿ ಬಾಗಲಕೋಟೆಗೆ ತೆರಳಿ ಮದ್ಯಾಹ್ನ 3.00 ಗಂಟೆ ನಂತರ ಬಾಗಲಕೋಟೆ ನಗರದಲ್ಲಿ 1] ನಗರಸಭೆಯಿಂದ ಕೈಗೊಂಡ ನವನಗರ ಸೆಕ್ಟರ್ ನಂ. 45 ರಲ್ಲಿ ಡಾಂಬರಿಕರಣ ರಸ್ತೆ 2] ವಿದ್ಯಾಗಿರಿ ರಸ್ತೆ ನಂ. 23 ರ ಮಹಾರಾಜ ರಸ್ತೆ ಚರಂಡಿ ಪರಿಶೀಲನೆ 3] ಹಿಂದುಳಿದ ವರ್ಗ ಇಲಾಖೆಯ ಮೆಟ್ರಿಕ್ ನಂತರ ಬಾಲಕಿಯರ ಇಂದಿರಾಗಾಂಧಿ ಸರ್ಕಾರಿ ವಿದ್ಯಾರ್ಥಿ ನಿಲಯ 4] ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿ ನಿಲಯ ಇಲಾಖೆಯ ಕಾಮಗಾರಿಗಳನ್ನು ಪರಿಶೀಲನೆ ಮಾಡಲಾಯಿತು.

ನಂತರ ರಸ್ತೆ ಮಧ್ಯ ಕಮತಗಿಯಲ್ಲಿ ಹೆಸ್ಕಾಂ ಇಲಾಖೆಯ ಕಾಮಗಾರಿ ಪರಿಶೀಲಿಸಲಾಯಿತು. ಮಾರ್ಗ ಮಧ್ಯ ಪುರಸಭೆ ಹುನಗುಂದದಿಂದ ಕೈಗೊಂಡ ತರಕಾರಿ ಮಾರುಕಟ್ಟೆ ಅಭಿವೃದ್ಧಿ ತಡೆಗೊಡೆ ಕಾಮಗಾರಿ ಪರಿಶೀಲನೆ ಮಾಡಲಾಯಿತು.

(ಅಂಜುಂ ಪರ್ವೇಜ್)
ಸರಕಾರದ ಪ್ರಧಾನ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ ಬೆಂಗಳೂರು ಹಾಗೂ ಜಿಲ್ಲಾ
ಉಸ್ತುವಾರಿ ಕಾರ್ಯದರ್ಶಿಗಳು ಬಾಗಲಕೋಟೆ

ಕರ್ನಾಟಕ ಸರ್ಕಾರ

ಸಂಖ್ಯೆ:ಮೂಸೌಅಇ/ಪ್ರಕಾ/2020/

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ 04-02-2020.

## ಟಿಪ್ಪಣಿ

ದಿನಾಂಕ 29-01-2020ರಂದು ಕಲಬುರಗಿ ಜಿಲ್ಲೆಯಲ್ಲಿ ನಡೆಸಿದ ಪ್ರಗತಿ ಪರಿಶೀಲನಾ ಸಭೆಯ ನಡವಳಿಯನ್ನು ಇದರೊಂದಿಗೆ ನಿಗಧಿಪಡಿಸಿದ ಪ್ರಪತ್ರದಲ್ಲಿ ಮಾಹಿತಿಯೊಂದಿಗೆ ಕಳುಹಿಸಿಕೊಡುತ್ತಿದ್ದೇನೆ.

| ಕ್ರ.ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ಕಲಬುರ್ಗಿ ಜಿಲ್ಲೆ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಶ್ರೀ ಕಪಿಲ್ ಮೋಹನ್ |
| 3 | ಭೇಟಿಯಾದ / ಪ್ರವಾಸದ ದಿನಾಂಕ | 29-01-2020 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ದಿನಾಂಕ 29-01-2020ರಂದು ನಡೆದ ಸಭೆಯ ನಡವಳಿಗಳನ್ನು ಇದರೊಂದಿಗೆ ಲಗತ್ತಿಸಿದೆ. |

(ಕಪಿಲ್ ಮೋಹನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಹಾಗೂ
ಕಲಬುರಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ,

ಇವರಿಗೆ,

1) ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನ ಸೌಧ.
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಆಸುಇ (ಆ.ಸು.) ಬಹುಮಹಡಿ ಕಟ್ಟಡ.

**ದಿನಾಂಕ 29-1-2020ರಂದು 3.30 ಗಂಟೆಗೆ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ, ಬೆಂಗಳೂರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ಜರುಗಿದ ಕಲಬುರಗಿ ಜಿಲ್ಲೆಯ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯ ನಡುವಳಿಗಳು.**

**ಸಭೆಯಲ್ಲಿ ಉಪಸ್ಥಿತರು:**

1) ಮಾನ್ಯ ಶ್ರೀ ಕಪಿಲ್ ಮೋಹನ್, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ, ಬೆಂಗಳೂರು
ಹಾಗೂ ಕಲಬುರಗಿ ಜಿಲ್ಲಾ ಉಸ್ತವಾರಿ ಕಾರ್ಯದರ್ಶಿಗಳು

2) ಶ್ರೀ ಶರತ್ ಬಿ,. ಭಾ.ಆ.ಸೇ.,
ಜಿಲ್ಲಾಧಿಕಾರಿಗಳು, ಕಲಬುರಗಿ

3) ಡಾ: ರಾಜ ಪಿ. ಭಾ.ಆ.ಸೇ.,
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ, ಕಲಬುರಗಿ

ಇನ್ನುಳಿದ ಅಧಿಕಾರಿಗಳ ಹಾಜರಾತಿ ಹಾಜರಿ ಪುಸ್ತಕದಲ್ಲಿರುವಂತೆ.

ಸಭೆಯ ಪ್ರಾರಂಭದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಕಲಬುರಗಿರವರು ಮಾತನಾಡುತ್ತ, ಕಲಬುರಗಿ ಜಿಲ್ಲೆಯ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಲು ಆಗಮಿಸಿದ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ, ಬೆಂಗಳೂರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರಿಗೆ ಸ್ವಾಗತಿಸಿದರು. ಅಲ್ಲದೆ ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳಿಗೆ ಸ್ವಾಗತಿಸಿ, ಸಭೆಯನ್ನು ನಡೆಸಿಕೊಡಲು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಲ್ಲಿ ವಿನಂತಿಸಿಕೊಂಡರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಮೊದಲು ನೈಸಗಿಕ ವಿಕೋಪದ ಕುರಿತು ಪ್ರಗತಿ ಪರಿಶೀಲನೆ ನಡೆಸಿ ನಂತರ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನೆ ಮಾಡಿದರು.

**1) ಕೃಷಿ ಇಲಾಖೆ:**

ಜಂಟಿ ಕೃಷಿ ನಿರ್ದೇಶಕರು ಜಿಲ್ಲೆಯಲ್ಲಿ ಮುಂಗಾರು ಹಂಗಾಮಿಗೆ ಜೂನ್ 1ರಿಂದ ಸೆಪ್ಟೆಂಬರ್ 30ರವರೆಗೆ ವಾಡಿಕೆ ಮಳೆ 614 ಎಂ.ಎಂ. ಆಗಬೇಕಾಗಿತ್ತು. ಆದರೆ 481 ಎಂ.ಎಂ. ಆಗಿದೆ. ಅಂದರೆ 22 ಪ್ರತಿಶತ ಮಳೆ ಕೊರತೆಯಾಗಿದೆ. ಇದನ್ನು ಸಾಮಾನ್ಯ ಮಳೆಯಾಗಿದೆ ಎಂದು ಪರಿಗಣಿಸಲಾಗುವುದು. ಹಿಂಗಾರು ಹಂಗಾಮಿಗೆ ಅಕ್ಟೋಬರ್ 1ರಿಂದ ಡಿಸೆಂಬರ್ ಅಂತ್ಯದವರೆಗೆ ವಾಡಿಕೆ ಮಳೆ 127 ಎಂ.ಎಂ. ಆಗಬೇಕಾಗಿತ್ತು. ಆದರೆ 145 ಎಂ.ಎಂ. ಆಗಿದೆ. 15 ಪ್ರತಿಶತ ಹೆಚ್ಚಾಗಿದೆ. ಇದು ಕೂಡ ಸಾಮಾನ್ಯ ಮಳೆ ಎಂದು ಪರಿಗಣಿಸಲಾಗುವುದು. ಒಟ್ಟಾರೆ ಜಿಲ್ಲೆಯಲ್ಲಿ ಇಲ್ಲಿಯವರೆಗೆ ವಾಡಿಕೆ ಮಳೆ 812 ಎಂ.ಎಂ. ಆಗಬೇಕಾಗಿತ್ತು. ಆದರೆ 655 ಎಂ.ಎಂ. ಮಳೆಯಾಗಿದೆ. 19 ಪ್ರತಿಶತ ಮಳೆ ಕಡಿಮೆಯಾಗಿದೆ.

ಮುಂಗಾರು ಹಂಗಾಮಿನಲ್ಲಿ ಒಟ್ಟು 750290 ಹೆಕ್ಟರ್ ಜಮೀನಿನಲ್ಲಿ ಬಿತ್ತನೆ ಆಗಬೇಕಾಗಿತ್ತು. ಈ ಪೈಕಿ 728518 ಹೆಕ್ಟರ್ ಜಮೀನಿನಲ್ಲಿ ಬಿತ್ತನೆ ಮಾಡಲಾಗಿದೆ. ಅಂದರೆ 97 ಪ್ರತಿಶತ ಬಿತ್ತನೆ ಮಾಡಲಾಗಿದೆ. ಇದರಲ್ಲಿ ತೊಗರಿ ಪ್ರಮುಖ ಬೆಳೆ ಇದ್ದು ಪ್ರತಿ ಹೆಕ್ಟರ್‌ಗೆ 10 ಕ್ವಿಂಟಾಲ್ ಇಳುವರಿ ಬರಬಹುದು. ಜಿಲ್ಲೆಯಲ್ಲಿ ಒಟ್ಟು 165 ತೊಗರಿ ಖರೀದಿ ಕೇಂದ್ರಗಳು ಸ್ಥಾಪಿಸಲಾಗಿದೆ. ರೈತರು ನೊಂದಣಿ ಮಾಡಿದ್ದಾರೆ. ಹಿಂಗಾರು ಹಂಗಾಮಿನಲ್ಲಿ ಒಟ್ಟು 251791 ಹೆಕ್ಟರ್ ಜಮೀನಿನಲ್ಲಿ ಬಿತ್ತನೆ ಗುರಿ ಇತ್ತು ಈ ಪೈಕಿ 232720 ಹೆಕ್ಟರ್ ಜಮೀನಿನಲ್ಲಿ ಬಿತ್ತನೆಯಾಗಿದೆ. ಇದರಲ್ಲಿ ಜೋಳ, ಕಡಲೆ ಬೆಳೆ ಹೆಚ್ಚಾಗಿ ಬೆಳೆಯಲಾಗುತ್ತದೆ. ಕೃಷಿ ಇಲಾಖೆಯಿಂದ ಬಿತ್ತನೆ ಬೀಜ ರೈತರಿಗೆ ವಿತರಣೆ ಮಾಡಲಾಗಿದೆ. ಭೀಮಾ ನದಿಗೆ ಪ್ರವಾಹ ಬಂದು ಅಫಜಲಪೂರ, ಜೇವರ್ಗಿ, ಚಿತ್ತಾಪೂರ ಹಾಗೂ ಕಲಬುರಗಿ ಜಿಲ್ಲೆಯಲ್ಲಿ ಬೆಳೆ ಹಾನಿಯಾಗಿದೆ. ಇದಕ್ಕಾಗಿ 2019-20ನೇ ಸಾಲಿನಲ್ಲಿ 3310 ರೈತರಿಗೆ ಪರಿಹಾರ ನೀಡಲಾಗಿದೆ. 2019-20ನೇ ಸಾಲಿನಲ್ಲಿ ಜಿಲ್ಲೆಯ ಮೂರು ತಾಲೂಕುಗಳನ್ನು ಬರಪೀಡಿತ ಎಂದು ಸರ್ಕಾರವು ಘೋಷಿಸಿದೆ ಎಂದು ತಿಳಿಸಿದರು.

**2) ಪಶುಪಾಲನೆ ಇಲಾಖೆ:**

ಉಪ ನಿರ್ದೇಶಕರು, ಪಶುಪಾಲನೆ ಇಲಾಖೆರವರು ಜಿಲ್ಲೆಯಲ್ಲಿ ಯಾವುದೇ ಮೇವಿನ ಕೊರತೆ ಇಲ್ಲ. ಮೇವು ಸಾಕಷ್ಟು ಪ್ರಮಾಣದಲ್ಲಿ ಇದ್ದು ಯಾವುದೇ ಸಮಸ್ಯೆ ಇಲ್ಲವೆಂದು ತಿಳಿಸಿದರು.

**3) ಜಿಲ್ಲಾಧಿಕಾರಿಗಳ ಕಛೇರಿ:**

ಅಪರ ಜಿಲ್ಲಾಧಿಕಾರಿಗಳು ಮಾತನಾಡುತ್ತ, ಪ್ರತಿಯೊಬ್ಬರ ಜಾತಿ ಹಾಗೂ ಆದಾಯದ ಡಾಟಾವನ್ನು ಆನ್‌ಲೈನ್‌ನಲ್ಲಿ ಫೀಡ್ ಮಾಡಲಾಗುತ್ತಿದೆ. ಇದರಲ್ಲಿ ಏನಾದರೂ ಅನುಮಾನ ಇದ್ದರೆ ಪರಿಶೀಲನೆ ಮಾಡಲಾಗುತ್ತದೆ. ಇದರಲ್ಲಿ 46 ಪ್ರತಿಶತ ಪ್ರಗತಿಯಾಗಿದೆ. ಯಾರಾದರೂ ಆದಾಯ ಹಾಗೂ ರೆಸಿಡೆಂಟ್ ಪ್ರಯಾಣ ಪತ್ರ ನೀಡಲು ಕೇಳಿ ಅರ್ಜಿ ಕೊಟ್ಟರೆ ಕೊಡಲು ಅನುಕೂಲವಾಗುತ್ತದೆ. ಒಂದು ಬೇಳೆ ಆದಾಯ ಹೆಚ್ಚಾದರೆ ಸಂಬಂಧಪಟ್ಟವರು ಅರ್ಜಿ ಕೊಟ್ಟರೆ ಅದರಂತೆ ಫೀಡ್ ಮಾಡಲಾಗುವುದು ಎಂದು ತಿಳಿಸಿದರು. ಮುಂದುವರಿದು ಮುಟೇಶನ್ ಮಾಡುವ ಪ್ರಕ್ರಿಯೆಯಲ್ಲಿ ಜಿಲ್ಲೆಯು ರಾಜ್ಯದಲ್ಲಿ 4ನೇ ಸ್ಥಾನದಲ್ಲಿ ಇದೆ. ಸಕಾಲ ಕುರಿತು ಪ್ರತಿ ತಿಂಗಳು ಸಭೆ ಮಾಡಲಾಗುತ್ತಿದೆ. ಸಕಾಲದಲ್ಲಿ ಬಂದಿರುವ ಎಲ್ಲಾ ಅರ್ಜಿಗಳು ಕ್ಲೀಯರ್ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಡಿ.ಡಿ.ಎಲ್.ಆರ್.ರವರು ಮಾತನಾಡುತ್ತ, ನಮ್ಮಲ್ಲಿ ಯಾವುದೇ ಅರ್ಜಿಗಳು ಬಾಕಿ ಇಲ್ಲ. 23 ಅರ್ಜಿಗಳು ಅಪಲೋಡ್ ಆಗಿದ್ದು 23 ಅರ್ಜಿಗಳು ವಿಲೇ ಮಾಡಲಾಗಿದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತ, ನಿಮ್ಮ ಹತ್ತಿರ ಸರ್ವೆ ಮಾಡುವ ಅರ್ಜಿಗಳು ಎಷ್ಟು ಬಾಕಿ ಇವೆ ಎಂದು ಕೇಳಿದರು.

ಡಿ.ಎಲ್.ಆರ್.ಸಿ.ರವರು ಒಟ್ಟು 4320 ಅರ್ಜಿಗಳು ಬಾಕಿ ಇವೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಛೇರಿಯ ಎನ್.ಎ. ವಿಷಯ ನಿರ್ವಾಹಕರು ಮಾತನಾಡುತ್ತ, ಫಹಣಿ ಹಾಗೂ ಆಧಾರ ಕಾರ್ಡ್‌ನೊಂದಿಗೆ ಎನ್.ಎ. ಮಾಡಲು ಅರ್ಜಿ ಸಲ್ಲಿಸಬೇಕಾಗುತ್ತದೆ. ಈ ಕುರಿತು ಆನ್‌ಲೈನ್‌ನಲ್ಲಿ ನಡೆಯುವ ಪ್ರಕ್ರಿಯೆ ಕುರಿತು ಸಭೆಗೆ ಮಾಹಿತಿ ನೀಡಿದರು.

**4) ನರೇಗಾ ಯೋಜನೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತರವರು ನರೇಗಾ ಯೋಜನೆಯಡಿ ಪ್ರಸಕ್ತ ಸಾಲಿಗೆ 55 ಲಕ್ಷ ಮಾನವ ದಿನಗಳು ಸೃಜನೆ ಮಾಡುವ ಗುರಿ ಇದೆ. ಇದರಲ್ಲಿ 34.23 ಲಕ್ಷ ಮಾನವ ದಿನಗಳು ಸೃಜನೆ ಮಾಡಲಾಗಿದೆ. ತೊಗರಿ ರಾಶಿ ನಡೆದಿರುವುದರಿಂದ ಈಗ ಕೆಲಸ ಆಗುತ್ತಿಲ್ಲ. ಫೆಬ್ರುವರಿ ಹಾಗೂ ಮಾರ್ಚ್ 2020 ತಿಂಗಳಲ್ಲಿ ಮಾಡಲಾಗುವುದು. ಜಲಾಮೃತ ಯೋಜನೆಯಡಿ

ಕೆಲಸಗಳು ತೆಗೆದುಕೊಳ್ಳಲಾಗಿದೆ. ಅಂದಾಜು ಪತ್ರಿಕೆಗಳು ಸರ್ಕಾರಕ್ಕೆ ಸಲ್ಲಿಸಿದ್ದು ರಾಜ್ಯ ಸರ್ಕಾರದಿಂದ ಅನುಮೋದನೆಯಾಗಿ ಬಂದ ನಂತರ ಕಾಮಗಾರಿಗಳು ಮಾಡಲಾಗುವುದು ಎಂದು ತಿಳಿಸಿದರು.

**5) ಗ್ರಾಮೀಣ ನೀರು ಸರಬರಾಜು ಯೋಜನೆ:**

ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆರವರು ಮಾತನಾಡುತ್ತ, ಈ ವರ್ಷ ಯಾವುದೇ ಹಳ್ಳಿಗಳಲ್ಲಿ ಟ್ಯಾಂಕರ್‌ನಿಂದ ನೀರು ಸರಬರಾಜು ಮಾಡುತ್ತಿಲ್ಲ. ಎನ್.ಆರ್.ಡಿ.ಡಬ್ಲ್ಯೂ.ಪಿ. ಹಾಗೂ ಎಸ್.ಡಿ.ಪಿ. ಯೋಜನೆಯಡಿ ಹಳೆಯ ಕಾಮಗಾರಿಗಳು 323 ಇದ್ದು ಇದರಲ್ಲಿ 259 ಕಾಮಗಾರಿಗಳು ಪೂರ್ಣ ಮಾಡಲಾಗಿದೆ. ಹೊಸ ಕಾಮಗಾರಿಗಳು ಒಟ್ಟು 714 ಕಾಮಗಾರಿಗಳು ತೆಗೆದುಕೊಂಡಿದ್ದು ಇದರಲ್ಲಿ 167 ಕಾಮಗಾರಿಗಳು ಪೂರ್ಣಗೊಂಡಿವೆ. ಒಟ್ಟು 1037 ಕಾಮಗಾರಿಗಳ ಪೈಕಿ 426 ಕಾಮಗಾರಿಗಳು ಪೂರ್ಣಗೊಂಡಿವೆ. ಇದಕ್ಕೆ ಒಟ್ಟು ರೂ. 3048.23 ಲಕ್ಷ ಬಿಡುಗಡೆಯಾಗಿದ್ದು ಈ ಪೈಕಿ 2372.88 ಲಕ್ಷ ವೆಚ್ಚ ಮಾಡಲಾಗಿದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತ, ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಯಡಿ ಪ್ರಗತಿ ತುಂಬಾ ಕಡಿಮೆಯಾಗಿದೆ. ಏಕೆ ಎಂದು ಕೇಳಿದರು. ಇದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆರವರು ಮಾತನಾಡುತ್ತ, ಹೊಸ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಮುಂದಿನ ತಿಂಗಳು ಹೆಚ್ಚಿನ ಪ್ರಗತಿ ಸಾಧಿಸಲು ಸೂಚಿಸಿದರು.

(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆ, ಕಲಬುರಗಿ)

ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆರವರು ಮಾತನಾಡುತ್ತ, ಆರ್.ಓ. ಪ್ಲ್ಯಾಂಟ್ 444 ಇದ್ದು ಇದರಲ್ಲಿ ಕೇವಲ 197 ಮಾತ್ರ ಕಾರ್ಯನಿರ್ವಹಿಸುತ್ತಿವೆ. ಇದರಲ್ಲಿ 247 ಕಾರ್ಯ ನಿರ್ವಹಿಸುತ್ತಿಲ್ಲ. ಈ ವಾರದಲ್ಲಿ 20 ಆರ್.ಓ. ಪ್ಲ್ಯಾಂಟ್ ದುರಸ್ತಿ ಮಾಡಲಾಗಿದೆ. ಅಂದರೆ ಒಟ್ಟು 207 ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದರು.

**6) ಮುಖ್ಯ ಮಂತ್ರಿಗಳ ಗ್ರಾಮವಿಕಾಸ ಯೋಜನೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತರವರು ಮಾತನಾಡುತ್ತ, 2017-18ನೇ ಸಾಲಿನ ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆಯಡಿ ಒಟ್ಟು ರೂ. 600.00 ಲಕ್ಷ ಅನುದಾನ ನಿಗದಿಪಡಿಸಿದ್ದು ಇದರಲ್ಲಿ ಹಳ್ಳಿಗಳಲ್ಲಿ ಸಿಸಿ ರಸ್ತೆ, ತಿಪ್ಪಗುಂಡಿ ಸಾಂಸ್ಕೃತಿಕ ಭವನ ಮುಂತಾದ ಕಾಮಗಾರಿಗಳು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದರು.

**7) ಸ್ವಚ್ಛ ಭಾರತ ಅಭಿಯಾನ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತರವರು ಬಿಟ್ಟು ಹೋದ ಫಲಾನುಭವಿಗಳು ಒಟ್ಟು 28100 ಗುರಿ ಇದ್ದು ಇದರಲ್ಲಿ 13890 ಸಾಧನೆ ಮಾಡಿದ್ದು 49 ಪ್ರತಿಶತ ಸಾಧನೆ ಮಾಡಲಾಗಿದೆ ಎಂದು ತಿಳಿಸಿದರು. ಮುಂದುವರಿದು ಘನ ತ್ಯಾಜ್ಯ ನಿರ್ವಹಣಾ ಕಾರ್ಯಕ್ರಮದಲ್ಲಿ ಒಟ್ಟು 264 ಗ್ರಾಮ ಪಂಚಾಯತಿಗಳ ಪೈಕಿ 16 ಗ್ರಾಮ ಪಂಚಾಯತಿಗಳಲ್ಲಿ ಅನುಮೋದನೆಯಾಗಿದೆ. 32 ಗ್ರಾಮ ಪಂಚಾಯತಗಳ ಡಿಪಿಆರ್‌ಗಳು ಈಗಾಗಲೇ ಸಿದ್ಧಪಡಿಸಿದ್ದು, ಭೂ ಮಂಜೂರಾತಿಗಾಗಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದೆ. 25 ಡಿ.ಪಿ.ಆರ್.ಗಳನ್ನು ಸಿದ್ಧಪಡಿಸಿ ರಾಜ್ಯ ಕಛೇರಿಗೆ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಉಳಿದ ಕಡೆ ಸ್ಥಳ ಗುರುತಿಸಲಾಗುತ್ತಿದೆ ಎಂದು ತಿಳಿಸಿದರು.

8) ಇ–ಆಫೀಸ್:

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತರವರು, ಇ–ಆಫೀಸ್‌ಗೆ ಸಂಬಂಧಿಸಿದಂತೆ ಎಲ್ಲಾ ಸಿಬ್ಬಂದಿಗಳ ಸರ್ಕಾರಿ ಮೇಲ್ ಐಡಿಗಳು ಸೃಜಿಸಲಾಗಿದೆ ಎಂದು ತಿಳಿಸಿದರು.

9) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ:

ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆರವರು ಮಾತನಾಡುತ್ತ ಜಿಲ್ಲಾ ಪಂಚಾಯತಿನ ಒಟ್ಟು 4 ಕಾರ್ಯಕ್ರಮಗಳು ಇವೆ. ನಿರ್ಗತಿಕ ಮಕ್ಕಳ ರಕ್ಷಣೆ ಪೋಷಣೆ ಕಾರ್ಯಕ್ರಮದಡಿ ಒಟ್ಟು 22 ಕುಟುರಗಳು ಇದ್ದು ಒಂದು ಕುಟಿರದಲ್ಲಿ 25 ಮಕ್ಕಳು ಇರುತ್ತಾರೆ. ಇದರಲ್ಲಿ 3 ಕುಟಿರಗಳು ಮಾತ್ರ ಸರಿಯಾಗಿ ನಡೆಯುತ್ತಿಲ್ಲ. 19 ಕುಟುರಿಗಳು ನಡೆಯುತ್ತಿವೆ. ಜಿಲ್ಲಾ ಮಟ್ಟದ ಅಧಿಕಾರಿಗಳು ಕುಟಿರಗಳಿಗೆ ಭೇಟಿ ನೀಡಿ ತಪಾಸಣೆ ಮಾಡಿ ವರದಿ ಸಲ್ಲಿಸುತ್ತಾರೆ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಸದರಿ ಕುಟಿರಗಳು ಕ್ಲೋಸ್ ಮಾಡುವ ಬದಲು ಮನಶ್ಚೇತನೆ ಮಾಡಲು ಕ್ರಮ ಕೈಗೊಳ್ಳಬೇಕು. ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ತಿಳಿಸಿದರು.

ಉಪ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆರವರು ಮಾತನಾಡುತ್ತ, ಅಂಗನವಾಡಿ ಕಟ್ಟಡಗಳ ದುರಸ್ತಿ ಕಾಮಗಾರಿಗಳು ತಾಲೂಕು ಪಂಚಾಯತ ಸಾಮಾನ್ಯ ಸಭೆಯಲ್ಲಿ ಅನುಮೋದನೆಯಾದ ನಂತರ ತೆಗೆದುಕೊಳ್ಳಲಾಗುತ್ತದೆ. 4 ತಾಲೂಕುಗಳಿಂದ ಅನುಮೋದನೆಯಾಗಿ ಬಂದಿವೆ. ಪ್ರಧಾನ ಮಂತ್ರಿ ಮಾತೃಪೂರ್ಣ ಯೋಜನೆಯಡಿ ಒಟ್ಟು 12987 ಅರ್ಜಿಗಳು ಸ್ವೀಕರಿಸಿದ್ದು ಈ ಪೈಕಿ 12447 ಮಂಜೂರಾತಿ ಆಗಿವೆ. 95.8 ಪ್ರತಿಶತ ಸಾಧನೆ ಮಾಡಲಾಗಿದೆ. ಮುಖ್ಯ ಮಂತ್ರಿಗಳ ಮಾತೃಶ್ರೀ ಯೋಜನೆಯಡಿ ಒಟ್ಟು 16484 ಅರ್ಜಿಗಳು ಸ್ವೀಕರಿಸಿದ್ದು ಈ ಪೈಕಿ 15142 ಸಾಧನೆ ಮಾಡಲಾಗಿದೆ ಎಂದು ತಿಳಿಸಿದರು.

10) ಸಾರ್ವಜನಿಕ ಶಿಕ್ಷಣ ಇಲಾಖೆ:

ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆರವರು ಮಾತನಾಡುತ್ತ, ಕರ್ನಾಟಕ ಪಬ್ಲಿಕ್ ಶಾಲೆಗಳು ತಾಲೂಕಿಗೆ ಒಂದು ಇದ್ದು ಇಲ್ಲಿ ಎಲ್.ಕೆ.ಜಿ. ತರಗತಿ ಪ್ರಾರಂಭಿಸಲಾಗಿದೆ. ಮೊದಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಪೂರ್ವ ಪ್ರಾಥಮಿಕ ಶಿಕ್ಷಣ ಇತ್ತು. ಈಗ ಅವುಗಳು ಇಲ್ಲ. ಅಲ್ಲಿ ಕೆಲಸ ನಿರ್ವಹಿಸುತ್ತಿದ್ದ ನರ್ಸರಿ ಶಿಕ್ಷಕರನ್ನು ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು 1598 ಪ್ರಾಥಮಿಕ ಶಾಲೆ ಶಿಕ್ಷಕರು ಹಾಗೂ 449 ಪ್ರೌಢ ಶಾಲೆ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಅತಿಥಿ ಶಿಕ್ಷಕರನ್ನು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದರು.

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಶಿಕ್ಷಕರ ನೇಮಕಾತಿ ಮಾಡಿಕೊಂಡಿರದ ಕುರಿತು ಕೇಳಿದಾಗ, ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆರವರು ಟಿ.ಇ.ಟಿ. ಹಾಗೂ ಸಿಇಟಿ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಅರ್ಹತೆ ಪಡೆಯುತ್ತಿಲ್ಲವೆಂದು ತಿಳಿಸಿದರು. ಇದಕ್ಕೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಸ್ಕಿಲ್ ಅಭಿವೃದ್ಧಿಯಲ್ಲಿ ಹಲವಾರು ಕಾರ್ಯಕ್ರಮಗಳು ಇವೆ. ಜಿಲ್ಲಾ ಪಂಚಾಯತಿನಲ್ಲಿ ಸ್ಕಿಲ್ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಟಿ.ಇ.ಟಿ. ಹಗೂ ಸಿ.ಇ.ಟಿ. ಕುರಿತು ಫಲಾನುಭವಿಗಳಿಗೆ ತರಬೇತಿ ಕಾರ್ಯಕ್ರಮಗಳು ತೆಗೆದುಕೊಳ್ಳಬೇಕೆಂದು ತಿಳಿಸಿದರು.

(ಕ್ರಮ: ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ., ಜಿಲ್ಲಾ ಪಂಚಾಯತ, ಕಲಬುರಗಿ)

ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆರವರು, ಪ್ರಸಕ್ತ ಸಾಲಿನಲ್ಲಿ ಶಾಲಾ ಮಕ್ಕಳಿಗೆ ಸೈಕಲ್, ಸಮವಸ್ತ್ರ ಹಾಗೂ ಶೂ 100 ಪ್ರತಿಶತ ವಿತರಿಸಲಾಗಿದೆ ಎಂದು ತಿಳಿಸಿದರು.

11) ಲೋಕೋಪಯೋಗಿ ಇಲಾಖೆ:

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಕಲಬುರಗಿರವರು ಮದರ್ ಥೆರೇಸಾ ಶಾಲೆ ಹತ್ತಿರ ರೈಲ್ವೆ ಆರ್.ಓ.ಬಿ. ಕಾಮಗಾರಿ ನಡೆಯುತ್ತಿದೆ. ಎಡಭಾಗದಲ್ಲಿ ಒಂದು ಹಂತಕ್ಕೆ ಬಂದಿದೆ. ರೈಲ್ವೆ ಇಲಾಖೆಯಿಂದ ಒಂದು ಕಡೆ ಬ್ರಿಡ್ಜ್ ಮಾಡಲಾಗಿದೆ ಎಂದು ತಿಳಿಸಿದರು.

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆರವರು ಚಿತ್ತಾಪೂರದಲ್ಲಿ ಕೂಡು ರಸ್ತೆ ಇದೆ. ರೈಲ್ವೆ ಬ್ರಿಡ್ಜ್ ಕಾಮಗಾರಿ ರೈಲ್ವೆ ಇಲಾಖೆಯವರು ಮಾಡಿದ್ದಾರೆ. ಒಟ್ಟು ರೂ. 12.00 ಕೋಟಿ ಖರ್ಚು ಮಾಡಲಾಗಿದೆ ಎಂದು ತಿಳಿಸಿದರು.

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆರವರು ಮಾತನಾಡುತ್ತ, ರಾಷ್ಟ್ರೀಯ ಹೆದ್ದಾರಿ ಸೇತುವೆ ಸುಧಾರಣೆ ಕಾರ್ಯಕ್ರಮದಲ್ಲಿ 6 ಕಾಮಗಾರಿಗಳ ಪೈಕಿ 3 ಕಾಮಗಾರಿಗಳು ಪ್ರಗತಿ ಹಂತದಲ್ಲಿ ಇದ್ದು 3 ಕಾಮಗಾರಿಗಳು ಮುಕ್ತಾಯಗೊಂಡಿರುತ್ತವೆ. ರಾಜ್ಯ ಹೆದ್ದಾರಿಗಳ ನಿರ್ವಹಣೆ– ನಿರ್ವಹಣಾ ವೆಚ್ಚದಲ್ಲಿ ಒಟ್ಟು 77 ಕಾಮಗಾರಿಗಳ ಪೈಕಿ 20 ಕಾಮಗಾರಿಗಳು ಪ್ರಗತಿಯಲ್ಲಿ ಇದ್ದು 57 ಕಾಮಗಾರಿಗಳು ಮುಕ್ತಾಯಗೊಂಡಿರುತ್ತವೆ. ಎಸ್.ಡಿ.ಪಿ. (ಎಸ್.ಸಿ.ಪಿ.) ಕಾರ್ಯಕ್ರಮದಲ್ಲಿ ಒಟ್ಟು 9 ಕಾಮಗಾರಿಗಳು ತೆಗೆದುಕೊಂಡಿದ್ದು ಇದರಲ್ಲಿ 3 ಕಾಮಗಾರಿಗಳು ಪೂರ್ಣಗೊಂಡಿದ್ದು 6 ಕಾಮಗಾರಿಗಳು ಪ್ರಗತಿಯಲ್ಲಿ ಇವೆ. ಫೆಬ್ರುವರಿ ತಿಂಗಳಲ್ಲಿ ಪೂರ್ಣ ಮಾಡಲಾಗುವುದು. ಎಸ್.ಡಿ.ಪಿ.(ಟಿ.ಎಸ್.ಪಿ.) ಕಾಯಕ್ರಮದಲ್ಲಿ 10 ಕಾಮಗಾರಿಗಳು ತೆಗೆದುಕೊಂಡಿದ್ದು 10 ಕಾಮಗಾರಿಗಳು ಪ್ರಗತಿಯಲ್ಲಿ ಇವೆ. ಸಿ.ಎಂ.ಜಿ.ಎಸ್.ವೈ. 7 ಕಾಮಗಾರಿಗಳು ಪ್ರಗತಿಯಲ್ಲಿ ಇವೆ. ಜಿಲ್ಲಾ ಮುಖ್ಯ ರಸ್ತೆ ಮತ್ತು ಇತರೆ ರಸ್ತೆಗಳ ಸುಧಾರಣೆ ಕಾರ್ಯಕ್ರಮದಲ್ಲಿ ಒಟ್ಟು 114 ಕಾಮಗಾರಿಗಳು ತೆಗೆದುಕೊಂಡಿದ್ದು 42 ಕಾಮಗಾರಿಗಳು ಮುಕ್ತಾಯಗೊಂಡಿರುತ್ತವೆ. 46 ಕಾಮಗಾರಿಗಳು ಪ್ರಗತಿಯಲ್ಲಿ ಇವೆ ಎಂದು ತಿಳಿಸಿದರು.

12) ನಗರಾಭಿವೃದ್ಧಿ:

ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶರವರು ಮಾತನಾಡುತ್ತ, ನಗರೋತ್ಥಾನ 100 ಕೋಟಿ ಹಂತ–2 ಕಾರ್ಯಕ್ರಮದಲ್ಲಿ ಒಟ್ಟು 138 ಕಾಮಗಾರಿಗಳು ಮಂಜೂರಾಗಿತ್ತು. ಇವುಗಳ ಪೈಕಿ 136 ಕಾಮಗಾರಿಗಳು ಪೂರ್ಣಗೊಂಡಿವೆ. ನಗರೋತ್ಥಾನ 100 ಕೋಟಿ ಹಂತ–3ರ ಕಾರ್ಯಕ್ರಮದಲ್ಲಿ 34 ಕಾಮಗಾರಿಗಳು ತೆಗೆದುಕೊಂಡಿದ್ದು 27 ಕಾಮಗಾರಿಗಳು ಪೂರ್ಣಗೊಂಡಿವೆ. ಸಿ.ಎಂ.ಎಸ್. ಎಂ.ಟಿ.ಡಿ.ಪಿ. ಹಂತ–2 ಕಾರ್ಯಕ್ರಮದಲ್ಲಿ ಒಟ್ಟು 84 ಕಾಮಗಾರಿಗಳು ತೆಗೆದುಕೊಂಡಿದ್ದು ಈ ಪೈಕಿ 81 ಕಾಮಗಾರಿಗಳು ಪೂರ್ಣಗೊಂಡಿವೆ. ನಗರೋತ್ಥಾನ (ಮುನಿಸಿಪಾಲಟಿ) ಹಂತ–3 ಕಾರ್ಯಕ್ರಮದಲ್ಲಿ ಒಟ್ಟು 65 ಕಾಮಗಾರಿಗಳು ತೆಗೆದುಕೊಂಡಿದ್ದು 8 ಕಾಮಗಾರಿಗಳು ಪೂರ್ಣ ಮಾಡಲಾಗಿದೆ. 14ನೇ ಹಣಕಾಸು ಯೋಜನೆ 2015–16ನೇ ಸಾಲಿನಲ್ಲಿ ಒಟ್ಟು 305 ಕಾಮಗಾರಿಗಳು ತೆಗೆದುಕೊಂಡಿದ್ದು 13 ಕಾಮಗಾರಿಗಳು ಪೂರ್ಣಗೊಂಡಿವೆ ಎಂದು ತಿಳಿಸಿದರು.

13) ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಸರ್ಕಾರದ ಮಟ್ಟದಲ್ಲಿ ಯಾವುದೇ ಪ್ರಸ್ತಾವನೆಗಳು ಬಾಕಿ ಇದ್ದರೆ ನನ್ನ ಗಮನಕ್ಕೆ ತರಬೇಕೆಂದು ತಿಳಿಸಿದರು.

ಸಹಾಯಕ ನಿರ್ದೇಶಕರು, ಯುವಜನ, ಸಬಲೀಕರಣ ಇಲಾಖೆರವರು ಮಾತನಾಡುತ್ತ, ಜಿಲ್ಲಾ ಕ್ರೀಡಾಂಗಣದ ಹತ್ತಿರ 6.8 ಎಕರೆ ಜಮೀನು ಲೋಕೋಪಯೋಗಿ ಇಲಾಖೆಗೆ ಸೇರಿದೆ. ಸದರಿ ಸ್ಥಳ ಕ್ರೀಡಾ ಇಲಾಖೆಯ ವರ್ಗಾವಣೆ ಮಾಡಲು ಕೇಳಿದರೆ ರೂ. 7.00 ಕೋಟಿ ಹಣ ಪಾವತಿ ಮಾಡಲು ತಿಳಿಸಿದ್ದಾರೆ. ಸದರಿ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಇದೆ ಎಂದು ತಿಳಿಸಿದರು. ಇದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆರವರು ಸದರಿ 7 ಎಕರೆ ಜಮೀನು ಲೋಕೋಪಯೋಗಿ ಇಲಾಖೆಗೆ ಸೇರಿದ್ದು ಸರ್ಕಾರದ ಕಾರ್ಯದರ್ಶಿಗಳಿಂದ ಪತ್ರ ಬಂದಿದೆ ಎಂದು

ತಿಳಿಸಿದರು. ಇದಕ್ಕೆ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸದರಿ ಪತ್ರದ ಪ್ರತಿಯನ್ನು ನೀಡಲು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

(ಕ್ರಮ: ಸಹಾಯಕ ನಿರ್ದೇಶಕರು, ಯುವಜನ ಸೇವಾ ಹಾಗೂ ಯುವ ಸಬಲೀಕರಣ ಇಲಾಖೆ, ಕಲಬುರಗಿ)

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು.

(ಕಪಿಲ್ ಮೋಹನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ, ಬೆಂಗಳೂರು
ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

ಸಂಖ್ಯೆ: ಜಿಪಂಕ: ಯೋಶಾ:ತ್ರೈಕೆಡಿಪಿ:03:2019-20 ದಿನಾಂಕ 29-01-2020

ಇದರ ಪ್ರತಿಯನ್ನು:
1) ಜಿಲ್ಲಾಧಿಕಾರಿಗಳು ಕಲಬುರಗಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ, ಕಲಬುರಗಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
3) ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.

## ಮಾನ್ಯ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಹಾಗೂ ಮಾನ್ಯ ಶಾಸಕರುಗಳ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಸೂಚಿಸಿರುವ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭಾ ನಡವಳಿ

ಅಧ್ಯಕ್ಷತೆ
ಡಾ.ಶಾಲಿನಿ ರಜನೀಶ್,I.A.S,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ,
ಮತ್ತು ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

ಸ್ಥಳ: ದಿನಾಂಕ;24.01.2020

ಜಿಲ್ಲಾಧಿಕಾರಿ ಕಛೇರಿ ಸಭಾಂಗಣ, ಬೆಳಿಗ್ಗೆ: 9.30 ಗಂಟೆ

ಚಿಕ್ಕಮಗಳೂರು.

ಹಾಜರಿದ್ದವರು:-

1. ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.
2. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು
3. ಅಪರ ಜಿಲ್ಲಾಧಿಕಾರಿ, ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.
4. ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಚಿಕ್ಕಮಗಳೂರು.
5. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು.
6. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಚಿಕ್ಕಮಗಳೂರು.
7. ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿಕ್ಕಮಗಳೂರು.
8. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣಾ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು.
9. ಜಿಲ್ಲಾ ಅಂಗವಿಕಲ ಮತ್ತು ಹಿರಿಯ ನಾಗರೀಕರ ಕಲ್ಯಾಣಾಧಿಕಾರಿ, ಜಿಲ್ಲಾ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಚಿಕ್ಕಮಗಳೂರು.
10. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಿಕ್ಕಮಗಳೂರು/ಮೂಡಿಗೆರೆ/ಶೃಂಗೇರಿ/ಕೊಪ್ಪ/ನರಸಿಂಹರಾಜಪುರ/ಕಡೂರು/ತರೀಕೆರೆ
11. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪವಿಭಾಗ ಚಿಕ್ಕಮಗಳೂರು/ ಮೂಡಿಗೆರೆ/ ಶೃಂಗೇರಿ/ ಕೊಪ್ಪ/ ನರಸಿಂಹರಾಜಪುರ /ಕಡೂರು/ತರೀಕೆರೆ
12. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಉಪವಿಭಾಗ ಚಿಕ್ಕಮಗಳೂರು/ ಮೂಡಿಗೆರೆ/ ಶೃಂಗೇರಿ/ ಕೊಪ್ಪ/ ನರಸಿಂಹರಾಜಪುರ /ಕಡೂರು/ ತರೀಕೆರೆ
13. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕೆ ಆರ್ ಐ ಡಿ ಎಲ್, ಉಪವಿಭಾಗ ಕಡೂರು/ ಚಿಕ್ಕಮಗಳೂರು

-***-

ಪ್ರಾರಂಭದಲ್ಲಿ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಮತ್ತು ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳನ್ನು ಸಭೆಗೆ ಅಪರ ಜಿಲ್ಲಾಧಿಕಾರಿಗಳು, ಜಿಲ್ಲಾಡಳಿತದ ಪರವಾಗಿ ಸ್ವಾಗತಿಸುತ್ತಾ ಅಧ್ಯಕ್ಷತೆ ವಹಿಸಿ ಸಭೆಯನ್ನು ನಡೆಸಿಕೊಡಬೇಕೆಂದು

ಕೋರುತ್ತಾ ಅದೇ ರೀತಿ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಹಾಗೂ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು. ಅಪರ ಮುಖ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳ ಪರಿಚಯ ಮಾಡಿಕೊಂಡರು.

## I . MLA LAD

ಮಾನ್ಯ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 2013-14 ರಿಂದ ಬಾಕಿ ಇರುವ ಕಾಮಗಾರಿಗಳ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. 2013-14 ನೇ ಸಾಲಿನಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳಿಗೆ ಆಡಳಿತ ಮಂಜೂರಾತಿ ನೀಡಲು ಇನ್ನೂ 25 ಕಾಮಗಾರಿಗಳು ಬಾಕಿ ಇರುವ ಕುರಿತು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಅಸಮಾಧಾನ ವ್ಯಕ್ತಪಡಿಸಿದರು.

| ವರ್ಷ | ಆಡಳಿತ ಮಂಜೂರಾತಿಗೆ ಬಾಕಿ ಇರುವ ಕಾಮಗಾರಿಗಳು | ಪ್ರಗತಿ ಕಾಮಗಾರಿ |
|---|---|---|
| 2013-14 | 25 | 177 |
| 2014-15 | 31 | 208 |
| 2015-16 | 34 | 111 |
| 2016-17 | 49 | 101 |
| 2017-18 | 67 | 193 |
| 2018-19 | 292 | 147 |
| **ಒಟ್ಟು** | **498** | **937** |

ಈ ಮೇಲಿನಂತೆ 2013-14 ರಿಂದಲೂ ಆಡಳಿತ ಮಂಜೂರಾತಿಗೆ ಮತ್ತು ಕಾಮಗಾರಿ ಪೂರ್ಣಗೊಳ್ಳಲು ಹೆಚ್ಚಿನ ಸಂಖ್ಯೆಯ ಕಾಮಗಾರಿಗಳು ಬಾಕಿ ಇರುತ್ತದೆ. ಈ ಬಗ್ಗೆ ಮಾನ್ಯ ಉಸ್ತುವಾರಿ ಸಚಿವರು ಅನುಷ್ಠಾನಾಧಿಕಾರಿಯವರಿಗೆ ಸ್ಪಷ್ಟ ನಿರ್ದೇಶನವನ್ನು ನೀಡಿದರು. ಶಾಸಕರ ಪ್ರದೇಶಾಭಿವೃದ್ಧಿ ಮಾರ್ಗಸೂಚಿ ಪ್ರಕಾರ ಅನುಷ್ಠಾನಾಧಿಕಾರಿಗಳು ಆಡಳಿತಾತ್ಮಕ ಅನುಮೋದನೆಗೆ 30 ದಿನಗಳೊಳಗೆ ಜಿಲ್ಲಾಧಿಕಾರಿಗಳಿಗೆ ಸಲ್ಲಿಸತಕ್ಕದ್ದು, ಈ ಪ್ರಕಾರ ಇನ್ನೂ ಕಾಮಗಾರಿಗಳು ಬಾಕಿ ಇರುವುದರಿಂದ ಈ ಬಗ್ಗೆ ಕೂಡಲೇ ಸಂಬಂಧಪಟ್ಟ ಅನುಷ್ಠಾನಾಧಿಕಾರಿ ರವರು ಕ್ರಮವಹಿಸಬೇಕೆಂದು ಸೂಚನೆ ನೀಡಿ ಈ ಕೆಳಕಂಡಂತೆ ನಿರ್ದೇಶನ ನೀಡಿರುತ್ತಾರೆ.

1. 2013-14 ರಿಂದ ಅಂದಾಜು ಪಟ್ಟಿ ಸಲ್ಲಿಸಲು ಬಾಕಿಯಿರುವ ಕಾಮಗಾರಿಗಳಿಗೆ ಇನ್ನೂ 15 ದಿನಗಳಲ್ಲಿ ಅಂದಾಜು ಪಟ್ಟಿ ಸಲ್ಲಿಸದಿದ್ದಲ್ಲಿ ಅಂತಹ ಕಾಮಗಾರಿಗಳನ್ನು ರದ್ದುಪಡಿಸಲು ಜಿಲ್ಲಾಧಿಕಾರಿಗಳು ಕ್ರಮವಹಿಸತಕ್ಕದ್ದು.

2. 2013-14, 2014-15, 2015-16, 2017-18, 2018-19 ರವರೆಗೆ ಆಡಳಿತ ಮಂಜೂರಾತಿ ನೀಡಿ ಕಾಮಗಾರಿಗಳು ಪ್ರಗತಿ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣ ಮತ್ತು ಅಂತಿಮ ಬಿಲ್ಲಿನ ಮೊತ್ತವನ್ನು ಪಾವತಿಸಲು ಕ್ರಮವಹಿಸತಕ್ಕದ್ದು.

3. ಆಡಳಿತ ಮಂಜೂರಾತಿ ನೀಡಿ ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಕಾಮಗಾರಿಗಳನ್ನು ಪೂರ್ಣಗೊಳಿಸಿ ಅಂತಿಮ ಬಿಲ್ಲನ್ನು ಸಲ್ಲಿಸಲು ಈ ಕೆಳಗಿನಂತೆ ಗುರಿ ನಿಗಧಿ ಪಡಿಸಲಾಗಿರುವುದು.

| ವರ್ಷ | ಪ್ರಗತಿ ಕಾಮಗಾರಿ | ಗುರಿ |
|---|---|---|
| 2013-14 | 177 | 15 Days |
| 2014-15 | 208 | 20 Days |
| 2015-16 | 111 | 1 Month |
| 2016-17 | 101 | 1 Month |
| 2017-18 | 193 | 1 Month |
| 2018-19 | 147 | 1 Month |

ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಈ ಮೇಲಿನಂತೆ ಕಾಮಗಾರಿಗಳನ್ನು ಮುಕ್ತಾಯಗೊಳಿಸಿ ಅವುಗಳನ್ನು ಗಾಂಧಿಸಾಕ್ಷಿ ಕಾಯಕ ತಂತ್ರಾಂಶದಲ್ಲಿ ನಮೂದಿಸಬೇಕು ಎಂದು ಸೂಚಿಸಿದರು.

4. ಮಾರ್ಗಸೂಚಿ ಪ್ರಕಾರ ಆಯಾ ವರ್ಷದಲ್ಲಿ ಅನುಮೋದನೆಗೊಂಡ ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಅನುಷ್ಠಾನಗೊಳಿಸಿ ಪೂರ್ಣಗೊಳಿಸದಿದ್ದಲ್ಲಿ ಮತ್ತು 2 ವರ್ಷಕ್ಕಿಂತ ಹೆಚ್ಚಿರುವ ಬಾಕಿ ಕಾಮಗಾರಿಗಳನ್ನು ರದ್ದುಗೊಳಿಸಲು ಕ್ರಮವಹಿಸಲಾಗುವುದೆಂದು ಸ್ಪಷ್ಟ ಮಾಹಿತಿಯನ್ನು ಅನುಷ್ಠಾನಾಧಿಕಾರಿಗಳಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.
5. ಕಾಮಗಾರಿಗಳನ್ನು ನಿಗಧಿತ ಅವಧಿಯಲ್ಲಿ ಮಾರ್ಗಸೂಚಿ ಪ್ರಕಾರ ಅನುಷ್ಠಾನಗೊಳಿಸದಿದ್ದಲ್ಲಿ ಸಂಬಂಧಪಟ್ಟ ಅನುಷ್ಠಾನಾಧಿಕಾರಿಗಳು ನೇರೆ ಹೊಣೆಗಾರರಾಗುತ್ತಾರೆ.
6. ಹೆಚ್ಚಿನ ಸಂಖ್ಯೆ ಕಾಮಗಾರಿಗಳು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ರವರಿಗೆ ಸೇರಿರುವುದರಿಂದ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ ರವರು ಕಾಲಕಾಲಕ್ಕೆ ಸಭೆ ನಡೆಸಿ ಪ್ರಗತಿಯನ್ನು ಸಾಧಿಸಲು ಮುಖ್ಯ ಕಾರ್ಯನಿರ್ವಹಣಾಧಿಕಾರಿರವರಿಗೆ ಸೂಚಿಸಲಾಯಿತು.
7. 2019-20 ನೇ ಸಾಲಿನ ಅನುದಾನದಲ್ಲಿ ಒಂದನೇ ಕಂತಿನ ಅನುದಾನ ಮಾತ್ರ ಬಿಡುಗಡೆಯಾಗಿದ್ದು, 2019-20 ರ ಆರ್ಥಿಕ ವರ್ಷದ ಕೊನೆಯಲ್ಲಿದ್ದರೂ ಕೂಡ ಒಂದನೇ ಕಂತಿನ ಅನುದಾನ ಮಾತ್ರ ಬಿಡುಗಡೆಯಾಗಲು ಕಾರಣ ಹಿಂದಿನ ವರ್ಷಗಳ ಅನುಮೋದಿತ ಕಾಮಗಾರಿಗಳು ನಿಗಧಿತ ಅವಧಿಯಲ್ಲಿ ಅನುಷ್ಠಾನಗೊಂಡಿರದೇ ಇರುವುದು ಹಾಗೂ ಪಿ.ಡಿ ಖಾತೆಯ್ಲಲಿ ಅನುದಾನ ಬಳಕೆಯಾಗದೇ ಉಳಿದಿರುವುದು ಆದ್ದರಿಂದ ಎಲ್ಲಾ ಅನುಷ್ಠಾನಾಧಿಕಾರಿಗಳು ಇದರ ಗಂಭೀರತೆಯನ್ನು ಅರಿತು ಶೀಘ್ರವಾಗಿ ಬಾಕಿ ಇರುವ ಕಾಮಗಾರಿಗಳನ್ನು ಸಲ್ಲಿಸಿ ಮುಕ್ತಾಯಗೊಳಿಸಲು ಮಾನ್ಯ ಉಸ್ತುವಾರಿ ಸಚಿವರು ಸೂಚಿಸಿದರು.
8. ಮಾನ್ಯ ಶಾಸಕರುಗಳಿಂದ ಕ್ರಿಯಾ ಯೋಜನೆ ಸಲ್ಲಿಸಲು ಬಾಕಿ ಇರುವುದು ಸಹ ಬಾಕಿ ಇರುವಂತಹ ಶಾಸಕರುಗಳಿಗೆ ಜಿಲ್ಲಾಧಿಕಾರಿಗಳು ಪತ್ರ ಮತ್ತು ಖುದ್ದಾಗಿ ಮಾತನಾಡಿ ಕ್ರಿಯಾ ಯೋಜನೆ ಪಡೆಯತಕ್ಕದ್ದು.

## II. ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ ಪ್ರಗತಿ

2013-14 ರಿಂದ 2018-19 ರವರೆಗೆ ಅನುಮೋದನೆ ನೀಡಿದ ಕಾಮಗಾರಿಗಳ ಪೈಕಿ ಪೂರ್ಣಗೊಂಡ ಕಾಮಗಾರಿಗಳನ್ನು ಹೊರತು ಪಡಿಸಿ ಅಂದರೆ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಡಾಟಾ ಎಂಟ್ರಿ ಮಾಡುವ ಸಂಬಂಧ ಪ್ರಗತಿಯನ್ನು ಸಾಧಿಸುವ ಕುರಿತು ಮಾನ್ಯ ಉಸ್ತುವಾರಿ ಸಚಿವರು ಸೂಚಿಸಿದರು.

| ಕ್ರ. ಸಂ | ಅನುಷ್ಠಾ ನಾಧಿಕಾರಿ | ಕ್ರಿ.ಯೋ ಅನುಮೋದನೆ | ಆಡಳಿತ ಮಂಜೂರಿ | ತಾಂತ್ರಿಕ ಪರಿಶೀಲನೆ | | ಕಾರ್ಯಾದೇಶ | | ಕಾಮಗಾರಿ ಪ್ರಾರಂಭ | | ಅಳತೆ ಕ್ರಮ | | ಕಾಮಗಾರಿ ಪೂರ್ಣ | |
|---|---|---|---|---|---|---|---|---|---|---|---|---|---|
| | | | | ಡಾಟಾ ಎಂಟ್ರಿ | ಬಾಕಿ | ಡಾಟಾ ಎಂಟ್ರಿ | ಬಾಕಿ | ಡಾಟಾ ಎಂಟ್ರಿ | ಬಾಕಿ | ಡಾಟಾ ಎಂಟ್ರಿ | ಬಾಕಿ | ಡಾಟಾ ಎಂಟ್ರಿ | ಬಾಕಿ |
| 1 | PRED | 675 | 659 | 552 | 107 | 481 | 71 | 477 | 4 | 467 | 10 | 467 | 14 |
| 2 | KRIDL | 376 | 249 | 231 | 18 | 231 | 0 | 231 | 0 | 85 | 146 | 85 | 146 |
| 3 | RWS | 58 | 54 | 54 | 0 | 54 | 0 | 54 | 0 | 46 | 8 | 30 | 24 |
| 4 | PWD | 2 | 0 | 0 | 0 | 0 | 0 | 0 | 0 | 0 | 0 | 0 | 0 |
| 5 | NIRMITHI | 601 | 446 | 395 | 54 | 387 | 8 | 387 | 0 | 300 | 92 | 300 | 87 |
| 6 | DISABLED | 7 | 7 | 0 | 0 | 0 | 0 | 0 | 0 | 0 | 0 | 0 | 0 |
| 7 | DELETED | 101 | 0 | 0 | 0 | 0 | 0 | 0 | 0 | 0 | 0 | 0 | 0 |
| **TOTAL** | | **1820** | **1415** | **1232** | **179** | **1153** | **79** | **1149** | **4** | **898** | **256** | **882** | **271** |

ಈ ಮೇಲಿನಂತೆ ವಿವರವಾಗಿ ಚರ್ಚಿಸಿ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆಯನ್ನು ನೀಡಿದರು.

1. 2013-14 ರಿಂ 2018-19 ರವರೆಗೆ ಅನುಮೋದನೆ ನೀಡಿದ ಕಾಮಗಾರಿಗಳ ಪೈಕಿ ಪೂರ್ಣಗೊಂಡ ಕಾಮಗಾರಿಗಳನ್ನು ಹೊರತುಪಡಿಸಿ ಪ್ರಗತಿಯಲ್ಲಿರುವ ಮತ್ತು ಪೂರ್ಣಗೊಳ್ಳದೇ ಇರುವ ಕಾಮಗಾರಿಗಳನ್ನು ಖಡ್ಡಾಯವಾಗಿ ಗಾಂಧಿಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಡಾಟಾ ಎಂಟ್ರಿ ಮಾಡಲು ಕ್ರಮವಹಿಸತಕ್ಕದ್ದು, ಮತ್ತು ಯಾವುದೇ ಕಾರಣಕ್ಕೂ ಕಾಮಗಾರಿಗಳನ್ನು ಗಾಂಧಿಸಾಕ್ಷಿ ಕಾಯಕ ತಂತ್ರಾಂಶದಲ್ಲಿ ನಮೂದಿಸದೇ ಬಿಡಬಾರದು. ಗಾಂಧಿಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸದಿದ್ದಲ್ಲಿ ಅನುದಾನ ಬಿಡುಗಡೆಯಾಗುವುದಿಲ್ಲವೆಂದು ಸೂಚನೆ ನೀಡಿದರು. ಹಾಗೂ ಯಾವ ಕಾಮಗಾರಿಗಳನ್ನು ಸಹ ಗಾಂಧಿಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಲು ಯಾವುದು ಬಿಟ್ಟಿಲ್ಲವೆಂದು ಅನುಷ್ಠಾನಾಧಿಕಾರಿಗಳಿಂದ ಪ್ರಮಾಣ ಪತ್ರ ಪಡೆಯಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಸೂಚನೆ ನೀಡಿದರು.

2. ಗಾಂಧಿಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಡಾಟಾ ಎಂಟ್ರಿ ಸಂಬಂಧ ಅನುಷ್ಠಾನಾಧಿಕಾರಿಗಳವರು ಸ್ವತಃ ಈ ತಂತ್ರಾಂಶದಲ್ಲಿರುವ ಪ್ರಯೋಜನ ಮತ್ತು ಸದುಪಯೋಗ ಪಡೆದುಕೊಳ್ಳಬೇಕು.

3. 1822 ಕಾಮಗಾರಿಗಳಿಗೆ ಗಾಂಧಿಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಲಾಗಿದ್ದು, ಈ ಪೈಕಿ 882 ಕಾಮಗಾರಿಗಳನ್ನು ಮಾತ್ರ ಪೂರ್ಣ ಹಂತದವರೆಗೂ ಡಾಟಾ ಎಂಟ್ರಿ ಮಾಡಲಾಗಿರುತ್ತದೆ. ಶೇ. 50 ರಷ್ಟು ಪ್ರಗತಿ ಸಾಧಿಸಿರುವುದರಿಂದ ಅಸಮದಾನ ವ್ಯಕ್ತಪಡಿಸಿದರು. ಆದ್ದರಿಂದ ಸಂಬಂಧಪಟ್ಟ ಏಜೆನ್ಸಿಯವರು ಕೂಡಲೇ ಡಾಟಾ ಎಂಟ್ರಿ ಮಾಡಬೇಕು.

4. ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದ ಕಾಮಗಾರಿಗಳ ಪೈಕಿ ಇನ್ನೂ 405 ಕಾಮಗಾರಿಗಳು ಆಡಳಿತ ಅನುಮೋದನೆ ನೀಡಲು ಬಾಕಿ ಇರುವುದರಿಂದ ತುರ್ತಾಗಿ ಅಂದಾಜು ಪಟ್ಟಿ ಸಲ್ಲಿಸಿ ಶೇ.75 ರಷ್ಟರ ಅನುದಾನ ಬಿಡುಗಡೆಗೆ ಕ್ರಮವಹಿಸತಕ್ಕದ್ದು, ಹೀಗೆ ಮಾಡಿದ್ದಲ್ಲಿ ವೆಚ್ಚವಾಗಿ ಪಿ.ಡಿ ಖಾತೆಯಲ್ಲಿ ಅನುದಾನ ಕಡಿಮೆ ಆಗುತ್ತದೆ. ಇದನ್ನು 15 ದಿನಗಳಲ್ಲಿ ಪೂರ್ಣಗೊಳಿಸಬೇಕು.

5. ತಾಂತ್ರಿಕ ಪರಿಶೀಲನೆ, ಟೆಂಡರ್ ಪ್ರಕ್ರಿಯೆ ಎಲ್ಲಾ ಹಂತಗಳಲ್ಲಿ ಇನ್ನೂ 15 ದಿನದಲ್ಲಿ ಅನುಷ್ಠಾನಾಧಿಕಾರಿಗಳು ಡಾಟಾ ಎಂಟ್ರಿ ಮಾಡಿ ಮುಗಿಸತಕ್ಕದ್ದು.

## III. ONE TIME SCHEME

ಸರ್ಕಾರದ ಆದೇಶದ ಸಂಖ್ಯೆ ಯೋಇ 200 ಯೋವಿವಿ 2017 ದಿನಾಂಕ:12.12.2017 ರ ಪ್ರಕಾರ 2002-03 ರಿಂದ ಅನುಮೋದನೆ ನೀಡಿದ ಕಾಮಗಾರಿಗಳ ಪೈಕಿ 31.03.2013 ರ ಅಂತ್ಯಕ್ಕೆ ಬಳಕೆಯಾಗದೇ ಉಳಿದಿರುವ ಅನುದಾನದಿಂದ ಒಂದು ಬಾರಿ ವೆಚ್ಚವಾಗಿ ವಿವಿಧ ಇಲಾಖೆ ಕಾಮಗಾರಿಗಳ ನೇರವಾಗಿ ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿರುವ ವಿಷಯದ ಬಗ್ಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ವಿವರವಾಗಿ ಚರ್ಚಿಸಿದರು.

| ಇಲಾಖೆ | ಸಂಖ್ಯೆ | ಮೊತ್ತ | ಹಂತ |
|---|---|---|---|
| ಆರೋಗ್ಯ ಇಲಾಖೆ | 2 | 45.60 | ಮುಕ್ತಾಯ |
| ಮಹಿಳಾ ಮಕ್ಕಳ ಅಭಿವೃದ್ಧಿ ಇಲಾಖೆ | 2 | 21.38 | ಮುಕ್ತಾಯ |
| ಶಿಕ್ಷಣ ಇಲಾಖೆ | 1 | 91.21 | ಪ್ರಾರಂಭಿಸಬೇಕು |

ಸದರಿ ವಿಷಯಕ್ಕೆ ಸಂಬಂಧಿಸಿದ 5 ಕಾಮಗಾರಿಗಳ ಪೈಕಿ 4 ಪೂರ್ಣಗೊಂಡು ವೆಚ್ಚ ಭರಿಸಲಾಗಿರುತ್ತದೆ. ಆದರೆ ನ.ರಾ ಪುರ ತಾಲ್ಲೂಕಿನ ಸರ್ಕಾರಿ ಜೂನಿಯರ್ ಕಾಲೇಜಿನ ಕೊಠಡಿಗಳ ನಿರ್ಮಾಣ ಕಾಮಗಾರಿ ರೂ. 91.20 ಲಕ್ಷದ ಕಾಮಗಾರಿಯನ್ನು ಅನುಷ್ಠಾನಗೊಳಿಸಿರುವುದಿಲ್ಲ. ಅಂಶದ ಬಗ್ಗೆ ಮಾನ್ಯ ಉಸ್ತುವಾರಿ ಸಚಿವರು ವಿವರವಾಗಿ ಚರ್ಚಿಸಿ ಈ ಕೆಳಕಂಡಂತೆ ಸೂಚನೆಯನ್ನು ನೀಡಿದರು.

1. ಈ ಕಛೇರಿ ಪತ್ರದ ದಿನಾಂಕ:20.12.2017 ರಂದು ಈ ಕಾಮಗಾರಿಗೆ ಅನುದಾನಬೇಕೆಂದು ಕೋರಿರುವ ಅಂಶವನ್ನು ಅಪರ ಜಿಲ್ಲಾಧಿಕಾರಿಗಳು ಉಸ್ತುವಾರಿ ಸಚಿವರ ಅವಗಹಾನೆಗೆ ತಂದಾಗ ಪಿ.ಡಿ ಅಕೌಂಟ್ ನಲ್ಲಿ ಅನುದಾನ ಲಭ್ಯವಿರುವುದರಿಂದ ಸದರಿ ಅನುದಾವನ್ನು ಬಳಕೆ ಮಾಡಿಕೊಂಡು ಉಳಿದ 1 ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.

2. ನ.ರಾ ಪುರ ತಾಲ್ಲೂಕಿನ ಸರ್ಕಾರಿ ಜೂನಿಯರ್ ಕಾಲೇಜಿನ ಕೊಠಡಿಗಳ ನಿರ್ಮಾಣ ಕಾಮಗಾರಿಯನ್ನು ಅನುದಾನದ ಕೊರತೆ ಇದೆ ಎಂದು ಮತ್ತು ಟೆಂಡರ್ ಪ್ರಕ್ರಿಯೆ ಅಂತಿಮಗೊಳ್ಳದ ಕಾರಣಕ್ಕೆ ಹಾಗೂ ಬಿಡ್ಡುದಾರರು ಪ್ರಿಮಿಯಂ ಮೊತ್ತವನ್ನು ಹೆಚ್ಚು ನಮೂದಿಸದ ಕಾರಣ ಸದರಿ ಕಾಮಗಾರಿಯನ್ನು ಅನುಷ್ಠಾನಗೊಳಿಸದೆ ಸ್ಥಗಿತಗೊಳಿಸುವುದು ಸರಿಯಲ್ಲ. ಈಗಾಗಲೇ ಸರ್ಕಾರದಿಂದ ಸದರಿ ಕಾಮಗಾರಿಯನ್ನು ಅನುಮೋದನೆ ನೀಡಿ ಅನುಷ್ಠಾನಗೊಳಿಸಲು ಸೂಚಿಸಿರುವುದರಿಂದ ಮತ್ತು ಪಿ.ಡಿ ಖಾತೆಯಲ್ಲಿ ಸಾಕಷ್ಟು ಅನುದಾನ ಲಭ್ಯವಿರುವುದರಿಂದ ಸದರಿ ಕಾಮಗಾರಿಯನ್ನು ಕೂಡಲೇ ಕೈಗೆತ್ತಿಕೊಂಡು ಅನುಷ್ಠಾನಗೊಳಿಸುವಂತೆ ಮಾನ್ಯ ಉಸ್ತುವಾರಿ ಸಚಿವರು ಸೂಚಿಸಿದರು.

3. 3 ಬಾರಿ ಟೆಂಡರ್ ಕರೆದರೂ Single Tender ಆಗಿರುತ್ತದೆಂದು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆರವರು ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳ ಗಮನಕ್ಕೆ ತರಲಾಯಿತು. ಮಾನ್ಯ ಉಸ್ತುವಾರಿ ಕಾರ್ಯದರ್ಶಿಗಳು ಅನುಷ್ಠಾನಾದಿಕಾರಿಯನ್ನು ಬದಲಾಯಿಸಿ ಕೆ.ಆರ್.ಐ.ಡಿ.ಎಲ್, ಚಿಕ್ಕಮಗಳೂರು ರವರಿಗೆ ವಹಿಸಲು ಸೂಚಿಸಿದರು.

4. ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ರವರು ಈಗಾಗಲೇ ತಯಾರಿಸಿದ ಅಂದಾಜು ಮೊತ್ತಕ್ಕೆ ಅನುಗುಣವಾಗಿ ಈ ಕಾಮಗಾರಿಯನ್ನು 2 ತಿಂಗಳಲ್ಲಿ ಪೂರ್ಣಗೊಳಿಸುವುದು ಹಾಗೂ ಈಗಾಗಲೇ ಅಂದಾಜು ಪಟ್ಟಿಗೆ ಆಡಳಿತ ಮಂಜೂರಿ ನೀಡಿರುವುದರಿಂದ ಸದರಿ ಅಂದಾಜು ಪಟ್ಟಿಗೆ ಅನುಮೋದಿಸಿ ಕಾಮಗಾರಿಯನ್ನು ಅನುಷ್ಠಾನಗೊಳಿಸುವುದು.

## MP LADS

ಮಾನ್ಯ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಡಿಸೆಂಬರ್ -2019 ರ ಅಂತ್ಯದ ವರೆಗೆ ಸಂಸದರವಾರು ಈ ಕೆಳಗಿನಂತೆ ಪ್ರಗತಿಯನ್ನು ವಿಮರ್ಶಿಸಲಾಯಿತು.

**I . ಕು. ಶೋಭಾ ಕರಂದ್ಲಾಜೆ,** ಮಾನ್ಯ ಸಂಸದರು, ಉಡುಪಿ- ಚಿಕ್ಕಮಗಳೂರು ಲೋಕಸಭಾ ಕ್ಷೇತ್ರ,

| ವರ್ಷ | ಆಡಳಿತ ಮಂಜೂರತಿ ನೀಡಿದ ಕಾಮಗಾರಿಗಳು | ಆಡಳಿತ ಮಂಜೂರಾತಿಗೆ ಬಾಕಿ ಇರುವ ಕಾಮಗಾರಿಗಳು | ಪೂರ್ಣಗೊಂಡ ಕಾಮಗಾರಿಗಳು | ಪ್ರಗತಿಯಲ್ಲಿರುವ ಕಾಮಗಾರಿಗಳು | ಹಣಬಳಕೆ ಸಲ್ಲಿಕೆ ಮೊತ್ತ (ರೂ. ಲಕ್ಷ) |
|---|---|---|---|---|---|
| 2014-15 | 98 | 2 | 90 | 6 | 188.48 |
| 2015-16 | 79 | 0 | 66 | 13 | 229.43 |
| 2016-17 | 62 | 1 | 50 | 13 | 146.03 |
| 2017-18 | 77 | 9 | 26 | 54 | 53.59 |
| 2018-19 | 0 | 51 | 0 | 0 | 0 |
| **ಒಟ್ಟು** | **316** | **63** | **232** | **86** | **617.53** |

ಮೇಲಿನಂತೆ ಆಡಳಿತ ಮಂಜೂರಿಗೆ ಸಲ್ಲಿಸಲು ಬಾಕಿ ಇರುವ ಕಾಮಗಾರಿಗಳಿಗೆ ಕೂಡಲೇ ಅಂದಾಜು ಸಲ್ಲಿಸುವಂತೆ ಅನುಷ್ಠಾನಾದಿಕಾರಿಗಳಿಗೆ ಸೂಚಿಸಲಾಯಿತು. ಅದೇ ರೀತಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸುವಂತೆ ತಿಳಿಸಲಾಯಿತು.

**II . ಶ್ರೀ ಜೈ ರಾಮ್ ರಮೇಶ್,** ಮಾನ್ಯ ರಾಜ್ಯಸಭಾ ಸದಸ್ಯರು,

| ವರ್ಷ | ಆಡಳಿತ ಮಂಜೂರತಿ ನೀಡಿದ ಕಾಮಗಾರಿಗಳು | ಆಡಳಿತ ಮಂಜೂರಾತಿಗೆ ಬಾಕಿ ಇರುವ ಕಾಮಗಾರಿಗಳು | ಪೂರ್ಣಗೊಂಡ ಕಾಮಗಾರಿಗಳು | ಪ್ರಗತಿಯಲ್ಲಿರುವ ಕಾಮಗಾರಿಗಳು | ಹಣಬಳಕೆ ಸಲ್ಲಿಕೆ ಮೊತ್ತ (ರೂ. ಲಕ್ಷ) |
|---|---|---|---|---|---|
| 2016-17 | 29 | 1 | 24 | 6 | 192.20 |
| 2017-18 | 7 | 2 | 4 | 4 | 0 |
| 2018-19 | 1 | 1 | 0 | 1 | 0 |
| **ಒಟ್ಟು** | **37** | **4** | **28** | **11** | **192.20** |

ಮೇಲಿನಂತೆ ಆಡಳಿತ ಮಂಜೂರಿಗೆ ಸಲ್ಲಿಸಲು ಬಾಕಿ ಇರುವ ಕಾಮಗಾರಿಗಳಿಗೆ ಕೂಡಲೇ ಅಂದಾಜು ಸಲ್ಲಿಸುವಂತೆ ಅನುಷ್ಠಾನಾದಿಕಾರಿಗಳಿಗೆ ಸೂಚಿಸಲಾಯಿತು. ಅದೇ ರೀತಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸುವಂತೆ ತಿಳಿಸಲಾಯಿತು.

**III . ಶ್ರೀ ಹೆಚ್.ಡಿ ದೇವೇಗೌಡ,** ಮಾನ್ಯ ಸಂಸತ್ ಸದಸ್ಯರು, ಹಾಸನ ಲೋಕಸಭಾ ಕ್ಷೇತ್ರ.

| ವರ್ಷ | ಆಡಳಿತ ಮಂಜೂರತಿ ನೀಡಿದ ಕಾಮಗಾರಿಗಳು | ಆಡಳಿತ ಮಂಜೂರಾತಿಗೆ ಬಾಕಿ ಇರುವ ಕಾಮಗಾರಿಗಳು | ಪೂರ್ಣಗೊಂಡ ಕಾಮಗಾರಿಗಳು | ಪ್ರಗತಿಯಲ್ಲಿರುವ ಕಾಮಗಾರಿಗಳು | ಹಣಬಳಕೆ ಸಲ್ಲಿಕೆ ಮೊತ್ತ (ರೂ. ಲಕ್ಷ) |
|---|---|---|---|---|---|
| 2013-14 | 20 | 0 | 17 | 3 | 17.18 |
| 2014-15 | 14 | 0 | 12 | 2 | |
| 2015-16 | 25 | 1 | 21 | 4 | 45.42 |
| 2016-17 | 8 | 6 | 4 | 0 | 6.00 |
| ಒಟ್ಟು | **67** | **7** | **54** | **9** | **68.60** |

ಮೇಲಿನಂತೆ ಆಡಳಿತ ಮಂಜೂರಿಗೆ ಸಲ್ಲಿಸಲು ಬಾಕಿ ಇರುವ ಕಾಮಗಾರಿಗಳಿಗೆ ಕೂಡಲೇ ಅಂದಾಜು ಸಲ್ಲಿಸುವಂತೆ ಅನುಷ್ಠಾನಾದಿಕಾರಿಗಳಿಗೆ ಸೂಚಿಸಲಾಯಿತು. ಅದೇ ರೀತಿ ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸುವಂತೆ ತಿಳಿಸಲಾಯಿತು

ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ ಸಂಸದರ ಪ್ರದೇಶಾಭಿವೃದ್ಧಿ ಯೋಜನೆಗೆ ಸಂಬಧಿಸಿದಂತೆ ಹಣಬಳಕೆ ಪತ್ರ, ಆಡಿಟ್ ರಿಪೋರ್ಟ್, ಈವರೆಗೂ ಆಡಳಿತ ಮಂಜೂರಾತಿ ನೀಡಿ ಪೂರ್ಣಗೊಂಡಿರುವ ಕಾಮಗಾರಿಗಳ ವಿವರವನ್ನು ಸರ್ಕಾರಕ್ಕೆ ಸಲ್ಲಿಸಿ ಅಗತ್ಯವಿರುವ ಮುಂದಿನ ಕಂತಿನ ಅನುದಾನವನ್ನು ಪಡೆಯುವಂತೆ ಸೂಚಿಸಿದರು.

1. ಮಾನ್ಯ ಸಂಸದರ ನಿಧಿಯಿಂದ ಅನುಮೋದನೆ ನೀಡಿ ಪೂರ್ಣಗೊಳಿಸಲು ಬಾಕಿ ಇರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಪ್ರಗತಿ ಸಾಧಿಸಲು ಸೂಚನೆ ನೀಡಲಾಯಿತು.

2. ಕಾಲಕಾಲಕ್ಕೆ Monthly Progress Report (MPR) ನ್ನು ಸಲ್ಲಿಸಿ ಅನುದಾನ ಪಡೆಯಲು ಕ್ರಮವಹಿಸುವುದು.

3. ಶ್ರೀ ಜೈ ರಾಮ್ ರಮೇಶ್, ಮಾನ್ಯ ರಾಜ್ಯ ಸಭಾ ಸದಸ್ಯರು ಇವರ ಸಂಸದರ ನಿಧಿಯಿಂದ 2017-18 ಮತ್ತು 2018-19 ನೇ ಸಾಲಿನ ಅನುದಾನ ಬಿಡುಗಡೆಗೊಂಡಿರುವುದಿಲ್ಲ. ಈ ಬಗ್ಗೆ ಪರಿಶೀಲಿಸಿ MPR ಮತ್ತು ಆಡಿಟ್ ವರದಿ ಕಳುಹಿಸಿ ಅನುದಾನವನ್ನು ಪಡೆಯುವುದು.

ಅಪರ ಮುಖ್ಯ ಕಾರ್ಯದರ್ಶಿಗಳು ಮಾತನಾಡುತ್ತಾ, ಯೋಜನೆಯಡಿಯ ಕಾಮಗಾರಿಗಳನ್ನು ಫಲಕಾರಿ ರೀತಿಯಲ್ಲಿ ಪೂರ್ಣಗೊಳಿಸಿ ಹಣಬಳಕೆ ಪತ್ರವನ್ನು ಸಲ್ಲಿಸುವಂತೆ ತಿಳಿಸಿದರು. ಯೋಜನೆಯ ಉಳಿಕೆ ಕಂತಿನ ಅನುದಾನ ಪಡೆಯುವ ಬಗ್ಗೆ ಹಿಂದಿನ ಬಿಡುಗಡೆ ಮೊತ್ತಕ್ಕೆ ಹಣಬಳಕೆ ಪತ್ರ ಸಲ್ಲಿಸಿ ಅನುದಾನ ಪಡೆಯುವಂತೆ ಸೂಚಿಸಿದರು.

ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ತುರ್ತಾಗಿ ಕ್ರಮವಹಿಸುವಂತೆ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ಸೂಚಿಸುತ್ತಾ ಮುಂದಿನ ಸಭೆಯ ವೇಳೆಗೆ ಗಮನಾರ್ಹ ಪ್ರಗತಿ ಸಾಧಿಸಲು ನಿರ್ದೇಶನ ನೀಡಿ ಸಭೆಯನ್ನು ಮುಕ್ತಾಯಗೊಳಿಸಿದರು.

**ಡಾ.ಶಾಲಿನಿ ರಜನೀಶ್, I.A.S,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ,
ಮತ್ತು ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

**ಪ್ರತಿಯನ್ನು ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ ಈ ಕೆಳಕಂಡವರಿಗೆ ಕಳುಹಿಸಿದೆ.**

1. ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಚಿಕ್ಕಮಗಳೂರು.
2. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು.
3. ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಚಿಕ್ಕಮಗಳೂರು.
4. ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿಕ್ಕಮಗಳೂರು.
5. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣಾ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಮಗಳೂರು.
6. ಜಿಲ್ಲಾ ಅಂಗವಿಕಲ ಮತ್ತು ಹಿರಿಯ ನಾಗರೀಕರ ಕಲ್ಯಾಣಾಧಿಕಾರಿ, ಜಿಲ್ಲಾ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಚಿಕ್ಕಮಗಳೂರು.
7. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಚಿಕ್ಕಮಗಳೂರು/ಮೂಡಿಗೆರೆ/ಶೃಂಗೇರಿ/ಕೊಪ್ಪ/ನರಸಿಂಹರಾಜಪುರ/ಕಡೂರು/ತರೀಕೆರೆ.
8. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಉಪವಿಭಾಗ ಚಿಕ್ಕಮಗಳೂರು/ ಮೂಡಿಗೆರೆ/ ಶೃಂಗೇರಿ/ ಕೊಪ್ಪ/ ನರಸಿಂಹರಾಜಪುರ /ಕಡೂರು/ತರೀಕೆರೆ
9. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಉಪವಿಭಾಗ ಚಿಕ್ಕಮಗಳೂರು/ ಮೂಡಿಗೆರೆ/ ಶೃಂಗೇರಿ/ ಕೊಪ್ಪ/ ನರಸಿಂಹರಾಜಪುರ /ಕಡೂರು/ ತರೀಕೆರೆ
10. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕೆ ಆರ್ ಐ ಡಿ ಎಲ್, ಉಪವಿಭಾಗ ಕಡೂರು/ ಚಿಕ್ಕಮಗಳೂರು.
11. ಜಿಲ್ಲಾ ಉಸ್ತುವಾರಿ ಸಚಿವರ ಆಪ್ತ ಕಾರ್ಯದರ್ಶಿ, ಚಿಕ್ಕಮಗಳೂರು ಜಿಲ್ಲೆ

**ಚಿಕ್ಕಮಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಸರ್ಕಾರದ ಪ್ರಮುಖ ಅಭಿವೃದ್ಧಿ ಯೋಜನೆಗಳು ಹಾಗೂ ವಿಷಯಗಳ ಕುರಿತು ನಡೆಸಲಾದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು**

---

**:: ಅಧ್ಯಕ್ಷತೆ ::**

**ಡಾ: ಶಾಲಿನಿ ರಜನೀಶ್, ಐ ಎ ಎಸ್.,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ , ಬೆಂಗಳೂರು
ಹಾಗೂ ಚಿಕ್ಕಮಗಳೂರು ಜಿಲ್ಲಾ
ಉಸ್ತುವಾರಿ ಕಾರ್ಯದರ್ಶಿಯವರು

**:: ಸ್ಥಳ ::**
ಜಿಲ್ಲಾಧಿಕಾರಿ ಕಚೇರಿ ಸಭಾಂಗಣ,
ಚಿಕ್ಕಮಗಳೂರು

ದಿನಾಂಕ: 24.01.2020
ಬೆಳಿಗ್ಗೆ: 10.30 ಗಂಟೆ

**:: ಉಪಸ್ಥಿತಿ ::**

**1. ಡಾ: ಬಗಾದಿ ಗೌತಮ್, ಐ ಎ ಎಸ್.,**
ಜಿಲ್ಲಾಧಿಕಾರಿ, ಚಿಕ್ಕಮಗಳೂರು.

**2. ಶ್ರೀಮತಿ ಅಶ್ವಥಿ, ಐ ಎ ಎಸ್.,**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ
ಜಿಲ್ಲಾ ಪಂ ಚಾಯ್ತಿ, ಚಿಕ್ಕಮಗಳೂರು

**ಹಾಜರಿದ್ದವರು:-**

ಅಪರ ಜಿಲ್ಲಾಧಿಕಾರಿ ಚಿಕ್ಕಮಗಳೂರು ಹಾಗೂ ಹಾಜರಿಯಂತೆ ಅಧಿಕಾರಿಗಳು.

ಪ್ರಥಮವಾಗಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ನೂತನವಾಗಿ ನೇಮಕವಾಗಿ, ಪ್ರಥಮ ಬಾರಿಗೆ ಜಿಲ್ಲೆಗೆ ಆಗಮಿಸಿರುವಂತೆ ಜಿಲ್ಲಾಡಳಿತ ಪರವಾಗಿ ಸ್ವಾಗತಿಸುತ್ತಾ, ಹಾಗೂ ಸಭೆಗೆ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿ, ಮಾನ್ಯ ಜಿಲ್ಲಾ

ಉಸ್ತುವಾರಿ ಕಾರ್ಯದರ್ಶಿಗಳು ಸಭೆಯ ಅಧ್ಯಕ್ಷತೆ ವಹಿಸಿ ಸಭೆ ನಡೆಸಿಕೊಡಲು ವಿನಂತಿಸಲಾಯಿತು. ಅದೇ ರೀತಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಜರಿದ್ದ ಅಧಿಕಾರಿಗಳ ಪರಿಚಯ ಮಾಡಿಕೊಂಡರು.

**<u>ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ವಿಷಯವಾರು ಚರ್ಚಿಸಿ, ತೀರ್ಮಾನ ಕೈಗೊಳ್ಳಲಾಯಿತು.</u>**

| ಚರ್ಚೆ | ತೀರ್ಮಾನ |
|---|---|
| **(1) ಬಸವ ವಸತಿ (ಗ್ರಾಮೀಣ)**<br>ಜಿಲ್ಲೆಯಲ್ಲಿ ಒಟ್ಟು 11306 ಫಲಾನುಭವಿಗಳು ಆಯ್ಕೆಯಾಗಿದ್ದು, ಆ ಪೈಕಿ 5200 ಮನೆಗಳು ಪೂರ್ಣವಾಗಿರುವುದನ್ನು ಹಾಗೂ 2774 ಮನೆಗಳು ಪ್ರಾರಂಭವಾಗದೇ ಇರುವುದನ್ನು ಗಮನಿಸಲಾಯಿತು.<br><br>**(2) ಡಾ: ಬಿ.ಆರ್.ಅಂಬೇಡ್ಕರ್ ನಿವಾಸ ಯೋಜನೆ (ಗ್ರಾಮೀಣ)**<br>ಜಿಲ್ಲೆಯಲ್ಲಿ ಒಟ್ಟು 4113 ಫಲಾನುಭವಿಗಳ ಪೈಕಿ 1447 ಫಲಾನುಭವಿಗಳು ಈವರೆವಿಗೆ ಪ್ರಾರಂಭಿಸದೇ ಇರುವುದನ್ನು ಗಮನಿಸಲಾಯಿತು.<br><br>**(3) ಡಾ: ಬಿ.ಆರ್.ಅಂಬೇಡ್ಕರ್ ನಿವಾಸ ಯೋಜನೆ (ನಗರ)**<br>ಜಿಲ್ಲೆಯಲ್ಲಿ ಒಟ್ಟು 359 ಫಲಾನುಭವಿಗಳಿದ್ದು, ಆ ಪೈಕಿ 178 ಮನೆಗಳು ಪೂರ್ಣಗೊಂಡಿರುತ್ತವೆ. 111 ಮನೆಗಳು ಪ್ರಾರಂಭ ವಾಗದೇ ಇರುವ ಬಗ್ಗೆ ಗಮನಿಸಲಾಯಿತು. | • ಪ್ರಾರಂಭಿಸದೇ ಬಾಕಿ ಇರುವ 2774 ಮನೆಗಳನ್ನು ಕೂಡಲೇ ಪ್ರಾರಂಭಿಸುವಂತೆ ಸೂಚಿಸಿದರು.<br>• ಮೂರು ತಿಳುವಳಿಕೆ ನೀಡಿದ್ದಾಗ್ಯೂ ಮನೆಗಳನ್ನು ಪ್ರಾರಂಭಿಸದೇ ಇರುವುದಕ್ಕೆ ಫಲಾನುಭವಿಗಳ ಸಮಸ್ಯೆ ತಿಳಿದು ಬಗೆಹರಿಸಲು EO/PDO ಗೆ ಸೂಚಿಸಿದರು.<br>• ಮನೆಗಳ ನಿರ್ಮಾಣಕ್ಕೆ ಅವಶ್ಯವಾಗಿರುವ ಮರಳು, ಇಟ್ಟಿಗೆ ಇತ್ಯಾದಿ ಸಂಪನ್ಮೂಲ ಹಾಗೂ ಕೌಶಲ್ಯ ಸಲಹೆ ಸಹಕಾರಗಳನ್ನು ತಾಲ್ಲೂಕು ಪಂಚಾಯ್ತಿಯ ವತಿಯಿಂದ ಹಾಗೂ ಸ್ಥಳೀಯ ಇಂಜಿನಿಯರಿಂಗ್ ಇಲಾಖಾ ಅಧಿಕಾರಿಗಳು ನೀಡುವಂತೆ ಸೂಚಿಸಲಾಯಿತು.<br>• ಪಿ.ಡಿ.ಓ. ಮತ್ತು ಗ್ರಾಮ ಲೆಕ್ಕಿಗರು ಒಂದು ವಾರದಲ್ಲಿ ಪೂರ್ಣಗೊಂಡ ಮನೆಗಳನ್ನು ಪರಿಶೀಲಿಸಿ ದೃಢೀಕರಣಗಳನ್ನು ನೀಡಲು ಸೂಚಿಸಲಾಯಿತು. ಅದರಂತೆ ವಸತಿ ಇಲಾಖೆಯಿಂದ ಅನುದಾನ ಬಿಡುಗಡೆ ಮಾಡಲಾಗುವುದು.<br><br>**(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಮುಖ್ಯ ಯೋಜನಾಧಿಕಾರಿ, ಜಿಲ್ಲಾಪಂಚಾಯ್ತಿ ಹಾಗೂ ಎಲ್ಲಾ ತಾಲ್ಲೂಕು ಪಂಚಾಯ್ತಿ, ಕಾರ್ಯನಿರ್ವಾಹಕ ಅಧಿಕಾರಿಗಳು)** |

| | |
|---|---|
| **<u>(4) ಪ್ರಧಾನ್ ಮಂತ್ರಿ ಆವಾಸ್ ಯೋಜನಾ (PMAY) (ಗ್ರಾಮೀಣ)</u>**<br><br>ಜಿಲ್ಲೆಯಲ್ಲಿ ಒಟ್ಟು 332 ಫಲಾನುಭವಿಗಳಿದ್ದು, 77 ಪ್ರಕರಣಗಳಲ್ಲಿ ಈವರೆವಿಗೆ ಮನೆಗಳು ಪ್ರಾರಂಭಿಸದೇ ಇರುವುದನ್ನು ಗಮನಿಸಲಾಯಿತು.<br><br>ಈ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡುತ್ತಾ ವಸತಿ ಯೋಜನೆಗಳಲ್ಲಿ ಫಲಾನುಭವಿಗಳು ಮನೆಗಳನ್ನು ಪ್ರಾರಂಭಿಸಲು ಆಸಕ್ತಿ ತೋರುತ್ತಿಲ್ಲವೆಂದು ಹಲವಾರು ಫಲಾನುಭವಿಗಳು ಕೂಲಿ ಕೆಲಸ ಇತ್ಯಾದಿ ಕೃಷಿ ಚಟುವಟಿಕೆಗಳ ಸಂಬಂಧವಾಗಿ ಇತರೆ ಜಾಗಗಳಿಗೆ ತೆರಳಿರುತ್ತಾರೆಂದು ತಿಳಿಸಿರುತ್ತಾರೆ.<br><br>ಈ ಬಗ್ಗೆ ಫಲಾನುಭವಿಗಳು ಕೂಲಿ ಕೆಲಸ ಇತ್ಯಾದಿಗಳಿಗೆ ಹೊರ ಸ್ಥಳಗಳಿಗೆ ಹೋಗಿರುವರೇ ವಿನಃ ಪೂರ್ಣವಾಗಿ ವಲಸೇ ಹೋಗಿರುವುದಿಲ್ಲ. ಆದ್ದರಿಂದ ಈ ಬಗ್ಗೆ ಸ್ಥಳೀಯವಾಗಿ ವಿಚಾರಣೆಯನ್ನು ನಡೆಸಿ ಅದರಂತೆ ಹಿಂಬಾಲಿಕಾ ಕ್ರಮ ಅವಶ್ಯವಾಗಿರುತ್ತದೆ.<br><br>ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಕಡೂರು ತಾಲ್ಲೂಕಿನಲ್ಲಿ ಪ್ರಾರಂಭವಾಗದೇ ಇರುವ 39 ಪ್ರಕರಣಗಳಲ್ಲಿ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಸ್ಪಷ್ಟ ಕಾರಣವನ್ನು ನೀಡುವಂತೆ ಮತ್ತು ಅದೇ ರೀತಿ ಮನೆ ಪ್ರಾರಂಭಿಸುವ ಕ್ರಮವಹಿಸಿ ವರದಿ ನೀಡಲು ತಿಳಿಸಿದರು. | ಯೋಜನೆಯಡಿ ಕೇವಲ 332 ಫಲಾನುಭವಿಗಳನ್ನು ಆಯ್ಕೆಗೊಳಿಸಿದ್ದು ತುಂಬಾ ಕಡಿಮೆ ಸಂಖ್ಯೆಯಾಗಿರುತ್ತದೆ. ಆದ್ದರಿಂದ Socio Economic and Caste Census (SECC) 2011 ದತ್ತಾಂಶದಂತೆ ಗ್ರಾಮೀಣ ಪ್ರದೇಶದ ವಸತಿ ರಹಿತ ಫಲಾನುಭವಿಗಳ ಪಟ್ಟಿಯೊಂದಿಗೆ ಪರಿಶೀಲಿಸಿ ಅರ್ಹರಿರುವ ಫಲಾನುಭವಿಗಳನ್ನು ಪ್ರಧಾನ್ ಮಂತ್ರಿ ಆವಾಸ್ ಯೋಜನಾ (PMAY)ದಲ್ಲಿ ಸೇರಿಸುವಂತೆ ತಿಳಿಸಲಾಯಿತು.<br><br>**(ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು)** |

| | |
|---|---|
| **(5) ವಾಜಪೇಯಿ ನಗರ ಯೋಜನೆ ಅಡಿ ಹೆಚ್ಚುವರಿ ಮನೆ ನಿರ್ಮಾಣ ಗುರಿ:**<br>ಯೋಜನೆಯಡಿ 425 ಫಲಾನುಭವಿಗಳು ದಾಖಲಿದ್ದು, ಆ ಪೈಕಿ ಶೇ.50ರಷ್ಟು ಅಂದರೆ 202 ಮನೆಗಳು ಪೂರ್ಣಗೊಂಡಿದ್ದು, 122 ಮನೆಗಳು ಪ್ರಾರಂಭಿಸದೇ ಇರುವುದನ್ನು ಗಮನಿಸಲಾಯಿತು. | ನಿರ್ಮಿತಿ ಕೇಂದ್ರ ಮತ್ತು ಎನ್ ಆರ್ ಎಲ್ ಎಂ ಮೂಲಕ ಮನೆ ನಿರ್ಮಾಣಕ್ಕೆ ಅವಶ್ಯವಿರುವ ಸಾಮಾಗ್ರಿಗಳನ್ನು ಸಮುದಾಯ ಚಟುವಟಿಕೆ ರೂಪದಲ್ಲಿ ಫಲಾನುಭವಿಗೆ ಲಭ್ಯವಾಗುವಂತೆ ಮಾಡಿದಲ್ಲಿ ನಿರ್ಮಾಣ ಪ್ರಗತಿ ಮತ್ತು ಇದರಿಂದ ಆರ್ಥಿಕ ಬೆಳವಣಿಗೆ ಸಹ ಸಾಧ್ಯವಾಗುವುದೆಂದು ಅಭಿಪ್ರಾಯಿಸಿದರು.<br>**(ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು)** |
| **(6) ದೇವರಾಜ ಅರಸು ವಸತಿ ಯೋಜನೆ (ನಗರ)**<br>ಯೋಜನೆಯಡಿ 68 ಫಲಾನುಭವಿಗಳು ಆಯ್ಕೆಯಾಗಿದ್ದು, 22 ಮನೆಗಳು ಪೂರ್ಣಗೊಂಡಿರುತ್ತದೆ. 13 ಮನೆಗಳು ತರೀಕೆರೆ ಪುರಸಭೆ ವ್ಯಾಪ್ತಿಯಲ್ಲಿ ಪ್ರಾರಂಭಿಸದೇ ಇರುವುದನ್ನು ಗಮನಿಸಲಾಯಿತು.<br>ಫಲಾನುಭವಿಗಳನ್ನು ಗುರುತಿಸಿ ನಿಗಮಕ್ಕೆ ಗುರಿ ನಿಗದಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ ಹಾಗೂ ದಿನಾಂಕ:10-01-2020ರಂದು ನಡೆದ ಸಮಿತಿ ಸಭೆಯಲ್ಲಿ ಪುನ: 83 ವಸತಿರಹಿತರವನ್ನು ಗುರುತಿಸಲಾಗಿದೆ ಹಾಗೂ 12 ಜನ ವಸತಿರಹಿತ ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಪ್ರಸ್ತಾವನೆಯನ್ನು ಶೀಘ್ರದಲ್ಲಿಯೇ ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದಾಗಿ ಸಭೆಗೆ ತಿಳಿಸಿದರು. | **(ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು)** |

| | |
|---|---|
| **(7) PMAY (ನಗರ)- Beneficiary Led Construction (BLC)**<br>ಜಿಲ್ಲೆಯಲ್ಲಿ ಒಟ್ಟು 1524 ಮನೆಗಳಡಿ 390 ಪ್ರಕರಣಗಳಲ್ಲಿ ಈವರೆವಿಗೆ ಮನೆಗಳನ್ನು ಪ್ರಾರಂಭಿಸದೇ ಇರುವುದನ್ನು ಗಮನಿಸಲಾಯಿತು. | • ಪ್ರಾರಂಭಿಸದೇ ಬಾಕಿ ಇರುವ 390 ಮನೆಗಳನ್ನು ಕೂಡಲೇ ಪ್ರಾರಂಭಿಸುವಂತೆ ಸೂಚಿಸಿದರು.<br>**(ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು)** |
| **8) PMAY (ನಗರ)- (AHP)**<br>ಫಲಾನುಭವಿಯ ವಂತಿಕೆ ಪಾವತಿಸುವ ಕುರಿತು ಮನೆ ನಿರ್ಮಾಣ ಮಾಡಲು ಬ್ಯಾಂಕ್ ನಿಂದ ಸಾಲ ಮಂಜೂರು ಮಾಡುವ ಕುರಿತು ದಿನಾಂಕ: 28.11.2019ರಂದು ಫಲಾನುಭವಿಗಳು ಹಾಗೂ ಲೀಡ್ ಬ್ಯಾಂಕ್ ವ್ಯವಸ್ಥಾಪಕರ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಯಲ್ಲಿ ಮನೆ ಕಟ್ಟಲು ಪ್ರಾರಂಭಿಸಿದ ನಂತರ ಸಾಲ ನೀಡುವುದಾಗಿ ಲೀಡ್ ಬ್ಯಾಂಕ್ ವ್ಯವಸ್ಥಾಪಕರು ತಿಳಿಸಿರುತ್ತಾರೆಂದು ಹಾಗೂ ಈಗಾಗಲೇ 1511 ಫಲಾನುಭವಿಗಳು ಆಯ್ಕೆ ಆಗಿದ್ದು, 579 ಜನ ಫಲಾನುಭವಿಗಳ ದಾಖಲೆಗಳನ್ನು PMAY ವೆಬ್ ಸೈಟ್ ನಲ್ಲಿ ನಮೂದಿಸಲಾಗಿದ್ದು, 100 ಫಲಾನುಭವಿಗಳ ದಾಖಲಾತಿಗಳನ್ನು ಸಂಗ್ರಹಿಸಿದ್ದು, ನಿಗಮದ ವೆಬ್ ಸೈಟ್ ನಲ್ಲಿ ಕಾಲೋಚಿತಗೊಳಿಸಲಾಗುತ್ತಿದೆ. ಉಳಿದ 832 ಫಲಾನುಭವಿಗಳ ದಾಖಲಾತಿಗಳನ್ನು ಪಡೆಯಲು ಕರ ವಸೂಲಿಗಾರರು ಹಾಗೂ ಕಂದಾಯ ನಿರೀಕ್ಷಕರ ತಂಡ ಮಾಡಿ ದಾಖಲಾತಿಗಳನ್ನು ಪಡೆಯಲಾಗುತ್ತಿದೆ ಎಂದು ತಿಳಿಸಿದರು. | • ಈ ಬಗ್ಗೆ ನಗರಸಭೆ ಅಧಿಕಾರಿಗಳು ಸೂಕ್ತ ಹಿಂಬಾಲಿಕ ಕ್ರಮವನ್ನು ತ್ವರಿತವಾಗಿ ಕೈಗೊಂಡು ದಾಖಲೆಗಳ ಸಂಗ್ರಹಣೆ ಮಾಡಿ ಯೋಜನೆಯು ಫಲಕಾರಿ ರೀತಿಯಲ್ಲಿ ಅನುಷ್ಠಾನಗೊಳಿಸಲು ಸೂಚಿಸಲಾಯಿತು.<br>• ಫಲಾನುಭವಿಯ ವಂತಿಕೆ ನೀಡಲು ಮುಂದೆ ಬಾರದಿದ್ದಲ್ಲಿ ಆಧ್ಯಾರ್ಪಣೆ ಮಾಡಿ ಬದಲಿಗೆ ಅರ್ಹರನ್ನು ಗುರುತಿಸುವ ಕ್ರಮವಹಿಸಲು ಸೂಚಿಸಲಾಯಿತು.<br>ಈ ಬಗ್ಗೆ ಅಧ್ಯಕ್ಷರು ಮಾತನಾಡುತ್ತಾ ಸಭೆಯಲ್ಲಿ ಹಾಜರಿದ್ದ ಲೀಡ್ ಬ್ಯಾಂಕ್ ಮ್ಯಾನೇಜರ್ ರವರಿಗೆ ಸಾಲ ಮಂಜೂರಾತಿಯನ್ನು ನೀಡುವಲ್ಲಿ ಆಕ್ಷೇಪಣೆ ಅಥವಾ ವಿಳಂಬವಾಗುತ್ತಿದೆಯೇ ಎಂದು ಕೇಳಲಾಗಿ, ಫಲಾನುಭವಿಗಳು ಮನೆ ನಿರ್ಮಾಣದ ಪ್ರಾರಂಭಿಕ ಹಂತದ ದಾಖಲೆಯನ್ನು ಬ್ಯಾಂಕಿಗೆ ಒದಗಿಸಿದಲ್ಲಿ ನಗರಸಭೆಗೆ ಸಾಲದ ಮೊತ್ತವನ್ನು ನೀಡಲಾಗುವುದೆಂದು ತಿಳಿಸಿದರು.<br>• **(ಕ್ರಮ: ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಮಗಳೂರು)** |

| | |
|---|---|
| **9) PMAY (ನಗರ)- (CLSS)**<br>ಜಿಲ್ಲೆಯಲ್ಲಿ ಈ ಯೋಜನೆಯಡಿ ಒಟ್ಟು 143 ಫಲಾನುಭವಿಗಳು ಆಯ್ಕೆಯಾಗಿರುವುದನ್ನು ಗಮನಿಸಲಾಯಿತು. ಈ ಬಗ್ಗೆ ಯೋಜನಾ ನಿರ್ದೇಶಕರು ಮಾಹಿತಿಯನ್ನು ನೀಡುತ್ತಾ ಸದರಿ ಫಲಾನುಭವಿಗಳಿಗೆ ನಗರದ ವಿವಿಧ ಬ್ಯಾಂಕ್ ಗಳಿಂದ ಸಾಲ ಸೌಲಭ್ಯ ಮಂಜೂರಾಗಿರುವುದಾಗಿ ತಿಳಿಸಿದರು. ಮುಂದಿನ ಹಂತದ ಪ್ರಗತಿಯನ್ನು ಅಯಾ ಬ್ಯಾಂಕ್ ವತಿಯಿಂದ ಪರಿಶೀಲಿಸಿ ಸಹಾಯಧನ ಪಡೆಯುವ ಕ್ರಮವಹಿಸಬೇಕಿರುತ್ತದೆ ಎಂದು ತಿಳಿಸಿದರು. | • ಈ ಬಗ್ಗೆ ಬ್ಯಾಂಕ್ ಅಧಿಕಾರಿಗಳು ಮುಂದಿನ ಕ್ರಮವನ್ನು ತ್ವರಿತವಾಗಿ ಕೈಗೊಂಡು ಫಲಕಾರಿ ರೀತಿಯಲ್ಲಿ ಫಲಾನುಭವಿಗೆ ಯೋಜನೆಯ ಅನುಕೂಲ ಪಡೆಯಲು ಸಹಕರಿಸುವಂತೆ ಸೂಚಿಸಲಾಯಿತು.<br>• ವ್ಯವಸ್ಥಾಪಕರು, ಲೀಡ್ ಬ್ಯಾಂಕ್ ಇವರು ಹೆಚ್ಚಿನ ಬ್ಯಾಂಕ್ ಸಾಲ ನೀಡುವ ಬಗ್ಗೆ ಎಲ್ಲಾ ತಾಲ್ಲೂಕುಗಳ ಲೀಡ್ ಬ್ಯಾಂಕ್ ಗಳ ವ್ಯವಸ್ಥಾಪಕರ ಮೂಲಕ ಪ್ರತಿ ಗ್ರಾಮ ಪಂಚಾಯತ್ ನಲ್ಲಿ ಮನೆ ಇಲ್ಲದಿರುವವರ ಸಭೆಯನ್ನು ಕರೆದು ಯೋಜನೆ ಬಗ್ಗೆ ಜಾಗೃತಿ ಮೂಡಿಸಿ, Single Window ವ್ಯವಸ್ಥೆ ಮೂಲಕ ಸಾಲ ಅನುಮೋದನೆಗೆ ಕ್ರಮ ವಹಿಸುವುದು.<br>**(ಕ್ರಮ: ವ್ಯವಸ್ಥಾಪಕರು, ಲೀಡ್ ಬ್ಯಾಂಕ್)** |
| **11) ಗೃಹಸಾಲ ಮಂಜೂರಿ:**<br>ಜಿಲ್ಲೆಯಲ್ಲಿ ದಿನಾಂಕ:01.04.2019 ರಿಂದ 31.12.2019ರ ಅಂತ್ಯಕ್ಕೆ ಒಟ್ಟು 842 ಪ್ರಕರಣಗಳಲ್ಲಿ ರೂ 12954.00 ಲಕ್ಷ ಮೊತ್ತದ ಸಾಲವನ್ನು ನೀಡಲಾಗಿರುತ್ತದೆ.<br>ಈ ವಿಚಾರದಲ್ಲಿ ವ್ಯವಸ್ಥಾಪಕರು ಲೀಡ್ ಬ್ಯಾಂಕ್ ರವರು ಮಾಹಿತಿ ನೀಡುತ್ತಾ ಸಾಲ ಪಡೆಯುವ ವ್ಯಕ್ತಿಯು ಆತನ ಮನೆ ನಿರ್ಮಾಣದ ಅಂದಾಜಿನ ಶೇ 80 ಬಾಗದ ಮೊತ್ತವನ್ನು ಸಾಲವಾಗಿ ನೀಡಲಾಗುವುದೆಂದೂ, ಈ ಸಂಬಂಧ ವ್ಯಕ್ತಿಯು ತನ್ನ ನಿವೇಶನ/ ಮನೆ /ಆದಾಯ ದಾಖಲೆಗಳನ್ನು ನೀಡುವುದರ ಜೊತೆಗೆ ಅಡಮಾನವನ್ನು ಸಹ ಮಾಡುವ ಅವಶ್ಯಕತೆ ಇರುವುದಾಗಿ ಮತ್ತು ಕೃಷಿ ಭೂಮಿಯಲ್ಲಿ ಮನೆ ಸಾಲ ಪಡೆಯುವುದಾದಲ್ಲಿ ಜಮೀನು ಅನ್ಯಕ್ರಾಂತವಾಗಿರುವುದು ಅವಶ್ಯವೆಂದು ತಿಳಿಸಿದರು | • ಗೃಹನಿರ್ಮಾಣ ಸಾಲ ಅಪೇಕ್ಷಿಸುವ ವ್ಯಕ್ತಿಗಳು ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸುವ ಕೋರಿಕೆ ಪ್ರಸ್ತಾವನೆಗಳು ಬಂದಲ್ಲಿ ತಹಸೀಲ್ದಾರ್ ಹಾಗೂ ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಕ್ರಮವಹಿಸುವಂತೆ ಸೂಚಿಸಲಾಯಿತು.<br>• ವಸತಿರಹಿತರ ಫಲಾನುಭವಿ ಪಟ್ಟಿಯನ್ನು ತಾಲ್ಲೂಕು ಪಂಚಾಯ್ತಿ/ ಗ್ರಾಮಪಂಚಾಯ್ತಿ ಅಧಿಕಾರಿಗಳು ಜಿಲ್ಲಾ ಲೀಡ್ ಬ್ಯಾಂಕ್ ಮ್ಯಾನೇಜರ್ ರವರಿಗೆ ಒದಗಿಸಿ ಆ ಮೂಲಕ ಲೀಡ್ ಬ್ಯಾಂಕ್ ಮ್ಯಾನೇಜರ್ ರವರು ಸಂಬಂಧಿಸಿದ ಬ್ಯಾಂಕ್ ಗಳ ಮೂಲಕ ಸಾಲ ದೊರಕಿಸುವ ವ್ಯವಸ್ಥೆ ಮಾಡುವಂತೆ ಸೂಚಿಸಲಾಯಿತು. ಈ ಬಗ್ಗೆ ಸುತ್ತೋಲೆಯನ್ನು ಎಲ್ಲಾ ಬ್ಯಾಂಕ್ ಗಳಿಗೆ ನೀಡುವಂತೆ ಸೂಚಿಸಲಾಯಿತು. |

**11) ವಿಪತ್ತು ನಿರ್ವಹಣೆ:**

2019ರ ಆಗಸ್ಟ, ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಯಲ್ಲಿನ ತೀವ್ರ ಮಳೆಯಿಂದ ಉಂಟಾದ ಅತೀವೃಷ್ಠಿ ಹಿನ್ನಲೆಯಲ್ಲಿ ಮನೆಗಳ ಹಾನಿಯ ಬಗ್ಗೆ ಪರಿಶೀಲಿಸಲಾಯಿತು.

**`ಎ` ವರ್ಗದ ಮನೆಗಳು:-**

ಜಿಲ್ಲೆಯಲ್ಲಿ ಒಟ್ಟು 464 ಮನೆಗಳು ಪೂರ್ಣ ಹಾನಿಗೊಂಡಿದ್ದು, ಆ ಪೈಕಿ 54 ಮನೆಗಳು ಮಾತ್ರ ಪ್ರಾರಂಭವಾಗಿ ವಿವಿಧ ಹಂತದಲ್ಲಿರುವುದನ್ನು ಗಮನಿಸಲಾಯಿತು. ಮೂಡಿಗೆರೆ ತಾಲ್ಲೂಕಿನಲ್ಲಿ 358 ಮನೆಗಳು ಹಾನಿಗೊಂಡಿದ್ದು, ಈ ಬಗ್ಗೆ ಕಾರ್ಯನಿರ್ವಹಣಾಧಿಕಾರಿ ಮಾಹಿತಿ ನೀಡುತ್ತಾ, ಮನೆಗಳನ್ನು ಪ್ರಾರಂಭಿಸಲು ಮರಳಿನ ವ್ಯವಸ್ಥೆ ದೊರಕಿದಲ್ಲಿ ಫಲಾನುಭವಿಗಳು ಮನೆಗಳನ್ನು ಪ್ರಾರಂಭಿಸಲು ಮುಂದಾಗುವ ಸಾಧ್ಯತೆಗಳಿವೆ ಎಂದು ತಿಳಿಸಿದರು.

ಈ ವಿಚಾರದ ಕುರಿತು ಜಿಲ್ಲಾ ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಚಿಕ್ಕಮಗಳೂರು ರವರು ಮಾಹಿತಿ ನೀಡುತ್ತಾ

- ಕೊಪ್ಪ, ಶೃಂಗೇರಿ ಹಾಗೂ ನ.ರಾ.ಪುರ ತಾಲ್ಲೂಕುಗಳಲ್ಲಿ ತಲಾ 1 ಮರಳು ಬ್ಲಾಕ್ ಗಳು ಚಾಲ್ತಿಯಲ್ಲಿದ್ದು, ಗಣಿಗಾರಿಕೆ ಪ್ರಾರಂಭವಾಗಿರುತ್ತದೆ. ಮುಂದಿನ ವಾರದಲ್ಲಿ ಸಾರ್ವಜನಿಕರಿಗೆ ಪರವಾನಿಗೆ ನೀಡುವ ಕ್ರಮವಹಿಸ ಲಾಗುವುದು. ಈ ಬ್ಲಾಕ್ ಗಳಲ್ಲಿ ಸಂಗ್ರಹಣೆಯಾಗಿರುವ ಮರಳಿನ ಪ್ರಮಾಣದಲ್ಲಿ ಶೇ 25 ಭಾಗದ ಮರಳನ್ನು ವಿವಿಧ ಯೋಜನೆಗಳ ಮನೆ

- ಮನೆ ನಿರ್ಮಾಣದ ಪ್ರಗತಿಯನ್ನು ಮಾನ್ಯ ಮುಖ್ಯಮಂತ್ರಿಗಳು ಗಂಭೀರವಾಗಿ ಪರಿಗಣಿಸುವುದರಿಂದ ಪ್ರಾರಂಭಿಸಲು ಬಾಕಿ ಇರುವ 410 ಮನೆಗಳನ್ನು ಕೂಡಲೇ ಪ್ರಾರಂಭಿಸಲು ಈ ಬಗ್ಗೆ ತಹಸೀಲ್ದಾರರು ಮತ್ತು ತಾಲ್ಲೂಕು ಪಂಚಾಯ್ತಿ ಅಧಿಕಾರಿಗಳು ಆದ್ಯತೆಯ ಮೇಲೆ ಕ್ರಮವಹಿಸಿ ಈ ಮಾಹೆಯ ಅಂತ್ಯದೊಳಗೆ ಶೇ 100 ರಷ್ಟು ಪ್ರಗತಿ ಸಾಧಿಸಲು ಸೂಚಿಸಿದರು.
- ಜಿ.ಪಿ.ಎಸ್. ಕ್ರಮವಹಿಸಲು ಬಾಕಿ ಇರುವ ಪ್ರಕರಣಗಳ ಬಗ್ಗೆ ಕೂಡಲೇ ಪಿ.ಡಿ.ಓ./ ಗ್ರಾ.ಲೆ.ಗಳು ಕ್ರಮವಹಿಸುವಂತೆ ತಿಳಿಸಿದರು .
- ಜಿಲ್ಲಾಧಿಕಾರಿಗಳು ತಿಳಿಸಿರುವಂತೆ ಮೂಡಿಗೆರೆ ಮತ್ತು ಇತರೆ ತಾಲ್ಲೂಕುಗಳ ಪಿ ಡಿ ಓ ಹಾಗೂ ಗ್ರಾ:ಲೆ ರವರು ತಮ್ಮ ವ್ಯಾಪ್ತಿಯಲ್ಲಿ ಬರುವ ಹಾನಿಗೊಂಡ ಮನೆಗಳ ನಿರ್ಮಾಣಕ್ಕೆ ಮರಳಿನ ಅವಶ್ಯಕತೆ ಇದ್ದಲ್ಲಿ ಫಲಾನುಭವಿಗಳ ಪಟ್ಟಿ ತಯಾರಿಸಿ ಹಿರಿಯ ಭೂವಿಜ್ಞಾನಿ ರವರಿಗೆ ತಲುಪಿಸುವಂತೆ ಸೂಚಿಸಿದರು.
- ಭೂ ವಿಜ್ಞಾನಿರವರು ಮರಳು ಬ್ಲಾಕ್ ಗಳ ವಿವರವನ್ನು ಆಯಾ ಆಯಾ ತಾಲ್ಲೂಕು ಪಂಚಾಯ್ತಿಗಳಿಗೆ ನೀಡುವಂತೆ ಸೂಚಿಸಿದರು.
- ಮರಳಿನ ಅವಶ್ಯಕತೆ ಇರುವ ಫಲಾನುಭವಿಗಳು ಸದರಿ ಬ್ಲಾಕ್ ಗಳ ಮೂಲಕ ಮರಳು ಪಡೆಯಲು ಅವಕಾಶವಿದ್ದು, ಫಲಾನುಭವಿಗಳು ಪ್ರಯೋಜನ ಪಡೆಯಲು ತಿಳಿಸುವಂತೆ ತಹಸೀಲ್ದಾರ್ ಹಾಗೂ ಕಾರ್ಯನಿರ್ವಹಣಾಧಿಕಾರಿಗಳಿಗೆ ಸೂಚಿಸಿದರು.
- ಅದೇ ರೀತಿ ಪಿ.ಡಿ.ಓ ರವರು ಪ್ರತೀ ಮೂರು ದಿನಗಳಿಗೆ ಒಮ್ಮೆ ಹಿರಿಯ ಭೂವಿಜ್ಞಾನಿಗಳನ್ನು ಸಂಪರ್ಕಿಸಿ ಮರಳು ಕೊರತೆ ನಿವಾರಣಾ ಕ್ರಮವಹಿಸಲು ತಿಳಿಸಿದರು.

| | |
|---|---|
| ನಿರ್ಮಾಣಕ್ಕೆ ಬಳಸಲು ಅನುವು ಮಾಡಲಾಗಿದೆ.<br>• ಪಟ್ಟಾ ಜಮೀನುಗಳಲ್ಲಿ ಮಳೆಯಿಂದ ಜಮಾಗೊಂಡಿರುವ ಮರಗಳನ್ನು ವಿಲೇವಾರಿ ಮಾಡುವ ಬಗ್ಗೆ ಸರ್ಕಾರದ ಆದೇಶದಂತೆ ದಿನಾಂಕ: 31.12.2019ರವರೆಗೆ ರಾಜಧನ/ಶುಲ್ಕ ಪಾವತಿಸಿಕೊಂಡು ಪಟ್ಟಾದಾರನಿಗೆ ಮರಗಳು ಬಳಕೆಗೆ ಅವಕಾಶ ಕಲ್ಪಿಸಲಾಗಿದೆ. ಆ ಪ್ರಕಾರ 34 ಫಲಾನುಭವಿಗಳಿಗೆ 1300 ಎಂ.ಟಿ ಫರವಾನಿಗೆ ವಿತರಣೆಯಾಗಿರುತ್ತದೆ. ದಿನಾಂಕ 31.12.2019ರಲ್ಲಿ ಹಲವಾರು ಬೇಡಿಕೆ ಅರ್ಜಿಗಳು ಬಂದಿರುತ್ತವೆ. ಆದರೆ ಸದರಿ ಸರ್ಕಾರದ ಆದೇಶದ ಅವಧಿಯು ದಿನಾಂಕ 31.12.2019ಕ್ಕೆ ಮುಕ್ತಾಯವಾಗಿರುವುದರಿಂದ ಅವಧಿ ವಿಸ್ತರಣೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.<br>• ಮೂಡಿಗೆರೆ ತಾಲ್ಲೂಕಿನ ಉದುಸೆ ಮರಗಳು ಬ್ಲಾಕ್ ವಿಚಾರದಲ್ಲಿ ಈ ಹಿಂದೆ ಹರಾಜು ಮೂಲಕ ಗುತ್ತಿಗೆ ನೀಡಿದ್ದು, ಗುತ್ತಿಗೆದಾರರು ನಿಯಮ ಪಾಲಿಸದ ಕಾರಣ ರದ್ದತಿ ಕ್ರಮವಹಿಸಲಾಗಿದೆ. ಇದರಿಂದ ಈ ಬ್ಲಾಕ್ ನಿಂದ ಮರಗಳು ಪಡೆಯಲು ಸಾಧ್ಯವಾಗುವುದಿಲ್ಲ. | **(ಕ್ರಮ: ತಹಸೀಲ್ದಾರರು, ಕಾರ್ಯನಿರ್ವಾಹಕ ಅಧಿಕಾರಿ, ಹಿರಿಯ ಭೂವಿಜ್ಞಾನಿ)**<br>• ಜಿಲ್ಲಾಧಿಕಾರಿಗಳು ತಿಳಿಸಿದಂತೆ ನರಸಿಂಹರಾಜಪುರ ತಾಲ್ಲೂಕಿನ ಬಂಡಿಮಠ ಸಂತ್ರಸ್ಥರಿಗೆ ಆಶ್ರಯ ನಿವೇಶನ ಅಥವಾ ಅರಣ್ಯ ಕಾಯ್ದೆ ಸೆಕ್ಷನ್ 4(1)ರಡಿ/ ಡೀಮ್ಡ್ ಅರಣ್ಯ ವ್ಯಾಪ್ತಿಯಿಂದ ಮುಕ್ತವಾಗಿರುವ ಕಂದಾಯ ಭೂಮಿಯನ್ನು ಗುರುತಿಸಿ ಪ್ರಸ್ತಾವನೆ ಸಲ್ಲಿಸಲು ತಿಳಿಸಿದರು.<br><br>**(ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಮಗಳೂರು)**<br>ಜಿಲ್ಲಾಧಿಕಾರಿಗಳು ಪ್ರಸ್ತಾಪಿಸುತ್ತಾ ಮೂಡಿಗೆರೆ ಮತ್ತು ಇತರೆ ತಾಲ್ಲೂಕುಗಳ ಪಿ ಡಿ ಓ ಹಾಗೂ ಗ್ರಾಮಲೆಕ್ಕಿಗರು ತಮ್ಮ ವ್ಯಾಪ್ತಿಯಲ್ಲಿ ಬರುವ ಹಾನಿಗೊಂಡ ಮನೆಗಳ ನಿರ್ಮಾಣಕ್ಕೆ ಮರಳಿನ ಅವಶ್ಯಕತೆ ಇದ್ದಲ್ಲಿ ಫಲಾನುಭವಿಗಳ ಪಟ್ಟಿ ತಯಾರಿಸಿ ಹಿರಿಯ ಭೂವಿಜ್ಞಾನಿ ರವರಿಗೆ ತಲುಪಿಸುವಂತೆ ಸೂಚಿಸಿದರು. ಮುಂದುವರೆದು ಮರಳಿನ ಅವಶ್ಯಕತೆ ಇರುವ ಫಲಾನುಭವಿಗಳು ಸದರಿ ಬ್ಲಾಕ್ ಗಳ ಮೂಲಕ ಪಡೆಯಲು ಅವಕಾಶವಿದ್ದು, ಈ ಬಗ್ಗೆ ಸರ್ಕಾರಿ ದರ ಪ್ರತಿ ಎಂ.ಟಿಗೆ ರೂ 1017/- ಮತ್ತು ಸಾಗಾಣಿಕೆ ವೆಚ್ಚ ಭರಿಸಬೇಕಾಗುವುದರಿಂದ ಫಲಾನುಭವಿಗಳು ಪ್ರಯೋಜನ ಪಡೆಯಲು ತಿಳಿಸುವಂತೆ ತಹಸೀಲ್ದಾರ್ ಹಾಗೂ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಸೂಚಿಸಿದರು. ಅದೇ ರೀತಿ ಪಿ.ಡಿ.ಓ ರವರು ಪ್ರತೀ ಮೂರು ದಿನಗಳಿಗೆ ಒಮ್ಮೆ ಹಿರಿಯ ಭೂವಿಜ್ಞಾನಿಗಳನ್ನು ಸಂಪರ್ಕಿಸಿ ಮರಳು ಕೊರತೆ ನಿವಾರಣಾ ಕ್ರಮವಹಿಸಲು ತಿಳಿಸಿದರು. |

| | |
|---|---|
| **'ಬಿ' ವರ್ಗದ ಮನೆಗಳು:-**<br>ಜಿಲ್ಲೆಯಲ್ಲಿ 2019ರ ಅತೀವೃಷ್ಠಿಯಿಂದ ಒಟ್ಟು 549 ಬಿ ವರ್ಗದ ಮನೆಗಳಿರುವುದನ್ನು ಗಮನಿಸಲಾಯಿತು. ಈ ಬಗ್ಗೆ, ಅಪರ ಜಿಲ್ಲಾಧಿಕಾರಿಗಳು ಪ್ರಸ್ತಾಪಿಸುತ್ತಾ, ಬಿ ವರ್ಗದ ಮನೆಗಳಿಗೆ ಈ ಮೊದಲು ಪೂರ್ಣ ಹಾನಿಯೆಂದು ಪರಿಗಣಿಸಿ ಪುನರ್ ನಿರ್ಮಾಣಕ್ಕಾಗಿ ರೂ 1.00ಲಕ್ಷ ಮೊತ್ತವನ್ನು ಪ್ರಾರಂಭಿಕವಾಗಿ ನೀಡಲಾಗಿರುತ್ತದೆಂದೂ, ಆದರೆ ಈ ವರ್ಗದ ಮನೆಗಳ ಪೈಕಿ ಹಲವಾರು ಮನೆಗಳು ಪುನರ್ ನಿರ್ಮಾಣದ ಸ್ಥಿತಿಯಲ್ಲಿ ಇಲ್ಲದೆ ಕೇವಲ ದುರಸ್ತಿ ಅವಶ್ಯಕತೆ ಇರುವುದರಿಂದ ಅಂತಹ ಫಲಾನುಭವಿಗಳು ಸದರಿ ಮನೆಗಳನ್ನು ಪೂರ್ಣ ನೆಲಸಮ ಮಾಡಿ ಪುನರ್ ನಿರ್ಮಿಸಲು ಮುಂದಾಗದ ಕಾರಣ ಈ ಬಗ್ಗೆ ದುರಸ್ತಿಗಾಗಿ ಅವಕಾಶವನ್ನು ಕಲ್ಪಿಸಲಾಗಿರುತ್ತದೆ ಎಂದು ದುರಸ್ತಿಗಾಗಿ ರೂ 3.00ಲಕ್ಷ ಮೊತ್ತವನ್ನು ನೀಡಲಾಗುವುದೆಂದು ತಿಳಿಸಿದರು.<br><br>ಈ ಕುರಿತು ಜಿಲ್ಲಾಧಿಕಾರಿಗಳು ತಹಸೀಲ್ದಾರರಿಂದ ಮಾಹಿತಿ ಪಡೆಯಲಾಗಿ 549 ಮನೆಗಳ ಪೈಕಿ 372 ಮನೆಗಳು ದುರಸ್ತಿಗಾಗಿ ಮತ್ತು 177 ಮನೆಗಳು ಪುನರ್ ನಿರ್ಮಾಣಕ್ಕೆ ಯೋಗ್ಯವಾಗಿರುವುದಾಗಿ ಮಾಹಿತಿಯನ್ನು ಪಡೆದರು. ಉಳಿದಂತೆ ವಿವಿಧ ಹಂತದಲ್ಲಿ ಪ್ರಗತಿ ಯಲ್ಲಿರುವ ಮನೆಗಳ ಜಿ ಪಿ ಎಸ್ ಸಂಗ್ರಹಣೆಯನ್ನು ಕೂಡಲೇ ಪಿ ಡಿ ಒ ರವರು ನಿರ್ವಹಿಸುವಂತೆ ಸೂಚಿಸಿದರು. | • ತಹಸೀಲ್ದಾರರು ನೀಡಿದ ಮಾಹಿತಿಯಂತೆ 372 ಮನೆಗಳು ದುರಸ್ತಿಗಾಗಿ ಮತ್ತು 177 ಮನೆಗಳು ಪುನರ್ ನಿರ್ಮಾಣಕ್ಕೆ ಬಾಕಿ ಇರುವುದನ್ನು ಕೂಡಲೇ ಪ್ರಾರಂಭಿಸುವಂತೆ ಸೂಚಿಸಿದರು.<br>• ಪುನರ್ ನಿರ್ಮಾಣ ಆಗಬೇಕಾಗಿರುವ ಎಲ್ಲಾ ಮನೆಗಳನ್ನು ಕೂಡಲೇ ಪ್ರಾರಂಭಿಸುವಂತೆ ಹಾಗೂ ದುರಸ್ತಿ ಆಗಬೇಕಾಗಿರುವ ಮನೆಗಳ ಜಿ ಪಿ ಎಸ್ ಕ್ರಮವನ್ನು 2 ದಿನದೊಳಗೆ ಕೈಗೊಳ್ಳುವಂತೆ ಸೂಚಿಸ ಲಾಯಿತು.<br>• ಪುನರ್ವಸತಿಗಾಗಿ ಅರಣ್ಯ ಇಲಾಖೆಯಿಂದ ಅಭಿಪ್ರಾಯ ನೀಡಬೇಕಾದ ಹಂತೂರು ಮತ್ತು ಬಿ.ಹೊಸಳ್ಳಿ ಗ್ರಾಮದ ಪ್ರಸ್ತಾವನೆಗಳಿಗೆ ಅಭಿಪ್ರಾಯವನ್ನು ತ್ವರಿತವಾಗಿ ನೀಡುವಂತೆ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ದೂರವಾಣಿ ಮೂಲಕ ಕೋರಲಾಯಿತು.<br>**(ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಚಿಕ್ಕಮಗಳೂರು)**<br>• ಭೂವಿಜ್ಞಾನ ಇಲಾಖೆಯ ಸಮೀಕ್ಷೆಯಲ್ಲಿ ಅಭಿಪ್ರಾಯಿಸಿರುವ ಅಸುರಕ್ಷಿತ ಪ್ರದೇಶದ ಸಂತ್ರಸ್ಥರಿಗೆ ಬದಲಿ ಭೂಮಿಯನ್ನು ನೀಡಿದ ನಂತರ, ಸಂತ್ರಸ್ಥರು ಹೊಂದಿದ್ದ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆದ ಕೂಡಲೇ ಅಂತಹ ಪ್ರದೇಶದಲ್ಲಿ ಅರಣ್ಯ ಇಲಾಖೆಯವರು ಇಲಾಖಾ ವತಿಯಿಂದ ಬಿದಿರು |

ಮುಂದುವರೆದು ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವುದೇ ಸಾರ್ವಜನಿಕ ಉಪಯೋಗಕ್ಕೆ ಭೂಮಿಯನ್ನು ಕಾಯ್ದಿರಿಸುವ ವಿಚಾರದಲ್ಲಿ ಪರಿಶೀಲಿಸಲಾಗಿ, ಶೇ 40 ರಷ್ಟು ಭೂಮಿಯು ಅರಣ್ಯ ವ್ಯಾಪ್ತಿಗೆ ಬರುವುದು ಕಂಡು ಬರುತ್ತದೆ. ಆ ಪ್ರಕಾರ ಅತೀವೃಷ್ಟಿಯಿಂದ ಹಾನಿಗೊಂಡ ಕೆಲ ಪ್ರದೇಶಗಳಲ್ಲಿ ಮನೆಗಳನ್ನು ಅಲ್ಲಿಯೇ ನಿರ್ಮಿಸಲು ಅಸುರಕ್ಷತೆಯ ಪರಿಸ್ಥಿತಿ ಇರುವುದಾಗಿದೆ. ಈ ಬಗ್ಗೆ ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾ ತಂಡವು ಸ್ಥಳಕ್ಕೆ ಭೇಟಿ ನೀಡಿ ಸರ್ವೆ ನಡೆಸಿ ಭೂಕುಸಿತದ ಹಲವು ಪ್ರದೇಶಗಳು ಅಸುರಕ್ಷಿತವಾಗಿರುವುದನ್ನು ವರದಿಯಲ್ಲಿ ಸ್ಪಷ್ಟಪಡಿಸಿರುತ್ತಾರೆ. ಪುನರ್ವಸತಿಗಾಗಿ ಭೂಮಿ ಕಾಯ್ದಿರಿಕೆಗೆ ಸಂಬಂಧಿಸಿದಂತೆ ಹಂತೂರು, ಬಿ.ಹೊಸಳ್ಳಿ ಮತ್ತು ಮಾವಿನಕೆರೆ ಗ್ರಾಮಗಳಲ್ಲಿ ಭೂಮಿಯನ್ನು ಗುರುತಿಸಲಾಗಿದ್ದು, ಈ ಬಗ್ಗೆ ಅರಣ್ಯ ಇಲಾಖೆಯ ನಿರಾಕ್ಷೇಪಣೆ ಅವಶ್ಯವಿದ್ದು, ಅರಣ್ಯ ಇಲಾಖೆಯು ಅಭಿಪ್ರಾಯ ನೀಡಲು ಬಾಕಿ ಇರುವುದಾಗಿ ತಿಳಿಸಿದರು.

ತಹಸೀಲ್ದಾರ್ ಹಾಗೂ ಕಾರ್ಯನಿರ್ವಹಣಾಧಿಕಾರಿಗಳು ಪುನರ್ವಸತಿಗಾಗಿ ಕೆಲವು ಖಾಸಗಿ ಹಿಡುವಳಿದಾರರು ಜಮೀನನ್ನು ದಾನ/ಕ್ರಯ ಇತ್ಯಾದಿ ಮೂಲಕ ವಿಲೇವಾರಿ ಮಾಡುವ ಬಗ್ಗೆ ಮಾತುಕತೆ ನಡೆಸಿ ಸಮಂಜಸವಾದ ತೀರ್ಮಾನ ಕೈಗೊಳ್ಳಬೇಕಾಗುತ್ತದೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಉಪಅರಣ್ಯಸಂರಕ್ಷಣಾಧಿಕಾರಿಗಳು ಪ್ರಸ್ತಾಪಿಸುತ್ತಾ, ಮಾವಿನಕೆರೆ ಪ್ರಕರಣದಲ್ಲಿ ಒಪ್ಪಿಗೆ ಸೂಚಿಸಿ ಅಭಿಪ್ರಾಯಿಸಲಾಗಿದೆ ಎಂದು ಉಳಿದಂತೆ ಹಂತೂರು ಮತ್ತು ಬಿ.ಹೊಸಳ್ಳಿ ಪ್ರಕರಣದಲ್ಲಿ ಅರಣ್ಯಸಂರಕ್ಷಣಾಧಿಕಾರಿ, ಗಡಿ ಮತ್ತು ಭೂಮಾಪನ ರವರಿಗೆ ಇತ್ಯಾದಿ ತಳಿಗಳ ನೆಡುತೋಪು ಮಾಡುವಂತೆ ಸೂಚಿಸಲಾಯಿತು. ಇದಕ್ಕಾಗಿ ಸದರಿ ಭೂಮಿಯ ಸಮೀಕ್ಷೆ ಮಾಡಿ ಅವಶ್ಯವಿರುವ ಪ್ಲಾಂಟೇಷನ್ ಗಿಡ ಗಳನ್ನು ಕೂಡಲೇ ಸಂಗ್ರಹಿಸುವ ಕ್ರಮವಹಿಸಲು ಸೂಚಿಸಲಾಯಿತು.

**(ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಪ್ರಾದೇಶಿಕ ಅರಣ್ಯ)**

- ಪುನರ್ವಸತಿ ವಿಚಾರದಲ್ಲಿ ಆ ಭಾಗದ ಸಂತ್ರಸ್ತರು/ ನಿವಾಸಿಗಳು ತಾವು/ ತಮ್ಮ ಪೂರ್ವಜರು ನೆಲೆಸಿ/ಹುಟ್ಟಿಬೆಳೆದ ಪ್ರದೇಶವನ್ನು ಬಿಟ್ಟುಕೊಡುವಲ್ಲಿ ಭಾವನಾತ್ಮಕ ಸಂಬಂಧವಿರುತ್ತದೆಂದು ಆದ್ದರಿಂದ ಸದರಿ ಅಸುರಕ್ಷಿತ ಪ್ರದೇಶವನ್ನು ತಡೆಗೋಡೆ ಇತ್ಯಾದಿ ರಕ್ಷಣಾತ್ಮಕ ಕಾಮಗಾರಿಯಿಂದ ಸುರಕ್ಷತೆಗೊಳಿಸುವ ಸಾಧ್ಯತೆ ಇರುವ ಬಗ್ಗೆ ಪರಿಶೀಲಿಸಬಹುದೆಂದು, ಈ ಬಗ್ಗೆ ಇಂಜಿನಿಯರಿಂಗ್ ಇಲಾಖೆಯವರು ಪರಿಶೀಲನೆ ನಡೆಸಲು ಸೂಚಿಸಲಾಯಿತು.

**(ಕ್ರಮ: ತಹಸೀಲ್ದಾರರು, ಕಾರ್ಯನಿರ್ವಹಣಾಧಿಕಾರಿ ಗಳು, ಉಪಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಲೋಕೋಪಯೋಗಿ/ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಅಪರ ಜಿಲ್ಲಾಧಿಕಾರಿ)**

<table>
<tr>
<td>
ಪ್ರಸ್ತಾವನೆ ಸಲ್ಲಿಸಿರುವುದಾಗಿ ತಿಳಿಸಿದರು.<br><br>
<u>ಭೂಕುಸಿತ ಪ್ರದೇಶಗಳಲ್ಲಿ ತಡೆಗಟ್ಟುವ ಕ್ರಮ:</u><br><br>
ಗಣಿ ಮತ್ತು ಭೂವಿಜ್ಞಾನ ಇಲಾಖಾ ವತಿಯಿಂದ ಆಗಸ್ಟ 2019ರ ಅತೀವೃಷ್ಠಿಯಿಂದ ಭೂಕುಸಿತ ಉಂಟಾದ ಪ್ರದೇಶಗಳಲ್ಲಿ ವೈಜ್ಞಾನಿಕ ಸಮೀಕ್ಷೆ ನಡೆಸಿ ಈ ಕೆಳಕಂಡಂತೆ ಭೂಕುಸಿತ ತಡೆ ಮತ್ತು ನಿಯಂತ್ರಣ ಕ್ರಮಗಳ ಬಗ್ಗೆ ಈ ಕೆಳಗಿನಂತೆ ಶಿಫಾರಸ್ಸು ಮಾಡಿರುತ್ತಾರೆ.
<table>
<tr><td>ಇಳಿಜಾರು ಪ್ರದೇಶಗಳಲ್ಲಿ ನೀರಿನ ಸರಾಗವಾದ ಹರಿಯುವಿಕೆಗೆ ಸಮರ್ಪಕವಾದ ಮತ್ತು ಉಚಿತವಾದ ಕಾಲುವೆಗಳು, ಮೋರಿಗಳು ಮತ್ತು ಒಳ ಚರಂಡಿಗಳ ನಿರ್ಮಾಣ ಮಾಡುವುದರಿಂದ ಮಣ್ಣಿನಲ್ಲಿ ನೀರಿನ ಇಂಗುವಿಕೆ ಸಮರ್ಥ್ಯ ಕಡಿಮೆಗೊಳಿಸಿ ನೀರಿನ ಸರಾಗವಾದ ಹರಿವಿಗೆ ಅನುಕೂಲ ಮಾಡುವುದು</td><td>(ಕ್ರಮ: ಲೋಕೋಪಯೋಗಿ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ & ಗ್ರಾಮ ಪಂಚಾಯಿತಿ)</td></tr>
<tr><td>ಅಸ್ಥಿರ ಇಳಿಜಾರು ಪ್ರದೇಶಗಳಲ್ಲಿ ಸಮರ್ಪಕವಾದ ಕಾಲುವೆಗಳ ನಿರ್ಮಾಣ ಮಾಡುವುದು. ಇದರಿಂದ ಮಣ್ಣಿನ ಕಣಗಳ ನಡುವಿನ ಜಲ ಸೆಳೆತ ಸಾಮರ್ಥ್ಯ ಕಡಿಮೆಯಾಗಿ ಭೂಕುಸಿತ ತಡೆಗಟ್ಟಬಹುದು.</td><td>(ಕ್ರಮ: ಲೋಕೋಪಯೋಗಿ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ & ಗ್ರಾಮ ಪಂಚಾಯಿತಿ)</td></tr>
</table>
</td>
<td>
• ಈ ಬಗ್ಗೆ ಅರಣ್ಯ ಇಲಾಖಾ ವತಿಯಿಂದ ಭೂಕುಸಿತ ಪ್ರದೇಶಗಳಲ್ಲಿರುವ ಸರ್ಕಾರಿ ಜಾಗಗಳಲ್ಲಿ ಮತ್ತು ಸಾರ್ವಜನಿಕ ಆಸ್ತಿ-ಪಾಸ್ತಿಗಳ ಸಂತ್ರಸ್ಥರಿಗೆ ಪುನರ್ವಸತಿ ಕಲ್ಪಿಸಿದ ನಂತರ ಸರ್ಕಾರಕ್ಕೆ ಪಡೆಯುವ ಸದರಿ ಹಿಡುವಳಿ ಪ್ರದೇಶಗಳಲ್ಲಿ ಪ್ಲಾಂಟೇಷನ್ /ನೆಡುತೋಪು ಮಾಡುವ ಕ್ರಮವಹಿಸಲು ತಿಳಿಸಲಾಯಿತು.<br>
• ಅದೇ ರೀತಿ ಇಂಜಿನಿಯರಿಂಗ್ ಇಲಾಖೆಯು ಭೂಕುಸಿತ ಪ್ರದೇಶ ಗಳಲ್ಲಿ ಅವಶ್ಯಾನುಸಾರ ತಡೆಗೋಡೆ ಇತ್ಯಾದಿ ಸಿವಿಲ್ ಕಾಮಗಾರಿ ಗಳನ್ನು ಇಲಾಖಾವತಿಯಿಂದ ಕೈಗೊಂಡು ಸೂಕ್ತ ಭೂಕುಸಿತ ತಡೆಯುವಿಕೆ ಕ್ರಮವಹಿಸಲು ಸೂಚಿಸಲಾಯಿತು.<br><br>
(ಕ್ರಮ: ಅರಣ್ಯ ಇಲಾಖೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಮತ್ತು ಲೋಕೋಪಯೋಗಿ ಇಲಾಖೆ)
</td>
</tr>
</table>

| | | |
|---|---|---|
| ಇಳಿಜಾರು ಪ್ರದೇಶಗಳಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡುವ ಸಂದರ್ಭದಲ್ಲಿ ಹೆಚ್ಚಿನ ಭಾರದ ವಾಹನಗಳ ಚಾಲನೆಗೆ ಅನುಕೂಲವಾಗುವಂತಹ ಗುಣಮಟ್ಟದ ರಸ್ತೆ ನಿರ್ಮಾಣ ಸಾಮಗ್ರಿಗಳನ್ನು ಬಳಸುವುದು. | (ಕ್ರಮ: ಲೋಕೋಪಯೋಗಿ ಇಲಾಖೆ & ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ) | |
| ರಸ್ತೆ ಬದಿಯ ಇಳಿಜಾರು ಪ್ರದೇಶಗಳಲ್ಲಿ ಬುಡಮಟ್ಟದ ಸಾಮರ್ಥ್ಯ ಹೆಚ್ಚಿಸಲು ಕಾಂಕ್ರಿಟ್ ರಚನೆಗಳನ್ನು ನಿರ್ಮಾಣ ಮಾಡುವುದು. | (ಲೋಕೋಪಯೋಗಿ ಇಲಾಖೆ & ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ) | |
| ನೀರಿನ ಸರಾಗ ಹರಿವಿಗಾಗಿ ನದಿ ಪಾತ್ರದ ಎರಡೂ ಬದಿಗಳ ಪ್ರದೇಶಗಳಲ್ಲಿ ಕೃಷಿ ಚಟುವಟಿಕೆ ಗಳು ಮತ್ತು ತೋಟಗಾರಿಕೆ ಚಟುವಟಿಕೆ ಗಳನ್ನು ನಿಯಂತ್ರಿಸುವುದು. | (ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ) | |
| ಇಳಿಜಾರಿನ ಬುಡ ಪ್ರದೇಶಗಳಲ್ಲಿ ಯಾವುದೇ ರೀತಿಯ ಮಣ್ಣಿನ ಅಗೆಯುವಿಕೆ, ಗಣಿಗಾರಿಕೆ ಅಥವಾ ಅಸ್ಥಿರಗೊಳಿಸುವುದನ್ನು ನಿಯಂತ್ರಿಸುವುದು. | (ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕಂದಾಯ ಇಲಾಖೆ, ಲೋಕೋಪಯೋಗಿ ಇಲಾಖೆ & ಅರಣ್ಯ ಇಲಾಖೆ) | |

| | |
|---|---|
| ಅತಿಯಾದ ಇಳಿಜಾರು ಪ್ರದೇಶಗಳಲ್ಲಿ ಹೆಚ್ಚಿನ ಕೋನದ ರಚನೆಗಳ ನಿರ್ಮಾಣ ಮಾಡುವ ಮೊದಲು ಆ ಪ್ರದೇಶದ ಇಳಿಜಾರಿನ ಸ್ಥಿರತೆಯ ಮೌಲ್ಯ ಮಾಪನ ನಡೆಸುವುದು. | (ಕ್ರಮ: ಲೋಕೋಪಯೋಗಿ ಇಲಾಖೆ & ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ) |
| ಮಳೆಗಾಲದ ಸಮಯದಲ್ಲಿ ಹೆಚ್ಚಿನ ಕೊನದ ಇಳಿಜಾರು ಪ್ರದೇಶಗಳ ಬಗ್ಗೆ ನಿರಂತರವಾಗಿ ಮೇಲ್ವಿಚಾರಣೆ ನಡೆಸಿ ನಿಗಾ ವಹಿಸುವುದು ಹಾಗೂ ಇಳಿಜಾರು ಪ್ರದೇಶಗಳಲ್ಲಿ ಕಂಡುಬರುವ ಭೌತಿಕ ಬದಲಾವಣೆ ಮತ್ತು ಹಿಂದಿನ ಬಿರುಕುಗಳ ಅಗಲೀಕರಣ ಕಂಡುಬಂದಲ್ಲಿ ಸಂಬಂಧಿಸಿದ ಇಲಾಖೆಯ ಗಮನಕ್ಕೆ ತರುವುದು. | (ಕ್ರಮ:ತಾಲ್ಲೂಕು ಆಡಳಿತ ಮತ್ತು ಗ್ರಾಮ ಪಂಚಾಯಿತಿ) |

**<u>ಮೂಲಭೂತ ಸೌಲಭ್ಯಗಳ ದುರಸ್ಥಿ/ ಪುನಶ್ಚೇತನ ಕಾಮಗಾರಿಗಳು:</u>**

ಆಗಸ್ಟ 2019ರ ಅತೀವೃಷ್ಠಿಯಿಂದ ಹಾನಿಗೊಂಡ ಸಾರ್ವಜನಿಕ ಮೂಲ ಸೌಲಭ್ಯಗಳ ದುರಸ್ಥಿ / ಪುನಶ್ಚೇತನ ಕಾಮಗಾರಿಗಳನ್ನು ಎನ್ ಡಿ ಆರ್ ಎಫ್ / ಎಸ್ ಡಿ ಆರ್ ಎಫ್ ಮಾರ್ಗಸೂಚಿಯಂತೆ ಕೈಗೊಳ್ಳಲು ಕಂದಾಯ ಇಲಾಖೆಯಿಂದ ಜಿಲ್ಲೆಗೆ ರೂ 20.00 ಕೋಟಿ ಅನುದಾನ ವನ್ನು ನೀಡಲಾಗಿದ್ದು, ಸದರಿ ರೂ 20.00 ಕೋಟಿಗಳಿಗೆ ಒಟ್ಟು 845 ಕಾಮಗಾರಿಗಳಿಗೆ

- ಅಂದಾಜು ಸಲ್ಲಿಸಲು ಬಾಕಿ ಇರುವ ಕಾಮಗಾರಿಗಳಿಗೆ ಈ ವಾರದಲ್ಲಿ ಅಂದಾಜು ಸಲ್ಲಿಸುವಂತೆ ಮತ್ತು ಪ್ರಾರಂಭವಾಗದೇ ಇರುವ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಲು ಅದೇ ರೀತಿ ವಿವಿಧ ಹಂತದಲ್ಲಿರುವ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಲಾಯಿತು.

| | |
|---|---|
| ಅನುಮೋದನೆ ನೀಡಲಾಗಿದೆ. ಆ ಪೈಕಿ ರೂ 54.30 ಲಕ್ಷ ಮೊತ್ತದ ಕಾಮಗಾರಿ ಗಳಿಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ಅಂದಾಜು ಸಲ್ಲಿಸಲು ಬಾಕಿ ಇರುತ್ತದೆ. 38 ಕಾಮಗಾರಿಗಳು ಪ್ರಾರಂಭಿಸಲು ಬಾಕಿ ಇರುತ್ತದೆ. | **(ಕ್ರಮ: ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು)** |
| • ಲೋಕೋಪಯೋಗಿ ಇಲಾಖಾ ವತಿಯಿಂದ ಅತಿವೃಷ್ಠಿ ಕಾಮಗಾರಿಗಳ ದುರಸ್ತಿಗಾಗಿ ಸದರಿ ಇಲಾಖೆಗೆ ನೇರವಾಗಿ ಒಟ್ಟು 33.98 ಕೋಟಿ ಅನುದಾನವನ್ನು ನೀಡಲಾಗಿದೆ. ಅದರಂತೆ ಇಲಾಖಾ ವತಿಯಿಂದ ಒಟ್ಟು 241 ಕಾಮಗಾರಿಗಳನ್ನು ಕೈಗೊಂಡಿದ್ದು, ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ. | **(ಕ್ರಮ: ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ)** |
| • ಸಣ್ಣನೀರಾವರಿ ಇಲಾಖೆಗೆ ಅತೀವೃಷ್ಠಿ ಸಂಬಂಧವಾಗಿ ಸರ್ಕಾರದಿಂದ ಒಟ್ಟು 863.50 ಲಕ್ಷ ಅನುದಾನವನ್ನು ನೇರವಾಗಿ ಸದರಿ ಇಲಾಖೆಗೆ ನೀಡಲಾಗಿದೆ. ಈ ಬಗ್ಗೆ ಒಟ್ಟು 35 ಕಾಮಗಾರಿಗಳನ್ನು ಕೈಗೊಂಡಿದ್ದು, ವಿವಿಧ ಹಂತದಲ್ಲಿರುತ್ತವೆ. | **(ಕ್ರಮ: ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆ, ಚಿಕ್ಕಮಗಳೂರು ಹಾಗೂ ತರೀಕೆರೆ)** |
| • ಪಂಚಾಯತ್ ರಾಜ್ ಇಲಾಖೆಯಿಂದ ಜಿಲ್ಲೆಗೆ ಒಟ್ಟು 83.22 ಕೋಟಿ ಅನುದಾನವನ್ನು ನೀಡಲಾಗಿದ್ದು, ಆ ಪೈಕಿ ಪಿ ಆರ್ ಇ ಡಿ ಇಲಾಖೆಗೆ ರೂ 52.05 ಕೋಟಿ , ಕೆ ಆರ್ ಆರ್ ಡಿ ಎ ಇಲಾಖೆಗೆ ರೂ 7.87 ಕೋಟಿ ಹಾಗೂ ಕೆ ಆರ್ ಐ ಡಿ ಎಲ್ ಗೆ ರೂ 23.30 ಅನುದಾನವನ್ನು ನೇರವಾಗಿ ಅಯಾಯ ಇಲಾಖೆಗಳಿಗೆ ನೀಡಲಾಗಿದೆ. | **(ಕ್ರಮ: ಕಾರ್ಯಪಾಲಕ ಇಂಜಿನಿಯರ್, ಪಿಆರ್ ಐಡಿ, ಕೆಆರ್ ಆರ್ ಡಿ ಎ, ಕೆ ಆರ್ ಐ ಡಿ ಎಲ್)** |
| • ಬೆಸ್ಕಾಂ ವತಿಯಿಂದ ರೂ. ಕೋಟಿ ಜಿಲ್ಲಾಧಿಕಾರಿಗಳಿಂದ ಪಡೆಯಲು ಕೋರಿದರು. | ಸದರಿ ಅನುದಾನವನ್ನು CRF ಮಾರ್ಗಸೂಚಿಯಂತೆ ನೀಡಲು ಸೂಚಿಸಲಾಯಿತು. |

| | |
|---|---|
| **<u>12) ಸುಸ್ಥಿರ ಅಭಿವೃದ್ಧಿ (Sustainable Development)</u>** ವಿಚಾರದ ಬಗ್ಗೆ ಪ್ರಸ್ತಾಪಿಸುತ್ತಾ ಈ ಯೋಜನೆಯಡಿ ಉದ್ಯೋಗ ಸೃಜನೆ, ಪೌಷ್ಠಿಕ ಆಹಾರ ಮತ್ತು ನೆಲೆ ಕಲ್ಪಿಸುವ ಮೂಲಕ ಬಡತನ ನಿರ್ಮೂಲನೆ ಯನ್ನು ಬದಿಗೊತ್ತುವ ಉದ್ದೇಶ ಹೊಂದಿದೆ. | • ಈ ಬಗ್ಗೆ ಎಲ್ಲಾ ಇಲಾಖೆಯ ಅಧಿಕಾರಿಗಳು ಸಮಗ್ರವಾಗಿ ವಿಶೇಷ ಆಂದೋಲನಗಳ ಮೂಲಕ ಅತ್ಯಂತ ಬಡವರ ಕಲ್ಯಾಣಕ್ಕಾಗಿ ಅನುಷ್ಠಾನಗೊಳಿಸಲು ಅವಕಾಶವಿದೆಯೆಂದು ಈ ಬಗ್ಗೆ ಎಲ್ಲಾ ಇಲಾಖಾಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ಚಿಂತನೆ ನಡೆಸಿ ಅನುಷ್ಠಾನಕ್ಕೆ ತರುವಲ್ಲಿ ಮುಂದಾಗುವಂತೆ ಸೂಚಿಸಿದರು ಹಾಗೂ ಪ್ರತಿ ತಿಂಗಳು ಕೆಡಿಪಿ ಸಭೆಯಲ್ಲಿ ಪ್ರಗತಿ ಪರಿಶೀಲನೆ ನಡೆಸುವುದು.<br>**(ಕ್ರಮ: ಜಿಲ್ಲಾಧಿಕಾರಿಗಳು/ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು/ಲೀಡ್ ಬ್ಯಾಂಕ್ ಮ್ಯಾನೇಜರ್, ತಹಸೀಲ್ದಾರ್ ಹಾಗೂ ಕಾರ್ಯನಿರ್ವಹಣಾಧಿಕಾರಿ ತಾ.ಪಂ.)** |
| **<u>13) ಬಹು ಗ್ರಾಮ ಕುಡಿಯುವ ನೀರಿನ ಯೋಜನೆ: (Multi Village Drinking Water Scheme):</u>**<br>ಈ ಯೋಜನೆಯಡಿ ಭೌತಿಕ ಮತ್ತು ಆರ್ಥಿಕ ಪ್ರಗತಿಗಳನ್ನು ಪರಿಶೀಲಿಸಲಾಯಿತು. ವಿಚಾರದಲ್ಲಿ ಗ್ರಾಮೀಣ ನೀರು ಸರಬರಾಜು ಇಲಾಖೆ ಇಂಜಿನಿಯರ್ ಪ್ರಸ್ತಾಪಿಸುತ್ತಾ ತರೀಕೆರೆ ತಾಲ್ಲೂಕಿನ ಬೇಲೇನಹಳ್ಳಿ ಹಾಗೂ ಇತರೆ ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಯೋಜನೆಯಡಿ ಪೈಪ್ ಲೈನ್ ಅಳವಡಿಸಬೇಕಿದ್ದು, **ಕೆಲ ಭಾಗದಲ್ಲಿ ಅರಣ್ಯ ಪ್ರದೇಶದ ವ್ಯಾಪ್ತಿಯೂ ಬರುವುದರಿಂದ ಅರಣ್ಯ ಇಲಾಖೆಯ ಅನುಮತಿ ಅವಶ್ಯಕವಿದೆಯೆಂದು ತಿಳಿಸಿದರು.** | • ಈ ಬಗ್ಗೆ ಉಪಅರಣ್ಯಸಂರಕ್ಷಣಾಧಿಕಾರಿ, ಭದ್ರಾವತಿರವರು ಕೂಡಲೇ ಅನುಮತಿ ದೊರಕಿಸಿ ಯೋಜನೆಯ ಅನುಷ್ಠಾನಕ್ಕೆ ಸಹಕರಿಸ ಬೇಕೆಂದು ಸೂಚಿಸಲಾಯಿತು<br>• ಯೋಜನೆಯನುಸಾರ ಪ್ರಗತಿ ಆಗದೇ ಇರುವುದರಿಂದ ಯೋಜನೆಯಂತೆ ಅನುಗುಣವಾಗಿ ತ್ವರಿತವಾಗಿ ಪೂರ್ಣಗೊಳಿಸಲು ಸೂಚಿಸಲಾಯಿತು.<br>**(ಕ್ರಮ: ಕಾ:ಪಾ: ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ಉಪಅರಣ್ಯಸಂರಕ್ಷಣಾಧಿಕಾರಿ, ಭದ್ರಾವತಿ)** |
| **<u>14) ಸಕಾಲ ಯೋಜನೆ:</u>**<br>ಸಕಾಲ ಯೋಜನೆಯಡಿ ಡಿಸೆಂಬರ್ ಮಾಹೆಯಲ್ಲಿ ಜಿಲ್ಲೆಯ ಕಂದಾಯ ಇಲಾಖೆಯು 3ನೇ ಸ್ಥಾನ, ಗ್ರಾಮೀಣಾಭಿವೃದ್ಧಿ ಇಲಾಖೆಯು 6ನೇ ಸ್ಥಾನಗಳು ಇತರೆ ಇಲಾಖೆಗಳು 8ನೇ | • ಇತರೆ ಇಲಾಖೆಗಳು ತಮ್ಮ ಇಲಾಖೆಗೆ ಕಲ್ಪಿಸಿರುವ ಸಾರ್ವಜನಿಕ ಉಪಯೋಗದ ಯೋಜನೆ /ಸೌಲಭ್ಯ ಗಳನ್ನು ಪೂರ್ಣ ಪ್ರಮಾಣದಲ್ಲಿ ಸಕಾಲ ಯೋಜನೆ ವ್ಯಾಪ್ತಿಯಲ್ಲಿ ನಿರ್ವಹಿಸುವಂತೆ ಸೂಚಿಸಲಾಯಿತು. |

| | |
|---|---|
| ಸ್ಥಾನದಲ್ಲಿರುವುದನ್ನು ಗಮನಿಸಿದರು. | • ಸಕಾಲ ಯೋಜನೆಯಡಿ ಕಾಲಮಿತಿ ಗತಿಸಿ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ವಿಲೇಗೊಳಿಸುವಂತೆ ಸೂಚಿಸಲಾಯಿತು.<br>**(ಕ್ರಮ: ಎಲ್ಲಾ ಇಲಾಖಾಧಿಕಾರಿಗಳು)** |
| **15) ಅರಣ್ಯ ಇಲಾಖಾ ವಿಷಯಗಳು:**<br>➢ **ಪರಿಭಾವಿತ ಅರಣ್ಯ:**<br>ಜಿಲ್ಲಾಧಿಕಾರಿಗಳು ವಿಷಯ ಪ್ರಸ್ತಾಪಿಸುತ್ತಾ ಚಿಕ್ಕಮಗಳೂರು , ಕೊಪ್ಪ ಮತ್ತು ಭದ್ರಾವತಿ ವಿಭಾಗ (ತರೀಕೆರೆ ತಾಲ್ಲೂಕು) ಸೇರಿದಂತೆ ಒಟ್ಟು 140733.87 ಹೆಕ್ಟೇರ್ ಪ್ರದೇಶವನ್ನು ಪರಿಭಾವಿತ ಅರಣ್ಯವೆಂದು 2004-05ರ ಪೂರ್ವದಲ್ಲಿ ಪ್ರಸ್ತಾಪಿಸಲಾಗಿದ್ದು, ನಂತರ 52900.11 ಹೆಕ್ಟೇರ್ ಪ್ರದೇಶವನ್ನು ಪರಿಭಾವಿತ ಅರಣ್ಯವೆಂದು ಪರಿಗಣಿಸಲು ಉಳಿದ 87833.76 ಹೆಕ್ಟೇರ್ ಭೂಮಿಯನ್ನು ಜಿಲ್ಲೆಯ ಶಿಕ್ಷಣ, ಸಮಾಜ ಕಲ್ಯಾಣ, ಸಣ್ಣ ನೀರಾವರಿ ಮತ್ತು ಗ್ರಾಮೀಣ ಮೂಲ ಸೌಕರ್ಯಗಳಿಗೆ ಬಳಸಲು ಅನುವು ಮಾಡಬೇಕೆಂದು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಾಗಿ ತಿಳಿಸಿದರು. ಕಂದಾಯ ಮತ್ತು ಡೀಮ್ಡ್ ಅರಣ್ಯ ಜಮೀನನ್ನು ಪ್ರತ್ಯೇಕಿಸಿ ಗಡಿ ಗುರುತಿಸುವ ಬಗ್ಗೆ ಜಂಟಿ ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ನಕ್ಷೆ / ವರದಿ ತಯಾರಿಕೆ ಪ್ರಗತಿಯಲ್ಲಿರುವುದಾಗಿ ತಿಳಿಸಿದರು.<br>ಅರಣ್ಯ ಇಲಾಖೆ ಅನುಮತಿ ಬಗ್ಗೆ ಗ್ರಾಮೀಣ ನೀರು ಇಲಾಖೆ ಇಂಜಿನಿಯರ್ ಪ್ರಸ್ತಾಪಿಸುತ್ತಾ ಸಾರ್ವಜನಿಕ ಉದ್ದೇಶದ ನೀರು ಸರಬರಾಜು ಯೋಜನೆ ಸಂಬಂಧವಾಗಿ ಅರಣ್ಯ ಇಲಾಖೆ ಅನುಮತಿಗಾಗಿ ಅರಣ್ಯ ಇಲಾಖೆಯ ತಂತ್ರಾಂಶದಲ್ಲಿ ಆನ್ ಲೈನ್ ಮೂಲಕ ಪ್ರಸ್ತಾವನೆ ಸಲ್ಲಿಸಲಾಗಿದ್ದು, **ಈ ಬಗ್ಗೆ ಇಲಾಖೆಯು ಹಲವಾರು** | ಆನ್ ಲೈನ್ ಮೂಲಕ ಇಲಾಖೆಯ ಅಭಿಪ್ರಾಯಕ್ಕೆ ಪ್ರಸ್ತಾವನೆ ಸಲ್ಲಿಸುವಾಗ ಎಲ್ಲಾ ಅಗತ್ಯ ಮಾಹಿತಿಯನ್ನು ಪಡೆದುಕೊಂಡು ನಂತರ ನಡವಳಿ ಕೈಗೊಳ್ಳಲು ವಿನಾಕಾರಣ ಪತ್ರ ವ್ಯವಹಾರ ಅಥವಾ ತಿರಸ್ಕೃತ ಕ್ರಮವಹಿಸಬಾರದಾಗಿ ಅರಣ್ಯ ಇಲಾಖಾಧಿಕಾರಿಗಳಿಗೆ ಸೂಚಿಸಲಾಯಿತು.<br>• ಚಿಕ್ಕಮಗಳೂರು ತಾಲ್ಲೂಕು ತೇಗೂರು ಗ್ರಾಮದಲ್ಲಿ ಮೆಡಿಕಲ್ ಕಾಲೇಜು ಉದ್ದೇಶಕ್ಕೆ ಭೂಮಿ ಗುರುತಿಸಿದ್ದು, ಈ ಬಗ್ಗೆ ಅರಣ್ಯ ಇಲಾಖೆಯವರು ತ್ವರಿತವಾಗಿ ಇಲಾಖಾ ಅಭಿಪ್ರಾಯ ನೀಡಲು ಸೂಚಿಸಲಾಯಿತು.<br>• ಕೇಂದ್ರೀಯ ವಿದ್ಯಾಲಯಕ್ಕೆ ಸಂಬಂಧಿಸಿದಂತೆ ಭೂಮಿ ಕಾಯ್ದಿರಿಕೆ ಬಗ್ಗೆ ಅರಣ್ಯ ಇಲಾಖೆಯು ತ್ವರಿತವಾಗಿ ಅಭಿಪ್ರಾಯ ನೀಡಲು ಸೂಚಿಸಲಾಯಿತು.<br>• ಪುನರ್ವಸತಿಗಾಗಿ ಭೂಮಿ ಕಾಯ್ದಿರಿಕೆಗೆ ಸಂಬಂಧಿಸಿದಂತೆ ಹಂತೂರು, ಬಿ.ಹೊಸಳ್ಳಿ ಮತ್ತು ಮಾವಿನಕೆರೆ ಗ್ರಾಮಗಳಲ್ಲಿ ಭೂಮಿಯನ್ನು ಗುರುತಿಸಲಾಗಿದ್ದು, ಈ ಬಗ್ಗೆ ಅರಣ್ಯ ಇಲಾಖೆಯು ತ್ವರಿತವಾಗಿ ಅಭಿಪ್ರಾಯ ನೀಡಿ ಪುನರ್ವಸತಿಗೆ ಅವಕಾಶ ಮಾಡಲು ಸೂಚಿಸಲಾಯಿತು. |

| | |
|---|---|
| **ಅಂಶಗಳ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುತ್ತಾರೆ**. ಇದರಿಂದ ಯೋಜನೆಯ ಅನುಷ್ಠಾನವು ವಿಳಂಭವಾಗುವುದಾಗಿ ತಿಳಿಸಿದರು.<br>ಸಹಾಯಕ ಅರಣ್ಯಸಂರಕ್ಷಣಾಧಿಕಾರಿಗಳು, ಭದ್ರಾವತಿ ವಿಭಾಗ ರವರು ಮಾತನಾಡುತ್ತಾ ಇಲಾಖೆಯ ಕೆಲವು ಅಂಶಗಳನ್ನು ಸ್ಪಷ್ಟಪಡಿಸಿಕೊಳ್ಳಲು ಮಾಹಿತಿ ಕೇಳಲಾಗುವುದೆಂದು ಇದರಿಂದಾಗಿ ವಿಳಂಬವಾಗುವುದಾಗಿ ತಿಳಿಸಿದರು. | • **(ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು/ ಕೊಪ್ಪ/ ಭದ್ರಾವತಿ.)** |
| ➢ **<u>ಅಧಿಸೂಚಿತ ಅರಣ್ಯ:</u>**<br>ಚಿಕ್ಕಮಗಳೂರು , ಕೊಪ್ಪ, ಭದ್ರಾವತಿ (ತರೀಕೆರೆ ತಾಲ್ಲೂಕು) ಹಾಗೂ ಭದ್ರಾ ವನ್ಯಜೀವಿ ವ್ಯಾಪ್ತಿಗೆ ಸೇರಿದಂತೆ ಒಟ್ಟು 213101.23 ಹೆಕ್ಟೇರ್ ಪ್ರದೇಶವು ವಿವಿಧ ರೀತಿಯ ಅರಣ್ಯ ಪ್ರದೇಶವಾಗಿರುವುದೆಂದು ಗಮನಿಸಲಾಯಿತು. | • ಅಧಿಸೂಚಿತ ಅರಣ್ಯ ಪ್ರದೇಶದಲ್ಲಿ ಅರಣ್ಯೀಕರಣ ಉದ್ದೇಶಕ್ಕೆ ಅರಣ್ಯ ಇಲಾಖೆ ಯಲ್ಲಿ ಅನುದಾನ ಲಭ್ಯವಿದ್ದಲ್ಲಿ ನರೇಗಾ ಯೋಜನೆಯ ಅನುದಾನವನ್ನು ಹೆಚ್ಚುವರಿ ಯಾಗಿ ಪಡೆದು ಅರಣ್ಯೀಕರಣವನ್ನು ವೃದ್ಧಿ ಗೊಳಿಸಲು ಸೂಚಿಸಲಾಯಿತು.<br>• ಕಿರು ಅರಣ್ಯ ಪ್ರದೇಶಗಳಲ್ಲಿ ಅರಣ್ಯ ಉತ್ಪನ್ನಗಳನ್ನು ಬೆಳೆಯುವ ಗುಂಪುಗಳಿಗೆ **ವಂದನ್** ಯೋಜನೆಯಡಿ ಸೇರಿಸುವ ಕುರಿತು ಪರಿಶೀಲಿಸಲು ಸೂಚಿಸಲಾಯಿತು.<br>• ತಾಂಡಾಗಳಲ್ಲಿ ಮೂಲಸೌಲಭ್ಯ ಕಲ್ಪಿಸುವ ಬಗ್ಗೆ ಕ್ರಿಯಾ ಯೋಜನೆಯನ್ನು ರೂಪಿಸಲು ಸೂಚಿಸಲಾಯಿತು.<br>**(ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು/ಕೊಪ್ಪ/ಭದ್ರಾವತಿ, ಮುಖ್ಯ ಯೋಜನಾಧಿಕಾರಿ, ಜಿಲ್ಲಾಪಂಚಾಯ್ತಿ ಮತ್ತು ಯೋಜನಾ ನಿರ್ದೇಶಕರು, ಡಿ ಆರ್ ಡಿ ಎ)** |

| | |
|---|---|
| **16) ಶಿಕ್ಷಕರ ವೇತನ:**<br>ಜಿಲ್ಲೆಯಲ್ಲಿ ವಿದ್ಯಾ ಇಲಾಖೆ, ಸಮಾಜ ಕಲ್ಯಾಣ ಅನುದಾನಿತ, ಅನುದಾನ ರಹಿತ ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಶಾಲೆಗಳು ಸೇರಿದಂತೆ ಒಟ್ಟು 1997 ಸಂಸ್ಥೆಗಳು ಇರುವುದನ್ನು ಗಮನಿಸಲಾಯಿತು. ಈ ಬಗ್ಗೆ ಶಿಕ್ಷಕರ ವೇತನ ಕುರಿತು ಪರಿಶೀಲಿಸಲಾಗಿ, ಡಿಸೆಂಬರ್ ಮಾಹೆಯಲ್ಲಿ 50 ಶಿಕ್ಷಕರಿಗೆ ಅನುದಾನದ ಕೊರತೆ ಕಾರಣ ವೇತನ ಪಾವತಿಯಾಗಿಲ್ಲವೆಂದು ಈ ಬಗ್ಗೆ ಅನುದಾನ ಬೇಡಿಕೆಯನ್ನು ಸಲ್ಲಿಸಿರುವುದಾಗಿ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರು ತಿಳಿಸಿದರು.<br>ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲಿ ಯಾವುದೇ ವೇತನ ಪಾವತಿಗೆ ಬಾಕಿ ಇರುವುದಿಲ್ಲವೆಂದು ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರು ತಿಳಿಸಿದರು. | • ಇನ್ನು ಮುಂದೆ ಅನುದಾನದ ಕೊರತೆ ಸಂಭವಿಸಬಹುದಾದ ಪೂರ್ವದಲ್ಲಿಯೇ ಅನುದಾನ ಬೇಡಿಕೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ವೇತನ ಪಾವತಿಯಲ್ಲಿ ವಿಳಂಬವಾಗದಂತೆ ಕ್ರಮವಹಿಸಲು ಸೂಚಿಸಲಾಯಿತು.<br>•<br>**(ಕ್ರಮ: ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ)** |
| **17) ಸಾಮಾಜಿಕ ಭದ್ರತಾ ಯೋಜನೆ:**<br>ಸಾಮಾಜಿಕ ಭದ್ರತಾ ಯೋಜನೆಯಲ್ಲಿ ಒಟ್ಟು 134053 ಪಿಂಚಣಿದಾರರಿಗೆ ಡಿಸೆಂಬರ್ ತಿಂಗಳವರೆಗೆ ಪಿಂಚಣಿಯನ್ನು ನೀಡಲಾಗಿದೆ, 5530 ಪಿಂಚಣಿದಾರರಿಗೆ ಆಧಾರ್ ಮಾಹಿತಿ ಹಾಗೂ ಬ್ಯಾಂಕ್ ಖಾತೆ ಈ ರೀತಿಯ ವ್ಯತ್ಯಾಸ ಇರುವುದರಿಂದ ಪಾವತಿಯಾಗಿಲ್ಲವೆಂದು ಅಪರ ಜಿಲ್ಲಾಧಿಕಾರಿಗಳು ತಿಳಿಸಿದರು. | • ಸಾಮಾಜಿಕ ಭದ್ರತಾ ಯೋಜನೆಯು ದುರ್ಬಲ ವರ್ಗದವರಿಗೆ ನೀಡುವ ಯೋಜನೆಯಾಗಿದ್ದು, ಪಿಂಚಣಿ ಪಾವತಿಯಲ್ಲಿ ವಿಳಂಬವಾಗದಂತೆ ಅಯಾ ತಿಂಗಳಿನ ಪಿಂಚಣಿಯು ಕಾಲಕಾಲಕ್ಕೆ ಪಾವತಿಯಾಗುವ ಕ್ರಮವಹಿಸಲು ಸೂಚಿಸಲಾಯಿತು.<br>• ಖಜಾನೆ -2 ವಿಚಾರದಲ್ಲಿ ಯಾವುದೇ ತೊಂದರೆ ಅಥವಾ ಅಡಚಣೆ ಇದ್ದಲ್ಲಿ ಗಮನಕ್ಕೆ ತರುವಂತೆ ಸೂಚಿಸಲಾಯಿತು.<br>**(ಕ್ರಮ: ಸಹಾಯಕ ನಿರ್ದೇಶಕರು, ಸಾಮಾಜಿಕ ಭದ್ರತೆ, ಎಲ್ಲಾ ತಹಸೀಲ್ದಾರರು)** |

| | |
|---|---|
| **18) ಅಮೃತ್ ಯೋಜನೆ:** ಚಿಕ್ಕಮಗಳೂರು ನಗರ ವ್ಯಾಪ್ತಿಯಲ್ಲಿ ಒಟ್ಟು 30336 ನಲ್ಲಿ ಸಂಪರ್ಕಗಳ ಪೈಕಿ 15956 ಸಂಪರ್ಕಗಳನ್ನು ಪೂರ್ಣಗೊಳಿಸಿದ್ದು ಬಾಕಿ ಉಳಿದಿರುವ ಸಂಪರ್ಕವನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸುವುದಾಗಿ ಯೋಜನಾ ನಿರ್ದೇಶಕರು ಡಿಯುಡಿಸಿ ತಿಳಿಸಿದರು. | • ಪೂರ್ಣ ಯೋಜನೆಯನ್ನು ಸಮರ್ಪಕವಾಗಿ ಮಾರ್ಚ್ ಅಂತ್ಯದೊಳಗೆ ಕಡ್ಡಾಯವಾಗಿ ಪೂರ್ಣಗೊಳಿಸುವಂತೆ ಸೂಚಿಸಲಾಯಿತು.<br>**(ಕ್ರಮ: ಯೋಜನಾ ನಿರ್ದೇಶಕರು ಡಿಯುಡಿಸಿ)** |
| **19) ಕಿರು ವಿಮಾನ ನಿಲ್ದಾಣ:** ಚಿಕ್ಕಮಗಳೂರು ತಾಲ್ಲೂಕು ಹಿರೇಮಗಳೂರು ಗ್ರಾಮದಲ್ಲಿ 100.04 ಎಕರೆ ಜಮೀನನ್ನು ಕಾಯ್ದಿರಿಸಲಾಗಿದ್ದು, ಹೆಚ್ಚುವರಿ ಯಾಗಿ 19.04 ಎಕರೆ ಖಾಸಗಿ ಜಮೀನನ್ನು ಖರೀದಿಸುವ ಪ್ರಸ್ತಾಪವಿರುವುದಾಗಿಯೂ, ಈ ಬಗ್ಗೆ ರೂ 7.00 ಕೋಟಿ ಅನುದಾನ ಲಭ್ಯವಿರುವುದಾಗಿ ಜಂಟಿ ನಿರ್ದೇಶಕರು, ಕೈಗಾರಿಕಾ ಇಲಾಖೆರವರು ತಿಳಿಸಿದರು. | • ಚಿಕ್ಕಮಗಳೂರು ಜಿಲ್ಲೆಯು ಪ್ರವಾಸಿಗರ ದೃಷ್ಠಿಯಿಂದ ಪ್ರಮುಖವಾಗಿದ್ದು, ವಿಮಾನ ನಿಲ್ದಾಣದ ಅವಶ್ಯಕತೆ ಇರುವುದರಿಂದ ತ್ವರಿತ ವಾಗಿ ಕ್ರಮವಹಿಸಲು ಸೂಚಿಸಲಾಯಿತು.<br>• ಅವಶ್ಯವಿರುವ 19.04 ಎಕರೆ ಭೂಮಿಯನ್ನು ಸಂಬಂಧಿಸಿದ ಹಿಡುವಳಿ ದಾರರಿಂದ ನೇರವಾಗಿ ಖರೀದಿಸುವ ಬಗ್ಗೆ ತ್ವರಿತವಾಗಿ ಕಾನೂನು ರೀತಿಯ ಕ್ರಮವಹಿಸಲು ಸೂಚಿಸಲಾಯಿತು.<br>• **(ಕ್ರಮ: ಜಂಟಿ ನಿರ್ದೇಶಕರು, ಕೈಗಾರಿಕಾ ಇಲಾಖೆ, ಉಪವಿಭಾಗಾಧಿಕಾರಿ, ಚಿಕ್ಕಮಗಳೂರು)** |

ಅಂತಿಮವಾಗಿ ಸಭಾಧ್ಯಕ್ಷರಾದ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಚಿಕ್ಕಮಗಳೂರು ಜಿಲ್ಲೆಯು ಪ್ರಾಕೃತಿಕ ಸೊಬಗನ್ನು ಹೊಂದಿದ್ದು, ಜಿಲ್ಲೆಯು ಮಲೆನಾಡು ಹಾಗೂ ಬಯಲು ಪ್ರದೇಶದಿಂದ ಕೂಡಿದ್ದು, ಪ್ರವಾಸಿಗರ ಅಕರ್ಷಣೀಯ ತಾಣವಾಗಿದೆ. ಇಂತಹ ಜಿಲ್ಲೆಯ ಅಭಿವೃದ್ಧಿ ಮತ್ತು ಪ್ರಗತಿ ದೃಷ್ಠಿಯಿಂದ ಸರ್ಕಾರದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಕೆಲಸ ಮಾಡಲು ನನಗೆ ಸಂತೋಷವನ್ನು ತಂದಿದೆ. ಅದೇ ರೀತಿ ಈ ನೆಲೆಯಲ್ಲಿ ಸರ್ಕಾರದ ಸೇವೆ ಮಾಡಲು

ಅವಕಾಶ ಸಿಕ್ಕಿರುವುದು ನಮ್ಮೆಲ್ಲರ ಸೌಭಾಗ್ಯವೂ ಆಗಿದೆ. ಇಂತಹ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಎಲ್ಲರೂ ಒಮ್ಮನಸ್ಸಿನಿಂದ ಸೇವೆ ಸಲ್ಲಿಸುವುದು ಅವಶ್ಯವಿರುತ್ತದೆ. ಈ ಬಗ್ಗೆ ಸರ್ಕಾರದ ಮಟ್ಟದಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಬೇಕಾಗುವ ಸಲಹೆ ಸಹಕಾರವನ್ನು ನನ್ನ ವೈಯಕ್ತಿಕ ಗಮನಕ್ಕೆ ತಂದಲ್ಲಿ ಬಗೆಹರಿಸುವ ಕ್ರಮವಹಿಸುತ್ತೇನೆಂದು ತಿಳಿಸಿದರು. ಎಲ್ಲರೂ ಪರಸ್ಪರ ಸಲಹೆ - ಸಹಕಾರ ಸಮಾಲೋಚನೆಯಲ್ಲಿ ಜಿಲ್ಲೆಯನ್ನು ಅಭಿವೃದ್ಧಿ ಪಥದಲ್ಲಿ ಸಾಗಿಸೋಣವೆಂದು ಎಲ್ಲರ ಸಹಕಾರ ಅಪೇಕ್ಷಿಸುತ್ತಾ,

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಡಾ: ಶಾಲಿನಿ ರಜನೀಶ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಯೋಜನೆ,ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ ಮತ್ತು
ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಸಂ: ಜೆ2 ಸಭೆ 2019 -20

ದಿನಾಂಕ: 24-01-2020

ಪ್ರತಿಯನ್ನು; ಸಂಬಂಧಿಸಿದ ಎಲ್ಲಾ ಅಧಿಕಾರಿಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.

<u>ದಿನಾಂಕ: 18.01.2020 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರವಾಸೋದ್ಯಮ ಇಲಾಖೆ ಬೆಂಗಳೂರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಯಾದಗಿರಿ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಜರುಗಿದ ಸಭೆಯ ನಡುವಳಿಗಳು</u> :-

| | |
|---|---|
| ಅಧ್ಯಕ್ಷತೆ:- | ಶ್ರೀ ಟಿ.ಕೆ. ಅನೀಲ್ ಕುಮಾರ್, ಭಾ.ಆ.ಸೇ.<br>ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,<br>ಪ್ರವಾಸೋಧ್ಯಮ ಇಲಾಖೆ ಬೆಂಗಳೂರು ಹಾಗೂ ಜಿಲ್ಲಾ<br>ಉಸ್ತುವಾರಿ ಕಾರ್ಯದರ್ಶಿಗಳು, ಯಾದಗಿರಿ |
| ಉಪಸ್ಥಿತರಿದ್ದ ಅಧಿಕಾರಿ/ಸಿಬ್ಬಂದಿಗಳು:- | ಶ್ರೀ ಕೂರ್ಮಾ ರಾವ್ ಎಂ. ಭಾ.ಆ.ಸೇ<br>ಜಿಲ್ಲಾಧಿಕಾರಿಗಳು, ಯಾದಗಿರಿ.<br>ಶ್ರೀಮತಿ ಶಿಲ್ಪಾ ಶರ್ಮಾ ಭಾ.ಆ.ಸೇ<br>ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು,<br>ಜಿಲ್ಲಾ ಪಂಚಾಯತ್ ಯಾದಗಿರಿ.<br>ಶ್ರೀ ಪ್ರಕಾಶ ಜಿ. ರಜಪೂತ ಕ.ಆ.ಸೇ.<br>ಅಪರ ಜಿಲ್ಲಾಧಿಕಾರಿಗಳು, ಯಾದಗಿರಿ.<br>ಶ್ರೀ ಶಂಕರಗೌಡ ಎಸ್. ಸೋಮನಾಳ ಕ.ಆ.ಸೇ.<br>ಸಹಾಯಕ ಆಯುಕ್ತರು, ಯಾದಗಿರಿ |

ಮೊದಲಿಗೆ ಅಪರ ಜಿಲ್ಲಾಧಿಕಾರಿಗಳು, ಯಾದಗಿರಿ ಇವರು ಪ್ರವಾಸೋದ್ಯಮ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಮಾನ್ಯ ಜಿಲ್ಲಾಧಿಕಾರಿಗಳು, ಯಾದಗಿರಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಯಾದಗಿರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸಿ, ಮಾನ್ಯರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು, ಸಭೆಯನ್ನು ನಡೆಸಲು ಕೋರಿದರು.

1. <u>ಪ್ರವಾಹ ಕಾಮಗಾರಿಗಳ ಪ್ರಗತಿ:-</u>

ಪ್ರವಾಸೋದ್ಯಮ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಒಟ್ಟು ಕಾಮಗಾರಿಗಳ ಬಗ್ಗೆ ಕೇಳಲಾಗಿ, ಒಟ್ಟು: 220 ಕಾಮಗಾರಿಗಳ ಪೈಕಿ 175 ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ಆಡಳಿತಾತ್ಮಕ ಅನುಮೋದನೆಗಾಗಿ ಜಿಲ್ಲಾ ಪಂಚಾಯಿತಿಗೆ ಸಲ್ಲಿಸಲಾಗಿದೆ. 45 ಕಾಮಗಾರಿಗಳ ಅಂದಾಜು ಪಟ್ಟಿ ತಯಾರಿಸುವ ಹಂತದಲ್ಲಿದೆ ಎಂದು ಕಾರ್ಯನಿರ್ವಾಹಕ ಇಂಜಿನೀಯರರು ಮಾನ್ಯರಿಗೆ ವಿವರಿಸಿದರು.

ಲೋಕೋಪಯೋಗಿ ಇಲಾಖೆಯ ಒಟ್ಟು 17 ಕಾಮಗಾರಿಗಳಲ್ಲಿ 7 ಪೂರ್ಣಗೊಂಡಿದ್ದು, 10 ಪ್ರಗತಿ ಹಂತದಲ್ಲಿವೆ ಎಂಬುದಾಗಿ ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ, ಯಾದಗಿರಿ ಇವರು ಮಾಹಿತಿ ನೀಡಿದರು. ಮಾನ್ಯರು ಮಾತನಾಡಿ ಪ್ರವಾಹ ಪರಿಸ್ಥಿತಿಯಿಂದಾಗಿ ಹಾನಿಯಾದ ನೀಲಕಂಠರಾಯನ ಗಡ್ಡಿಯನ್ನು ಸೇರ್ಪಡಿಸಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಿದರು. ಸದರಿ ಕಾಮಗಾರಿಗಳ ಮೊತ್ತವು ರೂ.50.00 ಲಕ್ಷ ಮೇಲ್ಪಟ್ಟವಿದ್ದರೆ ಟೆಂಡರ್ ಕರೆಯಲು ಸಂಬಂಧಿಸಿದ ಇಂಜೀನಿಯರರಿಗೆ ತಿಳಿಸಿದರು.

ಜಿಲ್ಲೆಯಲ್ಲಿ ಪ್ರವಾಹದಿಂದ ಉಂಟಾದ ರಸ್ತೆ ಮತ್ತು ಸೇತುವೆಗಳ ದುರಸ್ತಿ ಕಾಮಗಾರಿಗಳಿಗೆ ಶೀಘ್ರ ಟೆಂಡರ್ ಕರೆದು ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಬೇಕು ಎಂದು ಪ್ರವಾಸೋದ್ಯಮ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಟಿ.ಕೆ. ಅನಿಲ್‌ಕುಮಾರ್ ಅವರು ಸೂಚಿಸಿದರು.

ನೈಸರ್ಗಿಕ ವಿಕೋಪದಿಂದ ಹಾನಿಗೊಳಗಾದ ಕಾಮಗಾರಿಗಳಿಗಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಅಂದಾಜು 29 ಕೋಟಿ ರೂ., ಲೋಕೋಪಯೋಗಿ ಇಲಾಖೆಗೆ 9.60 ಕೋಟಿ ರೂ.ಗಳ ಅನುದಾನ ಹಂಚಿಕೆಯಾಗಿದೆ. ಅನುದಾನ ಕೂಡ ಬಿಡುಗಡೆಯಾಗಿದ್ದು, ಕೈಗೊಂಡ ಒಟ್ಟು 237 ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕೆಂದು ಸೂಚಿಸಿದರು.

(ಕ್ರಮ: ಕಾರ್ಯನಿರ್ವಾಹಕ ಇಂಜಿನೀಯರರು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಯಾದಗಿರಿ ಮತ್ತು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಯಾದಗಿರಿ.)

2.<u>ಶಿಕ್ಷಣ ಇಲಾಖೆ</u> :-

ಪ್ರವಾಸೋದ್ಯಮ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಜಿಲ್ಲೆಯ ಎಸ್ಸೆಸ್ಸೆಲ್ಸಿ ಫಲಿತಾಂಶ ಹೆಚ್ಚಳಕ್ಕೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಅಗತ್ಯ ಕ್ರಮ ಕೈಗೊಳ್ಳಬೇಕು. ಶಾಲೆ ಮತ್ತು ವಸತಿ ನಿಲಯಗಳಲ್ಲಿ ನುರಿತ ಶಿಕ್ಷಕರಿಂದ ಇಂಗ್ಲಿಷ್, ಗಣಿತ ಮತ್ತು ವಿಜ್ಞಾನ ವಿಷಯಗಳ ವಿಶೇಷ ಬೋಧನೆ ಮಾಡಬೇಕು. ಶಿಕ್ಷಣ ಇಲಾಖೆಯ ಅಧಿಕಾರಿಗಳು ವಾರಕ್ಕೆ ಎರಡು ಬಾರಿ ಶಾಲೆಗಳಿಗೆ ಭೇಟಿ ನೀಡಿ, ಶೈಕ್ಷಣಿಕ ಪ್ರಗತಿಯನ್ನು ಪರಿಶೀಲಿಸಬೇಕು ಎಂದು ಸೂಚಿಸಿದರು.

(ಕ್ರಮ:ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಯಾದಗಿರಿ.)

3. <u>ಜಿಲ್ಲಾ ಪಂಚಾಯತ್</u> :-

ಜಿಲ್ಲೆಯ ಜನರ ಗುಳೆ ತಪ್ಪಿಸಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸಿ, ಪ್ರತಿಶತ ಗುರಿ ಸಾಧಿಸಬೇಕು. ಜಿಲ್ಲೆಯಲ್ಲಿ ಕುಡಿಯುವ ನೀರು ಪೂರೈಕೆಗೆ ಮೊದಲ ಆದ್ಯತೆ ನೀಡಬೇಕು. ಕುಡಿಯುವ ನೀರು ಪೂರೈಸುವುದಕ್ಕೆ ಯಾವುದೇ ರೀತಿಯ ತೊಂದರೆ ಉಂಟಾಗದಂತೆ ಅಧಿಕಾರಿಗಳು ಮುನ್ನೆಚ್ಚರಿಕೆ ವಹಿಸಬೇಕು ಎಂದು ಅವರು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಯಾದಗಿರಿ.)

<u>4. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ</u> :-

ಪ್ರವಾಸೋದ್ಯಮ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ಹಾಗೂ ಯಾದಗಿರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಆಯುಷ್ಮಾನ್ ಭಾರತ- ಆರೋಗ್ಯ ಕರ್ನಾಟಕ ಯೋಜನೆಯಡಿ ಬಿಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬದವರು ವರ್ಷದಲ್ಲಿ 5 ಲಕ್ಷ ರೂ.ವರೆಗೆ ಉಚಿತವಾಗಿ ಚಿಕಿತ್ಸೆ ಪಡೆಯಬಹುದು. ಎಪಿಎಲ್ ಪಡಿತರ ಚೀಟಿ ಹೊಂದಿರುವ ಕುಟುಂಬಗಳು 1.50 ಲಕ್ಷ ರೂ.ವರೆಗೂ ಸಹ ಪಾವತಿ (ಶೆ.70ರಷ್ಟು ಫಲಾನುಭವಿ ಭರಿಸತಕ್ಕದ್ದು, ಶೇ. 30ರಷ್ಟು ಸರ್ಕಾರ ಭರಿಸುತ್ತದೆ)ಯೊಂದಿಗೆ ಚಿಕಿತ್ಸೆಯನ್ನು ಪಡೆಯಬಹುದಾಗಿದೆ. ಬಡವರ ಆರೋಗ್ಯ ರಕ್ಷಣೆಯಲ್ಲಿ ಈ ಯೋಜನೆ ಪ್ರಮುಖವಾಗಿರುವುದರಿಂದ ಸರ್ಕಾರ ಈ ಯೋಜನೆ ಬಗ್ಗೆ ವಿಶೇಷ ಕಾಳಜಿ ಹೊಂದಿದೆ. ಹಾಗಾಗಿ, ಸಾರ್ವಜನಿಕರಲ್ಲಿ ಹೆಚ್ಚಿನ ತಿಳುವಳಿಕೆ ಮೂಡಿಸಿ ನೋಂದಾಯಿಸುವಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಸೂಚಿಸಿದರು.

(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಆರೋಗ್ಯ ಇಲಾಖೆ, ಯಾದಗಿರಿ.)

5. <u>ಮಹತ್ವಾಂಕ್ಷೆ ಜಿಲ್ಲೆ</u> :-

ಜಿಲ್ಲಾಧಿಕಾರಿಗಳು ಮಾತನಾಡಿ, ಮಹತ್ವಾಕಾಂಕ್ಷೆ ಜಿಲ್ಲೆ ಯೋಜನೆಯಡಿ ಕಳೆದ ಸಾಲಿನಲ್ಲಿ ಕೈಗೊಂಡಿದ್ದ ಕೆರೆಗಳ ಹೂಳೆತ್ತುವ ಯೋಜನೆಗೆ ರೈತರಿಂದ ಹೆಚ್ಚಿನ ಬೇಡಿಕೆ ಇದೆ. ಹಾಗಾಗಿ, ಪ್ರಸ್ತುತ ಸಾಲಿನಲ್ಲಿ ಕೆರೆಗಳ ಹೂಳೆತ್ತುವ ಕಾರ್ಯಕ್ಕೆ ಶೀಘ್ರದಲ್ಲಿಯೆ ಚಾಲನೆ ನೀಡಲಾಗುವುದು. ಕೆರೆಗಳ ಹೂಳೆತ್ತುವ ಜೊತೆಗೆ ನಾಲೆಗಳ ಹೂಳನ್ನು ಕೂಡ ತೆಗೆಯಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಕೆರೆಗಳ ಹೂಳೆತ್ತುವ ಕಾರ್ಯವನ್ನು ಧರ್ಮಸ್ಥಳದ ಸಮಿತಿ ವತಿಯಿಂದ 100 ಕೆರೆಗಳು ಕೈಗೊಳ್ಳಾಗಿರುವುದಾಗಿ, ಧರ್ಮಸ್ಥಳದ ಸಮಿತಿಯವರು ಸಭೆಗೆ ತಿಳಿಸಿದರು.

6. ನೈಸರ್ಗಿಕ ವಿಕೋಪ:-

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರವಾಸೋಧ್ಯಮ ಇಲಾಖೆ ಬೆಂಗಳೂರು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಯಾದಗಿರಿ ಮಾತನಾಡುತ್ತಾ, ಅಗಸ್ಟ್ ತಿಂಗಳಲ್ಲಿ ಪ್ರವಾಹದಿಂದ ಹಾನಿಯಾದ ಮನೆಗಳು ಮಾಹಿತಿಯನ್ನು ಅವಲೋಕಿಸಿ, ಗ್ರೂಪ್- ಬಿ 12 ಮತ್ತು ಮತ್ತು ಗ್ರೂಪ್- ಸಿ 88 ಮನೆಗಳ ಕಟ್ಟಡ ಕಾಮಗಾರಿಗಳು, ಪ್ರಗತಿ ಹಂತದಲ್ಲಿರುತ್ತದೆ ಹಾಗೂ ಪ್ರವಾಹದಿಂದಾಗಿ ವಡಗೇರಾ ತಾಲ್ಲೂಕಿನ ಯಕ್ಷಂತಿ ಮತ್ತು ಶೋರಾಪೂರ ತಾಲ್ಲೂಕಿನ ಗೋನಾಳ ಗ್ರಾಮದ ಎರಡು ಶಾಲೆಗಳು ಹಾನಿಯಾಗಿದ್ದು ಪುನರ ನಿರ್ಮಾಣ ಮಾಡಲಾಗುತ್ತಿದೆ ಎಂದು ಎಂದು ಜಿಲ್ಲಾಧಿಕಾರಿಗಳು ಮಾನ್ಯರಿಗೆ ವಿವರಿಸಿದರು.

ಮಾನ್ಯರು ಮಾತನಾಡಿ, ನೆರೆ ಹಾವಳಿ ಪರಿಹಾರವನ್ನು ಸಂಪೂರ್ಣವಾಗಿ ಸದ್ಬಳಕೆ ಮಾಡಿಕೊಳ್ಳುವಂತೆ ಜಿಲ್ಲಾ ಮಟ್ಟದ ಅಧಿಕ್ಷಾರಿಗಳಿಗೆ ಕಟ್ಟುನಿಟ್ಟಾಗಿ ಸೂಚಿಸಿದರು.

(ಕ್ರಮ: ಜಿಲ್ಲೆಯ ಎಲ್ಲಾ ತಹಸೀಲ್ದಾರರು ಹಾಗೂ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಯಾದಗಿರಿ.)

7.ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ :-

ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆ, ಮುಖ್ಯಮಂತ್ರಿ ಮಾತೃಶ್ರೀ ಯೋಜನೆ ಪ್ರಗತಿ ವರದಿಯನ್ನು ಮಾನ್ಯರು ಪರಿಶೀಲಿಸಲಾಗಿ, ಸದರಿ ಯೋಜನೆಗಳ ಸ್ವೀಕೃತಿಯಾದ ಅರ್ಜಿಗಳು ಸರಿಯಾಗಿ ನೊಂದಣಿ ಮಾಡಿಸಿ ಮಾನ್ಯ ಮುಖ್ಯಮಂತ್ರಿಯವರು ತೆಗೆದುಕೊಳ್ಳುವ ಸಭೆಗಿಂತ ಪೂರ್ವದಲ್ಲಿ ಪೂರ್ಣಗೊಳಿಸಲು ಸೂಚಿಸಿದರು.

(ಕ್ರಮ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಯಾದಗಿರಿ.)

8.ಸಕಾಲ:-

ಜಿಲ್ಲೆಯಲ್ಲಿ ಸಕಾಲದಲ್ಲಿ ಸಕಾಲದ ನಿಯಮ ಮೀರಿ ಬಾಕಿ ಇರುವ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಮಾನ್ಯರು ಕಟ್ಟುನಿಟ್ಟಾಗಿ ನಿರ್ದೇಶಿಸಿದರು.

ಕ್ರಮ: (ಜಿಲ್ಲಾ ಮಟ್ಟದ ಅಧಿಕಾರಿಗಳು, ಯಾದಗಿರಿ)

ವಂದಾನಾರ್ಪಣೆಗಳೊಂದಿಗೆ ಸಭೆ ಮುಕ್ತಾಯವಾಯಿತು.

(ಟಿ.ಕೆ.ಅನಿಲ್ ಕುಮಾರ್)
ಸರಕಾರದ ಪ್ರಧಾನ ಕಾರ್ಯದರ್ಶಿಗಳು,
ಪ್ರವಾಸೋದ್ಯಮ ಇಲಾಖೆ, ಬೆಂಗಳೂರು
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಯಾದಗಿರಿ

**ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ: 30.01.2020 ರಂದು ಜರುಗಿದ ಉಡುಪಿ ಜಿಲ್ಲಾ ಮಟ್ಟದ ಅಧಿಕಾರಿಗಳೊಡನೆ ಜಿಲ್ಲಾಭಿವೃದ್ಧಿ, ಮರಳು ಸಮಸ್ಯೆ ಹಾಗೂ ನೆರೆ ಪರಿಹಾರ ಬಗ್ಗೆ ಪರಿಶೀಲನಾ ಸಭೆಯ ನಡವಳಿ:**

**ಸಮಯ: ಅಪರಾಹ್ನ 2.00 ಗಂಟೆ** **ಸ್ಥಳ: ಜಿಲ್ಲಾಧಿಕಾರಿ ಕಛೇರಿ ಸಭಾಂಗಣ**

**ಉಪಸ್ಥಿತರು:**

1) ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು
2) ಶ್ರೀ ಜಿ.ಜಗದೀಶ, ಭಾ.ಆ.ಸೇ. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
3) ಶ್ರೀ ಬಿ.ಸದಾಶಿವ ಪ್ರಭು. ಕ.ಆ.ಸೇ. ಅಪರ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
4) ಶ್ರೀ ಕೆ.ರಾಜು, ಕ.ಆ.ಸೇ, ಸಹಾಯಕ ಕಮೀಷನರು, ಕುಂದಾಪುರ
ಹಾಗೂ ಹಾಜರಿಯಲ್ಲಿ ಸಹಿ ಮಾಡಿದವರು

**********

ಸಭೆಯ ಪ್ರಾರಂಭದಲ್ಲಿ ಅಪರ ಜಿಲ್ಲಾಧಿಕಾರಿಯವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು, ಜಿಲ್ಲಾಧಿಕಾರಿಯವರನ್ನು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಯವರನ್ನು ಸ್ವಾಗತಿಸಿ ಪರಿಶೀಲನಾ ಸಭೆಯನ್ನು ನಡೆಸಿಕೊಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು.

ಮೊದಲಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ದಿನಾಂಕ 26.12.2019 ರಂದು ಮಾನ್ಯರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸೂಚಿಸಿದ ಅಂಶಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ತೆಗೆದುಕೊಂಡ ಕ್ರಮದ ಬಗ್ಗೆ ಪರಿಶೀಲನೆಯನ್ನು ನಡೆಸಿದರು.

**<u>ಸಭೆಯಲ್ಲಿ ಚರ್ಚಿಸಲಾದ ಪ್ರಮುಖ ವಿಷಯಗಳು:</u>**

- ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಸಂಭವಿಸಿದ ನೆರೆಯಿಂದಾಗಿ ಹಾನಿಯಾಗಿರುವ A Category 45 ಮತ್ತು B Category 144 ಒಟ್ಟು 189 ಸಂತ್ರಸ್ಥರಿಗೆ ಮನೆಗಳ ಪುನರ್ ನಿರ್ಮಾಣದ ಬಗ್ಗೆ ಅವಕಾಶವಿದ್ದು, ಈ ಪೈಕಿ ಒಟ್ಟು 87 ಜನರು ಮನೆ ಪುನರ್ ನಿರ್ಮಾಣಕ್ಕೆ ಆಸಕ್ತಿ ಹೊಂದಿದ್ದಾರೆ. ಅದರಲ್ಲಿ 17 ಮನೆಗಳ ಪುನರ್ ನಿರ್ಮಾಣ ಕಾಮಗಾರಿ ಪ್ರಾರಂಭವಾಗಿದೆ. ಬಾಕಿ ಇರುವ 70 ಮನೆಗಳ ಪುನರ್ ನಿರ್ಮಾಣ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲು ಎಲ್ಲಾ ತಹಶೀಲ್ದಾರರಿಗೆ ಸೂಚಿಸಿದರು. ಸಂತ್ರಸ್ತರಿಗೆ ಈ ಬಗ್ಗೆ ಮನೆಗಳ ಪುನರ್ ನಿರ್ಮಾಣ ಕಾಮಗಾರಿಯನ್ನು ಕೂಡಲೇ ಪ್ರಾರಂಭಿಸಲು ಅಂತಿಮ ನೋಟೀಸನ್ನು ನೀಡುವಂತೆ ಸೂಚಿಸಿದರು, ಒಂದು ವೇಳೆ ಸಂತ್ರಸ್ತರಿಗೆ ಮನೆ ಪುನರ್ ನಿರ್ಮಾಣ ಕಾರ್ಯದಲ್ಲಿ ಆಸಕ್ತಿ ಇಲ್ಲದಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಸಂತ್ರಸ್ತರಿಂದ ಮನೆ ಪುನರ್ ನಿರ್ಮಾಣ ಮಾಡದಿರುವ ಬಗ್ಗೆ ದೃಢೀಕರಣವನ್ನು ಪಡೆಯುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು. ನೆರೆ ಬಾಧಿತ ಮನೆಗಳ ರಿಪೇರಿ ಸಂಬಂಧವಾಗಿ ಸರಕಾರದಿಂದ ಹೊಸ ಆದೇಶವಾಗಿದ್ದು, ಅದರಂತೆ ಪುನರ್ ನಿರ್ಮಾಣ ಮಾಡದೇ , ದುರಸ್ತಿ ಪಡಿಸಿರುವ / ದುರಸ್ತಿಪಡಿಸುವ ಮನೆಗಳಿಗೆ ರೂ. 3.00 ಲಕ್ಷ ಅನುದಾನ ಸರಕಾರದಿಂದ ನಿಗಧಿಪಡಿಸಿದೆ. ಅದರಂತೆ ರಾಜೀವ್ ಗಾಂಧಿ ವಸತಿ ಯೋಜನೆ (RGHCL) ತಂತ್ರಾಂಶದಲ್ಲಿ ಪುನರ್ ನಿರ್ಮಾಣ

- ಮತ್ತು ರಿಪೇರಿ ಎಂಬ ಆಯ್ಕೆ ಇದ್ದು, ಅದನ್ನು ಆಯ್ಕೆ ಮಾಡಬೇಕಾಗಿರುತ್ತದೆ. ರಿಪೇರಿ ಎಂದು ಆಯ್ಕೆ ಮಾಡಿದಲ್ಲಿ ಫಲಾನುಭವಿಗಳಿಗೆ ರೂ. 2.00 ಲಕ್ಷ (ಒಟ್ಟು ರೂ. 3.00 ಲಕ್ಷ) ಪಾವತಿಸಲು ಆದೇಶವಾಗುತ್ತದೆ. ಆದರೆ ವಾಸ್ತವಿಕವಾಗಿ ಹೆಚ್ಚಿನವರು, ನಾವು ನೀಡಿರುವ ರೂ. 1.00 ಲಕ್ಷ ಅನುದಾನದಲ್ಲಿಯೇ ಮನೆಗಳನ್ನು ರಿಪೇರಿ ಮಾಡಿಸಿ ವಾಸ್ತವ್ಯವಿದ್ದಾರೆ. ಅವರಿಗೆ ಪುನ: ರೂ. 2.00 ಲಕ್ಷ ಪಾವತಿಸುವುದು ಸರಿಯಲ್ಲವೆಂದು ಜಿಲ್ಲೆಯ ತಹಶೀಲ್ದಾರರುಗಳು ಗಮನಕ್ಕೆ ತಂದಾಗ ಮನೆ ರಿಪೇರಿಗೆ ಎಷ್ಟು ಹಣ ಖರ್ಚಾಗಿದೆ ಎಂಬ ವಾಸ್ತವಿಕ ಚಿತ್ರಣ 3 ದಿನದೊಳಗೆ ಮಂಡಿಸಲು ತಿಳಿಸಿದರು.

**(ಕ್ರಮ : ತಹಶೀಲ್ದಾರರು ಉಡುಪಿ, ಕುಂದಾಪುರ, ಕಾರ್ಕಳ, ಬ್ರಹ್ಮಾವರ, ಬೈಂದೂರು, ಕಾಪು ಹೆಬ್ರಿ)**

- ಕಳೆದ ಬೇಸಿಗೆಯಲ್ಲಿ ಟ್ಯಾಂಕರ್ ಮುಖಾಂತರ ಕುಡಿಯುವ ನೀರು ಸರಬರಾಜು ಮಾಡಿದ ಪ್ರದೇಶಗಳಲ್ಲಿ ಶಾಶ್ವತವಾದ ನೀರಿನ ವ್ಯವಸ್ಥೆಯನ್ನು ಮಾರ್ಚ್ ಅಂತ್ಯದೊಳಗೆ ಕಲ್ಪಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ/ ಕಾರ್ಯನಿರ್ವಾಹಕ ಇಂಜಿನಿಯರ್ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ )**

- ಪ್ರಾಕೃತಿಕ ವಿಕೋಪದಡಿ ವಿವಿಧ ಕಾಮಗಾರಿಗಳಿಗೆ ನೀಡಲಾಗಿರುವ ಅನುದಾನಗಳ ಸಮರ್ಪಕವಾದ ಬಳಕೆಯ ಬಗ್ಗೆ ಚರ್ಚಿಸಲಾಯಿತು. ಅದರಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಗಿ, ಪ್ರಾಕೃತಿಕ ವಿಕೋಪದಡಿ ಸದ್ರಿ ಇಲಾಖೆಗೆ ಒಟ್ಟು 2018-19 ನೇ ಸಾಲಿಗೆ ಅಂದಾಜು ಮೊತ್ತ ರೂ.606.47 ಲಕ್ಷದ 259 ಕಾಮಗಾರಿಗಳು ಮಂಜೂರಾಗಿದ್ದು, ಅವುಗಳಲ್ಲಿ 91 ಕಾಮಗಾರಿಗಳು ಪ್ರಗತಿಯಲ್ಲಿದ್ದು, 38 ಕಾಮಗಾರಿಗಳು ಪೂರ್ಣಗೊಂಡಿರುವುದಾಗಿ ಹಾಗೂ 2019-20 ರಲ್ಲಿ 494 ಕಾಮಗಾರಿಗಳು ಮಂಜೂರಾಗಿದ್ದು, 105 ಕಾಮಗಾರಿಗಳು ಪೂರ್ಣಗೊಂಡಿದ್ದು, 228 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ 161 ಬಾಕಿ ಉಳಿದಿರುವ ಎಲ್ಲಾ ಕಾಮಗಾರಿಗಳನ್ನು ತ್ವರಿತವಾಗಿ ಪ್ರಾರಂಭಿಸಿ ಪೆಬ್ರುವರಿಯೊಳಗೆ ಮುಕ್ತಾಯಗೊಳಿಸುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ ಇವರು ತಿಳಿಸಿದ್ದು, ಸದ್ರಿ ಎಲ್ಲಾ ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಹಾಗೂ ಪೂರ್ಣಗೊಂಡ ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಗಾಗಿ ಸಲ್ಲಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಕಾರ್ಯನಿರ್ವಾಹಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಉಡುಪಿ )**

- ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಗಿ, ಪ್ರಾಕೃತಿಕ ವಿಕೋಪದಡಿ ಲೋಕೋಪಯೋಗಿ ಇಲಾಖೆಗೆ ಒಟ್ಟು ರೂ.15.77 ಕೋಟಿಯ 34 ಕಾಮಗಾರಿಗಳು ಮಂಜೂರಾಗಿದ್ದು, ಅದರಲ್ಲಿ 22 ಕಾಮಗಾರಿಗಳು ಮುಗಿದಿದ್ದು, 7 ಕಾಮಗಾರಿಗಳು ಪ್ರಗತಿಯಲ್ಲಿದೆ. 5 ಕಾಮಗಾರಿಗಳು ಟೆಂಡರ್ ಹಂತದಲ್ಲಿರುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಡುಪಿ ಇವರು ತಿಳಿಸಿದ್ದು, ಈ ಬಗ್ಗೆ ಎಲ್ಲಾ ಕಾಮಗಾರಿಗಳನ್ನು ಪೆಬ್ರವರಿ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು. ಹಾಗೂ ಪೆರ್ಡೂರು ಬೈರಂಪಳ್ಳಿ ಸೇತುವೆ ಕಾಮಗಾರಿಯ ಬಗ್ಗೆ ಚರ್ಚಿಸಲಾಗಿ, ಟೆಂಡರ್ ಪ್ರಗತಿಯಲ್ಲಿದ್ದು ಫೆಬ್ರವರಿ 3ನೇ ತಾರೀಕಿಗೆ ಟೆಂಡರ್ ಕಾರ್ಯ ಮುಗಿಯುವುದಾಗಿ, ನಂತರ ಕಾಮಗಾರಿ ಪ್ರಾರಂಭಿಸುವುದಾಗಿ ತಿಳಿಸಿದರು. ಈವರೆಗೆ ರೂ. 2.50 ಕೋಟಿ ಅನುದಾನ ಪಾವತಿಯಾಗಿದ್ದು, ಇನ್ನೂ ರೂ. 8.00 ಕೋಟಿ ಅನುದಾನ ಬಿಡುಗಡೆಗೆ ಬಾಕಿ ಇರುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಡುಪಿ ಇವರು ತಿಳಿಸಿದರು. ಈ ಬಗ್ಗೆ ಶೀಘ್ರ ಕ್ರಮವಹಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಉಡುಪಿ )**

- ನಿರ್ಮಿತಿ ಕೇಂದ್ರ ಉಡುಪಿ ಇಲ್ಲಿನ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಗಿ, ಪ್ರಾಕೃತಿಕ ವಿಕೋಪ ಯೋಜನೆಯಡಿಯಲ್ಲಿ 2018-19 ನೇ ಸಾಲಿನ ಮಂಜೂರಾದ ಒಟ್ಟು 273 ಕಾಮಗಾರಿಗಳಲ್ಲಿ 101 ಕಾಮಗಾರಿಗಳು ಮುಕ್ತಾಯವಾಗಿದ್ದು,120 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ, 52 ಕಾಮಗಾರಿಗಳು ಪ್ರಾರಂಭವಾಗಬೇಕಾಗಿರುವುದಾಗಿ, 2019-20 ನೇ ಸಾಲಿನಲ್ಲಿ ಮಂಜೂರಾದ ಒಟ್ಟು 201 ಕಾಮಗಾರಿಗಳಲ್ಲಿ 13 ಕಾಮಗಾರಿಗಳು ಮುಕ್ತಾಯವಾಗಿದ್ದು, 71 ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಯೋಜನಾ ಅಭಿಯಂತರರು ನಿರ್ಮಿತಿ ಕೇಂದ್ರ ಇವರು ತಿಳಿಸಿದರು. ಈ ಬಗ್ಗೆ ಎಲ್ಲಾ ಕಾಮಗಾರಿಗಳನ್ನು ಪೆಬ್ರವರಿ ಅಂತ್ಯದೊಳಗೆ ಪೂರ್ಣಗೊಳಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ ಉಡುಪಿ)**

- ಕೆ.ಆರ್.ಐ.ಡಿ.ಎಲ್ ಗೆ ಸಂಬಂಧಿಸಿದ ಕಾಮಗಾರಿಗಳ ಬಗ್ಗೆ ಪರಿಶೀಲಿಸಲಾಗಿ, ಲೆಕ್ಕಶೀರ್ಷಿಕೆ 50-54 ರಡಿ ಒಟ್ಟು 127 ಕಾಮಗಾರಿಗಳು ಜನವರಿ ಮಾಹೆಯಲ್ಲಿ ಮಂಜೂರಾಗಿರುವುದಾಗಿ, ಕಾರ್ಯನಿರ್ವಾಹಕ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್ ಇವರು ತಿಳಿಸಿದ್ದು, ಈ ಬಗ್ಗೆ ಶೀಘ್ರವಾಗಿ ಕಾಮಗಾರಿಗಳನ್ನು ಪ್ರಾರಂಭಿಸಿ ಮುಕ್ತಾಯಗೊಳಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಕಾರ್ಯನಿರ್ವಾಹಕ ಇಂಜಿನಿಯರ್, ಕೆ.ಆರ್.ಐ.ಡಿ.ಎಲ್, ಉಡುಪಿ)**

• ಜಿಲ್ಲೆಯಲ್ಲಿ ಜನವರಿ ಮಾಹೆಯಲ್ಲಿ 5 ಮಲೇರಿಯಾ ಪ್ರಕರಣಗಳು, 21 ಡೆಂಗ್ಯೂ ಪ್ರಕರಣಗಳು, ಹೆಚ್1 ಎನ್ 1 ನ 20 ಪ್ರಕರಣಗಳು , ಚಿಕನ್ ಗುನ್ಯ 1 ಪ್ರಕರಣಗಳು ಪತ್ತೆಯಾಗಿರುವುದಾಗಿ ಹಾಗೂ ಮಂಗ ಸತ್ತಿರುವ 1 ಪ್ರಕರಣ ಪತ್ತೆಯಾಗಿರುವುದಾಗಿ, ಸದರಿ ಪ್ರಕರಣದ sample ಅನ್ನು test ಗೆ ಕಳುಹಿಸಿರುವುದಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಶೀಘ್ರವಾಗಿ ಅದರ ವರದಿಯನ್ನು ಪಡೆದು analyze ಮಾಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು. ಸಾಂಕ್ರಾಮಿಕ ರೋಗಗಳ ತೀವ್ರ ನಿಗಾವಹಿಸಲು ಹಾಗೂ ಯಾವುದೇ ಪ್ರಕರಣಗಳು ಬಾರದಂತೆ ಕ್ರಮವಹಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಉಡುಪಿ)**

• ಜಿಲ್ಲಾ ಆಸ್ಪತ್ರೆ ಉಡುಪಿ ಇಲ್ಲಿ 299 ಉಪಕರಣಗಳು ಕಾರ್ಯನಿರ್ವಹಿಸುತ್ತಿದ್ದು, 40 ಉಪಕರಣಗಳು ದುರಸ್ಥಿಯಾಗಬೇಕಾಗಿರುತ್ತದೆ. ಮಾನ್ಯ ಆಯುಕ್ತರ ಆದೇಶದಂತೆ ಸರಕಾರಿ ಆಸ್ಪತ್ರೆಗಳಲ್ಲಿರುವ ವೈದ್ಯಕೀಯ ಉಪಕರಣಗಳ ಎ.ಎಂ.ಸಿ/ಸಿ.ಎಂ.ಸಿಯ ನಿರ್ವಹಣೆಯನ್ನು ಮೆ:ಟಿ.ವಿ.ಎಸ್. ಲಾಜಿಸ್ಟಿಕ್ಸ್ ಸರ್ವಿಸಸ್ ಸಂಸ್ಥೆಗೆ ವಹಿಸಿರುವುದರಿಂದ ಈ ಸಂಸ್ಥೆಯ ಮುಖಾಂತರ ಉಪಕರಣಗಳನ್ನು ದುರಸ್ಥಿ ಮಾಡಿಸಲಾಗುವುದಾಗಿ ಜಿಲ್ಲಾ ಶಸ್ತ್ರಚಿಕಿತ್ಸಕರು ಸಭೆಯಲ್ಲಿ ತಿಳಿಸಿದ್ದು, ಈ ಬಗ್ಗೆ ಮೂರನೇ ಸಂಸ್ಥೆಯಿಂದ ತಪಾಸಣೆಯನ್ನು ಸಹ ನಡೆಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಜಿಲ್ಲಾ ಶಸ್ತ್ರ ಚಿಕಿತ್ಸಕರು ಉಡುಪಿ ಇವರಿಗೆ ಸೂಚಿಸಿದರು.

**(ಕ್ರಮ: ಜಿಲ್ಲಾ ಶಸ್ತ್ರ ಚಿಕಿತ್ಸಕರು, ಉಡುಪಿ/ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಉಡುಪಿ ಜಿಲ್ಲೆ)**

• ರಾಷ್ಟ್ರೀಯ ಹೆದ್ದಾರಿ ಸಮಸ್ಯೆಯ ಕುರಿತಂತೆ ಚರ್ಚಿಸಲಾಗಿ ಯೋಜನಾ ನಿರ್ದೇಶಕರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇವರು ಸತತವಾಗಿ ಸಭೆಗೆ ಗೈರುಹಾಜರಾಗುತ್ತಿರುವ ಬಗ್ಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತೀವ್ರ ಅಸಮಧಾನವನ್ನು ವ್ಯಕ್ತಪಡಿಸಿ, ಜಿಲ್ಲಾಧಿಕಾರಿಯವರನ್ನು ಯೋಜನಾ ನಿರ್ದೇಶಕರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮಂಗಳೂರು ಇವರು ಭೇಟಿ ಮಾಡಿ ರಾಷ್ಟ್ರೀಯ ಹೆದ್ದಾರಿ ಸಮಸ್ಯೆಯ ಕುರಿತು ವಿವರಣೆಯನ್ನು ನೀಡುವಂತೆ ಹಾಗೂ ಪ್ರಗತಿಯ ಬಗ್ಗೆ ಚರ್ಚೆ ಮಾಡುವಂತೆ ಸಭೆಯಲ್ಲಿ ಹಾಜರಿದ್ದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮಂಗಳೂರು)**

- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ 2019-20 ನೇ ಸಾಲಿನ ಕ್ರಿಯಾಯೋಜನೆ ತಯಾರಿಸಿದ್ದು, ಗೇರು ಪ್ರದೇಶ ವಿಸ್ತರಣೆಗೆ ಜಿಲ್ಲೆಯಲ್ಲಿ ಒಟ್ಟು 54 ಜನ ರೈತರನ್ನು ಆಯ್ಕೆ ಮಾಡಲಾಗಿದ್ದು, 54 ಕಾಮಗಾರಿಗಳಿಗೆ ಒಟ್ಟು 27.56 ಹೆ.ಪ್ರದೇಶದಲ್ಲಿ ಗೇರು ಪ್ರದೇಶ ವಿಸ್ತರಣೆ ಕೈಗೊಳ್ಳಲು ಕ್ರಿಯಾಯೋಜನೆ ರೂಪಿಸಲಾಗಿರುವುದಾಗಿ ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ ಇವರು ಸಭೆಯಲ್ಲಿ ತಿಳಿಸಿದರು. NREGA (ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ) ಅನುದಾನದಿಂದ ಸದರಿ ಯೋಜನೆಗೆ ಅನುದಾನವನ್ನು ಪಾವತಿಸುವಲ್ಲಿ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ ಉಡುಪಿ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ : ಉಪ ಕಾರ್ಯದರ್ಶಿ, ಜಿಲ್ಲಾ ಪಂಚಾಯತ್/ ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ ಉಡುಪಿ)**

- ಶಿಕ್ಷಣಾ ಇಲಾಖೆಗೆ ಸಂಬಂಧಿಸಿದಂತೆ ಉಡುಪಿ ಜಿಲ್ಲೆಯಲ್ಲಿ 8 [KPS ]ಕರ್ನಾಟಕ ಪಬ್ಲಿಕ್ ಸ್ಕೂಲ್ ಇದ್ದು, ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರು ಕರ್ನಾಟಕ ಪಬ್ಲಿಕ್ ಸ್ಕೂಲ್ ನ ಹೈಸ್ಕೂಲ್ ವಿಭಾಗದ ವಿದ್ಯಾರ್ಥಿಗಳಿಗೆ ಬೋಧನೆ ಮಾಡಬೇಕಾಗಿದ್ದು, ಸದ್ರಿಯವರು ತರಗತಿಗಳನ್ನು ತೆಗೆದುಕೊಳ್ಳದೇ ಇರುವುದರ ಬಗ್ಗೆ ಚರ್ಚಿಸಲಾಗಿ, ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರನ್ನು ಕರ್ನಾಟಕ ಪಬ್ಲಿಕ್ ಸ್ಕೂಲ್ ನ ಹೈಸ್ಕೂಲ್ ವಿಭಾಗದ ವಿದ್ಯಾರ್ಥಿಗಳಿಗೆ ಬೋಧನೆ ಮಾಡಲು ನಿಯೋಜಿಸುವ ಕುರಿತು ತಮ್ಮ ಇಲಾಖೆಯಲ್ಲಿ ಯಾವುದೇ ಮಾರ್ಗಸೂಚಿ ಇರುವುದಿಲ್ಲವಾಗಿ, ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ ಇವರು ತಿಳಿಸಿದ್ದು, ಈ ಬಗ್ಗೆ ಖುದ್ದು ಉಸ್ತುವಾರಿ ಕಾರ್ಯದರ್ಶಿಯವರು ಸರಕಾರದ ಹಂತದಲ್ಲಿ ಮಾರ್ಗಸೂಚಿ ಕಳುಹಿಸುವ ಬಗ್ಗೆ ಫೋನ್ ಮುಖಾಂತರ ಪದವಿ ಪೂರ್ವ ಇಲಾಖೆಯ ಮೇಲಾಧಿಕಾರಿಯವರೊಂದಿಗೆ ಚರ್ಚಿಸಿದ್ದು, ಸದರಿಯವರು ಸರಕಾರದಿಂದ ಈ ಬಗ್ಗೆ ಮಾರ್ಗಸೂಚಿಯನ್ನು ಹೊರಡಿಸುವುದಾಗಿ ತಿಳಿಸಿದರು.

**(ಕ್ರಮ : ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ)**

- ಹಿಂದಿನ ಸಭೆಯಲ್ಲಿ ಜಿಲ್ಲೆಯ ಎಲ್ಲಾ ಅಂಗನವಾಡಿಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳು ಇರುವ ಬಗ್ಗೆ ಹಾಗೂ ಅವುಗಳ ಸಮರ್ಪಕ ಕಾರ್ಯನಿರ್ವಹಣೆ ಮತ್ತು ಸರಕಾರದ ಎಲ್ಲಾ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ತಲುಪುತ್ತಿರುವ ಬಗ್ಗೆ ಹಾಗೂ ಅಲ್ಲಿನ ಸ್ವಚ್ಛತೆ, ಮಕ್ಕಳ ಆರೋಗ್ಯ, ಹಾಗೂ ಪೌಷ್ಟಿಕ ಆಹಾರಗಳು ಮಕ್ಕಳಿಗೆ ಸಮರ್ಪಕವಾಗಿ ಪೂರೈಕೆಯಾಗುತ್ತಿರುವ ಬಗ್ಗೆ ಮತ್ತು ಮಕ್ಕಳಿಗೆ ನೀಡುತ್ತಿರುವ ಆಹಾರದ ಗುಣಮಟ್ಟದ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಪ್ರತೀ ವಾರ ತಪಾಸಣೆಯನ್ನು ನಡೆಸಲು ನಿರ್ದೇಶಿಸಿರುವ ಬಗ್ಗೆ ಚರ್ಚಿಸಲಾಗಿ, 39 ಅಧಿಕಾರಿಗಳನ್ನು ನಿಯೋಜಿಸಿದ್ದು, ಈ ಬಗ್ಗೆ 22 ಅಧಿಕಾರಿಗಳು ಅಂಗನವಾಡಿಗಳ ಪರಿಶೀಲನೆ ನಡೆಸಿ ವರದಿಯನ್ನು ಸಲ್ಲಿಸಿರುವುದಾಗಿ, 17 ಅಧಿಕಾರಿಗಳು ವರದಿಗಳನ್ನು ನೀಡಿರುವುದಿಲ್ಲವಾಗಿ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವರು ಸಭೆಯಲ್ಲಿ

ತಿಳಿಸಿದ್ದು, ಅಂತಹ ಅಧಿಕಾರಿಗಳಿಂದ ಕೂಡಲೇ ವರದಿ ಪಡೆಯುವಂತೆ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು. ಹಾಗೂ ಈ ಬಗ್ಗೆ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಮಹಿಳಾ ಮತ್ತು ಮಕ್ಕಳ ಇಲಾಖೆಯ ಸಭೆಯನ್ನು ಕರೆದು ಪರಿಶೀಲನೆ ನಡೆಸುವಲ್ಲಿ ಕ್ರಮವಹಿಸಲು ಸೂಚಿಸಿದರು.

ಮುಂದಿನ ಸಭೆಯಲ್ಲಿ ಎಲ್ಲಾ ಅಧಿಕಾರಿಗಳು ಅಂಗನವಾಡಿಗಳ ತಪಾಸಣೆ ನಡೆಸಿದ ಬಗ್ಗೆ PPT ಯನ್ನು ತಯಾರಿಸಿ , ಸಭೆಯಲ್ಲಿ PPT Presentation ಮೂಲಕ ವಿವರಣೆಯನ್ನು ನೀಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ)**

- ಉಡುಪಿ ಜಿಲ್ಲೆಯಲ್ಲಿ ಪ್ರಸ್ತುತ 13 ಸಹಕಾರ ಸಂಘಗಳು ಸಮಾಪನೆಯಲ್ಲಿದ್ದು, ಈ ಪೈಕಿ 2 ಸಹಕಾರ ಸಂಘಗಳಲ್ಲಿ ಸ್ಥಿರಾಸ್ತಿ ಇರುತ್ತದೆ. ಹಾಗೂ 5 ಸಹಕಾರ ಸಂಘಗಳಲ್ಲಿ ಸರ್ಕಾರಿ ಷೇರು/ಸರ್ಕಾರಿ ಸಾಲ ಇರುತ್ತದೆ. ಸರ್ಕಾರಿ ಷೇರು/ಸಾಲ ಮನ್ನಾಕ್ಕೆ ಸರ್ಕಾರಕ್ಕೆ ಈಗಾಗಲೇ ಪ್ರಸ್ತಾಪನೆ ಸಲ್ಲಿಸಿದ್ದು, ಎಲ್ಲಾ ಸಮಾಪನಾ ಸಹಕಾರ ಸಂಘಗಳ ಆಸ್ತಿ-ಜವಾಬ್ದಾರಿಯನ್ನು ಶೂನ್ಯಗೊಳಿಸಿ ನೊಂದಣಿ ರದ್ಧತಿಗಾಗಿ ಶೀಘ್ರ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮಕೈಗೊಳ್ಳುವಂತೆ ಎಲ್ಲಾ ಸಮಾಪನಾಧಿಕಾರಿಗಳಿಗೆ ಸೂಚಿಸಿರುವುದಾಗಿ ಸಹಕಾರ ಸಂಘಗಳ ಉಪನಿಬಂಧಕರು ಸಭೆಯಲ್ಲಿ ತಿಳಿಸಿದರು. ಈ ಬಗ್ಗೆ ಶೀಘ್ರ ಕ್ರಮ ವಹಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಸಹಕಾರಿ ಸಂಘಗಳ ಉಪನಿಂಬಂಧಕರು, ಉಡುಪಿ )**

- ನಗರಾಭಿವೃದ್ಧಿ ಇಲಾಖೆಯ ನಗರೋತ್ಥಾನ ಯೋಜನೆಯಲ್ಲಿ ಯಾವುದಾದರೂ ಉತ್ಕೃಷ್ಟವಾದ ಹಾಗೂ ಮಾದರಿ ಕೆಲಸವನ್ನು (Sea Walk or Tender Sure Road ಮಾದರಿಯಲ್ಲಿ) ಕೆಲಸವನ್ನು ಅನುಷ್ಠಾನಗೊಳಿಸುವುದರ ಮುಖಾಂತರ ಉಡುಪಿ ಜಿಲ್ಲೆಯು ಇತರ ಜಿಲ್ಲೆಗಳಿಗೆ ಮೇಲ್ಪಂಕ್ತಿ ಹಾಕಬೇಕೆಂದು ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಉಡುಪಿ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಉಡುಪಿ)**

- ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯ ಕಲ್ಲುಪುಡಿ ಘಟಕಗಳ ಲೈಸೆನ್ಸ್ ಪ್ರಾಧಿಕಾರದಿಂದ ಸುರಕ್ಷಿತ ವಲಯ(Safe Zone) ಘೋಷಿತ ಪ್ರದೇಶದ 500 ಮೀಟರ್ ಪರಿಮಿತಿ ಒಳಗೆ ಯಾವುದೇ ನಿವೇಶನ ಹಂಚಿಕೆ ಮಾಡಲು ಜಮೀನನ್ನು ಮಂಜೂರು ಮಾಡಬಾರದಾಗಿ, ಅಲ್ಲದೇ ನಿವೇಶನಗಳನ್ನು ಹಂಚಬಾರದೆಂದು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ನಿರ್ದೇಶನವನ್ನು ನೀಡಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯತ್ ಉಡುಪಿ/ ಸಹಾಯಕ ಕಮೀಷನರ್ ಕುಂದಾಪುರ/ ತಹಶೀಲ್ದಾರರು ಉಡುಪಿ, ಕುಂದಾಪುರ, ಕಾರ್ಕಳ, ಬ್ರಹ್ಮಾವರ, ಬೈಂದೂರು, ಕಾಪು ಹೆಬ್ರಿ)**

- ಜಿಲ್ಲೆಯಲ್ಲಿ ಹರಿಯುವ ನದಿಗಳ ತೀರದಲ್ಲಿ ಕೃಷಿ ಮಾಡುತ್ತಿರುವವರಿಗೆ ಕಳೆದ ವರ್ಷದಲ್ಲಿ ಉಂಟಾದ ಬರಗಾಲದಿಂದಾಗಿ ಅತೀವ ತೊಂದರೆಯಾಗಿದ್ದು, ಸದರಿ ರೈತರಿಗೆ ಅನುಕೂಲವಾಗುವಂತೆ ಪರಿಣಾಮಕಾರಿಯಾದ ಬದಲಿ ವ್ಯವಸ್ಥೆ ಅವಶ್ಯಕತೆಯಿದ್ದು, Alternate Micro Irrigation ಯೋಜನೆಗಳ ಪ್ರಯೋಜನವನ್ನು ಪಡೆಯುವಂತೆ ಹಾಗೂ Alternate Micro Irrigation ಅನ್ನು ಅನುಷ್ಠಾನಗೊಳಿಸುವಂತೆ ರೈತರಿಗೆ ಉತ್ತೇಜನ ನೀಡಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು.

**(ಕ್ರಮ: ಜಂಟಿ ಕೃಷಿ ನಿರ್ದೇಶಕರು , ಉಡುಪಿ )**

- ಮೀನುಗಾರಿಕಾ ಇಲಾಖೆಯ ಅಧಿಕಾರಿಗಳು ಮುಂದಿನ ಸಭೆಯಲ್ಲಿ ಮೀನುಗಾರಿಕಾ ವಿಷಯಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ PPT Presentation ಮೂಲಕ ವಿವರಣೆಯನ್ನು ನೀಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಮೀನುಗಾರಿಕಾ ಬಂದರು , ಉಡುಪಿ )**

- ಡೀಮ್ಡ್ ಫಾರೆಸ್ಟ್ ನ ಸರ್ವೆಗೆ ಸಂಬಂಧಿಸಿದಂತೆ ಚರ್ಚಿಸಲಾಗಿ, ಭೂದಾಖಲೆಗಳ ಉಪನಿರ್ದೇಶಕರೊಂದಿಗೆ ಅರಣ್ಯ ಇಲಾಖೆಯ ಸರ್ವೆ ಸಿಬ್ಬಂದಿಗಳು ಸೇರಿಕೊಂಡು ಜಂಟಿಯಾಗಿ ಅರಣ್ಯ ಇಲಾಖೆ, ಭೂದಾಖಲೆಗಳ ಇಲಾಖೆ ಹಾಗೂ ಗಣಿ ಇಲಾಖೆಯವರು ಡೀಮ್ಡ್ ಫಾರೆಸ್ಟ್ ನ ಸರ್ವೆ ಕಾರ್ಯ ನಡೆಸುವಂತೆ ತಿಳಿಸಿದರು. ಕಾರ್ಕಳ ತಾಲೂಕಿನ ಭಾಗಶ ಡೀಮ್ಡ್ ಫಾರೆಸ್ಟ್ ಇರುವ ಸಣ್ಣ ಸರ್ವೆ ನಂಬರ್‌ಗಳ ಸರ್ವೆ ಕಾರ್ಯ ಮುಗಿಸುವಂತೆ ಹಾಗೂ ನಿಟ್ಟೆ ಗ್ರಾಮದ ಸರ್ವೆ ಕಾರ್ಯವನ್ನು ಮೊದಲಿಗೆ ಪ್ರಾಂಭಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು. ಸದ್ರಿ ಸರ್ವೆ ಕಾರ್ಯಕ್ಕೆ ಅರಣ್ಯ ಇಲಾಖೆಯಿಂದ 8 ಸರ್ವೆಯರ್‌ಗಳನ್ನು ಕಳುಹಿಸುವುದಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ಇವರು ಸಭೆಯಲ್ಲಿ ತಿಳಿಸಿದ್ದು, ಸದ್ರಿ ಸರ್ವೆಯರ್ಸ್ ತಕ್ಷಣ ಭೂದಾಖಲೆಗಳ ಉಪನಿರ್ದೇಶಕರಿಗೆ ವರದಿ ಮಾಡುವಲ್ಲಿ ಕ್ರಮವಹಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ನಿರ್ದೇಶಿಸಿದರು. ಅಲ್ಲದೇ , ಕೂಡಲೇ ಸರ್ವೆ ಕಾರ್ಯ ನಡೆಸುವಂತೆ ಭೂದಾಖಲೆಗಳ ಉಪನಿರ್ದೇಶಕರಿಗೆ ಸೂಚಿಸಿದರು.

**(ಕ್ರಮ: ಉಪ ಅರಣ್ಯ ಸಂರಕ್ಷಣಾಧಿಕಾರಿ, ಕುಂದಾಪುರ/ ಭೂದಾಖಲೆಗಳ ಉಪನಿರ್ದೇಶಕರು, ಉಡುಪಿ/ ಹಿರಿಯ ಭೂವಿಜ್ಞಾನಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಉಡುಪಿ )**

- ಜಿಲ್ಲೆಯಲ್ಲಿ ಒಟ್ಟು 580 ಸರಕಾರಿ ಶಾಲೆಗಳಿದ್ದು, ಅದರಲ್ಲಿ ಮೊದಲನೇ ಹಂತದಲ್ಲಿ ಕನಿಷ್ಠ 100 ಶಾಲೆಗಳ ಗುರಿ ನಿಗದಿ ಮಾಡಿಕೊಂಡು ಶಾಲಾ ಮಕ್ಕಳ ಆಟ ಪಾಠಕ್ಕೆ ಉಪಯೋಗವಾಗುವಂತಹ ವಿಶಾಲವಾದ ಆಟದ ಮೈದಾನಗಳನ್ನು ನಿರ್ಮಿಸಬೇಕಾಗಿ ಸೂಚಿಸಿದರು. ಎಲ್ಲಾ ಶಾಲೆಗಳ ದೈಹಿಕ ಶಿಕ್ಷಕರ ಸಭೆಯನ್ನು ಕರೆದು ಸಮಾಲೋಚನೆ ನಡೆಸಿ ಈ ಕೆಲಸವನ್ನು ಅನುಷ್ಠಾನಗೊಳಿಸಿ ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯ (NREGA) ಸಂಪನ್ಮೂಲ ಬಳಸಿ ಮುಂದಿನ ಸಭೆಯಲ್ಲಿ ಕಾರ್ಯಗತಗೊಳಿಸಿದ ವರದಿಯ ಜೊತೆ ಹಾಜರಾಗಬೇಕಾಗಿ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

**(ಕ್ರಮ: ಸಹಾಯಕ ನಿರ್ದೇಶಕರು, ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಡುಪಿ )**

ಕೊನೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎಂ.ಮಹೇಶ್ವರ್ ರಾವ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್‌ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ